ಕರ್ಣಾಟಕ ಕಾವ್ಯಕಲಾನಿಧಿ, ಕೋಶಸಂಖ್ಯೆ—೪೨

ವರಕವಿ ವರ್ಯನಾದ

ಕನಕದಾಸನ

# ಮೋಹನತರಂಗಿಣಿ

ಎಂಬ

# ಶ್ರೀ ಕೃಷ್ಣಚರಿತ್ರೆ

(ಸಾಂಗತ್ಯ)

ಮಂ. ಅ. ರಾಮಾನುಜಯ್ಯಂಗಾರ್ಯ

ಅಸಿಸ್ಟೆಂಟ್‌ಮಾಸ್ಟರ್ ಮಹಾರಾಣೀ ಕಾಲೇಜ್, ಮೈಸೂರು—

ಇವರಿಂದ ಪರಿಷ್ಕರಿಸಲ್ಪಟ್ಟು

ಇವರಿಂದ ರಚಿತವಾದ ಕ್ಲಿಷ್ಟಪದಾರ್ಥ ಟಿಪ್ಪಣಿಯೊಡನೆ

ಮೈಸೂರು

ಶ್ರೀನಿವಾಸ ಮುದ್ರಶಾಲೆಯಲ್ಲಿ ಮುದ್ರಿತವಾಯಿತು

1913

UNIVERSAL LIBRARY
OU_200559
UNIVERSAL LIBRARY

**Registered according to Act XXV of 1867.**

*(All Rights Reserved)*

# ಮೋಹನತರಂಗಿಣಿಯ ವಿಷಯಸೂಚೀಪತ್ರ.


| ಸಂಧಿಸಂಖ್ಯೆ | ವಿಷಯಸೂಚಿ | ಪುಟಸಂಖ್ಯೆ |
|---|---|---|
| ೧ | ಪೀಠಿಕಾಸಂಧಿ ... ... | ೧ – ೪ |
| ೨ | ದ್ವಾರಕಾದೇಶವರ್ಣನೆ ... ... | ೪ – ೯ |
| ೩ | ದ್ವಾರಕಾಪುರವರ್ಣನೆ ... ... | ೧೦ – ೧೬ |
| ೪ | ಕೃಷ್ಣರುಕ್ಮಿಣಿಯರ ಲೀಲೆ, ಮದನನ ಗರ್ಭವರ್ಣನೆ ... | ೧೬ – ೨೫ |
| ೫ | ದೇವತೆಗಳು ಕಾಮನನ್ನು ಬೋಧಿಸಿದುದು .. | ೨೫ – ೩೧ |
| ೬ | ಮನ್ಮಥನ ದಂಡು ಪೊರಮಟ್ಟುದು ... ... | ೩೧ – ೩೬ |
| ೭ | ಕಾಮದಹನ . . .. | ೩೭ – ೪೧ |
| ೮ | ರತಿಯ ಪ್ರಲಾಪ .. .. ... | ೪೨ – ೪೫ |
| ೯ | ರತಿಯು ಶಂಬರಾಸುರನ ಪಟ್ಟಣಕ್ಕೆ ಹೋದುದು ... | ೪೬ – ೫೦ |
| ೧೦ | ರತಿ ಶಂಬರಾಸುರರ ಸಂಧಾನ ... ... | ೫೦ – ೫೪ |
| ೧೧ | ಮಾರಜನನ . .. ... | ೫೪ – ೬೧ |
| ೧೨ | ಶಂಬರಾಸುರನ ವಧ ... ... | ೬೨ – ೭೦ |
| ೧೩ | ರತಿಯ ವಿವಾಹ . | ೭೦ – ೭೭ |
| ೧೪ | ಜಲಕ್ರೀಡೆ . | ೭೭ – ೮೬ |
| ೧೫ | ರತಿಕಾಂತನನ್ನು ಮನೆದುಂಬಿಸಿಕೊಂಡುದು . | ೮೬ – ೯೦ |
| ೧೬ | ರತಿಯ ಗರ್ಭಾದಾನ ... | ೯೦ – ೯೬ |
| ೧೭ | ಅನಿರುದ್ಧ ಜನನ . .. ... | ೯೬–೧೦೩ |
| ೧೮ | ಅನಿರುದ್ಧನ ನಗರಶೋಧನೆ ... ... | ೧೦೪–೧೧೪ |
| ೧೯ | ಬೇಟೆಯ ವರ್ಣನೆ ... ... | ೧೧೪–೧೨೨ |
| ೨೦ | ಬಾಣಾಸುರನ ಶೋಣಿತಪುರದ ವರ್ಣನೆ ... | ೧೨೨–೧೨೭ |
| ೨೧ | ಬಾಣಾಸುರನ ಶಿವಪೂಜೆ .. ... | ೧೨೭–೧೩೩ |
| ೨೨ | ಬಾಣಾಸುರನ ಭೋಗಲೀಲೆ ... ... | ೧೩೪–೧೩೭ |
| ೨೩ | ಉಷಾದೇವಿಯ ಶೃಂಗಾರ ... ... | ೧೩೭–೧೪೩ |

೨೪ ಶಿವನೊಲಿದಿರ್ದ ನಂದನದೆಡೆಗೆ ಉಷಾದೇವಿಯು ಸಖಿಯ
ರೊಡನೆ ಬಂದು ಶಿವನನ್ನು ಪೂಜಿಸುವಳು . ೧೪೩–೧೫೦
೨೫ ಉಷೆಗೆ ಶಿವನು ವರವ ಕೊಟ್ಟುದು ... .. ೧೫೦–೧೫೨
೨೬ ಉಷೆ ಚಿತ್ರಲೇಖೆಯರ ಸರಸ . .. ೧೫೪–೧೫೭
೨೭ ಉಷೆಯ ಸ್ವಪ್ನ ... .. .. ೧೫೮–೧೬೪
೨೮ ಉಷೆಯ ವಿರಹ, ಚಿತ್ರಲೇಖೆಯು ಉಷಗೆ ಭಾಷೆಯ
ಕೊಟ್ಟುದು .. ೧೬೪ ೧೬೮
೨೯ ಚಿತ್ರಪಟದ ಸಂಧಿ ... .. ೧೬೮–೧೭೩
೩೦ ಚಿತ್ರಪಟದ ದರ್ಶನ .. . . ೧೭೩–೧೭೭
೩೧ ಅನಿರುದ್ಧನಂ ತಂದುದು . .. ೧೭೭–೧೮೨
೩೨ ಉಷಾನಿರುದ್ಧರು ಏಕಾಂತದಲ್ಲಿ ಸುಖಿಸಿದ ರೀತಿ ... ೧೮೨–೧೮೭
೩೩ ನಾರದನು ವಿವಾಹವೃತ್ತಾಂತವನ್ನು ಬಾಣಾಸುರನಿಗೆ
ಅಱುಹಿದುದು. . ... ... ೧೮೮–೧೯೪
೩೪ ಅನಿರುದ್ಧ ಕುಂಭಾಂಡರ ಕಾಳಗ ... ... ೧೯೪–೧೯೮
೩೫ ಬಾಣಾಸುರಾನಿರುದ್ಧರ ಕಾಳಗ ... . ೧೯೮–೨೦೪
೩೬ ಗರುಡನ ಸಂಧಿ... .. . ೨೦೫–೨೧೨
೩೭ ಕುಂಭಾಂಡನ ಬುದ್ಧಿ ... .. ೨೧೩–೨೧೮
೩೮ ಹರಿಹರರ ಕಾಳಗ ... .. ೨೧೮–೨೨೪
೩೯ ಪರಮೇಶ್ವರ ಕೃಷ್ಣದೇವರ ಕಾಳಗ . . ೨೨೫ ೨೨೮
೪೦ ಕೃಷ್ಣದೇವರ ಬಾಣಾಸುರರ ಕಾಳಗ ... ೨೨೯–೨೩೮
೪೧ ಕೃಷ್ಣನು ಉಷಾನಿರುದ್ಧರಂ ಕಂಡುದು ... ೨೩೮–೨೪೪
೪೨ ಕೃಷ್ಣನು ದ್ವಾರಕಿಗೆ ಬಂದುದು ... .. ೨೪೪–೨೫೧

ಶ್ರೀರಸ್ತು

# ಮೋಹನತರಂಗಿಣಿ ಎಂಬ
# ಶ್ರೀಕೃಷ್ಣಚರಿತ್ರೆ

— ಸಾಂಗತ್ಯ —

ಶ್ರೀಗಿರಿಜೇಶ್ವರನಾತ್ಮಾಭಿರಾಮ ಸ ದ್ವಾಗೀಶಪಿತ ಪರಂಧಾಮ ॥
ಕಾಗಿನೆಲೆಯ ರಂಗ ಸುರಸಾರ್ವಭೌಮ ಸು । ತ್ಯಾಗಿ ಪಾಲಿಸೊ ಪೂರ್ಣಕಾಮ ॥

ಶ್ರೀಮದ್ಗುರುರಾಯ ದುರಿತವಿಜೇಯ ದು । ಷ್ಕಾಮವಿಕ್ಷೀವನಾಹ್ಲಾದ ॥
ತಾಮಸಗುಣನಾಶ ಸಾತ್ವಿಕೋಲ್ಲಾಸ ಶ್ರೀ । ರಾಮಾನುಜಮುನಿ ಶರಣು ॥೧॥

ಅರ್ಕನೊಳಾಟವೆತನುಕೆತಾರ್ಕ್ಷ್ಯನಕೂಡೆ । ಕಾರ್ಕೋಟಕ ಮೇಳವಿಪ್ಪುದೆ ॥
ತರ್ಕಕೆ ರಾಮಾನುಜರೊಳು ವಾದಿಸಂ । ಪರ್ಕ ನಿಲ್ವುದೆ ನಿಲ್ಲಲರಿದು ॥೨॥

ಈರೀತಿಯ ಪೆಂಪುವಡೆದ ಸದ್ಗುರುಕರ । ವಾರಿಜೋದ್ಭವ ಶಿಷ್ಯಜನರ ॥
ಪೇರಿಸಿ ನಾಲ್ವಗೆ ಫಲವೀವ ತಾತಾ । ಚಾರಿಯರಡಿಗೆರಗುವೆನು ॥೩॥

ಅಡಿವಿಡಿದಬುಜಸಂಭವ ಪೂಜೆಗೆಯ್ಯೆ ನಿ । ಮ್ಮಡಿ ಗಗನಾಗ್ರದೆ ಮೆಱೆಯೆ ॥
ಅಡಿಯೊಳರ್ದಖಿಳದೇವತೆಗಳೆಲ್ಲರುಬೇಡಿ । ಯಡಿಯೆನೆಂಬರುಕೃಷ್ಣ ನಿಮಗೆ ॥

ಅರುಣಾಬ್ಜನಿಳಯಕವಾಟಕೌಸ್ತುಭಮಣಿ ಕಿರಣದಿಂತೆಗೆದೊಳಪೊಕ್ಕು ॥
ತರುಣಿ ಲಕ್ಷ್ಮಿಯ ಕುಚವಿಡಿದ ಕೈಯಿಂ । ಸತ್ಕರುಣವೀವುದುಕೃಷ್ಣ ನಮಗೆ ॥

ಕ್ಷೀರಾರ್ಣವಕನ್ಯೆ ಕಮನೀಯಮೂರ್ತಿಯೆ । ನಾರಾಯಣನುರಕ್ಷಿ ಹ್ನೆ ॥
ಓರಂತೆ ಸಕಲೈಶ್ವರ್ಯಸಂಪನ್ನೆ ಮ । ದ್ಭಾರ ನಿನ್ನದು ಸುಪ್ರಸನ್ನೆ ॥೬॥

ಭೂತಲದೊಳು ರಾಮನಾಮವ ಸುಜನ । ವ್ರಾತಕ್ಕೆ ವಾರಾಣಸಿಯಲಿ ॥
ನೀ ತಪ್ಪದುಸಿರುವೆ ಗುರು ಕಾಶಿಯ ವಿಶ್ವ । ನಾಥ ಕುಡೆಸಗೆ ಸನ್ಮತಿಯ ॥೭॥

ನಿಮ್ಮಯಪಿತಕೃಷ್ಣರಾಯನಮಹಿಮೆಯ । ಹೆಮ್ಮೆಯಿಂದುಕೀರ್ತಿಪೊಡೆ ॥
ನಮ್ಮೊಳಪಲ್ಲ ಶಾರದೆಗೂಡಿ ಚತುರಾಸ್ಯ ನೊಪ್ಪ ಬಾರೆನ್ನ ವಂದನೆಗೆ ॥೮॥

ಖ್ಯಾತವೇದಾಗಮಾತೀತೆ ಸರ್ವರ ಮನಃ|ಪ್ರೀತೆ ಷಣ್ಮುಖವಿನಾಯಕರ॥
ಮಾತೆ ದನುಜಕುಲಭೀತೆ ತುಹಿನಗಿರಿ | ಜಾತೆ ಕುಡೆನಗೆ ಸನ್ಮತಿಯ ॥೧೦॥

ಸಾವಿರಸಂತಾನವಡೆದಳೆ ಮಮಕಾರ | ತೀವಿಹುದಬಲನ ಮೇಲೆ ॥
ಕೋವಿದೆ ಪೆರ್ಮಕ್ಕಳ ಬಿಟ್ಟು ಸಲೆ ವಾ|ಗ್ದೇವಿಯೆನ್ನೊಳಗಿರು ತಾಯೆ॥೧೧

ಕಾಯಕವಿದು ನಿನ್ನದು ಕೇಳು ನಿರ್ವಿಘ್ನ | ದಾಯಕ ಎನಗೆ ಸತ್ಕೃಪೆಯ॥
ಜೇಯ ಕಾರುಣ್ಯದಿ ಕುಡು ಪೊಂಬಳಲ ವಿ | ನಾಯಕ ವಿಶ್ವವಲ್ಲಭನೇ ॥೧೨

ಅಗಣಿತಲೋಕಾದಿಲೋಕಂಗಳುದರದಿ | ಸೊಗಯಿಪ ನಾರಾಯಣನ ॥
ಹೆಗಲೊಳುಹೊತ್ತು ಖೇಚರದೆಸಂಚರಿಸುವ|ಖಗರಾಜಕರುಣಿಪ್ಪುದೆಮಗೆ॥೧೩

ವರದುಗ್ಧಾಬ್ಧಿಯಮಥನದಿಂ ತುಸಮಾತ್ರ | ಗರಳವ ಬಿಡಲಾಕ್ಷಣದಿ ॥
ಸುರಮುಖ್ಯರ ಭೀತಿವಡಿಸಿದ ಧರಣೀ | ಧರ ಫಣಿರಾಜ ರಕ್ಷಿಪುದು ॥೧೪॥

ಸುರಪತಿ ಶಿಖಿಕಾಲನಿಋತಿ ವರುಣವಾಯು | ಹರಸಖನೀಶಾನಮುಖ್ಯ
ವರಮನುಮುನಿಜನರುಗಳೆನ್ನ ಚಿತ್ತಕೆ | ಪರಮಸಂತಸವ ಪಾಲಿಪುದು ॥೧೫॥

ಬಲಿ ಪ್ರಹ್ಲಾದ ನಾರದ ವಿಭೀಷಣ ಧ್ರುವ|ಕಲಿಪಾರ್ಥ ವಿದುರನಕ್ರೂರ॥
ಸಲಿಲಜ ಶುಕಶೌನಕ ಪುಂಡರೀಕಾದ್ಯ | ರೊಲಿದೀವುದೆನಗೆ ಸತ್ಕೃಪೆಯ॥೧೬॥

ಉರಗಾಲಯವೆ ಪೆಸರ್ವಡೆದವನ ಮತ್ಸ್ಯೋ| ದರಜಾತೆಯಾತ್ಮಸಂಭವನ॥
ವರಪುರಾಣಂಗಳ ಕನ್ನಡಿಸಿದ ಕವಿ | ವರರ ಕೊಂಡಾಡುವೆ ಮುದದಿ ॥೧೭॥

ರವಿರಶ್ಮಿ ಚರಿಸುವ ದೇಶಗೊಳಹ ದೇವ|ಕವಿಗಳ ಕಾರುಣ್ಯವಡೆದು ॥
ಸವಿಮಾತುಗಳ ವಿಸ್ತರಿಸುವೆ ಕೇಳ್ವರ | ಕಿವಿಗೆ ಭೂಷಣವಪ್ಪ ತೆಱದಿ ॥೧೮॥

ವಡಿಪ್ರಾಸಗುಣನೇಮವುಚಿತಾರ್ಥಲಕ್ಷಣ| ವಿಡಿಕಿಱಿದಿಹ ಭಾವಚಿತ್ರ ॥
ನುಡಿ ತಪ್ಪಿದೊಡೆ ತಿರ್ದುವುದೆನ್ನಯಸಂ | ಗಡಿಗರು ಸಲೆ ಬಲ್ಲವರು ॥೧೯॥

ತಪ್ಪುಸಾಸಿರವಿರಲುಮುೞಿದೊಂದುಗುಣಬರೆ |ಯೊಪ್ಪಿಕೊಂಬುದುಬಲ್ಲವರು
ಕಪ್ಪು ಕಿಂಚಿತ್ತಿರೆ ಕಳೆದಿಸಿದಮೃತವ | ಚಪ್ಪರಿದೀಂಟದಿರ್ಪರೇ ॥೨೦॥

ಬರಹವ ತಿಳಿಯಬೇಡೆನುತೆನ್ನನೊಸಲೊಳು|ಬರೆದುನಿರ್ಮಿಸಲದಱಿಂದ॥
ಬರಹವನಱಿಯೆ ನಾ ಪದವಿಟ್ಟು ಕಡಿತದೊಳ್| ಬರೆದು ಮಾಡಿದ ಕೃತಿಯಲ್ಲ॥

ಗುಬ್ಬಿಯು ಕೊರಲ್ಗೆ ಗೋಧಿಯು ಕಲ್ಲಕಟ್ಟಿದೊ | ಡುಬ್ಬಿಯಾಗಸಕೆ
[ಪಾಱುವುದೇ ॥
ಕಬ್ಬಿಗರಾನುಸಿರಿಗ ಕಾವ್ಯವ ತಿದ್ದಿ | ಪಬ್ಬಿಸುವುದು ಭೂತಳದಿ ॥೨೧॥

ನೋಡಲು ಹಸ್ತವಿಲ್ಲದ ಸೊಲ್ಪ ಗೀಜುಗ | ಗೂಡ ಕಟ್ಟದಡಚ್ಚಳಿಕೆಯು ||
ಕೋಡಗ ಕಂಡು ಸ್ಯೆರಿಸದೆ ವಿನಾಶವ | ಮಾಡಲದೇನು ಕೇಡಹುದು ||೧೩||

ಬಟ್ಟವೇರಿಯ ಬೆಳ್ದಿಂಗಳ* ಹೊಂದಾವರೆ | ಬಟ್ಟಲೊಳ್ ಸೋದಿಪರುಂಟೇ ||
ನೆಟ್ಟನೆ ಕನಕದಾಸನ ಕಾವ್ಯದೊಳ್ ದೋಷ | ತಟ್ಟದು ತಪ್ಪೆನಬೇಡ ||೧೪||

ರಸಿಕರ ಕರ್ಣಯುಗ್ಮವ ಪೊಕ್ಕು ಮುದದಿಪ್ಪ | ದ್ಬಿಸಜವನಲರಿಸಿಮೈಗೆ ||
ಎಸೆವ ಪುಳಕದೊಸಗೆಯನಿತ್ತು ತಿರವ ತೂ | ಗಿಸುವುದೀವಚನದ ರಚನೆ ||

ರಸಪೂರಿತ ಸುಪ್ರಬಂಧವಿಲಕ್ಷಣ | ವೆಸೆನಂತೆ ಪೇಳ್ದಪೆನಿದನು ||
ಹಸನಾದುದೆಂದು ಯೋಗ್ಯರು ತಲೆದೂಗಲು | ಉಸಿರುವೆ ಹರಿಕೃಪೆಯಿಂದ ||

ವಿಷಕರ್ತೃವಿನಮೇಲೊಲಗಿರ್ದುಬಂದಲ್ಲಿ | ವಿಷದಪೆವೆರ್ಲೆವಾಲಸವಿದು ||
ವಿಷವರ್ಜಿತವಾಹನ ಕೃಷ್ಣಂಗೆನ್ನಯ | ವಿಷವಾಕ್ಕು ತಾಗಲೇನಹುದು ||೧೭||

ಅಮೃತಾರ್ಣವದೊಳು ಮನೆಗಟ್ಟಿಕೊಂಡು ಮೇ | ಣಮೃತಾನ್ನವ ಸುರ
[ರ್ಗಿ*ತ್ತು ||
ಅಮೃತಕರವಾಮಲೋಚನಕೃಷ್ಣಂಗೆ | ಅಮೃತವಾಕ್ಯದಿ ಲೇಸುಬಹುದೆ ||

ಲೇಸಾವುದು ಹೊಲ್ಲಹವಾವುದು ಸ | ರ್ವೇಶನ ನಾಮಕೀರ್ತನದೆ ||
ದಾಸೋತ್ತಮಪ್ರಹ್ಲಾದನ ವಿಷ್ಣುವಿ | ನಾಶವಾದುದು ಜಗವರಿಯೆ ||೧೮||

ಕೊಡವಾಲು ಪುಳಿವೆರೆಟಿವುದಲ್ಲದೆ ಪಾ | ಲ್ಗಡಲು ನಾಶವನೈದುವುದೆ ||
ಬಡವಂಗೆ ಕೃತಿದೋಷವಲ್ಲದೆ ಬೊಮ್ಮನ | ಪಡೆದಾತಗೇತರ ದೋಷ ||೨೦||

ಅದರಿಂದೆ ವರ್ಣದೋಷಂಗಳು ಪರಮಸಂ | ಪದವೆತ್ತು ಕೃತಿಗಿಲ್ಲವೆಂದು ||
ಬುಧರಾಮ್ನಾಯಶಾಸ್ತ್ರಾರ್ಥವ ತಿಳಿದು ನಾ | ನಿದ ಪೇಳ್ವೆ ಕೇಳಾಯತಾಕ್ಷಿ ||

ಹೇಳು ಹಿರಣ್ಯಾಂಬರನ ತಾತ್ಪರಿಯುವೆ | ತ್ತಾಳುಗಳಡಿದಾವರೆಗೆ ||
ಬೀಳುವ ಪುರುಷಷಟ್ಪದ ನಿನ್ನ ವಚನವ | ಕೇಳುವೆ ಪರಮಸಂತಸದಿ ||೨೧||

ಪೂಸರದಹನ ಕಾವೋತ್ಪತ್ತಿ ವರಶಂಬ | ರಾಸುರವಧೆ ಕಂತುಸುತನ ||
ಭಾಸುರಲೀಲೆ ಬಾಣನ ಗೆದ್ದ ಜಯಲ | ಕ್ಷ್ಮೀಶನ ಕೃತಿಯು ವರ್ಣಿಪೆನು ||೨೨||

ವಾಣಿಯುಧಜನೆಂಬ ವ್ಯವಹಾರಿ ಪಟ್ಟಣ | ಗೋಣಿಯೊಳ್ ತುಂಬಿದ ರತ್ನ ||
ಓಣಿಯೊಳ್ ಚೆಲ್ಲಿದಂತಿಗೆ ನಿನ್ನ ಕೃತಿಯೆಂಬ | ಮಾಣಿಕ ಮನ್ಮನೋನಾಥ ||

ನಾಡೊಳಗುಳ್ಳ ಜಾಣರು ಜಾಣೆಯರೊಡ | ನಾಡುವ ಸವಿಮಾತುಗಳ ||
ಪಾಡುಗಬ್ಬವ ಪರುಠವಿಸಿದ ಬಗೆಯ ನೀ| ನೋಡು ಮಾನಿಸಿ ಮುಂದೆ ಮುಂದೆ||

ಜನಕನೊ ನಿನಗೀಮತಿನಿತ್ತವಬ್ರಹ್ಮ| ಜನಕನೊ ವರಸರಸ್ವತಿಯೋ ||
ಸನಕಸನಂದಾದ್ಯರೊ ಮೇಲ್ಗತಿ ಪೇಳು| ಕನಕದಾಸೋತ್ತಮ ತನಗೆ ||೩೬||

ತೆಂಗಿನ ಕಾಯ ತೋರದ ಮೊಲೆವೊತ್ತ| ಳ ತಾಂಗಿಯು ಬಂದುಗೆವಾಯ||
ರಂಗಿಪ ಚೆಂದುಟಿಯಿನಿದೆನೆ ಮೋಹತ| ರಂಗಿಣಿವೇಳ್ವೆ ಕೇಳಬಲೆ ||೩೭||

ಹರಿಶರಣರಚ್ಚು ಬುಧಜನರಿಗೆ ಪೆಚ್ಚು | ದುರಿತವನಕೆ ಕಾಚ್ಚಿಚ್ಚು ||
ವಿರಹಿಂಗಳಗೆ ಪುಚ್ಚು ವೀರರ್ಗೆ ನುಚ್ಚು ಕೇ | ಳ್ವರಿಗಿದು ತನಿಬೆಲ್ಲದಚ್ಚು ||

ಕೋಟಿಜನ್ಮದ ಪಾಪಹರ ಕೃಷ್ಣಚರಿತೆಯ| ಪೀಠಿಕೆಯೊಳಗೊಂದು ಪದನ||
ಪಾಠಿಸಿ ಕೇಳದ ಸುಜನರ್ಗೆ ಮುಕುತಿವ| ಧೂಟಿಯ ಸಂಸರ್ಗವಹುದು||೩೯

ವರಮೋಹನತರಂಗಿಣಿಯೆಂಬ ಕಾವ್ಯವ | ಬರೆದೋದಿ ಕೇಳದ ಜನರ ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು| ಪೊರೆವ ಲಕ್ಷ್ಮೀಕಾಂತ ಬಿಡದೆ||೪೦

—ಇಂತು ಪೀಠಿಕಾಸಂಧಿ ೧ ಕ್ಕೆ ಪದಂ ೪೦ ಕ್ಕೆ ಮಂಗಳಂ—

## ಎರಡನೆಯ ಸಂಧಿ.

ಕೃತಿವೇಳ್ದಿ ಕನಕದಾಸೋತ್ತಮ ಕೇಳ್ದವ| ಳತಿಸುಜ್ಞಾನವಧೂಟಿ ||
ಕೃತಿಗೆಕರ್ತನು ಕಾಗಿನೆಲೆಯಾದಿಕೇಶವ| ಕೃತಿಯಕೇಳ್ದರೆಪುಣ್ಯವಹುದು ||

ವೆಂಠಣಿಸಿದ ವಿಷ್ಣುಭಕ್ತಿಸಂದನಕಲ!ಕಂಠ ನಿನ್ನಯ ಸವಿಮಾತು ||
ಉಂಟಾದುದೆನ್ನಯ ಕರ್ಣಕ್ಕೆ ಪರಲೋಕ |ನಂಟರು ಕೇಳುವಂತುಸಿರು ||೧||

ಎಲೆಯೆನ್ನಕಣ್ಗೆಮಂಗಳವಪ್ಪಬಟ್ಟಬ| ಲ್ಮೊಲೆಯಮಂಗಳರತ್ನಕೇಳೆ ||
ಶಿಲೆಯ ವಕ್ಷದರ ಚಿತ್ತವ ಕರಗಿಪ್ಪುದು ನೈ| ದಿಲೆಯಣ್ಮನಂತೆನ್ನಕವಿತೆ ||

ಈಕಾವ್ಯಕಾದಿವರ್ಣನೆಯಾವುದೆನಲು ರ | ತ್ನಾಕರ ನೆಲವೆಣ್ಣ ನುಡಿಯ ||
ಮೇಖಲೆಯೆಂದದೆ ಪರಿವೇಷ್ಟಿಸಿದುರ್ಗ | ನೇಕಸಂಭ್ರಮಪನೇನೆಂಬೆ ||೨||

ನೀರಾನೆ ನೆಗಳು[1] ಪಾಠೀನ ಕಮಠ ಶಿಂಶು|ಮಾರ ಕರ್ಕಟ ಭಲ್ಲೂಕ ||
ಘೋರಾಹಿ ಮೊದಲಾದ ದುಷ್ಟಜಂತುಗಳಿಂದ|ವಾರಾಶಿ ಕಣ್ಗೆ ರಂಜಿಸಿತು||೫||
ತಂಡತಂಡದಿ ಹೊಱವಳಯದಿ ಡಿಂಡೀರ[2]|ಪಾಂಡುರ ಶಂಖಪ್ರವಾಳ ||
ದುಂಡುಮುತ್ತುಗಳಿಂದೆ ಮೀರೆಯಬ್ಧಿಯಕೂರ|ಲ್ದಂಡೆಯಂತಿರ್ದುದೇನೆಂಬೆ||
ದೈವಾಧೀನದಿ ವಜ್ರ ಮೈನಾಕನ|ಕೈವರ್ತಿಸಿ ಕೊಲಲೆಂದು ||
ವೈವಸ್ವತನೊಲು[3] ಬಹನೆಂದು ಕಡಲಳ್ಳೆ|ಹೊಯ್ವಂದದಿ ಕಂಪಿಸಿತು ||೭||
ಹೊದ್ದಿರಲುರ್ವಿಯು ಹೆಱಸಾರು ಸಾರೆಂದು|ಬುದ್ಧಿಗಲಿಸಿ ಕೇಳದಿರಲು ||
ಗದ್ದಿಸಿ ತೆರೆಗೈಗಳಿಂದೆ ತಾಡಿಸುವಂತೆ ಗುದ್ದಿತು ಜಲನಿಧಿ ತಟವ ||೮||
ವೇದ ತಸ್ಕರನ ತನ್ನೊಳಗಿಟ್ಟುಕೊಂಡಪ|ರಾಧಕ್ಕೆ ಪೊಱಮಡಲೊಡನೆ ||
ಮಾಧವ ಕರೆಸಲು ಮರಳಿ ಬಂದಂತಾಗ|ಲಾದುದು ಕಡಲೋಟಭರಿತ ||೯||
ಅಂಬುಧಿಮಧ್ಯದ ಧರೆಯೊಳು ಚತುರಾಸ್ಯ|ನೆಂಬ ವಿದ್ಯಾಧಿಕನೊಲಿದು ||
ಕಂಭಸೂತ್ರವ ಪ್ರತಿಷ್ಠೆಯ ಮಾಡಿದಂದದಿ ಪೊಂಬೆಟ್ಟ ಕಣ್ಗೆ ರಾಜಿಸಿತು||೧೦||
ಆಶರಧಿಯ ಮಧ್ಯದಿ ಸುವರ್ಣದಾದಿ|ಶೇಷ ತಾನೆ ನೆಟ್ಟನೆ ನಿಂದು ||
ಶ್ರೀಶನ ವೈಕುಂಠವ ನೋಡುವಂತೆ ಶೈ|ಲೇಶ ಹೇಮಾದ್ರಿ ರಂಜಿಸಿತು ||೧೧||
ಎಂಬತ್ತುನಾಲ್ಕುಲಕ್ಷದ ಜೀವರುಗಳೆಂ|ದೆಂಬ ಬೀಜವ ಸೃಷ್ಟಿಕರ್ತ ||
ಮುಂಬೆಳಸಿಗೆ ಪಣಕವ ಕಟ್ಟಿದಂದದಿ ಪೊಂಬೆಟ್ಟ ಕಣ್ಗೆ ರಂಜಿಸಿತು ||೧೨||
ಆಪರ್ವತದ ದಕ್ಷಿಣಭಾಗದೊಳು ಜಾಬೂ|ದ್ವೀಪದ ಮಧ್ಯದೊಳಿರ್ದ ||
ಸೋಪಸ್ಕರ[4]ವೆತ್ತ ನಿಖಿಲದೇಶಂಗಳ ಸ್ವ|ರೂಪವನೇವರ್ಣಿಸುವೆನು ||೧೩||
ಮಾಳವ ಮಗಧ ಕಾಶ್ಮೀರ ಗುಜ್ಜರ ಗೌಳ|ಚೋಳಕೋಸಲದೇಶಬೋಟ
ಲಾಟ ಕನ್ನಡ ವಂಗ ಚೌಟ ಹೊಯ್ಸಳ ಮಲೆ|ಯಾಳ ದೇಶಂಗಳೊಪ್ಪಿದುವು||
ಇಂತಿವು ಮೊದಲಾದ ಬಹುದೇಶದಲ್ಲಿ ಶ್ರೀ|ಕಾಂತಂಗೆ ತವರೂರೆನಿಸಿ ||
ಸಂತಸವಡೆದುದಾಸೌರಾಷ್ಟ್ರ ಸಕಲದಿ|ಗಂತಕ್ಕೆ ಸತ್ಕೀರ್ತಿವಡೆದು ||೧೫||
ನಗರ ಪಟ್ಟಣಖೇಡ ಖರ್ವಡ ಪುರಗ್ರಾ|ಮಗಳೆಂಬ ನಾನಾ ಪೆಸರಾಂತು||
ಸೊಗಯಿಸುತಿಪ್ಪುವಾದೇಶದಿ ಬಿಳುವ|ಳ್ಳಿ[5]ಗಳಲ್ಲ ಕೇಳಾಯತಾಕ್ಷಿ ||೧೬||

---

ಕಷ್ಟಪದಗಳಿಗೆ ಅರ್ಥ—1. ಮೊಸಳೆ, 2. ನೊರೆ, 3. ಯಮ, 4. ಸಕಲಸಂಭಾರ, 5. ಸಣ್ಣ ಸಣ್ಣ ಹಳ್ಳಿಗಳು.

ರಾರಾಜಿಸುತಿಪ್ಪ ತೊಱೆ ಸಿಖಿಳಾಗ್ರ|ಹಾರ ಷಡ್ದರ್ಶನಾರ್ಯರಿಗೆ ||
ವೀರವಮಾನ್ಯವನಿತ್ತ ಪುರಗಳೊಪ್ಪಿರ್ದು ದಾ|ದ್ವಾರಾವತಿಯ ದೇಶದೊಳು ||
ಆವಾವಗ್ರಾಮಾನುಗ್ರಾಮದಿ ಶಿವವಿಷ್ಣು ದೇವಾಲಯ ಪಾತ್ರಭೋಗ ||
ತೀವಿದ ಮೃಷ್ಟಾನ್ನಸತ್ರದೊಳೊತ್ತಿಲಿ ಭಾವಿಸೆ ಕೊಳಗಳೊಪ್ಪಿದುವು ||೧೯||

ಸಮಯ[1]ನಿಷ್ಠರುಮುನ್ನತಕೀರ್ತಿವಿದರು ವಿ|ಕ್ರಮವಿದ್ಯಾಭಾಗ್ಯಾಧಿಕರು||
ಸುಮತಿಗಳಭವಾಚ್ಯುತಭಜಕರು ಸಂಭ್ರಮದಿ ವರ್ತಿಸುವರೆಲ್ಲೆಡೆಯ ||
ಪೊಡೆಯೆಂಬುದು ಗಂಧಶಾಲಿಯೊಳ್ ಕೈಯೊಳು|ಕೊಡೆಯೆಂಬ [ರಾತಪತ್ರವನು ||
ತಡೆಯೆಂಬುದಹಿಮಂತ್ರದೊಳಗಲ್ಲದಾದೇಶ ದೆಡೆಯೊಳೀಶಬ್ದಂಗಳಿಲ್ಲ ||೨೦||

ಕಂಟಕವೆಂಬುದು ಕೇತಕಿಯೊಳು ರಾಜ ಕಂಟಕ[2]ವೆಂಬುದಂಬುಜದಿ ||
ಕಂಟಕವೆಂಬುದು ಹಲಸಿನೊಳಲ್ಲದೆ | ಕಂಟಕವಾದೇಶಕಿಲ್ಲ ||೨೧||

ದಂಡ ಸನ್ಯಾಸಿವರ್ಗದೊಳುಂಟು ಪ್ರಸರಪಿ|ದಂಡ ಗೋಪಾಲರೊಳುಂಟು||
ದಂಡ ಪುಂಡ್ರೇಕ್ಷುವಾಟಿಯೊಳುಂಟು ಮಿಕ್ಕಿನ|ದಂಡವಾದೇಶದೊಳಿಲ್ಲ||೨೨||

ಕಟ್ಟುವರ್ನಿಱಿಕೆಯ ನೀವಿ[3]ಯೊಳಗೆ ಕೈ|ಗಟ್ಟುವರ್ಕಂಕಣಗಳನು ||
ಕಟ್ಟುವರ್ಧಮ್ಮಿಲ್ಲ[4]ವೆಲೆಯುಮುಂಡಿಗೆಯನು|ಕಟ್ಟುಕುಟ್ಟೆಂಬುದಲ್ಲಿಲ್ಲ ||೨೩||

ಕುಟಿಲ ಕುಂತಲದೊಳು, ಮಧುಪಾನತೊಂಡೆವ|ಣ್ದುಟಿಯೊಳು ಕರಿನ [ಕಾಂತೆಯರ ||
ಘಟಕುಚದೊಳಗಲ್ಲದೀನುಡಿಗಳು ಸಂ|ಘಟಿಸವು ಸೌರಾಷ್ಟ್ರದಲ್ಲಿ ||೨೪||

ಹಿಡಿವರು ವಾರನಾರಿಯರ ಬಲ್ಮೊಲೆಗಳ|ಕಡಿವರವರ ನಳತೋಳ ||
ಉಡಿಗೆಯ ಸುಲಿವರು ಪಲ್ಲವಾಧರೆಯರ| ಪೊಡವಿಯೊಳತಿಖಳರಿಲ್ಲ ||೨೫||

ಕೆರೆಬಾವಿಗಳಲ್ಲದಗ್ಗಡದೆಡೆಯಲ್ಲಿ|ತೊಱೆನೀರ ಕಂಬಿ[5]ಯೊಳ್ತರಿಸಿ ||
ನೆಱೆಧರ್ಮಿಷ್ಠರು ನಿರ್ಮಿತವನು ಮಾಡಿ ದಱವಟ್ಟಿಗೆಗಳೊಪ್ಪಿದುವು ||೨೬||

ಪಟುಬದ್ಧದೀರ್ಘದಂಡಾಂಕನರಾಶ್ರಯ[6]|ಮಠಭುಕ್ತಶಾಲೆ ಕಂಪೆಸೆವ ||
ಘಟಪೂರಿತಗಂಧಶೈತ್ಯೋದಕದಱ ವಟಿಗೆಯ ಮನೆಗಳೊಪ್ಪಿದುವು ||೨೭||

---

ಕ. ಪ. ಅ.—1. ಶಾಸ್ತ್ರ. 2. ಅರಸರಿಂದ ಬರುವ ಹಿಂಸೆ; ಚಂದ್ರನಿಂದ ಉಂಟಾಗುವ ಹಿಂಸೆ. 3. ನಿರಿಯ ಗಂಟು. 4. ತುರುಬು. 5. ಅಡ್ಡೆ. 6. ಡೇರೆ.

ಮಾಮರದೆಡೆಯಲ್ಲಿ ಮಂಗಳಮಯವಾದ | ಲಾಮಂಚದಮಳಚಪ್ಪರದಿ‖
ಹೇಮಾಂಬುರುಹಮೊಗ್ಗೆ ಮೊಲೆಯರು ನೀರ್ವಿಡಿ | ದಾಮಹಾಸ್ಥಲಗಳೊ
[ಪ್ಪಿದುವು ‖೧೯‖

ಅಂಬರದಲಿ ಪ್ರತಿಬಿಂಬಿಸುತಿಹ ಕುಚ|ಕುಂಭ ತತ್ಕುಂಭವೆಂಬಂತೆ ‖
ಕುಂಭಾನ್ವಿತ ಕರಕಮಲದಿ ಸ್ತ್ರೀನಿಕು|ರುಂಬ ನೀರ್ವಿಡಿದು ನಿಂದಿಹುದು ‖
ಕಳಶಸ್ತನ ಬಾಹುಮೂಲ ನಿರ್ಮಳದ ಕೌಂ | ಕುಳ ತೋಳ ನೆಗಹಿ
[ನೀರೆಱೆಯೆ‖
ಗಳತೃಷ್ಣೆ ಪರಿದೊಡವಿಾಂಟುವ[1] ನೆವದಿ ಹೆಂ | ಗಳ ಮುದ್ದುಮೊಗವ
[ನೋಡುವರು ‖೨೦‖

ಕಡುರೂಪು ಕಣ್ಗೆ ಮೈಗಂಪು ಮೂಗಿಗೆ ಮೆ|ಲ್ನುಡಿಕೊಡಕೆಗೆ[2] ಹೆಂಗ
[ಳೆಱೆವ ‖
ಕುಡಿನೀರಿನಿಂಪುಜಿಹ್ವೆಗೆ ಶೈತ್ಯತನುವಿಂ|ಗಿಡಿದುದು ಬೞಲಿ ಬಂದರಿಗೆ‖೨೧‖

ಸಲ್ಲಲಿತೋಭಯತಟದಸಾಲ್ಮರದೊಳು|ಬೆಲ್ಲದ ಪಾನಕವೆಱೆದು ‖
ಅಲ್ಲದ[3] ಕೆನೆವೊಸಱಶನವ[4] ಕರೆಕರೆ | ದೆಲ್ಲರಿಗುಣಬಡಿಸುವರು ‖೨೨‖

ಲೋಕದೊಳತಿಶೀಲವಂತ ಶ್ರೀವೈಷ್ಣವ | ರೇಕವ್ರತದ ಭೂಸುರರು ‖
ಏಕಾಂತನಿಳಯದೊಳೇಕವಾಗಿರೆ ಸ್ವಯಂ | ಪಾಕವಮಾಡಿ[5] ಭುಂಜಿಪರು ‖

ನಾಗವಲ್ಲಿಯಪರ್ಣಚೂರ್ಣ[6] ಸುಕರ್ಪೂರ|ಪೂಗ[7] ಸಂಭಾಗ ತಾಂಬೂಲ
ರಾಗ[8] ಪೂರಿತಗಂಧಕುಸುಮಂಗಳಿಂದಲ್ಲಿ |ಭೋಗವೀವರು ಪಾರ್ವರಿಗೆ‖೨೪‖

ಕುಸ್ತರಿಸುವುವಲ್ಲಲ್ಲಿ ಬೞಲ್ದ ಸ|ಮಸ್ತರ ದೃಗು[9] ಯುಗಳಕ್ಕೆ ‖
ವಿಸ್ತರಿಸುವಚ್ಚರಿಯೆನೆ ವಿಮಲ ಸ | ರಸ್ಥಲ ಕೆಱೆಗಳೊಪ್ಪಿದುವು ‖೨೫‖

ತೊಱೆದಾಳ್ದನಕಾರ್ಮುಕ[10] ವಸಿಂಜೆನಿಯಿಂದೆ|ನೆಱೆಬಾಗಿಸಿದರೆಂಬಂತೆ‖
ಬಱೆಗಲ್ಲುಗಳ ಕೀಲಿಸಿದೇಱ್ಗಳಿಂದೆ|ಕೆಱೆಗಳೊಪ್ಪಿರ್ದುವಲ್ಲಲ್ಲಿ ‖೨೬‖

ಜಲವಿದ್ದೊಡೇನೊಪಾನಕೆಯೋಗ್ಯವಲ್ಲ ಸ|ತ್ಫಲಭೋಗಕೊದವುವುದಲ್ಲ‖
ಮಲೆತ ಮೈಸೀರೆಂದು[11] ಸಿಂಧುವ ಜಱೆದಿಳೆ|ಗೊಲವೀವ ಕೆಱೆಗಳೊ
[ಪ್ಪಿದುವು ‖೨೭‖

---

ಕ. ಪ. ಅ.—1. ಕುಡಿಯುವ, 2. ಕಿವಿಗೆ, 3. ಶುಂಠಿಹಾಕಿದ, 4. ಅನ್ನವನ್ನು, 5. ತಾವೇ ತಮ್ಮ ಅಡಿಗೆಯನ್ನು ಮಾಡಿಕೊಂಡು, 6. ಸುಣ್ಣ, 7. ಅಡಕೆ, 8. ಕೇಸರಿ, 9. ಕಣ್ಣು, 10. ಗಂಗಾಧಾರಿಯಾದ ಶಿವನ ಧನುಸ್ಸು, 11. ಮೂತ್ರವೆಂದು.

ಮಳೆಗಾಲಗೊಳುಬ್ಬಿ ಬೇಸಗೆಯೊಳು ಕಾಲು|ನ್ಯೂನೆಯಾಗುದೆಂಬ [ನಿಂದೆಯನು ||
ತಳೆಯದೆ ತೊಂಬಲಿ ಪೊಱವಟ್ಟ ಕುಲ್ಯ|ಗಳಳೆಯುಗಲದಿ ಚಲಿಸುವುವು ||
ಭಾಗೀರಥಿದೇವಿಯರು ಸಾಸಿರಪೊಗ|ವಾಗಿ ಸಾಗರವೆರದಂತೆ ||
ರಾಗಿಪ ಕೆರೆಗಾಲುವೆ ಸಾಸಿರಪೊ|ಗವಾಗಿ ಸದ್ವನವ ಸಾರಿದುವು ||೩೯||

"ಆಪೋನಾರಾಯಣತತ್ವ"[1]ವೆಂಬ ಪ್ರಾ | ಣೋಪ[2]ನೊಳ್ವೆರೆದ [ಭೂಸತಿಯ ||
ರೂಪಾಂತರೋನ್ಮಾಂಚನದಂತೆ ಗಂಧಶಾ|ಲೀಫಲದಂಕುರವಿಹುದು ||೪೦||
ತೂಗಿ ಬೆಳೆದು ನಭಕಡರ್ದೊಡೆ ದೇವರ್ಕಳಾ|ರೋಗಿಪ ಸವಿಗಾಣರ್ ||
ಪೋಗಿ ಪೊಡುವುದೇನೆನುತ ಲಜ್ಜಿಸಿ ತಲೆ ವಾಗಿದಂತಿಹುದು ರಾಜಾನ್ನ[3] ||

ಮಡಿ[4]ಗಳ ಕಾವ ಪುಳಿಂದಿನಿಯರ ರೂಪ | ಪಡಿಗಟ್ಟ ಬಲ್ಲವರಾರು ||
ಮುಡಿ ತೋರವೊಲೆಯ ಭಾರಗಳಿಂದಲುಂಗರ|ವಿಡಿನಡು ಬಳುಕುವಂತಿ [ಹರು ||೪೧||
ಕಾವನ ಮುಂಗೈಯ ಗಿಳಿಯಂತೆ ನುಡಿದುಱೆ|ಕಾವನಬಿಲ್ಗೋಲ[5]ಪಿಡಿದು ||
ಕಾವನ ರಥವಾಜಿ[6]ಭುಂಜಿಸದಂತೆ ಕೈ[7]|ಗಾವ ಪಾಮರಿಯರೊಪ್ಪಿದರು ||

ಕೊನೆವಾಳೆ ಕುಸುಮಮಂಜರಿ ಮುಖ್ಯಶಾಲಿಯ|ಕೊನೆಗಳ ನಗಿವ ಕೀರಗಳು ||
ಕೊನೆಗಣ್ಣ ಪಾಮರಿಯರ ದಿಟ್ಟಿಗಣ್ಣಾರು|ಳ್ಗೊನೆಯೊಂದು ಕೊನೆಗೆ ಪಾಱಿ [ದುವು ||೪೨||
ಸುಟಿವೆತ್ತ ಕೊನೆಯಿಂದೆಮುಗುಳೆ ಬಂದೆಱಗುವ|ಸಿಟಿಲಾಕ್ಷನಶತ್ರುಹಯವ[8]
ಕುಟಿಲಕುಂತಲೆಯರುದ್ದರಿಸಲ್ಕೆ ತೊಣ್ಡೆವಣ್ದುಟಿಯ ಪಣ್ಣೆಂದು ಪಾಱಿದುವು ||

ನೆತ್ತಿಯೊಳ್ ಪಾಱುವಗಿಳಿವಿಂಡು ಪಚ್ಚೆಯ | ಸತ್ತಿಗೆಯಂತೆ ಮಂಡಲಿಸೆ ||
ಮತ್ತಕಾಶಿನಿಯರ ದಿಟ್ಟ ಶಂಖದ ಕಾವ | ತೆತ್ತಿಸಿ[9]ದಂತೆ ಶೋಭಿಸಿತು ||

---

ಕ.ಪ.ಅ.—1. ನೀರೇ ನಾರಾಯಣಸ್ವರೂಪವು. 2. ಪ್ರಾಣೋಪ—(i) ಪ್ರಾಣಕ್ಕೆ ಓಪ ಪ್ರಾಣಕಾಂತ; (ii) ಕಾಲುವೆಯೆಂಬ ಜಲರೂಪವಾದ ಓಪ, ಗಂಡ. 3. ಶ್ರೇಷ್ಠವಾದ ಭತ್ತದ ಗದ್ದೆ. 4. ಗದ್ದೆಯ ಮಡಿ. 5. ಮನ್ಮಥನ ಬಿಲ್ಲಿನ ಕೋಲು, ಕಬ್ಬು. 6. ಗಿಣಿ. 7. ಗದ್ದೆ. 8. ಮನ್ಮಥನ ಕುದುರೆಯಾದ ಗಿಣಿ. 9. ಸೇರಿಸಿ.

ಕಂದುಗೊರಲನೊಳು ಕಾವಳ್ಕ ಸ್ಮರ ತನ್ನ|ಗೊಂದು ಬಿಲ್ಲದು ಸಾಲದೆಂದು||
ತಂದಿಲ್ಲಿ ಬೆಳಸಿದನೆಂಬಂತೆ ಬೆಳ್ಗಬ್ಬ | ಸಂದಣಿಸಿತು ಬನಬನದಿ ||೪೯||
ಆಗರದೊಳು ರಸದಾಳ ತೆಂಗಾಳಿಯಿಂ ತಾಗಲೊಂದರೊಳೊಂದು ಹಣ್ಣಿಕೆ||
ಮೋಗೊಲ್ಗಳೊಡೆದಿನಿರಸದ ಪರಿಯೊಳಕ್ಷು|ಸಾಗರ ತುಂಬಿದಂತಾಯ್ತು ||
ಮಿಂಡಿವೆಂಗಳನಗಲಿದ ಚದುರರು ತಮ್ಮ | ದಂಡಿಪ ಸ್ಮರಚಾಪವೆಂದು ||
ಭಂಡಿಪೆರ್ಗಡುಗೋಲುಗಳಂದಲಹೆಗಿಕ್ಕಿ | ಖಂಡಿಸುವರು ಕಬ್ಬುಗಳನು ||
ಬಾಲೆಯ ಕೊರಲು ಹೊನ್ನೊರಲು ಸುಸ್ವರ ಕಣೆ | ಲೀಲೆಗತ್ತರಿ
[ಕುರುಳೊಂಕು ||
ಪಾಲಿರ್ದ ಕುಚ ಕೊಪ್ಪರಿಗೆ ನಿಟ್ಟಸಗ್ಗ|ಸ್ವಾಲೆಯ ಮನೆಗಳೊಪ್ಪಿದುವು||೫೦
ಮುದ್ದು ನಾಲುಕು ಮೂಲೆಯಾದಂತೆ ತನಿಸೊಲ್ಲ|ದುದ್ದ ಕವರಪಂಚಧಾರೆ|
ಬಿದ್ದಿಹುದಾಲೆಯ ಮನೆಮನೆಗಳ ಮುಂದೆ | ಹದ್ದೊಡೆಮಜಲೊಟ್ಟಿಲಂತೆ ||
ಅಂದೊಮ್ಮೆ ವರಹಾವತಾರದಿ ಸೆರೆದ ಗೋ|ವಿಂದ ತನ್ನಯ ಪೀತಾಂಬರವ||
ಕುಂದದೆ ಭೂಮಿಗೆ ಪೊದಿಸಿದೊಲಿರುವುದು|ಗಂಧಶಾಲಿಯ ವನ ಕಳತು ||೫೧||
ದಾಳಂಬಜಂಬೂರದ್ರಾಕ್ಷಿ ಸೌರಭ್ಯವ|ತಾಳಿದನೇಕಪೂದೋಟ ||
ಕೇಳಿಯವನಗಳದ್ದುವು ಪುರಲಕ್ಷ್ಮಿಯ | ತಾಳಿಯ ಮರಕತಸಂತೆ ||೫೨||
ಪಲಸು ನೇರಿಲು ಚೂತ ಬಿಚುಮಂದ ನ್ಯಗ್ರೋಧ | ಚಲಪತ್ರ
|ಬಿಲ್ವಾಮಲಕ ||
ಲಲಿತಶುದ್ಧಸ್ಫಟಿಕದಲಿ ಬಿಗಿದ ಕೋಮಲಸಾಲುಮರಗಳೊಪ್ಪಿದುವು |೫೩|
ಹೊಕ್ಕರಣೆಗಳ ಹೊಂಗಳಸ ದೇಗುಲದಸಾಲು ಬೇ|ದಕ್ಕರಿಗರ ಜಪಶಾಲೆ ||
ಸೊಕ್ಕಾನೆಕುದುರೆಯುವ್ಯೆಹಾಳಿಯುಂಕಣ ದಿಕ್ಕ ಕಣ್ಮನಕೆ ರಂಜಿಸಿತು ||೫೫|
ಶ್ರುತಿಶಾಸ್ತ್ರಗಮುಮುಪನಿಷತ್ಪುರಾಣ ಪ್ರತಿವೆತ್ತ ಹರಿಯುನಿಟ್ಟಿಸಲು
ಅತಿಭಕುತಿಯುಲಿ ಬಂದಂತೆ ರಂಜಿಸಿತು ಗೋ|ಮತಿನದಿ ದ್ವಾರಕಾಪುರದಿ||೫೬|
ವರಮೋಹನ ತರಂಗಿಣಿಯೆಂಬ ಕಾವ್ಯವ ಬರೆದೋದಿ ಕೇಳದ ಜನರ ||
ತರಣಿಚಂದ್ರಮರುಳ್ಳನಕ ಸಕ್ಕ್ರಪೆವೆತ್ತು|ಪೊರೆವ ಲಕ್ಷ್ಮೀಕಾಂತ ಬಿಡದೆ||

—ಅಂತು ಸಂಧಿ ೨ ಕ್ಕಂ ಪದಂ ೯೭ ಕ್ಕಂ ಜಯಮಂಗಳಂ—

---

ಕ. ಪ. ಅ.—1. ಸಕ್ಕರೆ. 2. ಬೇವಿನಮರ. 3. ಅರಳಿಯಮರ. 4. ವೇದಾಕ್ಷರಗಳನ್ನು ತಿಳಿದವರ. 5. ಸ್ಥಲ. 6. ರೂಪಾಂತರವನ್ನು ಹೊಂದಿ.

## ಮೂಱನೆಯ ಸಂಧಿ

---

**ದ್ವಾರಕಾಪುರವರ್ಣನೆ—**

ಮೋಣದಱಸುವಂತೆ ಮಾಡದಿರಧಿಕಸು|ಜಾಣರ ಜ್ಞಾನಲೋಚನಕೆ ||
ಕಾಣಬರ್ಪಂತೆ ಕನ್ನಡವಾಕ್ಯದೆ ನೆರೆ|ಜಾಣ ಸತ್ಕೃತಿಯ ವಿಸ್ತರಿಸು ||೧||

ಸುಮನಸದಿಂದೆ ಕೇಳಾದೊಡೆ ಸುಜ್ಞಾನ|ಪ್ರಮದೆ ನಿನ್ನಯ ಕರ್ಣಂಗಳಿಗೆ
ಅಮರಿದಮಣಿತಾಟಂಕ[1] ವೆನಲು ಪೇೞ್ವೆ|ರಮಣೀಯವಾದಮೋಲ್ಗತೆಯ ||೨||

ದ್ವಾರಾವತಿಯ ಪಟ್ಟಣದ ಸಂಪೂರ್ಣಶೃಂ|ಗಾರವ ಪೇೞ್ವೆನೆಂದೆನಲು ||
ನೀರಜಭವ[2]ಗರಿದೆನಲೇನುಗಹನ ವಿ|ಸ್ತಾರವವಾಟ್ಪೆ ಬಲ್ಲನಿತ ||೩||

ಜಲಗ್ರೈವ ಶರಭಶಾರ್ದೂಲಕಂಠೀರವ|ನೆಲಜೇಷ್ಠಕಾಸಿಯಭೂತ || (?)
ಕೆಲಮೃಗಪಕ್ಷಿಯಿಂಗೆಸೆಯಿತು ರೈವತಾ|ಚಲ ದ್ವಾರಕಿಯ ಬಾಹ್ಯದಲಿ |೪|

ಮುಗಳ ಗಂಡನ ಕೂಡೆ ಮುಹದಾದಿದೈತ್ಯರು|ಜಗಳಕ್ಕೆ ಬರಗೊಡೆನೆನುತ ||
ನೆಗೞಾನೆ ಮಿನ್ಗಳನೊಳಕೊಂಡು ಬಂದು ಪೇ|ರಗೞಾದುದಬ್ಧಿ ದ್ವಾರಕೆಗೆ ||

ಸುತ್ತಣ ಮಣಿಗಲ್ಲ ಹೊಂಗೋಟೆ ನೋಡಲು|ತತ್ತಳಗೆಯ್ವುದಕ್ಷಿಗಳ ||
ಕೊತ್ತಳ ಸಿಬಯುವ ಕೊಳಲು ಪ್ರೋಪರಿಗಳ|ಹೆತ್ತಳ ಗಂಡನಂತಿಹುದು||(?)

ಮೊನೆಗಾಱಳರ ಖಂಡಿಸಲೆಂದು ವಸುದೇವ|ತನಯ ಚಕ್ರಕೆ ವಿಶ್ವರೂಪ
ವಿನಯದಿ ಕೊಟ್ಟನೆಂಬಂದದಿ ಕೋಟೆಯು | ತೆನೆಗಳದ್ದವು ಸುತ್ತಬಳಸಿ||೭||

ದೇಶಾಧಿಪಕೃಷ್ಣರಾಯಂಗೆ ಖಳರಿಂದ|ಮೋಸವ ಬರಗುಡೆನೆಂದು ||
ಶೇಷ ಮುಂಡಳಸಿ ದಂದದಿ ವಜ್ರದಾಳ್ವೇರಿ[4]|ಲೇಸಾದುದೇವಣ್ಣಿಸುವೆನು ||೮||

ಬಲಿನಂದನಮುಖ್ಯಖಳರೆಂಬ ಮೃಗಕುಲ|ಚಲಸಿ ತನ್ನದಿರ್ವಾರೆ ಹಿಡಿವ ||
ಉಳಿದು ಹೊಯ್ವುವೆನೆಂಬ ರೌದ್ರದಿಂ ಕೋಟೆಯು | ಹುಲಿಮೊಗ ಕಣ್ಗ
[ರಂಜಿಸಿತು ||೯||

ಮಿಾಟಾದ ರಮ್ಯರತ್ನಗಳ ಸೊನ್ನಾರ ಕೈ|ಮಾಟ ನಾನಾಬಂಧಗತಿಯ ||
ಕೂಟಸ್ಥವಾದ ಹೊನ್ನಗಸೆಯ[5] ತಳತ ಕ|ವಾಟಗಳದ್ದಾವೇನೆಂಬೆ ||೧೦||

---

ಕ. ಪ. ಅ.—1. ಓಲೆ. 2. ಬ್ರಹ್ಮ. 3. ಸುತ್ತಿದ. 4. ವಪ್ರ, 5. ಊರಬಾಗಿಲು.

ಸೋಮಸೂರಿಯವೀಧಿ ವೀಥಿಯಿಕ್ಕೆಲದಲ್ಲಿ | ಹೇಮನಿರ್ಮಿತಸೌಧದೊಳ
ರಾಮಣೀಯತೆವೆತ್ತ ಕಳಸದಂಗಡಿಯಿರ್ದುವಾ ಮಹಾದ್ವಾರಕಾಪುರದೆ ||೧೧||

ರಾಗರಸದೊಳನವರತ ಕಾದಲರ[1]ಸಂ | ಭೋಗಕ್ಕೆ ಸಮವಾಗಲೆನುತ ||
ಆಗಮಜ್ಞರು[2]ಹಂಚಿಕೊಟ್ಟಂತೆ ಪೇಟೆಯ | ಭಾಗದಂಗಡಿಗಳೊಪ್ಪಿದುವು||೧೨

ಕಲೆಯುಱ[3]ದಮಲಭಾವಜ್ಞರು ತಮ್ಮ ಕಾ | ದಲೆಯರ ಕರೆವಸನ್ನೆಯಲಿ||
ಸಲೆ ಪರಿಗ್ರಹಿಸಿ ಶೋಭಿಸುತಿರ್ಪ ಲಲಿತ ಬೆ | ಳ್ಳೆಲೆಗಳಂಗಡಿಗಳೊಪ್ಪಿದುವು ||

ಸಡಿಲಿದ ಮುಡಿ ಬೆಮರ್ವನಿಗಳು ತೀವಿ ತೊ | ಟ್ಟಿಡುವಾಸ್ಯದಳುಗುವ [ಕುಚದಿ ||
ಕಡುಸೊಬಗಾಂತು ಗಂಧವ ಮಗುಳ್ಚುವ ಹೆಂಗ | ಳಡಸಿದಂಗಡಿಗಳೊಪ್ಪಿದುವು

ಸುರಗಿ ಸೇವಂತಿಗೆ ಕುಂದ ಮಂದಾರ ಪಾ ದರಿ ಕಂಚಿ ಕಣಗಿಲೆ ಬವನ ||
ಬಿರಿದ ಕೆಂಜಾಜಿಯೆಂಬುವ ಪುಷ್ಪದಂಗಡಿ | ಪರುಠವಿಸಿರ್ದುದೇನೆಂಬೆ ||೧೫||

ಇಡಿಕಿಱಿದಿಹ[4] ಪುಷ್ಪದೊಳುಗಂಧವಿರಲಾ ಱಡಿ[5]ತುಡುಕುವುದೆಂದು ನೆಲಗೆ||
ನಿಡುವೇಱಿನೊಳು ಪರಿಮಳವೆತ್ತು ರಂಜಿಸ | ಮುಡಿವಾಳವಸರ[6]ವೊಪ್ಪಿದುವು

ಮಲ್ಲಿಗೆಯಲರ್ದಂಡೆವಿಡಿಯೆ ಬಂದೆಱಗುವ ಜಿಲ್ಲಿ ದುಂಬಿಗೆ ಬೆರ್ಚಿಸಿಂದು||
ಸೊಲ್ಲಿಪ ಪೂಮಾಲೆಗಾರ್ತಿ ಕಾವನ ಕಬ್ಬ | ವಿಲ್ಲಿಂತಿರ್ದಳೇನೆಂಬೆ ||೧೬||

ಭೋಜಿಪ ಕರ್ಪೂರ ಕಸ್ತೂರಿ ಜೇರ್ಣಜ | ವಾಜಿ ಪುಣುಗು ಬಹುತೈಲ||
ಸೋಜಿಗವಡೆದ ಸುಗಂಧದಂಗಡಿಗಳು | [ರಾಜಿಸುತಿರ್ದುವಿಕ್ಕೆಲದಿ] ||೧೭||

ಹೆಸರ ಪಡೆದ ದಿವ್ಯಮೂಲಿಕೆ ಪಾಷಾಣ | ರಸದ್ರವ್ಯಸಕಲಸಂಭರವ ||
ಬೆಸಗೊಂಡು ಬೇಡಲು ತೂಗುವ ಗಂದಿಗ ವಸರಂಗಳಿರ್ದುವಿಕ್ಕೆಲದಿ ||೧೮||

ಉತ್ತುತ್ತೆ[7] ಖರ್ಜೂರ ದ್ರಾಕ್ಷಿ ಸಕ್ಕರೆ ಬೆಲ್ಲ | ಮೆತ್ತೈಸಿದ ಕಾಯ [ಭಾಗ[8] ||
ಒತ್ತದೆ ಕಳೆತ ಸಮಸ್ತ ಪಣ್ಯಸರಂಗ | ಳತ್ತಱದಲಿ ಮಾಱುತಿಹವು ||೨೦||

ಅಂಗಡಿಯೊಳು ಗೋಧಿ ಕಡಲೆ ನಾನಾಧಾ | ನ್ಯಂಗಳ ರಾಸಿ ರಂಜಿಸಿತು ||
ಮುಂಗಡೆಯೊಳು ಚಿತ್ರಗೆಲಸಿ ಚಿಪ್ಪಿಗರಾಯು | ಧಂಗಳ ಕೇರಿಯೊಪ್ಪಿದುವು||

ಕ. ಪ. ಅ—1. ಪ್ರಿಯರ. 2. ಶಾಸ್ತ್ರಗಳನ್ನು ಓದಿದವರು. 3. ತೇಯುವ. 4. ಒತ್ತೊತ್ತಾಗಿ ಕಟ್ಟಿದ. 5. ದುಂಬಿ. 6. ಮುಡಿವಾಳದಂಗಡಿ. 7. ಪಿಂಡಖರ್ಜೂರ. 8. ಬೆಲ್ಲದ ಪಾಕದಲ್ಲಿ ಹಾಕಿಟ್ಟ ಕಾಯಿನ ಹೋಳುಗಳು.

ಕಂಚಗಾರರುಕೈದುಗಾರರು ಹೊಳೆವ ಹೊಂ|ಬಂಚಗಾರರು ಶಿಲ್ಪಿಗರು ||
ಸಂಚುಗಾರರುಸದ್ವಿದ್ಯಾಧಿಕರಾದ | ಪಾಂಚಾಳರಿರ್ದರಿಕ್ಕೆಲದಿ ||೧೨||

ಕಳೆವೆತ್ತ ವಾರನಾರಿಯರ ಕನ್ನಿಕೆಯರ|ಬೊಳೆವೊಲೆಗಳ ನೋಡಿನಗುತ
ಎಳವೆರಲ್ಗಳ ಚಿಟುಕೊತ್ತಿ ಕೈದೊಡಿಸುವ ಬಳೆಗಾರರಿರ್ದರಿಕ್ಕೆಲದಿ ||೧೩||

ಹಲವು ದೀಪ್ತಿಯ ಪಟ್ಟೆ ಝಲ್ಲಿ ನಾನಾವರ್ಣ|ದಳೆದ ಚಿತ್ರಾಂಬರನಿಚಯ
ಸುಲಲಿತ ದೇವಾಂಗವಸ್ತ್ರ[1]ದೊಟ್ಟಿಲಸಾಲು|ಮಳಿಗೆಗಳಿರ್ದುವಿಕ್ಕೆಲದಿ ||

ತೋರಮಾಣಿಕ ಪಚ್ಚೆ ವಜ್ರವೈಡೂರಿಯ ನೀ|ರಾಣಿಮೌಕ್ತಿಕನೀಲ ||
ರಾರಾಜಿಪ ರತ್ನಭೂಷಣಂಗೆಯ್ವ ಸೊ|ನ್ನಾರರಂಗಡಿಗಳೊಪ್ಪಿದುವು ||೧೫||

ನಾಣೆಯಮೇಲೆ ರನ್ನಗಳಿಟ್ಟು ಮಸೆದೊಪ್ಪ|ಗಾಣಿಸಿಕುಡುವತೇಟಿಗರು||
ಆಣಿಮುತ್ತಿಗೆ ಬೆಗ್ಗಳಬೆಲೆಗಟ್ಟುವ|ವಾಣಿಜರಿರ್ದರಿಕ್ಕೆಲದಿ ||೧೬

ಚಪ್ಪನ್ನದೇಶದ ನಾಣೆಯಂಗಳ ನೋಟ|ತಪ್ಪದ ಚಪಲಸೆಟ್ಟಿಗಳು ||
ಒಪ್ಪವಡೆದು ಕುಳಿತಿರ್ದರು ಹಣಹೊನ್ನ | ಕುಪ್ಪೆಯ ಮುಂದಿಟ್ಟುಕೊಂಡು||

ಬರೆಗಲ್ಲ ರಜವ ಮೇಣದೊಳೊತ್ತಿ ತೆಗೆದದ|ಕರಗಿ ಸುವರ್ಣಖಂಡುಗವ||
ನೆರೆದ ಯಾಚಕರಿಗೆ ಹಂಚಿಕುಡುವ ಚಿನ್ನ|ವರದ[2]ರೊಪ್ಪಿದರು ಕಟ್ಟೆಯಲಿ ||

ಬರಂತೆ ಮರಕಾಲರು[3] ಹಡಗಿನ ವ್ಯವ | ಹಾರದಿ ಗಳಿಸಿದ ಹಣವ ||
ಭಾರಸಂಖ್ಯೆಯಲಿ ತೂಗುವರು ಬೇಡಿದರೆ ಕು|ಬೇರಂಗೆ ಕಡವ ಕುಡುವರು ||

ತೋಟಕಾಡಾರಂಬ ಕರ್ಬುಗದ್ದೆಗಳೆಡೆ | ಯಾಟದ ವ್ಯವಹಾರಿಜನರು||
ಘೋಟಕರಥಹಸ್ತಿ ಪದಚರಾದಿಗಳ ಮಾ|ಱಾಟದಂಗಡಿಗಳೊಪ್ಪಿದುವು ||

ತಾಳಮದ್ದಳೆ ಪಾವುಜ ಶ್ರುತಿ ಮುಖವೀಣೆ|ಸಾಳಂಗಶುದ್ಧಗಾನೆಯರ ||
ಮೇಳ ನಟ್ಟುವ ನಾನಾವಿದ್ಯೆಗಳ ಗಟ್ಟಿ|ವಾಳರ ಮನೆಗಳೊಪ್ಪಿದುವು ||೨೧||

ರಾರಾಜಿಸುತಿಪ್ಪ ವನಿತೆಯರುಗಳಶೃಂ|ಗಾರವ ಜರೆದು ಶೋಭಿಸುವ ||
ವಾರಾಂಗನೆಯರ ಮನೆಗಳೊಪ್ಪಿರ್ದುದಾ|ದ್ವಾರಾವತಿಯ ಬೀದಿಯಲಿ ||೨೨||

ತೋರಿಯ ಭುಜವೆತ್ತು ಜಗಜಟ್ಟಿಮಸೆದಕ|ಠಾರಿಖಂಡೆಯದವಾಸಾಳು[4]||
ಭೂರಿಭೂಪೋತ್ತಮರಲ್ಲದೆ ಬ್ರಾಹ್ಮಣ|ಗೇರಿ ಕಣ್ಮನಕೆ ರಂಜಿಸಿತು ||೨೩||

---

ಕ. ಪ. ಅ—1. ಶ್ರೇಷ್ಠವಾದ ವಸ್ತ್ರ. 2. ಚಿನ್ನದ ವ್ಯಾಪಾರಿಗಳು,
3. ಹಡಗನ್ನು ಇಟ್ಟುಕೊಂಡು ವ್ಯಾಪಾರ ಮಾಡುವರು. 4. ಶೂರ.

ಹೊಂದಗಡಿನ ಹೊದಕೆಯ ಮನೆ ಬಹಳ ನೇ|ರಂದ[1] ಪಡೆದ ಪಟ್ಟಶಾಲೆ |
ಮುಂದೆಸೆಯಲಿ ತುಳಸಿಯ ಮಂಟಪದಿ ಗೋ|ವಿಂದನ ಕೀರ್ತಿಸುತಿಹರು||೩೪||

ಕೋಣ[2]ವಿಲ್ಲದ ಕೇವಲಸಾತ್ವಿಕ ಪೌ|ರಾಣ ಶಾಸ್ತ್ರಾರ್ಥಗೋಷ್ಠಿಗಳು ||
ಗಾಣದಂಡಿಗೆಯ ಭಾಗವತಸಂಕೀರ್ತನೆ | ಮಾಣದು ಮನೆಮನೆಗಳಲಿ||೩೫||

ರಾಮಾನುಜವ್ಯಾಖ್ಯಾನಸುತತ್ವದ | ಭೂಮಿಸುರರು ಸಂದಣಿಸಿ ||
ಸಾಮಾಮ್ನಾಯ ಘೋಷಣೆ ವಿಷ್ಣುಪ್ರೀತ್ಯರ್ಥ|ಹೋಮವ ಮಾಳ್ಪರುತ್ಸವದಿ

ಕೇಳುವ ಕೆಲವು ವಿದ್ಯಾರ್ಥಿಗಳಿಗೆ ವಸ್ತ್ರ| ಕೂಳು ವೀಳೆಯವಿತ್ತು [ಮುದದಿ ||
ಆಳುಗೊಳಿಸಿ ಪ್ರತಿದಿವಸದಿ ತರ್ವಾಯ[3]|ಹೇಳುವ ವಿಬುಧರೊಪ್ಪಿದರು||೩೭

ಯಜನಯಾಜನವಧ್ಯಯನಾಧ್ಯಾಪನ | ನಿಜದಾನ ಪ್ರತಿಗ್ರಹಂಗಳನು ||
ಭುಜಚತುಷ್ಟಯನ[4]ಪ್ರೀತಿಯಲಿ ಮಾಡುವ ಚೊಕ್ಕ | ದ್ವಿಜಮಹಾರಾಜ |ರೊಪ್ಪಿದರು ||೩೮||

ಕರ್ಮಕಾಂಡವ ತಿರಸ್ಕರಿಸಿ ತತ್ವಾರ್ಥದ|ಮರ್ಮವನರಿದ ಪ್ರಾಜ್ಞರು
ಧರ್ಮಾರ್ಥಕಾಮಮೋಕ್ಷಂಗಳ ಪಡೆದರು| ಭರ್ಮಾಂಬರನ[5]ಭಕ್ತಿಯಲಿ ||೩೯||

ರವಿಸಿದ್ಧಾನ್ತಪಾರಕರಷ್ಟಭಾಷಾ | ಕವಿಗಮಕಿಗಳು ತಾರ್ಕಿಕರು ||
ವಿವಿಧವಿದ್ವತ್ಸಭೆ ನೆರೆದುದು ಲಲಿತಭಾ|ರ್ಗವಿಯ ಕಾಂತನ[6]ಪುರದೊಳಗೆ||೪೦

ಸಣ್ಣವರುಗಳನೋದಿಸುತಿರ್ಪ ಕಸೆಯಕೋ|ಲ[7]ಣ್ಣಗಳ್ ಚೌಪದಿಗವಿತೆ||
ಬಣ್ಣಗಂಬಿಯ ಪುಸ್ತಕಲಿಖಿತಜ್ಞರು | ಕನ್ನಡಕವ ತಾಳ್ದಹರು ||೪೧||

ಏಸ ಬಣ್ಣಿಸ ಬರ್ಪುದು ಚಂದ್ರಕಾಂತಸೋ|ಪಾನ ಪುಷ್ಕರಣಿಗಳೊಳಗೆ||
ನಾನಾದೇಶಭಾಷೆಯ ಬುಧರುಗಳನು|ಸ್ನಾನವ ಮಾಳ್ಪ ಸಂಭ್ರಮವ ||೪೨||

ಹಚ್ಚಡ ಚಂದಿಕುಪ್ಪಸಗಳನಿಂಬಿಟ್ಟು | ಸ್ವಚ್ಛದ ಬೈರ್ವಾಸ[8]ದೊಡನೆ ||
ಬೆಚ್ಚದೆ ಮಿಂದರು ಕೃಷ್ಣಗೋವಿಂದ ಶ್ರೀ | ವತ್ಸಲಾಂಛನ ಶರಣೆನುತೆ||೪೩||

ಮುಳುಗಿದರಲಸದೆಪೊಱನುಟ್ಟುಪಟ್ಟಾ|ವಳಿದೋತ್ರ ಬಹಿರ್ವಾಸದಳೆದು||
ತಳಿರುಗಾವಿಯನುಟ್ಟು ಜಪದಮಂಟಪದಲ್ಲಿ|ಕುಳಿತರು ಬುಧರು ಸಂದಣಿಸಿ||

---

ಕ. ಪ. ಅ.—1. ಚಚ್ಚೌಕವಾದ 2. ಮತ್ಸರ. 3. ಸಂತೆಹೇಳಿಸಿಕೊಂಡದ್ದನ್ನು ಪುನಃಪುನಃ ಹೇಳುವುದು. 4 5. 6. ವಿಷ್ಣು. 7. ಚಾಟಿಯಕೋಲು. 8. ಬಹಿರ್ವಾಸ, ಮೇಲು ಹೊದಿಕೆ.

ಘನಪಟ್ಟೆನಾಮದೆ ತಿರುಚೂರ್ಣ ಗೋಪಿಚಂ | ದನ ಪಂಚಮುದ್ರೆಗ
[ಳೊಡನೆ ||
ಮನಗೊಂಬ ಭಸಿತಗಂಧಾಕ್ಷತೆ ಭಾಳಲಾಂ|ಛನವೆತ್ತ ದವನೀಸುರರು ||೪೫

ಚೇತನದೊಳು ವಿಷ್ಣುನಾಮಚಿಂತನೆ ಶುಚಿ | ಭೂತರಾದವನೀಸುರರು ||
ಗೀತಾರ್ಥವ ಪಠಿಸುತ್ತ ಬಂದರು ಪ್ರ | ಖ್ಯಾತಸತ್ರದ ಮನೆಗಳಿಗೆ ||೪೬||

ಹೇಮಸಂಪುಟದಲ್ಲಿ ವಿಷ್ಣುವಿಗ್ರಹ ಸಾಲ|ಗ್ರಾಮದೇವರ ಪೂಜೆಗೆಯ್ದು ||
ಪ್ರೇಮದಿ ನಿಖಿಲೋಪಚಾರವನರ್ಪಿಸಿ | ನೇಮವ ನಿರ್ಣಯಿಸಿದರು ||೪೭||

ಅದ್ದಿಕದನ[1]ರಾಜ್ಞೆಯುಲಿ ಸಂಕಲ್ಪವ | ತಿದ್ದಿಕೊಂಡೊಳಪುಗುವುದಕೆ ||
ಗುದ್ದಾಡಿದರು ಬಾಗಿಲುಹಿಡಿಯದೆ ಪೊಕ್ಕು | ಗದ್ದುಗೆವಿಡಿದರಿಕ್ಕೆಲದಿ ||೪೮||

ಚೆಂದಿಹಚ್ಚಡಕುಪ್ಪಸಗಳನಿಂಬಿಟ್ಟು | ಚಂದದ ಬೈರ್ವಾಸ ತಲೆಗೆ ||
ಬಂದಿಸಿದಮಳಪಟ್ಟೆಯು ಟೋಪಿಯು ಬ್ರಹ್ಮ[2]|ರೊಂದಿತುಕುಳಿತು ಹಂತಿಯುಲಿ

ಹೊಂದಟ್ಟೆಯೊಳು ಕುಂಕುಮರಸಪೂರಿತ | ಗಂಧಾಕ್ಷತೆಗಳಕೊಟ್ಟು ||
ಅಂದವಡೆದ ಕದಳಿಯ ಪರ್ಣದೊನ್ನೆಯ | ತಂದಿರಿಸಿದರೆಲ್ಲರಿಗೆ ||೫೦||

ಪರಮಸೌಖ್ಯವನಾಂತು ತಿಗುಳರು ಪಾತ್ರಾಭಿ|ಗರವಗವಾನ್ನವುಂತಾದ
ವರ ಸಣ್ಣಕ್ಕಿಯೋಗರ ತೊವ್ವೆ ಪಳದ್ಯವ | ತರತರದಲಿ ಬಡಿಸಿದರು ||೫೧||

ಜೇನು ಸಕ್ಕರೆ ಕ್ಷೀರ ರಸವಪ್ಪ ಫೇಣಿ ಸು|ಖೀನುಂಡೆ ವಡೆ ಗಾರಿಗೆಯು ||
ನಾನಾಭಕ್ಷ್ಯ ಭೋಜ್ಯಂಗಳ ಪರಮ ಸು|ಮ್ಮಾನದೆ ಬಡಿಸಿದರೊಲವಿಂ||೫೨

ಹುಳಿದಾಳದ ಸಾಯು ಶಿಖರಿಣಿ ಬಹುಕೂಟ|ನಳಿದ ನಿಂಬೆಯ ಹಣ್ಣ ಸವಿದು||
ಗಳಲನೆ ಬಡಿಸಲೊಗ್ಗರಣೆಯಿಂಗಿನ ಕಂಪು|ಸುಳಿದುದು ಬಹಿಃಸ್ಥಳಕೆ ||೫೪

ಘನನವಘೃತವ ತಂದೆಱೆದರು ಪತ್ರಭಾ|ಜನ ತುಂಬಿ ಕಡೆಗೋಡಿವರಿಯೆ
ಅನಲಾಕೃತಿಯ ಬ್ರಾಹ್ಮರು ಮುದದಿಂದಾಪೋ|ಶನವ ಕೊಂಡರು
[ಮಹೋತ್ಸವದಿ ||೫೪||

ಸಿತರಾಜಾನ್ನ ಸದ್ಘೃತ ತೊವ್ವೆಗೂಡಿ ನಿ|ರ್ಮಿತವಾದ ತೋರದುತ್ತಗಳ
ಹಿತನದಪ್ಪದೆ ಕೈಕೊಂಡರು ಕೃಷ್ಣಾ|ರ್ಪಿತವೆಂದು ಪರಿತೋಷವಡೆದು ||೫೫||

ಮಲ್ಲಿಗೆಯರಳಂತೆ ಬಿಚ್ಚೋಗರ ಮೊಸ ಱೊಳ್ಳೆಯ ಬಹಳುಪ್ಪುಗಾಯಿ||
ಘುಲ್ಲಿಸಿ ಗಟ್ಟಿಯ ಕಟ್ಟಿದ ಪಿರಿಯರು | ಪುಲ್ಲಿಗೆಗಳು ತರತರಿಸೆ ||೫೬||

ಕ. ಪ. ಅ.—1. ಅಡಿಗೆಯಮನೆಯ ಗೊತ್ತುಗಾರ. 2. ಬ್ರಾಹ್ಮಣರು.

ರಸರಸಾಯನವ ಚಪ್ಪರಿದು ನೀರ್ಮಜ್ಜಿಗೆ । ಹಸಗೆಯ್ದಿರಲೀಂಟಿದರು ॥
ಪೊಸ ವಿಪ್ರರಾಜನ ಬಳಗವೆಂಬಂತೇೞ³ । ವಶವಲ್ಲದೆದ್ದರುತ್ಸವದಿ ॥೫೭॥

ಮೂಲೋಕದ ಬುಧರು ಸತ್ರದೊತ್ತಿನಲಿ ಮುಂ । ಗಾಲುವೆಯೊಳು [ಕೈಯ ತೊಳೆದು॥
ಅಲಂಕೃತರಾಗಿ ಕರ್ಪೂರಮಿಶ್ರತಾಂ । ಬೂಲವ ಕೊಂಡರುತ್ಸವದಿ ॥೫೮॥

ಕಮ್ಮನೆ ತುಪ್ಪ ಕಜ್ಜಾಯ ಪಾಯಸದಿಂದೆ । ದಮ್ಮನೆ ತಣಿದೆವೆಂದೆನುತ॥
ಬೊಮ್ಮರ¹ಸಂತತಿ ನುಡಿಯುತೆ ಸಾರ್ದರು ನಿರ್ಮಳಶಯನಸ್ಥಳಕೆ ॥೫೯॥

ಸಾಸಿರ ಶತಲಕ್ಷ ಕೋಟಾನುಕೋಟಿ ಸ ನ್ಯಾಸಿಗಳ್ ಪುರಮಠದಲ್ಲಿ ॥
ಗ್ರಾಸಿಗಳಾಗೆ ಸಂತಸವೆತ್ತು ನಿಖಿಳಪ್ರದೇಶಿಗಳ²ರ್ದರಾರೊಳಗೆ ॥೬೦॥

ತಂಡತಂಡದೆ ಕೃಷ್ಣನಗರಿಯೊಳ್ ಚಲಿಸುವ ಮಂಡಳಿಕರ ಕಾಲ ಕಡಗ॥
ಪೆಂಡೆಯ ತಾಟಾಡಿ ಸಿಡಿದ ರತ್ನಗಳ ಕೈ ದಂಡೆಯೊಳ್ ಸಿಕ್ಕಿಬಾಚುವರು॥೬೧

ಶರಧಿಯೊಳೊಗೆದ ಹೊಂದಾವರೆಯಂತಿರ್ಪ ಪುರಮಧ್ಯದಲಿ ಕೃಷ್ಣರಾಯ
ಅರಮನೆ ಕರ್ಣಿಕೆಯೆಂಬಂತೆ ಜನ ಮೋಹರಿಸಲು ಕಣ್ಗೆ ರಂಜಿಸಿತು॥೬೨॥

ಮುಗಿಲನಳ್ಳಿರಿವಂತೆ⁴ ಮಂಡಳಿಸಿದ ಹೊನ್ನ । ಮುಗಿಲು⁵ಪುರದ್ವಾರ [ಕಡರ್ದು ॥
ಜಗಜಗಿಸುವ ರತ್ನಕಾಂತಿಯ ಮುಕ್ಕುಳಿ ಸುಗಿಮುವದೇನ ಬಣ್ಣಿಸುವೆ ॥೬೩॥

ಹರಬ್ರಹ್ಮಾದಿದೇವತೆಗಳ ರಾಜಮಂ⁶ದಿರವ ಕೀೞ್ಗಳೆದು ಶೋಭಿಸುವ ॥
ಪರಮೈಶ್ವರ್ಯಸಂತೋಷದಿ ಶ್ರೀಕೃಷ್ಣ । ನರಮನೆ ಕಣ್ಗೆ ಶೋಭಿಸಿತು॥೬೪॥

ಮಕರತೋರಣಮಣಿನಿಕರ ಹೊಂಗುಬ್ಬಿಯ ನಿಕರಿಸಿಗುಱಿಗಳಿಂದೆಸುತ॥
ಅಕಳಂಕ⁷ಮುತ್ತಿನ ಚಾವಡಿ ಕಣ್ಗೆಕಾ ತುಕವ ಬೀೞ್ತು ನೋಟಕರ॥೬೫

ಪ್ರಕಟಿತರಜಸ್ತಮೋಗುಣವ ತಿರ್ಕಣಿಸಿ ಸಾತ್ವಿಕಫಲರೂಪಾದು [ದೆನುತ ॥
ಅಕಳಂಕಸಿಕಹರ್ಮ್ಯವೆಸೆದ ದಮರನಾ। ಯಕ ಕೃಷ್ಣನರಮನೆಯೊಳು ॥೬೬

ಕ. ಪ. ಅ.—1. ಬ್ರಾಹ್ಮಣರ. 2. ಪರಸ್ಥಳದವರು 3. ಗುಂಪುಗೂಡಲು. 4. ಮೇಘವನ್ನು ಹೊಡೆಯುವಂತೆ. 5. ಪ್ರಾಕಾರ. 6. ಕೆಳಗುಮಾಡಿ, ತಿರಸ್ಕರಿಸಿ. 7. ನಿರ್ಮಲವಾದ. 8. ನಿರ್ಮೂಲಮಾಡಿ(?)

ರಜಸ್ತಮೋಗುಣವನಿರ್ಕಡಿಗೆಯ್ದು ಸತ್ವಮೆ| ನಿಜವಿಶ್ವರೂಪಾದುದೆನಲು
ದ್ವಿಜರಾಜಗಮನನಮಂದಿರದೊಳು ಸಿತಹರ್ಮ್ಯ|ವ್ರಜ ಹೇಮಕಲಶ
[ವೊಪ್ಪಿದವು ||೬೭||

ರಾರಾಜಿಸುತಿಪ್ಪ ವನಿತೆಯರುಗಳ ಶೃಂ|ಗಾರವ ಜರಿದು ಶೋಭಿಸುವ ||
ವಾರನಾರಿಯರು ಸಂಚರಿಸುತಿರ್ದರು ಕೇಳು | ದ್ವಾರಾವತಿಯ ವೀಧಿಯಲಿ||
ಪಿಂತಣ ಸುರಲೋಕದ ನಳಕೂಬರ ಜ | ಯಂತಾದಿಗಳ ಕೀಳ್ಪಡಿಸಿ ||
ಸಂತತ ವಾರನಾರಿಯರೊಳು ವೇಶ್ಯಾ|ಕಾಂತರು ಸುಖದಾಡುತಿಹರು||೬೯||
ಅಂತಃಪುರಶಿಖಾಮಣಿಯೆನಲೊಪ್ಪುವ | ಜಂತದ ಚಾವಡಿಯೊಳಗೆ ||
ಸಂತತ ಸಿಂಹವಿಷ್ಟರದಲ್ಲಿ ಲಕ್ಷ್ಮಿಯು | ಕಾಂತನೊಲಿದು ಕುಳಿತಿರ್ದ||೭೦||
ವರಮೋಹನತರಂಗಿಣಿಯೆಂಬ ಕಾವ್ಯವ | ಬರೆದೋದಿ ಕೇಳದ ಜನರ ||
ತರಣಿ ಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವ ಲಕ್ಷ್ಮೀಕಾಂತ ಬಿಡದೆ||
—ಅಂತು ಸಂಧಿ ಮೂಱಕ್ಕಂ ಪದಂ ೧೬೪ ಕ್ಕಂ ಜಯಮಂಗಳಂ—

## ನಾಲ್ಕನೆಯ ಸಂಧಿ

ಕೃಷ್ಣರುಕ್ಮಿಣಿಯರ ಲೀಲೆ, ಮದನನ ಗರ್ಭ —

ಸಿತನಾಗನಾಳ್ದನರ್ಧಾಂಗಿಗೊಸುಗವಿಂ ತನ್ನ| ವ್ರತಗೆಟ್ಟು ನೃಪಗೆ
[ಸಿಕ್ಕಿದನ ||
ಪಿತನ ಮುಂದಿಹನ ತಮ್ಮನ ತರಿದಾತಗಾ|ನತನಾಗಿ ಪೇೞು ಮೇಲ್ಗತೆಯ ||
ಕಣ್ಣ ಮನವನಿರ್ಕುಳಿಗೊಳ್ವ ಕಡುಜಾಣ|ವೆಣ್ಣುಗಳಧಿದೇವಿ ಕೇಳು ||
ಗಿಣ್ಣುಗೊಳ್ಳದ ಬೆಳ್ಗಬ್ಬಿನ ರಸದಂತೆ| ಬಣ್ಣಿಸುವೆನು ಕಥಾಮೃತವ ||೧||
ಗಣಿಸಲೀರೆಂಟುಸಾವಿರ ಹೆಂಗಳೊಳು ರು|ಕ್ಮಿಣಿ ಸತ್ಯಭಾಮೆಯರುಗಳು||
ಫಣಿತಲ್ಪಕೃಷ್ಣರಾಯನ ಭುಜಕೀರ್ತಿಯ | ಮಣಿಗಳಂತಿರ್ದರಿಕ್ಕೆಲದೆ ||೩||
ಭಾವಿಸಲಧಿಕ ಪೊಂಬುತ್ತಳಿ[1]ಯೆಂಬಂತೆ | ಕೋವಿದ ಕೋಮ
[ಲಾಂಗಿಯರು ||
ದೇವಕಿಯಾತ್ಮಸಂಭವನೆಡಬಲದಲಿ | ತೀವಿರ್ದರೇನ ಬಣ್ಣಿಪೆನು ||೪||

ಕ. ಪ. ಅ.—1. ಚಿನ್ನದಗೊಂಬೆ.

ಜಲರುಹದಳಲೋಚನ ಮಮಕಾರದ | ಲಲನೆಯರುಗಳ ಸಾಲ್ಗೊಳಿಸಿ ||
ಗಲಬೆಯ ನಿಲಿಸುವ ಕಟ್ಟೆಗಗಾರ್ತಿಯ | ರುಲುಹೆಸೆದುದು ಸಭೆಯೊಳಗೆ ||೫||

ಜೇಯೆಹಸಾದಪಾಯವಧಾರು[1] ಸಮರವಿ|ಜೇನು ಮೋಹನಕಾಯಕೃಷ್ಣ ||
ರಾಯ ಪರಾಕೆಂದು ಕೈವಾರಿಪ[2] ತೊಂಡೆ|ವಾಯ ಪಾತಕಿಯರೊಪ್ಪಿದರು ||೬||

ಧವಳಸರೋಜಾಕ್ಷ ತಾನಲ್ಲದನ್ಯರೊಳ್|ಜವಳಾಗದಂತೆ[3] ವೈಸಿಕದ[4] ||
ಕವಳಸ ಕುಡುವಂತೆ ರತ್ನಸಂಬಳಿಗೆದಾ | ಳ್ದವಳಿರ್ದಳತಿಸಮ್ಮದದಿ ||೭||

ಅಡಹಾಯಿ[5]ದಂಗನೆಯರ ಸಂದುಕಟ್ಟೆನೊಳ್|ಬಿಡದೆ ಚುಂಬಿಸಿದಧರವನು ||
ತೊಡೆದಲ್ಲದೆ ಯೋಗ್ಯವಲ್ಲೆಂದು ಮೊಗವಾ|ವುಡ[6] ವಿಡಿದಿರ್ದಳೊತ್ತಿನಲಿ ||೮||

ದಾಯಕಾತಿಯರೊಳು ತನ್ನ ಮೇಲಣ ಭ್ರಾಂತ | ಬಾಯಾಱಗೊಡೆ|ನೆಂದು ಲಲಿತ ||
ಕಾಯಕಾಂತಿಯ ರಸಭರಿತ ಗಿಂಡಿಯ ಹಿಡಿ|ದಾಯತೆಯಿರ್ದಳೊತ್ತಿನಲಿ ||೯||

ರಂಜಿಪ ರತಿಯೊಳು ಗುಟುಕುತಂಬುಲರುಚಿ|ಸಂಜೀವನವೆಂದು ತಿಳಿದು ||
ಭುಂಜಿಸಲಾರಿಗೆ ಕುಡೆನೆಂದು ಪೊಂಗಾ|ಳಾಂಜಿಯ[7] ಪಿಡಿದೊರ್ವೆಯಿಹಳು ||

ಗಿಣಿನುಡಿಯಬಲೆಯಕೂಟದಿ ಮುತ್ತಿನ|ಮಣಿಯಂತೆ ಬೆಮರಾಂತಿರುವ ||
ಹಣೆಯ ನಿವಾರಿಸಬೇಕೆಂದು ಹೊಂಬೀ|ಸಣಿಗೆಯ ಹಿಡಿದೊರ್ವೆಯಿಹಳು ||

ಅವರಿವರುಗಳ ಮೇಲೆಱಗುವ ಮಕ್ಷಿಕ | ವಿವರವನಱಿಯದೆ ಬಂದು ||
ಭವರೋಗವೈದ್ಯಕೃಷ್ಣನ ಸೋಂಕುವುದೆಂದು | ಚವರವ[8] ಡಾಳಿಸುತಿಹಳು ||

ತೋರಿದುವೊಲೆವೆಣ್ಗೆ ತಾನಲ್ಲದೆ ಮಿಕ್ಕ|ನಾರಿಯರ್ಗೊಲಿಯೆನೆಂದೆನುತ ||
ಕೋರಿದ ಕೃಷ್ಣಸಂಕೇತಗೈವ ತೆಱದಿ ಕ|ರಾರಿಯ ಪಿಡಿದೊರ್ವಳಿಹಳು ||೧೩||

ಜೊನ್ನೊಡಲನ[9] ತಿರಸ್ಕರಿಸುವಳೊರ್ವಳು | ಕರ್ನೆಯ್ದಿಲ ಕಣ್ಣ ಕಾಂತೆ ||
ತನ್ನ ನುಣ್ಗಲ್ಲಕೆ[10] ಸರಿಯೆಂದು ಮಾಣಿಕ|ಗನ್ನಡಿವಿಡಿದೊರ್ವಳಿಹಳು ||೧೪||

ತಿಣ್ಣ[11] ಜವ್ವನದ ಕಾಂತೆಯರ ಮಂದಿರದ ಮುಂ|ಮಣ್ಣ ಮೆಟ್ಟೆಸಗುಡೆನೆನುತ ||
ಬಣ್ಣದಳೆದ ರನ್ನವಾವುಗೆವಿಡಿದೆಸಳ್ಗಣ್ಣವಳಿರ್ದಳೊತ್ತಿನಲಿ ||೧೫||

---

ಕ. ಪ. ಅ.—1. ಪಾದಕ್ಕೆ ಎಚ್ಚರಿಕೆ. 2 ಹೊಗಳುತ್ತಿರುವ. 3. ಅವಳಿಯಾಗದಂತೆ, ಹುದುವಾಗದಂತೆ. 4. ಕಪಟಕೃತ್ಯದ. 5. ಅಡ್ಡಲಾಗಿ ನಿಂತಿದ್ದ. 6. ಪಾವುಡ, ಬಟ್ಟೆ 7. ತಂಬುಲವನ್ನು ಉಗಿಯುವುದಕ್ಕೆ ಇಟ್ಟಿರುವ ಪಾತ್ರೆ, ಡವಕೆ. 8. ಚಾಮರವನ್ನು. 9. ಚಂದ್ರ—ಹೇಗೆ? 10. ಕೆನ್ನೆ. 11. ತೀಕ್ಷ್ಣವಾದ ಕೊಬ್ಬಿದ.

ವೀಣಾವಾದ್ಯತಂತ್ರಿಗೆ ಚರ್ಮವಾದ್ಯಕ್ಕೆ | ಬಾಣಾಸ್ಪದಗೋಳಲಾಳ(?) ||
ಗಾಣಾಪಂಚಮವಾದ್ಯ ಚೌಷಷ್ಟಿ[1] ವಿದ್ಯಾಪ್ರವೀಣಾಂಗನೆಯರೊಪ್ಪಿದರು||೧೭

ವನಿತೆಯರುಗಳೆಡಬಲದಲ್ಲಿ ಬಾಹತ್ತ[2]|ವಿನಿಯೋಗಗೆಯ್ದು ನಿಂದಿರಲು||
ಅನಿಬರ ಮುಖಚೇಷ್ಟೆಯ ನೋಡಿ ಶ್ರೀಕೃಷ್ಣ|ದನಿದೋಱದೆ ನಕ್ಕ ಮುದದಿ||
ನಾಡೊಳಗುಳ್ಳ ನಾನಾವಿದ್ಯದೇಱ್ಗಿಯ[3] | ನೋಡ ಚಿತ್ರೈಸಿದ ಬಱಿಕ||
ಕ್ಷ್ವೇಡಾಶ[4]ಗಮನನಾಕ್ಷಣದಲ್ಲಿ ತರಿಸಿದ|ಕ್ರೀಡಾವಿಹಂಗಸಂತತಿಯ ||೧೮||

ತಂಗಡಲೆಯಮೆಯ್ಸಿ ನೀರನೂಡಿಸುತೆ ವಿ|ಹಂಗ ಸಂತೋಷದಿ ತಮ್ಮ ||
ಮುಂಗಟ್ಟಿದ ಮುದ್ದುಮಱಿಗಳ್ಗೆ ಗುಟುಕೀಯೆ | ಕಂಗೊಳಿಸಿತು ರುಕ್ಮಿಣಿಗೆ||
ಶಿಶುವಾತ್ಸಲ್ಯಮಿನ್ನೆಂತುಟೊ ಬಹುಮುಗ್ಧ | ಪಶುಪಕ್ಷಿಗಳಗಿಸಿತಾಯ್ತು ||
ವಸುದೇವವಂಶಾಬ್ಧಿಚಂದ್ರ ಸಂತಾನಶೋ| ಭಿಸುವುದು ಪುಣ್ಯಾಧಿಕರಿಗೆ || ೨೦||

"ನಾಪುತ್ರಸ್ಯಲೋಕೋಸ್ತಿ"[5]ಯೆಂದೆಂಬ ಶಾ | ಸ್ತ್ರೋಪದೇಶವ [ಕೇಳ್ದೆಜೀಯ||
ನೀ ಪಾಲಿಸಬೇಕು ನನಗೊರ್ವ ಕಂದರ್ಪ | ರೂಪಾಂತ ವರಕುಮಾರಕನ ||
ನಕ್ಕನು ಕೃಷ್ಣ ನಲ್ಲೆಯ ಮಾತ ಕೇಳ್ದು ನೀ|ಮಕ್ಕಳಪಡೆವ ಮಾತ್ರದಲಿ||
ಕರ್ಕಸ[6]ವೊಲೆ ಜಱಿದಪುದೆಂದು ಕಟಕಿಯ|ನೊಕ್ಕಣಿಸಿದನು ವಲ್ಲಭೆಗೆ||೨೧||

ಮಗುವುಂಡು ಬಲ್ಮೊಲೆ ತೊರೆದರೆ ಮತ್ತಿಷ್ಟು | ಬಿಗುಹುದೋಱುವು [ದುರಸ್ಥಳದಿ ||
ಲಗುಗೆಯ್ಯದೆನ್ನ ಬಿನ್ನಪವ ಲಾಲಿಪುದೆಂದು | ಸುಗುಣಂಗೆ ಬಿನ್ನಯಿಸಿದಳು||
ದರ್ಪಕಹರ[7]ನಿಂದ ತಸುದಗ್ಧನಾದ ಕಂ|ದರ್ಪ ನಿನ್ನಯ ಬಸಿಱೊಳಗೆ||
ಬರ್ಪನು ನಾ ಕೊಟ್ಟ ವರದೊಳು ತುಸಮಾತ್ರ | ತಪ್ಪದು ಕೇಳಾಯತಾಕ್ಷಿ||

ಪರಿತೋಷವಡೆದು ಪ್ರಾಣೇಶನಂಘ್ರಿಗೆ ನಮ|ಸ್ಕರಿಸಿ ಮೌನದಿನಿಂದಿರಲು||
ದರುಶನಗೆಯ್ದು ಪ್ರೀತಿಯನಾಂತು ಬಿಡದುಪ|ಚರಿಸಿದ ಕೇಳಾಯತಾಕ್ಷಿ||
ಚಿತ್ರಾಂಬರಭೂಷಣವಿತ್ತು ಪಂಕಜಪತ್ರಾಂಬಕಿಯ ಬೀಱ್ಕೊಟ್ಟು ||
ಸತ್ರಾಜಿತಕುವರಿಯೊಳಾಗ ಸತ್ಪದ|ಮಿತ್ರಾಪಜಯದ ವೇಳೆಯಲಿ[8] |೨೨||

ಕ. ಪ. ಅ.—1 ಅರವತ್ತುನಾಲ್ಕು 2. ೭೨, ಇಲ್ಲಿ ಅನೇಕವಾದ. 3. ಊಳಿಗ. 4. ಗರುಡ. 5. ಪುತ್ರನಿಲ್ಲದವನಿಗೆ ಪರಲೋಕವಿಲ್ಲ 6. ಕರ್ಕಶ, ಗಟ್ಟಿಗಿರುವ. 7 ಈಶ್ವರ. 8. ಆಕಾಶಮಾರ್ಗದಲ್ಲಿ ಸೂರ್ಯನ ಅಪಜಯದ ಸಮಯದಲ್ಲಿ, ಸಾಯಂಕಾಲದಲ್ಲಿ.

ಸೊಕವಡೆದಿರಲಿತ್ತಲಚ್ಯುತನತ್ತ ಭೀ|ಷ್ಮಕರಾಯನಾತ್ಮಸಂಜಾತೆ |
ನಖಬಣ್ಣವ ಕಂಡು1 ನಾಲ್ದಿಸಗಂಡು ವೈ|ದಿಕದಲ್ಲಿ ಮಿಂದಳುತ್ಸವದಿ ||೨೭||

ಉಣಲುದ್ಯೋಗಿಸಿದಳು ಮೇಲೆ ವಸ್ತ್ರಭೂ ಷಣಮಾಲ್ಯಾನುಲೇಪನದಿ||
ಗುಣಯುತೆ ಶೃಂಗಾರವಾಂತಿರೆ ನಾರಾ|ಯಣ ಬಂದ ಬಲುಹರುಷದಲಿ ||೨೮||

ಮೂಜಗದೊಡೆಯನ ಕಾಲ್ತೊಳೆದಳು ಹೊನ್ನ|ಭಾಜನ2 ಗಂಧವಾರಿಯಲಿ||
ತೇಜವುನ್ನಣೆಯಿಂದ ಸತಿಗೂಡಿ ಕುಳಿತ ಸ | ರೋಜಾಕ್ಷ ಮಣಿಮಂ
[ಚದೆಡೆಯ ||೨೯||

ನೋಟಕಚ್ಚರಿಯಾದ ಪರಮಸುಂದರಿಯು ಕೈ|ಮಾಟದಿಂದುಪಚಾರವಡೆದು||
ಕೂಟಸಿದ್ಧಿಯಲ್ಲಿ ಸುಖವಡಿಸುತೆ ನರ|ನಾಟಕವನು ಬಿತ್ತಿದನು ||೩೦||

ಅತುಳಬಲಾಢ್ಯ ಭೀಷ್ಮಕರಾಯ ಸತ್ರಾ|ಚಿತುಕುವರಿಯ ರಮ್ಯಮೋಹ||
ಉತುಪತ್ಯವಾಗಿ ಪ್ರಜ್ವಲಿಸುವ ತೆಱದಿ ಶ್ರೀ ಪತಿ ಕೃಷ್ಣನೊಪ್ಪಿದ ಬಟೀಕ||೩೧||

ಇಂದುವದನೆ ರುಕ್ಮಿಣಿದೇವಿಗೆ ಗರ್ಭ | ನಿಂದು ಗರ್ಭಿಣಿಯಾದುದಕೆ ||
ಮುಂದುವರಿದು ಮೇಘ ಗರ್ಜಿಸಿದುವು ದೇವ|ದುಂದುಭಿಗಳ ಹೊಡೆದಂತೆ ||

ಇಂಚರ3 ದನುರಿಯರೊಡನಾಡುವ ನೇತ್ರ|ಲಾಂಛನ4 ಗುಱು3
[ಮೇಘವೆಣ್ಣು ||
ಸಂಚಲದೃಗುಸನ್ನೆಯ ಮಾಡಿದಂದದಿ | ಮಿಂಚಡರಿತು ನಭಸ್ಥಲದಿ ||೩೩||

ಕಡುಗೋಪದಲಿ ಜೀವಿತರಣ ನರಸಿಂಹ | ನಡುವಜ್ರಗಂಬವನೊಡೆದು ||
ಘುಡುಘುಡಿಸುತ ಪೊಱಮಟ್ಟಂತೆ ಮಹದಾದಿ5|ಸಿಡಿಲೆಱಗಿದುವು ಖೇಚರದಿ||

ಜಂಭಾರಿ ತನ್ನೈರಾವತ ನೀರಾಟ ಗೊಂಬುದ ನೋಡಬೇಕೆಂದು ||
ಪೊಂಬಳ್ಳಿಗಂಟೆಯ ಬಲಿದಂತೆ ಸುರಚಾಪ|ಸಂಭ್ರಮವಾಯ್ತು ಕಣ್ಮನದೆ ||೩೫

ತಾಪಸಸೂರ್ಯ ತನ್ನಯ ವಂಶೋತ್ಪನ್ನ|ಭೂಪಾಲಕರಿಗೆ ಕರ್ತೃ||
ರೂಪಾಂತರನೆಂದರಲ್ಲಱದ6 ರೀತಿಯೊಳಿಂದ್ರ|ಗೋಪದವುಟುವುದುರಿದುವು ||

ತುಱುಗಿದ ಕಾಯ್ಪಣ್ಗಳ ಸಾಲವೃಕ್ಷವ | ಮುರಿದು ದೂಳಿಯ ಚೆಲ್ಲಿ
[ಕೊಳುತ ||
ಸುರಿವ ಸೊಂಡಿಲ ನೀರ್ಗರೆಯುತ ಬಂದುದು|ಬಿರುಗಾಳಿ ಮದಗಜದಂತೆ|| ೩೭

ಕ. ಪ. ಅ.—1. ಋತುವಾದುದನ್ನು ಕಂಡು. 2. ಪಾತ್ರೆ. 3. ಹಿತವಾದ ಸ್ವರ. 4. ಇಂದ್ರ. 5. ಮಹತ್ತಾದ. 6. ಪುಷ್ಪವರ್ಷಮಾಡಿದ.

ನರ್ತಿಪ ನವಿಲ ನಾಟ್ಯಕೆ ಮೆಚ್ಚಿ ಪುರುಹೂತ | ತೆತ್ತೀಸಕೋಟಿ [ನಿರ್ಜರರು[1] ||
ಮುತ್ತಿನ ತ್ಯಾಗವ ಕೊಟ್ಟಂತೆಯಾಲಿಕಲ್ | ಬಿತ್ತಿಕ್ಕಿಬಿದ್ದುದುರ್ವಿಯಲಿ ||
ಬರೆವನಿಗಳದಿರ್ದನಿ ಮಸ್ತಕವನಿ | ತೊಱೆವನಿಗಳನಾಂತು ಬಿಡದೆ ||
ನೆರೆವಿಶ್ವರೂಪಾದಂತೆ ಸಂತತಧಾರೆ | ಸುರಿದುದೀಗಳೆಯಿಳೆಯೊಳಗೆ ||೩೯||

ಕ್ಷಿತಿಯೊಳು ಮಹದಾದಿಕೆಱೆತೊಱೆ ತುಂಬಿ ಗೋ|ಮತಿ ಬಂದಿರೆ [ಬಾಗಿಲಿಗೆ ||
ಸತಿಯರೊಂದಾಗಿ ಹರ್ಮ್ಯವನೇಱೆ ಶ್ರೀಕೃಷ್ಣ|ನತಿಹರ್ಷದಿ ನೋಡುತಿರ್ದ||
ಕೊಡೆ ಮೇಣಗಪ್ಪಡ[2]ಗೊಂಗಡಿ[3]ಬಹುರಮ್ಯ|ವಡೆದಿರ್ದ ಸಕಲಾತಿದಳೆದು |
ಬಿಡಯ[4]ವಿಲ್ಲದೆಪುರದೊಳುನೀರ್ಮನುಜರಂ|ತೆಡೆಯಾಡುತಿರ್ದರೂರುಗರು ||
ಬೀತುದು ಮೞೆಗಾಲ ಜಲನೆಲೆಗೊಂಡುದು|ಸೀತ[5]ರುಣಾಬ್ಜ ಕೊಬ್ಬಿದುವು||
ಪೂತುದು ಕುರವಕ ಫಲಪಣ್ಣು ಬರಲು ಮು|ಯ್ಯಾತುದು[6]ವಾಗಿ ಮರ್ತ್ಯರಿಗೆ||
ನೀಱೆ ಕೇಳ್ ಬನದೊಳು ಹಿಮವೆಂಬ|ಚೋರ ಮೈದೋಱೆ ಪಾದಪ [ಲಕ್ಷ್ಮಿ ಬೆದಱೆ||
ಸೂಱೆಗೊಟ್ಟಂಗವೆ ಪರಳ್ಗಾಯಿ[7]ಮುಂತಾದ|ತಾಱಕಿ[8]ನೆಲಕುದುಱೆದುವು ||
ಎಡೆವಿಡದಾವಾವ ಕೆಱೆ ತೊಱೆ ಬಾವಿಯೊ|ಳ್ತಡೆಗಟ್ಟಿದುವು ನೀರ್ವಕ್ಕಿ||
ತಡೆಯದೆ ಬಹುಮೃಗ ಪೊಸತುಪ್ಪುಱಾಂ[9]ತುಮೆ|ಯ್ಪುಡಯಲ್ಕೆ ನರರಱ [ಲಿದರು |೪೪||

ಕುಟಿಲಾಳಕಿಯರ ನುಣ್ಗಲ್ಲ ತೊಂಡೆವ|ಣ್ದುಟಿಯು ಕರ್ದುಕಿಮೊಯ್ಮವಿರ||
ಸುಟಿ[10]ಯಿಂದ ಗುಡಿಗಟ್ಟಸುವ ಮಾಗಿಯು ಹಿಮ|ವಿಟನಂತೆ ಕಣ್ಗೆ ರಂಜಿಸಿತು||
ಪಗಲಾಣ್ಮ[11]ನಡನಡುಗಿದ, ಹುತಾಶನ ಬೇಱೆ|ನೆಗೞಿದ ಪ್ರತಿನಿಶ ತನಗೆ||

---

ಕ. ಪ. ಅ.—1. ಇಂದ್ರ ಮತ್ತು ೩೩ ಕೋಟಿ ದೇವತೆಗಳು. 2. ನೀರಿಳಿಯದ ಹಾಗೆ ಮೇಣಹಾಕಿ ಮಾಡಿದ ಬಟ್ಟೆ 3. ಕಂಬಳಿಗೊಪ್ಪೆ 4. ದಾಕ್ಷಿಣ್ಯ, ಭಯ. 5. ಬಣಗಿ ಹೋಗಿದ್ದ. 6 ಪ್ರತಿಕೃತಿಮಾಡಿತು. 7. ಗಟಿಯಾಗಿರುವ ಹೀಚು, ಮಿಡಿ. 8. ಸಣ್ಣಸಣ್ಣ ಬತ್ತಿಹೋದ ಮೊಗ್ಗು (?) 9. ಪಕ್ಷಿಮೃಗಗಳ ಮೈಯುಕೂದಲು. 10. ಚೂಟಿಯಾಗಿ, ಜಾಣತನದಿಂದ. 11. ಸೂರ್ಯ.

ಮುಗುಳಕೊಟ್ಟವನ ಭಂಗಿಸಿ ರುದ್ರ ಹಣೆಯಾನೆ|ದೊಗಲುಟ್ಟ ಹಿಮದು
[ಪಟಳಕೆ[1] ||೪೮||

ಮಲಯಜಧೂಳಿ ಲೇಪಿಸಿದ ಜವಾಜಿ ಬೆ|ಳ್ಳಲೆ ಪೂಗ ಸರ್ವಾಂಬರದಿ ||
ಕಲೆವಂತರಪಹರಿಸಿದರು ಮಾಗಿಯು ಬಚ್ಚ[2]|ವೊಲೆವೆಣ್ಗಳ್ ತೆಕ್ಕೆಗೆಯ್ದು ||೪೯||

ಜಾಱಿತು ಮುಹದಾದಿಶೀತ, ಬೇಸಗೆ ಮೆ|ಯ್ದೋಱಿತು, ನಸುಶೈತ್ಯವನು||
ಬೀಱಿತು ತಂಗಾಳಿ, ಮಾಂದಳಿರೆಸಱೆಂಟಿ[3]|ಚೋಱಿತು ಕಲಕಂಠ[4]ನಿಚಯ ||

ಚೆಂಬಣ್ಣ ಮಾಂದಳಿರಸುಗೆ ಪುನ್ನಾಗ ದಾ|ಳಿಂಬ ತ್ರಿಪರ್ಣ[5]ಪುಷ್ಪಗಳು||
ಮುಂಬಾಗದೆ ತೋಱಿಸುವ ವಸಂತನಸಿದಿ|ಗೊರ್ಬಂತೆ ಬನದಿ ರಂಜಿಸಿತು||

ಭೃಂಗ ಕೈದುಡುಕದ ಸೌರಭ್ಯವಾಂತ ಪು|ಷ್ಪಂಗಳ ತೋರವೊಲ್ಲಿಗಳ||
ಕಂಗೊಳಿಸುವ ಮಾದಳವಣ್ಣ ತಂದಿತ್ತು|ರಂಗನ ಕಂಡ ತೋಟಿಗನು ||೫೦||

ಬನದೊಳು ಸಿಖಿಳ ಪಾದಪಲತಾಳಿಗಳುಬ್ಬಿ | ಕೊಸರಿತು ಪೂತು[6]ಕಾ
[ತೊ[7]ರಗಿ ||
ಜನನಾಥ ನೋಡ ಚಿತ್ರ್ಯವಚೇಕೆಂದು ತ|ದ್ವನಪಾಲ ಬಿನ್ನಯಿಸಿದನು ||೫೧||

ಪ್ರೀತಿಯಿಂದವನ ಮನ್ನಿಸಿಯಾಕ್ಷಣಗಾಡಿ ಕಾತಿಯರೊಡನೆ ಶ್ರೀಕೃಷ್ಣ||
ಬಾತೆವಡೆದ[8] ಬನದೊಳು ಪೊಕ್ಕ ಲೀಲೆವಿ|ಖ್ಯಾತಿಯನೇನ ಬಣ್ಣಿಪೆನು ||

ಬೆಂಬಿತ್ತಿಲ[9] ತೋಟ ಪೞು[10]ವಾದುದೆಂಬ ಸಿ|ತಂಬಿನಿಯರ ಗುಂಪಿನಲಿ||
ಗಂಭೀರವಡೆದು ರುಕ್ಮಿಣಿದೇವಿ ವಿಶ್ವಕು ಟುಂಬಿಗೆ[11] ಬಿನ್ನಯಿಸಿದಳು ||೫೨||

ಕನ್ನೆಯಿದ್ದಲು ತಾವರೆಗೊಳ ಲಾಮುಂಚ|ದಿಂ ನೆಗಱಿದ ಪರ್ಣಶಾಲೆ ||
ಚೆನ್ನೆಯರ್ ಪಾಱುಗುಪ್ಪೆಯನಾಡುವ ಮಣಿ|ಲ್ದಿಣ್ಣೆಯ ನೋಡಿ ಹಿಗ್ಗಿದರು ||

ಲವಣಾಬ್ಧೀಶನ[12] ಬೀಱ್ಕೊಂಡು ಸುರಗಂಗೆ ತವರೂರಿಗೆ ಬಂದಳೆನಿಸಿ ||
ದ್ರುವಗಲ್ಲ[13] ಸೋಪಾನದ ಸರೋವರ ಕೇ|ಶವನ ಕಣ್ಮನಕೆ ರಂಜಿಸಿತು ||
ನೇಸಱು[14] ಪೊಳೆವಂತೆ ಹೊಳೆವ ಮಾಣಿಕ್ಯಸಿಂ|ಹಾಸನದೊಳು ಕೃಷ್ಣ ಕುಳಿತು||

---

ಕ. ಪ ಅ.—1. ಕೊಂದಕೆ. 2. ಗುಂಡಗಿರುವ. 3. ಹೀರಿ, ಕುಡಿದು 4 ಕೋಗಿಲೆ. 5. ತ್ರಿಪತ್ರಕವೆಂಬ ಮರ. 6. ಹೂಬಿಟ್ಟು. 7. ಕಾಯಿಬಿಟ್ಟು. 8. ಬಾಳ್ತೆವಡೆದ, ಸೊಂಪಾಗಿ ಬೆಳೆದ 9. ಹಿತ್ತಿಲ ಹಿಂದಣ. 10. ಒಣಗಿದ ಕಾಡು. 11. ಲೋಕವೆಂಬ ಮನೆಯನ್ನು ಸಂಸಾರವಾಗಿ ಉಳ್ಳ ಶ್ರೀಕೃಷ್ಣ 12. ಉಪ್ಪುಗಡಲೆಂಬ ಗಂಡ 13. ಚಂದ್ರಕಾಂತದ ಕಲ್ಲಿನ. 14. ಸೂರ್ಯ.

ಪೂಸರಗರ್ಭಿಣಿ[1] ಮೊದಲಾದ ರಾಣೀ|ವಾಸಕ್ಕೆ ವನವನೊಪ್ಪಿಸಿದ ||೫೬||
ಚಂದನಗಂಧಿ ರುಕ್ಮಿಣಿಸತ್ಯಭಾಮೆಯರ್|ನಂದನದೊಳಪೊಕ್ಕು ಸುೞಿಯೆ||
ಸಂದಣಿಸಿದ ವೃಕ್ಷ ಮೆಯ್ಗುಂಪಿಸಿಂದ ಶ್ರೀ|ಗಂಧವ ಕಿೞ್ಪಿಡಿಸಿದುವು ||೫೭||
ಮಳಲೊಟ್ಟಿಲನೇಱಿ ಪಾಱುಗುಪ್ಪೆಯನಾಡಿ|ಬೞಲ್ದವಯವಬೆಮರಾಂತು||
ಕೆಳದಿಯ ಕೈಮುಟ್ಟಲು ಸಖ್ಯಂಗಳ | ತಳೆದುವನೇಕ ಪುಷ್ಪಗಳು ||೫೮||
ಕೈದಣಿವನಕ ನಾನಾಪುಷ್ಪಂಗಳ | ಕೊಯ್ದು ಪೊಟ್ಟಣವ ಕಟ್ಟಿದರು ||
ತೊಯ್ದರು ನೀರಾಟವನಾಡಿ ಸೊಬಗಾಂತು | ಐದೆಯರುಗಳು[2] ಸಂತಸದಿ ||
ಅಂಬೆ ಹಳದಿ ಕಾರ್ಗೆಣಸು ನೀರುಳ್ಳಿ ಕೊ|ತ್ತುಂಬರಿ ಕರಿಬೇವು ಸಹಿತ||
ಸಿಂಬೆ ಕೂಗಲಿ ಪಿಪ್ಪಲಗಾಯ ಕೊಯ್ದರು | ನಿಂಬೆಯ ಕೞಿವಣ್ಗಳೊಡನೆ ||
ಕಸ್ತೂರಿಗಂಧಿಯರ್ ಬನದೊಳು ಬಹು ಫಲ| ವಸ್ತುಗಳನು ಸೇಂದಿ |ಕೊಂಡು[3] ||
ಮುಸ್ತೈದೆಯರಾಗಿ[4] ಬಂದರು ಪರಮಪ | ದಸ್ಥಶ್ರೀಕೃಷ್ಣನಿರ್ದೆಡೆಗೆ ||೬೦||
ತೆಂಗಾಯಿ ಪಲಸು ಕಿತ್ತಳೆ ಮಾವು ಮೊದಲ|ಭೃಂಗಾಯಿವಣ್ಗಳು ಸಹಿತ||
ಹಿಂಗದ ಬಹುಫಲಾದಿಗಳ ತೋಂಟಿಗರು ಸಾ|ರಂಗಪಾಣಿಗೆ[5] ಸಾರ್ಚಿದರು ||
ಕಟ್ಟಳೆ ಕಡೆಮೊದಲಿಲ್ಲ ನೋಡಿದರೆ ಪೊಂ|ಬೆಟ್ಟದಂತಿರ್ದ ಪಣ್ಗಾಯ|
ಬಿಟ್ಟಜವ್ವನೆ ರುಕ್ಮಿಣಿ ಸತ್ಯಭಾಮೆಗೆ| ಕೊಟ್ಟ ಮಿಕ್ಕಾದ ಪೆಜ್ಜನಕೆ ||೬೨||
ಸಂತಸವಡೆದೊರ್ವೆ ನಲುಗೆಮೆಗ್ಗಡತಿಕಾ|ರ್ಗುಂತಳೆ[6]ಯರಿಗೆ ಪೇೞಿದಳು ||
ಇಂತಪ್ಪ ಶೂರೆಯರೆನುತಿರ್ದು ತೆಳ್ದೇಹ[7]|ಮಂ ತಾಳ್ದರೇಕೆಂದಳವಳು ||
ಪೊಡವಿಗೆ ಸಿರಿವಂತ ಬಲವಂತ ಸರ್ವಜ್ಞ|ಗಡ![8] ಕೃಷ್ಣ ನಿನ್ನಾಳಿಯರಿಗೆ ||
ಬಡತನವಪಜಯ ಮೂರ್ಧತ್ವ ತ್ರಿಸ್ಥಾನ | ವೆಡೆಗೊಂಡು ಬಿಡದೆಂದಳವಳು ||
ವಿಱಬಾರದು ಪ್ರಾಪ್ತಿವಶವನೆಂದವಳಿಗೆ|ಮಱುತ್ತರಗೊಟ್ಟು ನಗುತ ||
ಸೋಱಲೆಗಣ್ಣ ರುಕ್ಮಿಣಿಗೊಡರ್ಚಿದ ಹೊಗ|ರೇಱುವ ಗರ್ಭೋತ್ಸವವ ||

---

ಕ. ಪ. ಅ.—1. ಪುಷ್ಪಬಾಣನ ತಾಯಿ ರುಕ್ಮಿಣಿದೇವಿ. 2. ಸುಮಂಗಲಿಯರು. 3. ತೆಗೆದುಕೊಂಡು. 4. ಸಕಲವಾದ ಸಾಮಾನುಗಳನ್ನು ತೆಗೆದುಕೊಂಡವರಾಗಿ. 5. ಶಾರ್ಙ್ಗಪಾಣಿ, ಕೃಷ್ಣ. 6. ಮೋಡದಂತೆ ಕಪ್ಪಾದ ಕೂದಲುಳ್ಳವರಿಗೆ. 7. ತೆಳ್ಳಗೆ ಇರುವ ಮೈ, ಕೃಶವಾದ ಶರೀರ. 8. ಶತಪತ್ರದಂತೆ ಎಂದರೆ ಕಮಲದಂತೆ ಕಣ್ಣುಳ್ಳ ಶ್ರೀಕೃಷ್ಣ.

ಪೂರಾಯಭುಕ್ತ ನವ್ಯಾಂಬರಸೌಗಂಧ|ಸಾರಸೋಮಾಡಿಯುಲವರ್ಮಾಲೆ||
ರಾರಾಜಿಪ ರತ್ನಭೂಷಣಗಭೋಗಪಚಾರವ ಕೈಕೊಳಿಸಿದರು ||೬೭||

ಸಡಗರದಿಂ ಕೃಷ್ಣಸೋಳ[1]ಸಾಸಿರ ಪೆ | ಣ್ಗಳ್ದಿಂ ಪೊಕ್ಕನಾಲಯವ ||
ಮಡದಿ ರುಕ್ಮಿಣಿದೇವಿ ನವಮಾಸವನಾಂತು | ಪಡೆದಳು ವರಕುಮಾರಕನ||

ಮಂಗಳವಾದ್ಯ ಶೋಭನವಾದ್ಯ ಜಾತಕ| ಮಂಗಳ ಬುಧತತಿಯಿಂದ |
ಸಂಗತವಡಿಸಿ ಪ್ರದ್ಯುಮ್ನಾಖ್ಯವೆಂದೆಂಬ | ತುಂಗನಾಮವನಿಟ್ಟರೊಲಿದು ||

ಜಗದೊಳು ಶ್ರೀಕೃಷ್ಣರಾಯದೇವಗೆ ಗಂಡು|ಮಗನಾದನೆಂಬ ಸಂಭ್ರಮದಿ||
ಅಗಣಿತವಿದ್ಯಾಧಿಕರು ಬಂದಲಸವೆ| ಹೊಗಳಿದರಬುಜಾಂಬಕನ ||೭೦||

ಉಪಮಿಸಲರಿದು ಕೃಷ್ಣನ ಹಸ್ತಸುರಪಾ|ದಪ[2]ಗುರುವೆನಿಸಿ ಬೇಡಿದುದ ||
ಅಪರಿಮಿತಾಶ್ರಿತಜನರಿಂಗೆ ಕೊಟ್ಟ ಶ್ರೀ ಕೃಪೆಯಿಂದ ಕುಸ್ತರಿಸಿದನು ||

ನಂದನ[3]ತನಗಾದನೆಂದು ರುಕ್ಮಿಣಿ ನಲ | ವಿಂದೆ ಗೋಪದೊಳಿರಲಿತ್ತ ||
ಮುಂದೊರ್ವ ಶಿಳನುದ್ಯನೆಂದು ಜಿಂತಿಸಿ ಭಾನು | ಸಂದನು[4]ಪಡುಗಡ
[ಲೊಳಗೆ ||೭೧||

ಅಸಮಯದಿ ಸೂಡರ್ಗಳ[5]ನೆತ್ತಿದರು ಸುಪ್ರ | ಕಾಶಮಂದಿರದೊಳೊ
[ತ್ತರಿಸಿ ||
ಲೇಸಪ್ಪ ಮಣಿಮಂಚದ ಮೇಲೆ ಶಿಶುವೆಳ|ನೇಸರಂತೊಪ್ಪಿರ್ದನೊಲಿದು||

ಎಣ್ಣೆಯನೂಡಿ ನೀರೆರೆದು ತೂಪಿರಿ[6]ದಾಗ | ಕಣ್ಣಿಗೆ ಕಜ್ಜಳವೆಚ್ಚು[7] ||
ಬಣ್ಣಿಸಿ ಸೊಡರ್ವೆಟ್ಟಸಿಟ್ಟು ಪಾಲೆರೆದೋವಿ|ಚೆಣ್ಣ[8]ನ ಪಕ್ಕೆಗೈದಿದಳು ||೭೪||

ಶಿಶುವಿನ ಭಾಳಾಂತರ[9]ದೊಳಿಟ್ಟಳು ಮಂ|ತ್ರಿಸಿದ ವಿಭೂತಿಯ ಬೊಟ್ಟ||
ಮಿಸುನಿ[10]ಯಂತ್ರದ ಮಣಿಮಾಲೆಯ ತೋಳ್ಗೆ ಬಂ|ಧಿಸಿದಳತ್ಯಂತ
[ಭಕ್ತಿಯಲಿ ||೭೬||

ಸ್ತನಪಾನಗುಡುವ ಹೆಂಗಳಿಗೆ ಪೇಳ್ದಳು ಹತ್ತು|ದಿನದೆಡೆಸಂದಿನ ರಾತ್ರಿ ||
ಘನಜೋಪಾನದೊಳೀಡೇಬೇಕೆಂದು | ವನಜಾಕ್ಷಿ ಮಗ್ಗುಲಿಕ್ಕಿದಳು[11] ||

---

ಕ. ಪ. ಅ.—1. ಹದಿನಾರು (ಮರಾಟಿ). 2 ಬೇಡಿದುದನ್ನು ಕೊಡುವ ದೇವತೆಗಳ ಮರ, ಕಲ್ಪವೃಕ್ಷ. 3. ಮಗ 4. ಬಿದ್ದನು. 5. ದೀವಿಗೆಗಳನ್ನು 6. ಊದಿ ರಕ್ಷೆಯಿಟ್ಟು 7. ಕಪ್ಪುಹಚ್ಚಿ. 8. ಗಂಡುಮಗು. 9. ಹಣೆಯ ಮಧ್ಯ. 10. ಚಿನ್ನ. 11. ಮಲಗಿಕೊಂಡಳು.

ವಿಲಸಿತಮಣಿಮಂಚದಮೇಲೆ ಶಿಶುಗೂಡಿ | ಮಲಗಿದ್ದು ಸ್ವಪ್ನವಕಂಡು ||
ನಿಲಲಾಱದೆದ್ದು ನಂದನನ ನಿಟ್ಟಿಸಿ ಕಾಣ | ದಳವಳಿದಳು ದುಃಖವೆರಸಿ ||೭೮||

ಮಾಣದೆ ಮಣಿದೀಪ್ತಿಯ ಪಿಡಿದಾವಾವ | ತಾಣದೊಳಱಸಿ ನಂದನನ ||
ಕಾಣದೆ ಕಂಗೆಟ್ಟುಹೊರಳ್ದಳು ಸುಮ್ಮನೆ[1] | ಬಾಣ ತಾಗಿದ ಹುಲ್ಲೆಯಂತೆ ||

ಎಣ್ಣೆಯು ತಲೆಗೂಡಿದುದಿಲ್ಲ ನೂರೆವಾಲು | ಬೆಣ್ಣೆಯು ಮೆಲಿಸಿದುದಿಲ್ಲ ||
ಕಣ್ಣವೆ ಹಳಚಿ ನೋಡಿದುದಿಲ್ಲ ಮಗನ ಲಾ | ವಣ್ಯವನೆಂದಳಲಿದಳು ||೮೦||

ಮೊಲೆವಾಲು ತೊರೆದುಗುತಿವೆ ಕೂ ಲೋಚನವಾರಿ | ಸೆಲೆಹಾಯಿತೊಡೆ
[ನಾಯಿತಿದೆಕೋ ||
ನೆಲೆಗೊಳ್ಳದು ಚಿತ್ತ ಮಗನೆ ನೀಸಿದಿರ್ವಂದು | ತಲೆದೋಱೆಸೆಂದಳಲಿದಳು ||

ಕರೆದೊಡಾಲಯೆನ್ನಬಾರದೆ ಕಂದ ನಿನ್ನಯ | ಸಿರಿಮೊಗಗಾಣದೆಂತಿರಲೊ ||
ಪರಿತಾಪವ ಪುಟ್ಟಿಸಿ ಪೋಗ ಬಂದೆಯ | ಹರಿ ಕೊಟ್ಟ ವರ ಬಯಲಾಯ್ತು ||

ಹಾಲಿಗೆ ಹಂಬಲಿಸುವನಲ್ಲ ಬಿಡದಂಬೆ | ಗಾಲಿಕ್ಕಿ ತೊಡಲುವನಲ್ಲ ||
ಕಾಲು ಬಲಿದು ದಟ್ಟಡಿಯಿಡುವವನಲ್ಲ | ಬಾಲನೆಲ್ಲಿಗೆ ಹೋದನವ್ವ ||೮೩||

ಎರಡೇಳು ಲೋಕವ ಸೃಜಿಸುವ ವಿಧಿ ನಿನ್ನ | ವರಸಹೋದರ ನಿಟಿಲದಲಿ[2] ||
ಬರೆದನೆ ಪುಟ್ಟಿದಾಕ್ಷಣ ಪೋಪುವೆಂದು ಪ | ಲ್ಮೊರೆದಳು ಕಡುದುಗುಡದಲಿ[3] ||

ರೋದನಮಯವಾಗಿದೆ ರುಕ್ಮಿಣಿಗೆಯೇ | ನಾದುದೊ ಕೇಳುಕೇಳೆನಲು ||
ಮಾಧವನೊಡನೆ ಪೇೞ್ದರಾಶಿಸು ಬಯ | ಲಾದ ಸೋಜಿಗದ ಸುದ್ದಿಯನು ||

ಉದಿಸಿದ ದಶದಿವಸದ ಶಿಶು ಪೋಪಾಗ | ವಿಧಿವಿಧಿಯನು ಮೀಱಬಹುದೇ ||
ಕುದಿಗೊಳಬೇಡ[4] ದುಃಖವ ಬಿಸುಡೆಂದು ಪ್ರೇ | ಮದಿ ಪೇೞ್ದ ಮಾಮ
[ಲೋಚನೆಗೆ ||೮೬||

ಮುಳುಗುವ ಮಡದಿಯನವರ್ದಪ್ಪಿ ಮುದ್ದಿಸಿ | ತುಱುಗೆವೆಗಣ್ಣ[5] ನೀರಿಂಗೆ ||
ಹರಿಗೋಲಹಾಯ್ಕಿಸಬೇಡೆಂದು ಪೊಂಬಟ್ಟೆ | ಸೆಱಗಿನಿಂ ತೊಡೆದ ಲೋಚನವ ||

ಅಕ್ಕ ನಿನ್ನಾತ್ಮಸಂಭವ ಮಗ್ಗುಲೊಳಗಿರ್ದ | ಬಕ್ಕಂಬಯಲಾದ[6] ಬಗೆಯ |
ಬಕ್ಕಣಿಸೆನಗೆಂದು ಸತ್ರಾಜಿತಸುತೆ | ದುಕ್ಕವನಾಂತು ಕೇಳಿದಳು ||೮೮||

---

ಕ. ಪ. ಅ.—1. ಮೂರು ಮೊನೆಯುಳ್ಳ 2. ಹಣೆಯಲ್ಲಿ. 3. ದುಃಖ. 4. ಸಂಕಟಪಡಬೇಡ 5. ತುಱುಗೆವೆಗಣ್ಣ—ತುಂಬಿಕೊಂಡಿರುವ ಕೂದಲುಳ್ಳ ರೆಪ್ಪೆಯಿಂದ ಕೂಡಿದ ಕಣ್ಣಿನ. ಈ ಪದ್ಯದ ಭಾವವೇನು? 6. ಮಾಯವಾದ.

ಪುಂಡರೀಕಾಕ್ಷಿ ನಿದ್ದೆಯೊಳಾನೊಱಗಿರೆ | ಕಂಡೆನು ಬಲು ಕೆಟ್ಟಕನಸ |
ಚಂಡಾಂಶು[1]ವಿನಂತೆ ಹೊಳೆವ ಪುತ್ರನ ದೈತ್ಯ|ಕೊಂಡೊಯ್ದನೆಚ್ಚತ್ತೆನವ್ವಾ||
ಕಣ್ಣೊಡೆದಂತೆ ಕಂಗೆಟ್ಟು-ನೋಡಿದರೆನ್ನ ಚಿಣ್ಣ[2] ಮಗ್ಗುಲೊಳಿಲ್ಲದಿರಲು|
ಸುಣ್ಣಕಲ್ಲುಡಿಗಟ್ಟಿ ಮಡುವಿನೊಳೞಿದಂತೆ| ಬಣ್ಣಗುಂದಿದೆ ಕೇಳು ತಾಯೇ||
ಮಕ್ಕಳ ಮಾಣಿಕ ಪ್ರದ್ಯುಮ್ನ ನೆರೆವರೆ[3] | ಕಕ್ಕಸವಹುದೆಂದೆನುತ ||
ರಕ್ಕಸರುಗಳು ಮಾಯದೊಳುಯ್ದರು ತಾಯೆ ದುಕ್ಕಬೇಡೆಂದು ಪೇೞಿದಳು||
ನಿಲ್ಲದಾಕ್ಷಣ ಕೃಷ್ಣ ಬಿಗಿಯಪ್ಪಿ ನೀಪೆತ್ತು|ದಿಲ್ಲವಿಂದೆದೆಯ ಬಳ್ಪಿಡಿದು |
ತಲ್ಲಣಿಸದಿರೆನ್ನ ನೋಡಿ ನೀಮಱೆಯೆಂದು | ಗಲ್ಲವ ಪಿಡಿದು ಮುದ್ದಿಸಿದ ||
ಶಶಿವದನೆಯ ಮನಸ್ತಾಪ ತಂಪಾದುದು| ನಿಶೆ ಬಿದ್ದುದುರ್ವೀಸ್ಥಳಕೆ |
ಬಿಸಿಗದಿರನು[4] ಹುಟ್ಟಿ ಪೂರ್ವಾಚಲದಿ ರಂ | ಜಿಸಿದನು ಕೇಳಾಯತಾಕ್ಷಿ ||
ವರಮೋಹನತರಂಗಿಣಿಯೆಂಬ ಕಾವ್ಯವ | ಬರೆದೋದಿ ಕೇಳಿದ ಜನರ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು | ಪೊರೆವ ಲಕ್ಷ್ಮೀಕಾಂತ ಬಿಡದೆ||

— ಅಂತು ಸಂಧಿ ೪ ಕ್ಕಂ ಪದ ೨೬೧ ಕ್ಕಂ ಮಂಗಳಂ —

## ಐದನೆಯ ಸಂಧಿ

ದೇವತೆಗಳು ಕಾಮನನ್ನು ಬೋಧಿಸಿದುದು.

ವಟಪತ್ರತಲ್ಪನ ವರದಿಂದೆ ಮತ್ಕರ್ಣ| ಪುಟವಿಕ್ಕುವಂತೆ ನೀ ಪೇೞು ||
ಕಟಕಟ! ಹುಟ್ಟಿದಾಕ್ಷಣ ಶಿಶು ನೋಡಲ್ಕೆ| ಮಟಮಾಯವಾದುದಾಶ್ಚರ್ಯ ||
ಶತಪತ್ರದಳಲೋಚನೆ ಕೇಳು ಹರನಿಂದೆ|ಹತನಾದ ಕಂತು[5] ರುಕ್ಮಿಣಿಯ||
ಸುತನಾಗಿ ಹುಟ್ಟಿ ಮುಂಗೆಲಸಕ್ಕೆ ಬಯಲಾದ| ಕತೆಯ ಬಿತ್ತರಿಪೆ ನಿನ್ನೊಡನೆ||
ಅದು ಹೇಗೆನಲು ತಾರಕನುಪಟಳ[6]ವನು ಬಿದಿಯೊಳುಸುರರುಬಿನ್ನೈಸೆ||
ಪದುಮೋದ್ಭವ ಕೇಳಿ ಬಂದು ಪಾಲ್ಗಡಲೊಳು | ಮಧುಸೂದನನಗೆ
[ಪೇೞಿದನು ||೩||

ಕ. ಪ. ಅ—1. ಸೂರ್ಯ. 2. ಮಗು. 3. ಪ್ರವೃದ್ಧನಾದರೆ. 4. ಸೂರ್ಯ—ಹೇಗೆ? 5. ಮನ್ಮಥ. 6. ಬಾಧೆ.

ಇಂಗಡ[1]ಲೆಡೆಯು ಪೆರ್ವಾವಿನ ಹೆಡೆಯು ರತ್ನಂಗಳ ಮೆಯ್ಯೊಳಗಿನಲಿ ||
ಕಂಗೊಳಿಸುವ ವಾಸುದೇವನ ಶ್ರೀಚರ | ಣಂಗಳ ಸನ್ನುತಿಸಿದನು ||೪||

ವೇದತಸ್ಕರ[2]ಮದಮರ್ದನ ಜಯಜಯ ಭೂಧರಧರ[3] ಜಯಜಯತು ||
ಶ್ರೀಧರಣೀಧರ[4] ಜಯಜಯ ನಮೋ ಪ್ರಹ್ಲಾದವರದ ಜಯ ಜಯತು ||
ಬಲಿಮದವಿದಳನ ಭಾಷಿತಕವಿ[5]ಚಕ್ಷು | ಸಲಿಲಜ[6]ದಳನಾಶ ಜಯತು ||
ನಲಿನಭವಾಂಡ ಪಾಟಿತಪಾದಪದ್ಮ ನಿರ್ಮಲಗಂಗಾಪಿತ[8] ಜಯತು ||
ಘನಪರಾಕ್ರಮವೆತ್ತ ಕಾರ್ತವೀರ್ಯನ ಬಾಹು | ವನಕುಠಾರಕ ಜಯಜಯತು ||
ಮನಗೊಂಬ ಪೃಥ್ವೀಪತಿಯ ಭಾರ್ಗವ ಬ್ರಹ್ಮ | ಜನಕೊಡರ್ಚಿದ ರಾಮ ಜಯತು |೭||

ರಣಧೀರದಶಕಂಠಜಿತಕೀರ್ತಿಯ ವಿಭೀಷಣಹಿತ ರಘುರಾಮ ಜಯತು||
ಪ್ರಣವಗೋಚರ ನಿತ್ಯಮದನಗೋಪಾಲ ಸದ್ಗುಣಶೀಲ ಶ್ರೀಕೃಷ್ಣ ಜಯತು||
ದಿತಿಜಕುಲೇಭಸಂಚಾನನ[9] ಭಾಗ | ವತನವರದಾಯಕ ಜಯಜಯತು ||
ಶ್ರುತಿತತಿನುತಿಗಗಣಿತಮಹಾಮಹಿಮ ಶ್ರೀ ಪತಿ ಕೃಷ್ಣ ಜಯಜಯತು ||
ಪರಮಪತಿವ್ರತೆಯರ ಮಾನಭಂಜನ[10] ತುರಗವಾಹನ[11] ಪವಿತ್ರಾಂಗ ||
ಹರಮುಖ್ಯತ್ರಿದಶೋತ್ತುಂಗ ಜಯತು ಶ್ರೀ|ವರತ್ರೈಜಗದಂತರಂಗ ||೧೦||

ಮಾಧವ ನಾರಾಯಣ ಕೇಶವ ಮಧು | ಸೂದನ ಗೋವಿಂದ ವಿಷ್ಣೂ ||
ಶ್ರೀಧರ ವಾಮನ ತ್ರೈವಿಕ್ರಮ ನಿಮ್ಮಯ | ಪಾದದ ನೆಲೆಗಾಣಬರಾರು ||
ದಾಮೋದರ ಪದ್ಮನಾಭ ಹೃಷೀಕೇಶ | ತಾಮರಸಾಪ್ತ[12]ಪ್ರಕಾಶ ||
ಹೇಮಾಂಬರ ವಾಸುದೇವ ಸಂಕರ್ಷಣ | ಸಾಮಜವಿಭು[13]ರಕ್ಷ ಜಯತು||

---

ಕ. ಪ. ಅ—1. ಕ್ಷೀರಸಮುದ್ರ 2. ವೇದವನ್ನು ಕದ್ದ ಸೋಮಕಾಸುರ. 3. ಕೂರ್ಮಾವತಾರಮಾಡಿ ಮಂದರಪರ್ವತವನ್ನು ಬೆನ್ನಿನಮೇಲೆ ಧರಿಸಿದ ವಿಷ್ಣು. 4. ವರಹಾವತಾರ 5. ದಾನಕೊಡಬೇಡವೆಂದು ತಡೆದ ಶುಕ್ರಾಚಾರ್ಯನ. 6. ನೀರಿನಲ್ಲಿ ಹುಟ್ಟಿದ ಕಮಲ. 7. ಸೀಳಿದ. 8 ತ್ರಿವಿಕ್ರಮಾವತಾರ ಮಾಡಿದ ವಿಷ್ಣು - ಹೇಗೆ? 9 ರಾಕ್ಷಸರೆಂಬ ಆನೆಗಳಿಗೆ ಸಿಂಹನಾದವನು. 10. ಬುದ್ಧಾವತಾರ—ಹೇಗೆ? 11. ಕಲ್ಕ್ಯವತಾರ—ಹೇಗೆ? 12. ಸೂರ್ಯ. 13. ಗಜೇಂದ್ರ.

ಪುರುಷೋತ್ತಮನೆ ಪ್ರದ್ಯುಮ್ನಾನಿರುದ್ಧನೆ | ನರಸಿಂಹಾಧೋಕ್ಷಜ [ಜಯತು
ವರಜನಾರ್ದನನೆ ಉಪೇಂದ್ರನಚ್ಯುತ ಹರೆ ಪರಮಾತ್ಮನೆ ಜಯ ಜಯತು ||
ಈಪರಿಯಲಿ ಕೀರ್ತಿಸಲಾಗಿ ರಮೆಯ ಪ್ರಾಣೇಶ ವಿಧಾತ್ರನೊಳುಸಿರ್ದ ||
ನೀ ಪರುಠವಿಸು ನಿರ್ಜರರಿಗೆ ಬಂದ ಸಂ | ತಾಪವಿದೇನೆಂದ ನಗುತ ||೧೪||

ತಾರಕನಿಂದೆ ನೊಂದಮರರು ತಮ್ಮ ಸಂ|ಸಾರದುಃಖವ ತನಗುಸಿರೆ ||
ತೀರಿಸಲರಿಯದಾನೈತಂದೆ ಶ್ರೀವೀರ | ನಾರಾಯಣ ಪೊರೆಯೆಂದ ||೧೫||

ಎಂದೆನಲಸುರಾರಿ ನುಡಿದ ವಿಧಾತ್ರ ನಿನ್ನಿಂದಲಾತಾರಕಾಸುರಗೆ ||
ಬಂದುದು ವರ ಧೂರ್ಜಟಿ[1]ಯಿಂದಲುದಿಸಿದ ನಂದನನಿಂದ ಕೇಡಹುದು ||೧೬||

ನಾಗಭೂಷಣಗೆ ಪಾರ್ವತಿಯೊಳು ಪರಮಸಂ| ಭೋಗವಾದರೆ [ಮಕ್ಕಳಹುದು ||
ಈಗಳೀತಕೆ ತಪವೆಂದು ನಾಲ್ಮೊಗ ಮನೋ|ರಾಗದೆ ಪೇಳ್ದನಚ್ಯುತಗೆ ||

ಕಿಚ್ಚುಗಣ್ಣನ[2] ತಪವಳಿವುದು ಪೂಗೋಲೊ|ಳೆಚ್ಚು ಮನ್ಮಥ ಪೀಡಿಸಲು|
ಮೆಚ್ಚುವಡೆದು ಪಾರ್ವತಿಯೊಳು ರಮಿಸಲು | ಸ್ವೇಚ್ಛದಿ ಸುತ ಬಪ್ಪನೆಂದ ||

ರತಿರಾಜಗೆ ಬೋಧಿಸುವಂತೆ ವರಬೃಹ|ಸ್ಪತಿಗೆ ನೇಮವನಿತ್ತು ಸುರರ ||
ಸ್ಥಿತಿಗೆ ನೀಕರ್ತನೆಂದಬುಜಸಂಭವ ಶ್ರೀ | ಪತಿಯ ಬೀಳ್ಕೊಂಡನುತ್ಸವದಿ ||

ಅತ್ಯಂತವಿಭವದಿ ಕಮಲಸಂಭವ ತನ್ನ|ಸತ್ಯಲೋಕಕೆ ಪೋಗಿ ಸುರರ ||
ಮೊತ್ತವ ಬೀಳ್ಕೊಟ್ಟು ಸುರಗುರುವಿಗೆ ನೇಮ|ವಿತ್ತು ಮನ್ಮಥಗೆ [ಹೇಳೆನುತ ||೨೦||

ವಸುಧೇಶ್ವರ ನಿರೂಪಿಸಲಾಗಿ ತಾ ನಿಮ್ಮ|ಶಿಶುವೆನುತೆಱಗಿಬೀಳ್ಕೊಂಡು ||
ನಸುನಗುತ್ತೈತಂದು ಕಂಡನು ರಂಜಿಪ|ಕುಸುಮಾವತಿಯೆಂಬ ಪೊೞಲ[4] ||೨೧||

ಕೊಂಡಾಡಲರಿದು ಪಚ್ಚೆಯಕೋಟೆಯೆಂಬಂತೆ|ಮಂಡಳಿಸಿದ ಮಾಬನದಿ|
ತಂಡತಂಡದ ವಿಹಗಾಲಾಪ ತುಂಬಿ ಯಾ | ಖಂಡ[5] ವಾಗಿರ್ದುದೇನೆಂಬೆ ||೨೨

ಕಳಿತ ರಸಾಲ ನೇಱಿಲವಣ್ಣಳ ಪಿಕ | ಗಿಳಿ ಚಂಚುಪುಟದಿ ಕರ್ದುಕೆ[6] ||
ತುಳುಕಿದ ಮಧುರಸ ದಡಸೂಸೆ ಪರಿವ ಪೆರ್ಬೊಳೆಯೆಸೆದುದನೀಕ್ಷಿಸಿದ ||

---

ಕ. ಪ. ಅ.—1. 2 ಈಶ್ವರ 3. ಲೋಕೇಶ, ಬ್ರಹ್ಮ. 4. ಪಟ್ಟಣವನ್ನು.
5. ತುಂಬಿ ಪೂರ್ಣವಾಗಿದ್ದಿತು. 6. ಕಚ್ಚಲು.

ಚೆಂಗಣಿಗಿಲೆ ಪಾದರಿ ಮುಡಿವಾಳ ವ ನಂಗಳ ತೋಟವಿಕ್ಕೆಲದಿ ||
ಕಂಗೊಳಿಸುವ ಮಧುರಸವಾಹಿನಿಯು ದಾಂಟಿ | ಗಂಗಾಜಲವನು ಸವಿದು||೧೪||
ನಾಟಿರ್ದ ಪಸುರ್ಗಿಡು ಪುಷ್ಪಲತೆಯು ವೃಕ್ಷ | ವಾಟಿಯೊಳ್ ಕುಸುಮ [ಸೌರಭಕೆ ||
ಊಟೆವರಿವ[1] ತುಂಬಿಗಳ ದೊಂಬಿ ದನಿಗೆಯ್ವ | ಕೂಟಕೋಗಿಲೆಗಳೊಪ್ಪಿದುವು||
ಪೆಸರುವಡೆದ ಮಧುರಸವಾಹಿನಿಯು ದಾಂ | ಟಿಸಲು ಚಂದನಶೋಣಿಗಡರ್ದು||
ಬಿಸರುಹಗಂಧಗಂಧಿನಿಯುರಸ್ಥಳದ ಕ | ರ್ಕಶಕುಚಗಳ ನಿಟ್ಟಿಸಿದ ||೧೬||
ಆಸಮಯದಿ ಸದ್ಗುರುರಾಯ ನೆನೆದ ಪ | ರಾಶರಮುನಿಗಾದ ಹದನ[2] ||
ಭೂಸಭೆಯೊಳು ತನಗಹುದೆಂದು ನಾವನಿ | ವಾಸಗಾರ್ತಿ[3]ಯರ ಬೀೞ್ಕೊಂಡ||
ಕಳಮಕ್ಷೇತ್ರದಿಕ್ಕೆಲದಲ್ಲಿ ಪರಿಮಳ | ದಳೆದ ನೀಲಾಬ್ಜವ ಕಿತ್ತು ||
ತೊಳಗುವ ಗಿಳಿವಿಂಡಸಿಟ್ಟುಪೊೞೆಸುವ ಹೆಂ | ಗಳ ರೂಹ ನೋಡುತ್ತೈದಿದನು||
ಬಟ್ಟಬಲ್ಮೊಲೆಯ ಭಾಮೆಯರಾಯತಿವೆತ್ತು | ಪಟ್ಟಣದಿಂ ಪೊಱಮಟ್ಟು ||
ನೆಟ್ಟನೆ ಸ್ಮರನಿರ್ದ ನಂದನದೆಡೆಗೆ ಸಾ | ಲಿಟ್ಟುದನೇಕಸಂಭ್ರಮದಿ ||೧೮||
ಕುಂದಗಂಧಿನಿಯ ಮೆಲ್ನುಡಿಯ ವಿಮಲ ಮೆ | ಯ್ಗಂಧವ ಕಾಣಿಕೆವಿಡಿದು||
ಮಂದಗತಿಯನಾಂತು ಬೃಹಸ್ಪತಿಗಿದಿರಾಗಿ | ಬಂದುದು ತಂಗಾಳಿ ಬನದಿ ||೨೦||
ಅಲರುವಟ್ಟೆಯ ಬೞಿವಿಡಿದೈತಂದು ಕ | ಮ್ಮಲರಿ[4]ಡಿದಿರ್ದ ನಂದನದಿ ||
ಕೆಲರು ಮಾಣಿಯರು[5] ಪೂಗೊಯ್ವುದ ಗುರು ಕಂಡ | ಜಲರುಹದಳನೇತ್ರ [ ಕೇಳು ||೨೧||
ಏನ ಹೇೞುವೆ ಚಂದ್ರಕಾಂತಕಲ್ಗಟ್ಟ ಸೋ | ಪಾನ ತಣ್ಗೊಳದಮಧ್ಯದಲಿ||
ನಾನಾರತ್ನಶೋಭಿತದ ಚಾವಡಿಯಲ್ಲಿ | ಮೀನಾಂಕ[6]ನಿರ್ದನೋಲಗದಿ ||೨೨||
ಕೊಂಚೆಗಳಿಂಚರದನಿ ನೀಲಕಲಕಂಠ[7]ಗ | ಳಿಂಚರ ತಾಳ ನಿರ್ಣಯದೆ ||
ಸಂಚರಿಸುವ ರಾಜಹಂಸೆಗಳಿರ್ದುವು | ಪಂಚಬಾಣನ[8] ಮುಂದೆಸೆಯ ||೨೩||
ಪಾಡುವ ಪೆಣ್ದುಂಬಿ ನರ್ತಿಸ ನವಿಲು ಕೊಂ | ಡಾಡುವ ಬಾನ್ವಕ್ಕಿಪತಿಯ||
ಬೇಡುವ ಗಿಳಿವಿಂಡು ದೈನ್ಯದಿಂ ಬಿನ್ನಹ | ಮಾಡುತಿರ್ದುವು ಮನ್ಮಥಗೆ ||೨೪||

---

ಕ. ಗ. ಅ—1. ನಾಲಗೆಯಲ್ಲಿ ನೀರು ಸ್ರವಿಸುತ್ತಿರುವ. 2. ಪೂರ್ವಕಥೆ ಏನು? 3. ನಾವೆಯನ್ನು ನಡೆಸುವ ಹೆಂಗಸರು—ಪದ್ಯದ ಭಾವವೇನು? 4. ಅಲರ್-ಪುಷ್ಪ, ಕಮ್ಮಲರ್—ಪರಿಮಳವಿಶಿಷ್ಟವಾದ ಹೂವು. 5. ಮದುವೆಯಿಲ್ಲದ ಹೆಂಗಸರು. 6. ಮನ್ಮಥ. 7. ಕೋಗಿಲೆ. 8. ಮನ್ಮಥ.

ತರ್ಕಿಪ ಬಗದಾರೆಯ ಕೂಡೆ ಬಹ ಕೊಳ|ರ್ವಕ್ಕಿಯ ಕೆಲದಾಡಿಸುತ ||
ದಿಕ್ಕಿಗೆ ಪೆಸರಾಂತ ಸಿಪಿಲೆಗೆ[1] ಕವಳಳ | ನಿಕ್ಕಿ ಕಾದಿಸುತಿರ್ದ ಮದನ ||೩೫||
ಚಂದಿರ ವೀರವಸಂತ ಮಂದಾನಿಲ | ಬಂದಿರೆ ಮೂವರ ಕರೆದು ||
ಎಂದಿನಂತಿರಿ ಪೋಗಿಯೆನುತ ಬೇಱಿಕ್ಕಟ್ಟು ಸೌ|ಗಂಧಿನಿಯರ ನೋಡುತಿರ್ದ||
ಇನಿರಸವಾಂತ ಕರ್ವಿಲ್ಲಿಗೆ ಭ್ರಮರಸಿಂ | ಜಿನಿ[2]ಗೈದೆಡದ ಹಸ್ತದಲಿ ||
ದನಿಗೆಯ್ಯುತಿರೆ ಬಲಗೆಯ್ಯ ಪೂಸರದೊರ್ವ |ವನಿತೆ ನಿಂದಿರ್ದಳುತ್ಸವದಿ ||೩೭
ರಮಣಿಯೊರ್ವಳು ನಿಖಿಳಾಯುಧದೊಳಗುತ್ತಮವೆಂದು ಸುರಗಿಯ [ಪಿಡಿದು ||
ಘುಮುಘುಮಿಸುವಸೊನ್ನೆಗೇದಗೆಯೆಸಱೆಂಬ|ಜವದಾಡೆಯ[3]ವಳೊಪ್ಪಿದಳು
ಭೃಂಗೋಪಮಾನಕುಂತಲೆಕೇಳುಕಸ್ತೂರಿ|ಹಿಂಗದಚಮರಗಾತ್ರಿಯರು||
ಹೊಂಗದಳಿಯ ಕೋಮಲ ಪತ್ರವೀಜನ[4]|ದಂಗನೆ ಮೊಱೆದಳೊತ್ತಿನಲಿ||೩೯||
ವಿಲಸಿತಪೂಗಪತ್ರಿಕೆಯ ಸೇತ್ರಿಕೆಯಾದ[5] | ಜಲಪತ್ರದಾರಕಿಯೊಡನೆ ||
ಸುಲಲಿತ ಕ್ರಮುಕದೊಂದೆಲೆಯ ಸಂಬಳಗೆಯ|ಲಲನೆ ನಿಂದಿರ್ದಳೊತ್ತಿನಲಿ||
ನಾಳವಿಚ್ಛೇದ ಸುವರ್ಣಪಂಕೇಜದ | ಕಾಳಾಂಜಿಯ ಪಿಡಿದವಳು |
ಪೇಟಲಚ್ಚರಿಯ ಬಾಹತ್ತನಿಯೋಗದ | ಮೇಳದಂಗನೆಯರೊಪ್ಪಿದರು ||೪೧
ಅಂದವಡೆದ ನಾನಾಗೀತವಾದ್ಯಪ್ರ | ಬಂಧ ಮುಂತಾದ ವಿದ್ಯೆಗಳು ||
ಬಂದಱೊಳ್ಕೊರೆ[6]ಯಿಲ್ಲದ ಹೆಂಗಳಿರ್ದರು|ಕಂದರ್ಪನೊಡ್ಡೋಲಗದಿ||೪೨||
ಹೊಂಗಳಸವ ಕೇಳ್ಪಡಿಸುವ ವೃತ್ತಕು|ಚಂಗಳ ರತಿಯ ಮೇಳದಲಿ ||
ಕಂಗೊಳಸುವ ಕಾಮಗೆ ಬೃಹಸ್ಪತಿಪೂ | ದೊಂಗಲ[7]ನಿತ್ತು ಸಂಧಿಸಿದ ||೪೩||
ಬೋಧಾರ್ಹ ಬೃಹಸ್ಪತಿಯಾಶೀರ್ವಾದವ|ನಾದರದಿಂ ಕುಡಲೊಡನೆ ||
ಆಧಾರಗೆಯ್ದು ಕುಳ್ಳಿರಗೊಟ್ಟು ಕೇಳ್ದ ರ|ತೀಧವ[8] ಬಂದ ಸುದ್ದಿಯನು ||
ಕಾವ[9]ನೊಡನೆ ವಿಸ್ತರಿಸಿದ ಗುರು ವಾಸು|ದೇವ ನಾಲ್ಮೊಗ[10]ರಪ್ಪಣೆಯ||
ಕೇವಲ ಗುಪ್ತವೆಂದಱಿದು ಮನ್ಮಥನಾಗ|ಜೀವ[11]ನೊಳ್ ನುಡಿದನಿಂತೆಂದು||

---

ಕ. ಪ. ಅ—1. ಬಾಲವನ್ನು ಅಲ್ಲಾಡಿಸುವ ಒಂದು ಬಗೆಯ ಹಕ್ಕಿ. 2. ಬಿಲ್ಲ ಹೆದೆ. 3. ಒಂದು ಬಗೆಯ ಆಯುಧ. 4. ಬೀಸಣಿಗೆ. 5. ಸೀರೆಯಾಗಿರುವುದು: "ಸ್ಯಾಜ್ಜಟಾಂಶುಕಯೋರ್ನೇತ್ರಂ" ಅಮರ. 6. ನ್ಯೂನತೆ. 7. ಜೊಂಪೆ, ಸರ. 8, 9. ಮನ್ಮಥ. 10. ಬ್ರಹ್ಮ. 11. ಬೃಹಸ್ಪತಿ, ದೇವತೆಗಳಗುರು.

ನಾರಾಯಣವಿಧಿ[1]ವಾಕ್ಯವ ಮೀಱಲು | ಬಾರದೆಂದವನೊಂದ ನುಡಿದ ||
ಘೋರರಾಕೃತಿವೆತ್ತ ಹರನೊಳು ಕಾದಲ |ದಾರು ಮೆಚ್ಚು ವರೆಂದು ನಗುತ||
ತನಗಿಂದ ಬಲ್ಲಿದರೊಳು ಕಾದಿ ಕೈಸೋತು|ಕನಲುವ ದುಕ್ಕವಂತಿರಲಿ||
ಜನಸೂಡಿಗೆಯು[2] ಸೈರಿಸಬಲ್ಲರಾರೆಂದು|ಮನಸಿಜ ನುಡಿದ ಜೀವನೊಳು||೪೭||
ಬಡಮಾತನಾಡಿದೆ ತವಪಂಚಬಾಣಕ್ಕೆ| ಮೃಡ ವಿಧಿ ವಿಷ್ಣು ದೇವೇಂದ್ರ ||
ಬಡಲೊಳು ಪೊಣ್ಮಿದ್ರೆವೆತ್ತರು ನಿನಗೆ ಕಂ | ಗೆಡೆದವರಾರು ಲೋಕದಲಿ ||
ಸುರಗುರುರಾಯು ನಿನ್ನಯವಾಕ್ಯವಕೇಳ|ಹರನಮೇಲಾನಂಬತೊಡಲು||
ಉರವಣೆಗಾಱ[3] ಕೆಂಗಿಡಿಗಣ್ಣ ತೆಱದರೆ, ಯಿರವೞದಪ್ಪುದೆಂದು ನುಡಿದ||೪೯||
ಮತವಱಯದೆ ಮಾತನಾಡಿದೆ ಕೇಳ್ ಪರ | ಹಿತಕೊಡಲೞದರದೇನು ||
ಶತಪತ್ರಸಖ ಚಂದ್ರರುಳ್ಳನ್ನ ಕೀರ್ತಿ ಶಾ|ಶ್ವತವಾಗಿಹುದೆಂದು ನುಡಿದ||೫೦||
ತನುವೊಂದುಳ್ಳೊಡೆ ಸಕಲಸುಖಂಗಳೊ|ಳನುಭೋಗವ ಕಾಣಬಹುದು||
ಮಿನುಗುವ ದೇಹವ ಬಿಸುಡಲದೇಕೆಂದು | ಮನುಮಥ ನುಡಿದ ಜೀವನಿಗೆ ||
ಯೋಚಿಸಿ ಮಾತಾಡು ಪರಹಿತಕಾಗಿ ದ|ಧೀಚಿ ತನ್ನೊಡಲ ಮಾಂಸವನು||
ಚಾಚಿದ ಸುರಪಶುವಿಂಗೆ ಬೆನ್ನಸ್ಥಿಯು| ಸೂಚಿಸಿ ಸುರಪಂಗೆ ಕುಡನೆ ||೫೨||
ನೋಡಲು ಜೀಮೂತವಾಹನ ಫಣಿಶಂಖ|ಚೂಡಂಗೆ ಕುತ್ತಿತನ್ನೊಡಲ||
ಬಾಡ[4] ಗುರುತ್ಮನಿಗಿತ್ತು ಸತ್ಕೀರ್ತಿಯ|ನಾಡೊಳು ಪಡೆದುದನಱಯಾ||೫೩||
ಹೋಗಲದೇನುದೊಡ್ಡಿತು ಮಾಂಧಾತಸು|ತ್ಯಾಗವ ಬೇಡ ಬಂದವಗೆ ||
ರಾಗದಿಂದೊಡಲ ಧಿಕ್ಕನೆ ಸೀಳ್ದು ದಕ್ಷಿಣ| ಭಾಗವ ಕೊಟ್ಟುದನಱಯಾ ||
ರಾರಾಜಿಪ ಯೌವನಮೇಘದೊಡ್ಡಣೆ|ನೀರ ಬೊಬ್ಬುಳಿಕೆಯೆಂತೊಡಲ||
ಆರಿದ ನಚ್ಚಿದುದಿಲ್ಲವು ಲೋಕೋಪ|ಕಾರವೆ ಕೈವಲ್ಯ[5]ವಹುದು ||೫೫||
ತೋರನುಣ್ಮೊಲೆವೆತ್ತ ಹೆಂಡಿರು ರತ್ನಭಂ|ಡಾರ ನಾನಾವಸ್ತು ಪೆಱರ್ಗೆ||
ಸಾರಲೊಪ್ಪುವುದು ಯೌವನ ಕೂಡೆಲೋಕೋಪ|ಕಾರವೆಕೈವಲ್ಯವಹುದು||
ಆಸೋದಿಗಳು[6] ನವರತ್ನಸುವರ್ಣವ| ವೇಸರದಂತೆ[7] ಹೊತ್ತಿಹರು ||
ದೋಷದೊಳ್ ಪರಹಿತವೆಂಬುದೆ ನವರತ್ನ | ಭೂಷಣ ಕೇಳು ಕಂದರ್ಪ ||

---

ಕ. ಪ. ಅ—1. ಬ್ರಹ್ಮ. 2. ಜನಸಂಹಾರಕನಾದ ಹರನನ್ನು (?)
3. ಪರಾಕ್ರಮಶಾಲಿ. 4. ಮಾಂಸವನ್ನು. 5. ಮೋಕ್ಷಕಾರಣವು.
6. ಆಸ್ವಾದಿಗಳು, ಅನುಭವಿಸುವರು. 7. ಹೇಸರಗತ್ತೆಯ ಹಾಗೆ.

ಆವಕಾಲವನಾದೊಡೆ ಮೀಱುಬಪ್ಪುದು | ಸಾವಕಾಲವ ಮೀಱುಬಹುದೆ ॥
ದೇವರ್ಕಳೆಡರಿಂಗೆ[1] ನಿನ್ನ ದೇಹವ ತೆತ್ತು | ಕಾವ[2]ನಾಗೆಂದು ಬೋಧಿಸಿದ ॥
ಓರಂತೆ ವೇದಶಾಸ್ತ್ರಾಗಮ ಪುರಾಣ | ಸಾರವನಱಿದು ನೋಡುವರೆ ॥
ಭಾರವಪ್ಪುದು ಪರಪೀಡಿತ, ಲೋಕೋಪ | ಕಾರವೆ ಕೈವಲ್ಯವಹುದು॥೫೯॥
ನೆಟ್ಟನೆ ಸುರಗುರುರಾಯ ಬೋಧಿಸಲೊಡಂ| ಬಟ್ಟು ಪೂಸರಳಿಂದೆ ಶಿವನ॥
ತಟ್ಟನೆ ತಾಗಲಿಕ್ಕುವೆನೆಂದು ಬಾಸೆಯ | ಕೊಟ್ಟ ಮನ್ಮಥ ಜೀವನಿಗೆ ॥೬೦॥
ಉರಿಬಂದರೆ ಬರಲಿದಱಿಂದೆ ಪರಮೇ | ಶ್ವರಿಯೊಮ್ಮೆ ಬಂದರೆ ಬರಲಿ॥
ಹರಿ ನಿರೂಪಿಸಿದಂತೆ ಮಾಡುವೆನೆನುತ| ತ್ವರಿಯದಿ[4] ಬೀೞ[3]ಕೊಟ್ಟ ಗುರುವ ॥
ಗಂಡಸುತನವೆತ್ತು ನುಡಿದ ಪಂತದ ಹೆಮ್ಮೆ|ಗಂಡು ವೃಂದಾರಕರುಗಳ[5] ॥
ಹಿಂಡು ಬದುಕಿತೆಂದು ಜೀವನು ಕಳುಹಿಸಿ| ಕೊಂಡಡರಿದ ಸುರಪುರಿಗೆ ॥೬೧॥
ವರಮೋಹನ ತರಂಗಿಣಿಯೆಂಬ ಕಾವ್ಯವ | ಬರೆದೋದಿ ಕೇಳದ ಜನರ॥
ತರುಣಿ ಚಂದ್ರಮರುಳ್ಳನಕ ಸತ್ಕೃಪೆಯಿತ್ತು |ಪೊರೆವ ಲಕ್ಷ್ಮೀಕಾಂತಬಿಡದೆ॥

— ಅಂತು ಸಂಧಿ ೫ಕ್ಕಂ ಪದ ೩೬೪ಕ್ಕಂ ಮಂಗಳಂ —

## ಆಱನೆಯ ಸಂಧಿ

ಮನ್ಮಥನ ದಂಡು ಪೊಱಮಟ್ಟುದು —

ಸ್ವರ್ಣಾಂಬರನಂಘ್ರಿನಿರ್ಮಾಲ್ಯತುಲಸಿಯ|ಕರ್ಣದೊಳಿಟ್ಟುಕೊಂಬಂತೆ॥
ನಿನ್ನ ಮೆಲ್ನುಡಿಗಳ್ಗೆ ಕಿವಿಗುಡದವರಾರು|ಮನ್ಮಥ ಪೇೞು ಮೋಲ್ಗತೆಯ॥೧॥
ಮದನಾಗಮದ ಶ್ರೀಕಾರಂಗಳಂತಿರ್ಪ|ಸುದತಿ ನಿನ್ನಯ ಶ್ರೋತ್ರಂ[6]ಗಳಗೆ॥
ಉದಧಿಯೊಳೊಗೆದ ಪೀಯೂಷ[7]ದಂತುಸಿರುವೆ|ಹದವಾದ ಮಾತ ಚೆತ್ರೈಸು॥
ಸಸಿಯೊಡಲಡಗ[8] ಭಕ್ಷಿಪರಿಂಗೆ ಲೇಸ ಸೂ|ಚಿಸೆ ಬೃಹಸ್ಪತಿಯುತ್ತಲಿತ್ತ॥
ಬಿಸಿಗಣ್ಣನೊಡನೆ ಕಾದುವೆನೆಂದು ಕಾಮ ತ| ನ್ನಸಿಯಳ ಕೂಡೆ ಪೇೞಿದನು ॥

ಕ. ಪ. ಅ—1. ಕಷ್ಟಕ್ಕೆ. 2. ರಕ್ಷಕನಾಗು, ಕಾಮನೆಂಬ ಹೆಸರುಳ್ಳವನಾಗು. 3. ಕ್ರಮವಾಗಿ. 4. ತ್ವರ್ಯದಿಂದ. 5. ದೇವತೆಗಳ. 6. ಕಿವಿ. 7. ಅಮೃತ. 8. ಚಂದ್ರನ ದೇಹದಲ್ಲಿರುವ ಮಾಂಸ ಎಂದರೆ, ಅಮೃತ; ಚಂದ್ರನು ಅಮೃತಭಾಜನನಾದ್ದರಿಂದ: ಅಮೃತವ ಭಕ್ಷಿಪರು = ದೇವತೆಗಳು.

ಪತಿವಚನಕೆ ಮಾರ್ನುಡಿವುದುಂಟಾದೊಡಾ|ಸತಿಗೆ ನಿಷ್ಕೃತಿ[1]ಯಿಲ್ಲೆಂಬ||
ಶ್ರುತಿಯಿಂದೆ ನಿಮಗೆ ನಾನುಸಿರಲಂಜುವೆನೆಂದು|ರತಿ ಬಿನ್ನಹವ ಮಾಡಿದಳು||
ಅದಕೇನು ಮನಕೆ ಬಂದುದ ಹೇೞುಹೇೞೆಂದು | ಮದನ ನಿರೂಪಿಸ [ಲೊಡನೆ ||
ಸುದತೀಶಿರೋಮಣಿ ನಿರ್ದೋಷಿ ತಾನೆಂದು|ಹೃದಯದ ಮಾತ ಬಿರ್ಚಿದಳು ||
ಹಸ್ತವ ಮುಗಿದು ಕಾಂತನ ಕರ್ಣಯುಗಳಕೆ|ವಿಸ್ತರಿಸಿದಳು ಬಿನ್ನಹವ ||
ಸ್ವಸ್ತದೊಳಿರ್ದ ನಿರ್ಜರರಿಗೋಸುಗ ಪಂ| ಚಾಸ್ತ್ರ ಮದನ ಸಾಯಬೇಡ ||
ಅಂಧಕಾಸುರ ಮತ್ತೇಭದಾನವ ಜ | ಲಂಧರ ಮುಖ್ಯದಾನವರ ||
ಕೊಂದ ಧೀರೋದಾತ್ತ ಹರನೊಳು ಕಾಳೆಗ | ಕಂದರ್ಪ ನಿಮಗೆ ಸಿದ್ಧಿಪುದೇ||
ಮೂಢರಂದದೊಳೂರ ಗುದ್ದಲಿಯನು ಕೊಂಡು | ನಾಡ ಕಾಲುವೆಯ [ತಿದ್ದುವರೆ ||
ಬೇಡ ಲಲಾಟನೇತ್ರನ ಕೂಡೆ ಕಲಹ ಕೈ|ಗೂಡದೆಂದೊಲಿದು ಪೇೞಿದಳು ||
ವಾಸವಾದ್ಯಮರರಾಚಾರ್ಯಂಗೆ ನಾನಿತ್ತ|ಬಾಸೆಗೆ ತಪ್ಪುವನಲ್ಲ ||
ಈಶನೊಳ್ ಕೋಳಾಹಳವ ಮಾಡುವೆನೆಂದು|ಪೂಸರ[2] ನುಡಿದ ಮಾನಿನಿಗೆ ||
ಅಂತರಿಕ್ಷದೊಳೆಡೆಗೊಂಡಿರ್ದವರತ್ರಿಪು | ರಾಂತಕಮಾರ್ಮಲೆ[3]ತಿರ್ದ ||
ಅಂತಕನೆರ್ದೆಯ ತ್ರಿಶೂಲದೆ ತಿವಿದ ಕಾ|ಲಾಂತಕ[4]ನೊಳು ಬೇಡ ಕಲಹ ||
ಇಷ್ಟ ನೀಕೀರ್ತಿಸಲಾತನ ಮೇಲೊಂದು| ಕಷ್ಟವ ನೆನೆದು ಪೂಸರಳ |
ವೃಷ್ಟಿಯ ತೋಱುವೆ ಸುರರೊಳುತ್ಪದಿಂದೆ | ಭ್ರಷ್ಟನ ಮಾೞ್ಪೆನೋಡೆಂದ ||
ಉತ್ತರೋತ್ತರ[5] ಜೇಯ ಶಕುನಮುಂತಾದುವ | ಚಿತ್ತಯಿಸುವು [ದೆಂದೆನಲಾಗ ||
ಮತ್ತಗಜೇಂದ್ರಗಮನೆಯ ಕುಸ್ತರಿಸಿ ಸಮರ್ಥ|ಬೀೞ್ಕೊಂಡನೆೞ್ತಿಯಲಿ[6]||
ಮಂಡಳಿಸಿದ ಪುಷ್ಪರಥ ರಮ್ಯಕಂಧರ | ಖಂಡನಧ್ವಜ ಚೈತ್ರ ಸೂತ[7] ||
ತುಂಡಮಾಣಿಕವಾಜಿ[8] ಕುಣಿಯಲ್ಕೆ ಕುಸುಮಕೋ|ದಂಡ ಬಂದಡರ್ದ [ನೆೞ್ತಿಯಲಿ ||೧೩||

---

ಕ. ಪ. ಅ.—1. ಪ್ರಾಯಶ್ಚಿತ್ತ. 2. ಪುಷ್ಪಬಾಣ, ಮನ್ಮಥ 3. ಪ್ರತಿಭಟಿಸು
4. ಶಿವ. 5. ಶುಭಗಳು. 6. ಪ್ರೀತಿಯಿಂದ. 7. ಸಾರಥಿ.
8. ಗಿಳಿಯೆಂಬ ಕುದುರೆ; ತುಂಡಮಾಣಿಕ=ಗಿಳಿ; ಹೇಗೆ?

ಭೋಗಿಭೂಷನ[1]ಮೇಲೆ ಮನ್ಮಥ ಬಲಸಹ | ವಾಗಿ ಪೋದಪನೆಂದು ಬಿಡದೆ |
ಕೋಗಿಲೆಯೆಂಬ ಕಟ್ಟೈಗೆಗಾಱನ ಕೈಯು | ಕೂಗಿಸಿದನು ತೀಕ್ಷ್ಣದಿ ||೧೪||
ವಾರಿಜಭವ ಶಕ್ರಾದಿದೇವತೆಗಳು | ನಾರಿಯು ಕುಚಮಂಡಲವ ||
ಸೇರಿಬರ್ದುಕಲೆಂದು ಮದನನ ಮುಂಗಡೆ| ಮೋರ[2] ಹಗ್ಗಳೆಸಾಱಿದುದು||
ಹೆಕ್ಕಳ[3]ದಿಂದೊದಱುವ ಕೊಂಚೆ[4]ಗಳ ದನಿ| ಯುಕ್ಕಡಗಾಳೆ ಸೊಲ್ಲಿಸುವ||
ಚಕ್ಕವಕ್ಕಿ[5]ಗಳಂಚರದ[6] ಪಿರಿಯ ನಾದ | ತೆಕ್ಕನೆ ತೀವಿತುರ್ವಿಯಲಿ ||೧೬||
ನೆಱೆ[3] ಕೂಗುವ ಕೊಳರ್ವಕ್ಕಿಯ ದೊಡ್ಡಿಯು | ಪಱೆ[37]ಯೊಪ್ಪೆ ಮಱಿ ದುಂಬಿಗಳ ||
ಗಱಿಯ ಝುಂಕಾರಸುಸ್ವರಪೂರಿತ ಮಹ | ವೃಱುಮೆಗಳಱಿಚೆದುವಾಗ ||
ಬಿಡದೊದಱುವ ನಾನಾವಾದ್ಯರಭಸ ಘೀ | ಳಿಡಲು ಬ್ರಹ್ಮಾಂಡ ಭಾಂಡಗಳು ||
ಒಡೆವಂತೆ ಘುಡಿಘುಡಿಸುತೆ ಕಂತು[8] ಬಲಗೂಡಿ| ನಡೆವುದನೇನಹೇೞುವೆನು||
ಇತ್ತರದಲಿ ತಳರ್ವಡೆದಿರ್ದ ವಾಮರ| ಮತ್ತೇಭ ಗಿಳಿ ತೇಜಿವಿಂಡು[9]||
ವೃತ್ತವಿಹಂಗ[10]ಚಕೋರ ಕಾಲಾಳ್ಗಳ | ವೊತ್ತದಿ ನಡೆದನಟ್ಟಿಯಲಿ||೧೯||
ಮುಂತೆಡಬಲದಿ ಪೌಜಿಕ್ಕಿದ ಚಂದ್ರ ವ|ಸಂತ ಮಂದಾನಿಲಾದಿಗಳು ||
ಪಂತದ ಬಿನ್ನಹವನುಮಾಡಿದರು ರತಿ|ಕಾಂತಂಗೆ ಕೈಮುಗಿದೊಡನೆ ||೨೦||
ದಿಟ್ಟಿದಾಹಕನ[11] ಮಸ್ತಕ ಮುಱಿವಂದದಿ| ಮೆಟ್ಟಿ ಕೆಂಗಿಡಿಗಳ ಕಱೆದು||
ಪುಟ್ಟಿಸಿ ಹೃದಯಸಂತಾಪವ ತಪವನೆ| ಬ್ಬಟ್ಟುವೆ[12]ನೆಂದನಬ್ಜಾರಿ[13] ||೨೧||
ಚಿಂತಾರಹಿತನಾಗಿರ್ದ ಮಹೇಶ್ವರ | ನಂತರಂಗವನೊಳಪೊಕ್ಕು ||
ಸಂತಾಪವ ಕೊನರಿಪೆನೆಂದು ಸ್ಮರಗೆ ವ|ಸಂತ ಬಿನ್ನಹವ ಮಾಡಿದನು ||೨೨||
ಒಮ್ಮನವೆರಸಿ ತಪೋನ್ನತಿವಡೆದಿರ್ದ | ನಿರ್ಮಳಾತ್ಮಕಶಿವನೊಡಲ ||
ದಿಮ್ಮೇಱೆ[3] ಹೊಯ್ವೆನೆಂದೆನುತ ಮಂದಾನಿಲ| ಕಮ್ಮಲಗೋಲಗೆ[14] ನುಡಿದ||

---

ಕ. ಪ. ಅ—1. ಶಿವನ. 2. ಮಯೂರ, ನವಿಲು. 3. ಆಧಿಕ್ಯ. 4. ಕ್ರೌಂಚಪಕ್ಷಿ. 5. ಚಕ್ರವಾಕ. 6. ಸುಸ್ವರ. 7. ನಗಾರಿ. 8. ಕಾಮ. 9. ಕುದುರೆಯ ಸೇನೆ. 10. ಚಕ್ರವಾಕ (?) 11. ದೃಷ್ಟಿದಾಹಕ, ಶಿವನು. 12. ಓಡಿಸುವೆನು. 13. ಕಮಲ ಶತ್ರುವಾದ ಚಂದ್ರ. 14. ಸುವಾಸನೆಯಾದ ಹೂವನ್ನೇ ಬಾಣವಾಗಿ ಉಳ್ಳವನು — ಯಾರು?

ಬೇರವ ನುಡಿದ ಮೂವರ ವಾಕ್ಯವ ಕೇಳ|ವಾರ ಮನ್ನಣೆಗೈದನವರ ||
ಓರಂತೆ ಮುಂಚೂಣಿ[1]ಯಲಿಂಬಿಟ್ಟು[2] ವಿಸ್ತಾರದಿ ತೆರಳ್ದ ಮುಂದೆಸೆಗೆ ||೨೪||

ತೋಱಿತು ವಾಯಸನೆಡಗಡೆಯೊಡದಿಂದೆ | ಹಾಱಿತು ಹಂಗ ದಕ್ಷಿಣಕೆ ||
ದೂಱಿತು ಬಲದ ಭಾಗದೆ ಸಲ್ಲಿಮುಂಗಟ್ಟ | ಪಾಱಿತುವಾಸುಗಿವಕ್ಕಿ ||೨೫||

ಎಡದೋಳು ಹಾಱಿತು ವಾಮಲೋಚನ ಬೆಂ|ಬಿಡದಲುಗಿತು ಮುಂದೆ [ನೋಡೆ ||
ಗಿಡುವೆದ್ದು ಪರಿದುದು ಮನ್ಮಥ ಬಲಗೂಡಿ | ನಡೆವಾಗಲೇನಹೇಳುವೆನು ||
ಪೊಡವಿಯೊಳವಶಕುನಂಗಳಾದೊಡೆ ಕಂಡು| ಮಡಮುರಿದೊಡೆ[3] ಮಾನ [ಭಂಗ ||
ಮೃಡನ ಧಿಕ್ಕರಿಸುವೆನೆಂದು ಕೋಪವ ತಾಳಿ|ನಡೆದ ಮನ್ಮಥ ಸೂಟಿಯಲಿ[4] ||

ನಿತ್ಯಕರ್ಮವಮಱೆದರು ದೇವಪೂಜೆಯ | ತತ್ತಳವಾಟ್ಪರು ತಪದ ||
ಚಿತ್ತವನೊಡೆದರು ಸನ್ಮುನಿವರರು ದಂ|ಡೆತ್ತಿ ಮನ್ಮಥ ಬಹ ಭರಕೆ ||೨೬||

ದಂಡಕೃಷ್ಣಾಜಿನ ಜಪಮಾಲೆಧೋತ್ರಕ| ಮಂಡಲು ಕೊಡೆ ಸಂಪುಟವ||
ಕೊಂಡುಯ್ಯದೆ ಮಱೆದೋಡಿತು ಮುನಿಗಳ| ತಂಡ ಮನ್ಮಥನಬ್ಬರಕೆ||೨೭||

ಕಾಷಾಯಾಂಬರಕುಶಭಸ್ಮಸಮಿಧೆಯಾ|ಪಾಸನಕೊಳವೆ ಸುಶಾಸ್ತ್ರ ||
ಭಾಸುರಭೂತಿಘುಟಿಕೆಗಳಮಱೆದು ಮು|ನೀಶರೋಡಿತು ಕಂಡಕಡೆಗೆ ||
ದೃಢಮುನಿಗಳ ಧಿಕ್ಕರಿಸುತ ಬಿಟ್ಟಲ್ಲಿ| ಬಿಡದೆ ರಾಜ್ಯವ ಸೂಱೆಗೊಳುತ||
ಸಡಗರದೊಳು ಬಂದು ಕಂಡನು ಬಹುರಮ್ಯ|ವಡೆದಿರ್ದ ಭಾಗೀರಥಿಯ ||
ರಾಕ್ಷಸಭೇದಿ[5]ಯಂಗುಷ್ಠಸಂಭವೆ ಭಾ| ಳಾಕ್ಷನ[6] ಜಡೆಗಳನಿೞಿದು ||
ಮೋಕ್ಷವ ಕುಡಬಂದ ಪರಮಪಾವನೆಯ ನಿ|ರೀಕ್ಷಣೆಗೆಯ್ದ ಮನ್ಮಥನು ||
ಅಗಣಿತಬುದ್ಬುದ ತೆರೆನೊರೆಸುೞಿನಾಭಿ|ಮೊಗವೆತ್ತು ಜಂತು ಮೇಲಕ್ಕ ||
ನೆಗೆವ ನೀರ್ವನಿಗಳು ಮುತ್ತಿನಂದದಿ ಕಣ್ಗೆ | ಸೊಗಯಿಸಿತಾಪುಣ್ಯಗಂಗೆ ||
ವಿಷಪೂರಿತವಾಗಿ ಸಾಸಿರಮೊಗದಿ ಶೋ| ಭಿಸುವ ಫಣೀಂದ್ರನಂದದಲಿ ||
ವಸುಮತಿಯೊಳ್ ಶುಭ್ರಸಂಕಾಶದಿಂ ಪ್ರವ | ಹಿಸುತಿರ್ದಳಾಪುಣ್ಯಗಂಗೆ ||

---

ಕ. ಪ. ಅ—1. ಸೇನೆಯ ಮುಂಭಾಗ. 2. ಹರ್ಷದಿಂದ ಇದ್ದುಕೊಂಡು. 3. ಹಿಮ್ಮೆಟ್ಟದೆ. 4. ವೇಗವಾಗಿ. 5. ವಿಷ್ಣು. 6. ಶಿವ.

ಸಿರಿರಾಣಿಯು ಪೆತ್ತ ಸೊದೆಗಡ[1]ಲಿಳೆಯು ತಾ| ತ್ವರಿಯುದಿ ನೋಡಬಂದಂತೆ||
ಮುರಿಮುರಿದುರ್ಮಿಯಾತಳದಲ್ಲಿ ಮುಂಕೊಂಡು | ಪರಿದಳುತುಂಗಬೆಳ್ಗಂಗೆ ||
ಸೊಂಡಿಲ ನೆಗಹಿ ಭೋರ್ಗರೆವ ನೀರಾನೆಯ|ತಂಡನೆಗೞು[2]ಮಿಾನಕಮಕರ||
ತಂಡತಂಡದೆ ಜಲಚರ ತುಂಬಿ ಕಣ್ಗೆ ಶ್ರೀ | ಖಂಡವಾಗಿರ್ದಳಾಗಂಗೆ ||೩೬||
ಆನದಿಯೊಡಬಲದಲಿ ಮಾೞ್ಪ ಪಿಂಡಪ್ರ | ದಾನವ ಕೈಕೊಳ್ಳಬಂದ ||
ನಾನಾವರ್ಣದ ಪಿತೃಗಳ ದಿವ್ಯವಿ | ಮಾನಗಳಿರ್ದುವಿಕ್ಕೆಲದಿ ||೩೭||
ಮಾನವರುಗಳು ಭಾಗೀರಥಿಜಲದಲ್ಲಿ | ಸ್ನಾನವ ಮಾೞ್ಪರೊಮ್ಮುಖದಿ ||
ಆನನಪಂಚಕವೆರಸಿ[3] ಪೋಪರ್ಗಳ | ವಿಾನಾಂಕ[4] ನೋಡುತ್ತೈತಂದ ||೩೮||
ಮಂದಾಕಿನಿದೇವಿ ತಾಯೆ ನಿಮ್ಮೊಳಗಾನು|ಮಿಂದತತ್ಕ್ಷಣರುದ್ರನಹೆನು||
ಮುಂದಾತನ ಕೂಡೆ ಕಾದುವರಿಲ್ಲೆಂದು| ಕಂದರ್ಪ ನುಡಿದ ಜಾಹ್ನವಿಗೆ||೩೯||
ಕ್ಷಿತಿಯೊಳು ಮಹದಾದಿಪಾತಕ ನಿನ್ನ ಮಾ|ರುತಿಯು ಕಂಡಾಕ್ಷಣ [ಬಯಲು ||
ಅತಿಕಾಂಕ್ಷೆಯಿಂಮಿಂದೊಡೀಶನಹೆನುಭಾಗೀ| ರಥಿನಿನ್ನಹುಗಲಾಱೆತಾಯೇ ||
ನಿಡುಗಣ್ಣಿಂದೆ[5] ನಿಟ್ಟಿಪೆನು ಮದ್ವಲ್ಲಭೆ|ಯಿಡಿಕಿರಿದಿರ್ದ ಬಲ್ಮೊಲೆಯ ||
ಕಿಡಿಗಣ್ಣಾದೊಡದೆಂತು ನೋಡುವೆನೆಂದು|ನುಡಿದ ಕಂದರ್ಪ ಜಾಹ್ನವಿಗೆ||೪೦||
ಭಾಗೀರಥಿ ನಿನ್ನ ಸೋಂಕಿನ ತಂಗಾಳಿ | ತಾಗಿದ ಸಕಲ ಜಂತುಗಳು ||
ಯೋಗತೆವಡೆದು ಸ್ವರ್ಗದ ಸೌಖ್ಯಂಗಳ | ಭೋಗಿಸುತಿಹರು ಸಂತಸದಿ ||
ಸಕಲಜೀವರ್ಕಳೆಲ್ಲರನುದುರ್ವಿಷಯದೆ | ಸೊಕಗೊಳಿಸಿದ ಪಾಪವೆನಗೆ||
ಪ್ರಕಿಟಿತವಾಗಿರ್ದ ಪೋಪುದೆಂದಸಮಸಾ | ಯಕ[6] ಪೇೞ್ದು ಭಾಗೀರಥಿಗೆ ||
ಪರಮಪವಿತ್ರೋದಕವಹಸ್ತದೊಳಾಂತು|ಶಿರದೊಳುಧರಿಸಿಕೊಂಡೀಂಟಿ[7]||
ಸ್ಮರನು ಭಾಗೀರಥಿದೇವಿಗೆ ವಂದಿಸಿ | ತೆರಳಿದ ತುಹಿನಾಚಲಕೆ ||೪೨||
ಗಿಳಿಕೋಗಿಲೆಯುರಸಂಚೆಮಯೂರಮೇಲ| ಳಿವಿಂಡುಸಹಿತಮನ್ಮಥನು ||
ತಳಿರ ರಥವನೇಱಿ ಮುಂದೆ ಪೋಗಲ್ಕಾ | ಚಳವೆಟ್ಟು[8]ಕಣ್ಗೆ ರಂಜಿಸಿತು ||

---

ಕ. ಪ. ಅ—1. ಕ್ಷೀರಸಮುದ್ರ. 2. ಮೊಸಳೆ. 3. ಐದುಮುಖವುಳ್ಳವರಾಗಿ, ಎಂದರೆ ಈಶ್ವರನಂತಾಗಿ. 4. ಮನ್ಮಥ—ಹೇಗೆ? 5. ಉದ್ದವಾದ ಕಣ್ಣು. 6. ಸಮವಲ್ಲದ ಬಾಣಗಳುಳ್ಳವನು, ಮನ್ಮಥನು—ಹೇಗೆ? 7. ಪಾನಮಾಡಿ. 8. ತುಹಿನಾಚಲ, ಹಿಮವತ್ಪರ್ವತ.

ಬಡರಾವಣನಿಂದ ಲಘುವಾದುದಿಲ್ಲ ಪೆ | ರ್ಗಡೆಗೋಲಾದುದುಮಿಲ್ಲ ||
ಮೃಡನ ಕಾರ್ಮುಕವಾದುದಿಲ್ಲೆಂದು ಗುರುತ್ವ| ವಡೆದಿರ್ದುದಾಕುಳರ್ವೆಟ್ಟು ||
ಶಿಲೆಗಳೆಲ್ಲವು ಚಿಂತಾಮಣಿ ನಿರ್ಝರ | ಜಲಗಳೆಲ್ಲವು ಸಿದ್ಧರಸವು ||
ಬೆಳೆದಿರ್ದ ವೃಕ್ಷವೆಲ್ಲವು ಕಲ್ಪಕುಜವೆನೆ | ತೊಳಗಿರ್ದುದಾಕುಳರ್ವೆಟ್ಟು ||
ಅಮರಾಧಿಪ ಭದ್ರಗಜಭುಜಗೇಂದ್ರಸ | ತ್ಕ್ರಮದಿಂದೆ ತಪವಗೆಯ್ವಲ್ಲಿ ||
ರಮಣೀಯವಿಶ್ವರೂಪಾದಂತೆ ಮೆಱೆದುದು | ಹಿಮದೊಟ್ಟಲು ನಗದಲ್ಲಿ ||
ಯಮನಿಯಮವೊದಲಾದಷ್ಟಯೋಗಂಗಳ | ಕ್ರಮದಪ್ಪದಮುನಿನಿಕರ |
ತಮತಮಗಲ್ಲಲ್ಲಿ ಮೆಱೆದಗುಹೆಗಳಸಂ | ಭ್ರಮದಲಿರ್ದುದುಕುಳರ್ವೆಟ್ಟು ||
ತಪ್ಪದೆಬಾಲಕೇಳಿಯೊಳು ಮೇಗುಲುಗುಲು|ಗುಪ್ಪಂಡೆಯ[1] ಹೂಡಿದಂತೆ||
ಒಪ್ಪವಡೆದ ಹಿಮದಿಂಡೆಗಳೆಸೆದುವು | ಪುಷ್ಪ[2]ಬಾಣನ ಕಣ್ಮನಕೆ ||೫೦||
ಬಾಲೇಂದುಮೌಳಿಯ ತಪದ ತೀವ್ರಾಗ್ನಿಯ|ಜ್ವಾಲೆಯೊಳ್ ಕುದಿಗೊಂಡ
[ಕುಳರು ||
ಮೇಲುಷ್ಣೋದಕದ್ರೋಣಿ[3]ಗಳಾಗಿರ್ದ| ಲೀಲೆಯನೇನ ಬಣ್ಣಿಪೆನು ||೫೧||
ಪುರುಷಾಮೃಗಸಿಂಹಶರಭಶಾರ್ದೂಲಭೀ|ಕರಿಸುವಕ್ರೋಡ[4] ಭಲ್ಲೂಕ||
ಮರೆ ಸಾರಂಗ ಕುರಂಗ ಮತಂಗ ಸಂ|ಚರಿಸಿದುವಾಬೆಟ್ಟದೊಳಗೆ ||೫೨||
ಸಿಂಗದ ಮೊಲೆಯುಂಬ ಮಱಿಯಾನೆ ವ್ಯಾಘ್ರಕು|ಚಂಗಳಪೀಱುವಹರಿಣ
ಮುಂಗುರಿಯೊಡನಾಡುವೆಳನಾಗನ ಕಂ|ಡಂಗಜ ವಿಸ್ಮಿತನಾದ ||೫೩||
ರಾಗದ್ವೇಷಂಗಳಿಲ್ಲದೆ ಮೃಗತತಿಮಹಾ|ಯೋಗದೊಳರೆ ಕಂಡುನಗುತೆ ||
ಶ್ರೀಗೌರೀಶನ ವರತಪೋವನ ತಾ | ನಾಗಬೇಕೆಂದ ಮನ್ಮಥನು ||೫೪||
ವರವೋಹನತರಂಗಿಣಿಯೆಂಬ ಕಾವ್ಯವ | ಬರೆದೋದಿ ಕೇಳದ ಜನರ||
ತರಣಿಚಂದ್ರಮರುಳ್ಳನಕಸತ್ಕೃಪೆಯಿತ್ತು | ಪೊರೆವ ಲಕ್ಷ್ಮೀಕಾಂತಬಿಡದೆ||

— ಅಂತು ಸಂಧಿ ೬ಕ್ಕಂ ಪದ ೩೭೪ಕ್ಕಂ ಮಂಗಳಂ —

---

೧. ಪ. ಅ—ಒಂದು ಬಗೆಯ ಮಕ್ಕಳಾಟ. 2. ದ. ಪುಷ್ಪ. 3. ದೊಣೆ. 4. ಹಂದಿ.

# ಏಳನೆಯ ಸಂಧಿ

---

**ಕಾಮದಹನ :—**

ಪನ್ನಗರಿಪುವಾಹನ ಕೃಷ್ಣರಾಯನ | ನಿನ್ನಯ ಹೃದಯದೊಳರಿಸಿ ‖
ಉನ್ನತವಪ್ಪ ಮೇಲ್ಗತಿವೇಳು ಕಾಂತ ಮ | ತ್ಕರ್ಣದ ಜಡ ಪರಿವೆಂತೆ ‖
ರೂಢಿಯೊಳತ್ಯಂತಸುಗುಣೆ ಕೇಳ್ ತಾಟಂಕ[1] |ಸೂಡಿದತವ[2]ಕಿವಿಗೊಳನ‖
ಕೋಡಿಬೀಳ್ವಂತೆ ತುಂಬಿಸುವೆನು ಕಡುರುಚಿ|ಮಾಡಿ ಮೋಹನತರಂಗಿಣಿಯ‖
ಪುಷ್ಪಸುಗಂಧಿನೀಕೇಳಾದೊಡಾಗಿರಿ|ತಪ್ಪಲೊಳ್ ಶಿವನಿರ್ದ ವಿಪಿನ ‖
ಒಪ್ಪವಡೆದು ರಾಜಿಸುತಿರ್ದುದು ಕಂ|ದರ್ಪನ ದೃಗುಯುಗಳಕ್ಕೆ ‖೩‖
ಮುತ್ತನೋಡಲು ಮಾಣಿಕದ್ವಿಜ[3]ಮಾಣಿಕ|ವುತ್ತಮಪಚ್ಚೆಯಂತಿಹುದು‖
ಮುತ್ತಾಸ್ಪದಶ್ರೇಷ್ಠ ಶೋಭಿತನೀಲದ|ಮುತ್ತದ ಮರಗಳೊಪ್ಪಿದುದವು |೪‖
ವನಧರ್ಮರಾಯ ಬೋರೆಯ ಭುಜಭೀಮಾ|ರ್ಜುನಸಹದೇವಧಾರೆಗಳ ‖
ಮನಗೊಂಬ ಬಕುಲ ನೀಲಾಕ್ಷವೃಕ್ಷಂಗಳ|ವನವಿರ್ದುವೇನ ಬಣ್ಣಿಸುವೆ(?)‖
ಎರೆಯಭೂಮಿಯ ಬಾಯ್ದರೆ ಧಾನ್ಯಮಾಸ್ಯರ | ಕರೆವೆಗೋಳಿಗೆ ಗಂಡು [ಮೆರವೆ(?) ‖
ಉರಿವ ಕಬ್ಬಾಳೆಯ ಪೊರೆವ ನಾಮಾಂಕಿತ|ವರವೃಕ್ಷ ವಿಪಿನದೊಳಹವು ‖೬‖
ವಟ ಬಿಲ್ವ ಮಧುಹರೀತಕಿ[4]ಚೂತ ಪಿಚುಮಂದ[5] | ಕುಟಜ[6]ಕಪಿತ್ಥಾ[7] [ಮಲಕ[8] ‖
ಶಠಶಾಲ್ಮಲಿ[9]ಪಿಪ್ಪಲಿ ಮುಖ್ಯ ವೃಕ್ಷಂಗ|ಳಟವಿಯೊಳೆಸೆದುವೇನೆಂಬೆ ‖೭‖
ಹುತವಹನೇತ್ರನಿರ್ದಟವಿಯ ಕಂಡು ಮ|ನ್ಮಥಮಹೀರಮಣ ಮುಂ [ಕೊಂಡು ‖
ಕೃತಕದಿಂದೊಳಪುಗಿಸಿದ ಬೇಗವರ ಚೈತ್ರ | ರಥ ಚಂದ್ರಮಂದಾನಿಲರನು ‖
ಕಳುಹಿದೊಡೊಳಹೊಕ್ಕು ವೃಕ್ಷಂಗಳ ನೆರೆ|ತಳಿರಿಸಿದನು ಚೈತ್ರಬಿಡದೆ‖
ಕುಳಿರ್ವ ಕರದ[10]ಚಂದ್ರ ತಂಗಾಳಿ ಮೆಯ್ಯೊಂಕಿ|ಸುಟಿ'ದುದು ಹರನ [ಸಮ್ಮುಖಕೆ ‖೮‖

---

ಕ. ಪ. ಅ.—1 ಬಿಚ್ಚೋಲೆ. 2. ನಿನ್ನ. 3. ಶ್ರೇಷ್ಠವಾದ. 4. ಅಳಲೆ ಮರ. 5. ಬೇವಿನ ಮರ. 6. ಕೊಡಸಿಗೆ. 7. ಬೇಲ, ಬೆಳವಲಮರ. 8. ನೆಲ್ಲಿ ಮರ. 9. ಎಲವದ ಮರ. 10. ಶೀತಕಿರಣನಾದ.

ಫುಲ್ಲ[1]ಶರನ ಮಾರ್ಬಲ ಬನದೊಳು ಪೊಕ್ಕು | ಚೆಲ್ಲವರಿದು ಪೀಡಿಸಲು ||
ಪಲ್ಲವಿಸಲು ಸದನದೊಳಿರ್ದ ರಿಸಿಗಳು | ಗಲ್ಲಕೆ[2]ಕರವ ಸಾರ್ಚಿದರು ||೧೦||

ಅಲ್ಲಿ ಗಲ್ಲಿಗೆ ಜಾಜಿಸುರ ಹೊನ್ನೆ ಸಂಪಗೆ | ಮಲ್ಲಿಗೆ ಹೊಗರೇಱಿದುವು[3] ||
ಜಲ್ಲಿ[4]ದುಂಬಿಗಳ ಝುಂಕಾರಕ್ಕೆ ಮುನಿಜನ | ಡಿಳ್ಳಿಸಿ[5]ತೇನ ಹೇಳುವೆನು ||೧೧||

ಮಧುಮಾಸವಲ್ಲ ವಸಂತ ಬಂದಿದೆ ನೋಡಿ | ವಿಧುವು[6] ಮೂಡಿತು [ರಾತ್ರಿಯಲ್ಲಿ ||
ಇದು ಮದನೋತ್ಪಾತವೆಂದು ಮುನೀಂದ್ರರು | ವಧುಗಳನಮರ್ದಪ್ಪಿದರು ||

ಚಟುಲಕಾಮೋದ್ದೀಪನದಿಂದೆ ಕಡುಧೂರ್ತ | ವಟುಗಳುರಿಸಿಕುವರಿಯರ ||
ಬಟುಮೊಲೆಗಳ ಕೈದುಡುಕಿದುದು ಕೇಳಲೆ | ಸಿಟಿಲಾಕ್ಷ[7]ತಪವಿರ್ದ ಬನದಿ ||

ವಾತೋದ್ಧಟ್ಟಣ[8]ದಿಂದತಿದೂರದಿ | ಕೇತಕಿಗಱಿಗಳೈತಂದು ||
ಈತರುಣಿಗಳೆರ್ದೆಯಲಿ ತಾಗಿ ನಡಲು | ತ್ಪಾತವಾದುದು ತಪೋವನದಿ ||೧೨

ನನೆಗೋಲ[9]ನುಪಟಳದಲಿ ಭ್ರಾಂತಿಗೊಂಡಿರ್ದ | ವನಚರ ಪೂಸಂಪಗೆಯ ||
ಕೊನೆಗಳ ಮುರಿದಿಡಲಂಜಿ ತಾಪಸರೆಲೆ | ವನೆಗಾತಿಯರನಪ್ಪಿದರು ||೧೪||

ಗಳರವಗಳ ಮಾಟ್ಪ ಬಗೆದರೆ ಹಲುಬುವ | ಕೊಳರ್ವಕ್ಕಿ ಕೆಲವು [ಲಾವುಗೆಯು ||
ಬಳಸದ ದನಿಗೇಳ್ದ ಮುನಿಗಳ ಚಿತ್ತ | ತ್ತಳವಾದು[10]ದೇಸ ಹೇಳುವೆನು ||

[ಹಲುಬುವ ಗೌಜು ಕರ್ಕಟ ಕಪ್ಪುರಸೆಟ್ಟೆ | ಚೆಲುವ ಜೇವ ಕುಕ್ಕುಟಗ ||
ಕಲುಕುಟಕಾದಿ ತೋಟದ ಪಕ್ಕಿಗಳ ಕೊರ | ಲುಲುಹಾದುದಾತಪೋವನದಿ] ||

ಬಟ್ಟವಕ್ಕಿ[11]ಗಳಂಚೆಕೊಂಚೆಸಂಚರಿಸಿ ಬೊಬ್ಬಿಟ್ಟುದ ಕೇಳಿತಾಪಸರು ||
ಕೆಟ್ಟರು ಕೆಟ್ಟುದು ಸತ್ಯವೆಂದಲಸದೆ | ಬಟ್ಟಬ ನುಡಿದುದಾಬನದಿ ||೧೮||

ಈತನ ಬಳಸಿದ ಸನ್ಮುನಿವರರು ಪ್ರ | ಯಾಸವಾಂತರು ಕಂತುಬಲದಿ ||
ಆಸಮಯದಲಿ ಮನ್ಮಥ ಮುಂದೆ ನಡೆದ ವಿಲಾಸವನೇನ ಹೇಳುವೆನು ||೧೯||

---

ಕ. ಪ. ಅ—1. ಅರಳಿದ ಹೂವು. 2. ಕೆನ್ನೆಗೆ. 3. ಕಾಂತಿಹೊಂದಿದುವು. 4. ಚೌರಿಯು ಅಥವಾ ಕುಚ್ಚಿನಹಾಗೆ ಗುಂಪಾಗಿ ಬರುವ. 5. ನಡುಗಿ ಹೋಯಿತು. 6. ಚಂದ್ರ 7. ಹಣೆಯಲ್ಲಿ ಕಣ್ಣಿರುವವನು–ಯಾರು? 8. ಹೊಡೆತ. 9. ಹೂವಿನ ಬಾಣವುಳ್ಳ ಮನ್ಮಥ. 10. ತತ್ತರಿಸಿ ಹೋಯಿತು. 11. ಚಕ್ರವಾಕ.

ಉಗ್ಗಡಿಸುವ[1] ರಾಜಕೀರ ಜಾಣ್ಣಕ್ಕಿಗ | ಳಗ್ಗಡೆ[2]ಯೊಳುಮುಂದೆ ಮೆ [ಱೆಯೆ ||
ಹೆಗ್ಗಾಳೆ ಕಲಕಂಠ ರಭಸದಿಂದಡರಿದ | ಭರ್ಗನ[3]ವರತಪೋವನಕೆ ||೨೧||
ಸಂದಿಸಿ ಹೊಗುವೆನೆಂದೆನಲು ಬಾಗಿಲೊಳಿರ್ದ | ನಂದೀಶ ಮುಱಿಯಲಿ [ಕ್ಕಿದನು ||
ಕಂದಿದ ಮೋರೆಯೊಳೆಸೆವ ಕಂದರ್ಪಗೆ | ಬಂದಿದಿರಾದಳಾಗಿರಿಜೆ ||೨೨||
ಬೆಸಗೊಂಡಳಾಕ್ಷಣ ಕಾಮ ನೀ ಬಾಳಕ | ರ್ಕಶಗೊಂಡು ಬಂದುದೇ [ಕೆನಲು ||
ಅಸಮಾಕ್ಷನ[4]ಮೇಲೆ ಕುಸುಮಶರಂಗಳ | ನಿಸಬಂದೆ ತಾನೆಂದು ನುಡಿದ ||೨೩||
ಗೊಲೆಗೊಳಿಸಿದ[5] ಪುಷ್ಪಚಾಪ ಸರೋಜನೈ | ದಿಲೆಗೋಲ್ಗಳ ಕುಸುಕಿರಿದು ||
ತಲೆ ಬಲ್ಲಿತೆಂದು ಕಲ್ಲನೆ ಹಾಯ ಬೇಡ ಹೋ | ಗೆಲೊ ಪಾಪಿ ಮನ್ಮಥ ಮನಗೆ ||
ರಜ್ಜು[6]ವದೆತ್ತ ದಳ್ಳುರಿಗರೋತ್ತಮ[7]ನೆತ್ತ | ವಜ್ರವೆತ್ತಾಲಿಕಲ್ಲೆತ್ತ ||
ಮುಜ್ಜಿಪಿತೇಶ್ವರನೆತ್ತ ನೀನೆತ್ತ ಕೇಳ್ | ದುರ್ಜನಿ ತೆರಳೆಂದಳೊಲಿದು ||
ನೋಡಪ್ಪ ನನ್ನ ನಾಪಸವ ನಿನ್ನಯ ಮೊಗ | ನೋಡದೆ ತಪಗೆಯ್ವ [ಶಿವನ ||
ಗೂಢಪೃತ್ಯಕ್ಕಮುಲವನೊಡೆಯೆಚ್ಚು ನಿನಗೆ ಕೈ | ಗೂಡದೆ ಬಿಡನೆಂದ ನಗುತ ||
ಇದು ನೀನೆನಗೋಸುಗ ಧೂರ್ಜಟಿಯ ಮೇ | ಲೊಂದು ಹೂಸರಲಿಂದ [ಲೆಸೆಯೆ ||
ನೊಂದು ಲಲಾಟನೇತ್ರಜ ತೆಱೆದರೆ ನೀನು | ಬೆಂದುಹೋದವೆ ಬೇಡ ಮಗನೆ ||
ಬರಂತೆ ನಿನ್ನೊಳೀಶ್ವರ ಕೂಡಿದರೆ ಸತ್ಕು | ಮಾರ ಪುಟ್ಟುವ ಪುಟ್ಟಲೊಡನೆ ||
ತಾರಕನದಟ[8]ಖಂಡಿಸನೆಂದು ಸುರರಿಗೆ | ನಾರಾಯಣನು ಪೇಳಿದನು ||೨೪||
ಕೇಶವ ಪರಮೇಷ್ಠಿ[9]ಗಳಪ್ಪಣೆಯಿಂದೆ | ನಾ ಸಂವರಿಸಿಕೊಂಡು ಬಂದೆ ||
ಪೂಸರಲಿಂದೆಚ್ಚು ಶಿವನ ತಂದೀಗ ಸಂ | ಭಾಷಣೆಗೆಯ್ಯುವೆ ನಿಮಗೆ ||೨೫||

---

ಕ. ಪ. ಅ.—1. ಹೊಗಳುವ. 2. ಎರಡು ಕಡೆ. 3 ಶಿವನ.
4. ಶಿವನ; ಹೇಗೆ? 5. ಸಿದ್ಧಮಾಡಿದ, ಗೊಲೆ = ಧನುಸ್ಸಿನ ಕೊಪ್ಪು.
6. ಹಗ್ಗ. 7. ದಳ್ಳುರಿಯಂತೆ ಉರಿಯುತ್ತಿರುವ ವಿಷಜ್ವಾಲೆಯಿಂದ ಮಹಿಮೆ ಹೊಂದಿದ ಕೃಷ್ಣಸರ್ಪ (?). 8. ಪರಾಕ್ರಮ. 9. ಬ್ರಹ್ಮ.

[ಜನಸುತೆ ತಾಯೆ ನಿನ್ನೊಳು ರುದ್ರನೆರೆದೊಡೆ|ನಿನಗೊರ್ವಸತ್ಪುತ್ರನಹನು||
ಘನಕೌರ್ಯಯುತನಾದ ಖಳನ ಖಂಡಿಸಿ ಸುರ|ಜನರಿಗೆ ಸುಖವೀವನವನು] ||
ಏಣೀನಿಭಾಯತೇಕ್ಷಣೆ[1] ಕೇಳು ಪಾರ್ವತಿ | ಬಾಣಪಂಚಕನ ಕುಸ್ತರಿಸಿ ||
ಕೇಣವಿಲ್ಲದೆ ತನ್ನ ಮುಖಗೊಂಡು ನಂದೀಶ | ಕಾಣದಂತೊಳಪುಗಿಸಿದಳು||
ತಾನದಲ್ಲವಳಂತೆ ಸಾರ್ದಳು ಪುರುಷನಿ | ಧಾನ ಶಂಭುವಿನ ಬೆಂಗಡೆಯ||
ನಾನಾಶುಶ್ರೂಷೆಯ ಮಾಡುತಿರ್ದಳು | ಮೇನಕಾತ್ಮಜೆ ಮುನ್ನಿನಂತೆ ||೩೧||
ಗಂಡಲರ್ವಕ್ಕಿ ತಿಱುವಾಂತ[2] ಕುಸುಮಕೋ| ದಂಡವನೆಡಗೆಯ್ಯೊಳಾಂತು||
ಚಂಡವಿಕ್ರಮ ನೆಯ್ದಿಲೆಗೋಲ ತಿರುಹುತ | ಕಂಡನು ಕುಳಿತಿರ್ದ ಶಿವನ ||
ಕಂಜ[3]ಬಾಂಧವಚಂದ್ರ ಶತಕೋಟಿ ತೇಜಃ|ಪುಂಜ ಶಾರ್ದೂಲಚರ್ಮದಲಿ||
ಸಂಜೋಗದೆ[4] ಕುಳಿತಿರ್ದ ತಪೋಗ್ರತೆ|ಗಂಜದೆ ಕಾಮ ನಿಟ್ಟಿಸಿದ ||೩೨||
ಬಿಗಿದ ಪದ್ಮಾಸನ ನಾಸಿಕಾಗ್ರದ ದೃಗು | ಯುಗಳ ಸಂಚಲಿಸದ ಚಿತ್ತ ||
ಬಗೆದೋಱುತಿಹ ರಾಮನಾಮವ ಜಾನಿಪ | ಜಗದೆಱೆಯನ ಕಾವ ಕಂಡ ||
[ಭೂತನಾಥನು[5] ನೋಡದಿರಲುತ್ತ [illegible] | ಕೇತನ ಮದಮಹಾರಾಯ||
ಕಾತುರದಿಂದಿರ್ದಂದು ಕಂಡನು ರತಿ| ಪ್ರೀತ ಮೂಲೋಕವಿಖ್ಯಾತ]||೩೩||
ಯತಿಗಳ ಬಗೆಗೆ ಗೋಚರಿಸದೆ ವಾಚಿಪ | ಶ್ರುತಿಗಳ್ಗೆ ನಿರುಪಮನೆನಿಸಿ||
ಅತಿರೌದ್ರಾಕಾರವಡೆದಭವನ ಕಂಡು | ರತಿರಾಜ ಹವಣಿಸಿ ನಿಂದ ||೩೪||
ವಿಲಸಿತ ಕುಸುಮಕೋದಂಡಕ್ಕೆ ಬಿಗಿದ ಕ|ಮ್ಮಲರ್ವಕ್ಕಿವೆದೆಯ[6]
[ಜೇವೊಡೆದು[7] ||
ಗೆಲವಾಂತು ಕಿವಿವರೆದೆಗೆದೆಚ್ಚ ನೀಲೋ | ತ್ಪಲಬಾಣದಿಂದಲೀಶ್ವರನ ||೩೫||
ತಾಗಿದು ಮರ್ಮಸ್ಥಾನವ ಕಡಿದು ವಿ | ಭಾಗಿಸೆ ದೃಢಚಿತ್ತವಿಡಿದು ||
ಭೋಗಿಭೂಷಣ ಕೋಪವ ತಾಳಿ ಕಿಡಿಕಿಡಿ | ಯೋಗಿ ಕೆಂಗಿಡಿಗಣ್ಣ ತೆಱೆದ||
ಭುಗುಭುಗು ಛಟಿಛಟಿಲೆಂದು ಲೋಚನದಿಂ|ದೊಗೆದ ದಳ್ಳುರಿ ಸುತ್ತಿ ಸ್ಮರನ
ಬಿಗಿದ ಬತ್ತಳಿಕೆ ಕರ್ವುವಿಲ್ಲು ಸಹಿತೆ ಸು | ಟ್ಟುಗಿದುದು ಉರಿ ನಭಸ್ತಳಕೆ||

---

ಕ. ಪ. ಅ—1. ಜಿಂಕೆಯಹಾಗೆ ವಿಶಾಲವಾದ ನೇತ್ರವುಳ್ಳವಳೇ. 2. ಗಂಡು ದುಂಬಿಗಳನ್ನು ಹಗ್ಗವಾಗಿ ಉಳ್ಳ; ಅಲರ್ವಕ್ಕಿ-ದುಂಬಿ. 3. ಕಮಲ. 4. ತೀಕ್ಷ್ಣವಾದ ಯೋಗದಲ್ಲಿ. 5. ರುದ್ರ. 6. ಹೆದೆ, ಬಿಲ್ಲಿನ ಹಗ್ಗ. 7 ಟಂಕಾರಮಾಡಿ; ಜ್ಯೇ—ದ್ಭ. ಜ್ಯಾ

ಒಂದು ಬಿಲ್ಲೈದಲಗೋಲಿನ[1] ಮೊನೆಯೊಳೈ | ತಂದು ಮೂಜಗವ
[ಶಿಕ್ಷಿಸುವ ||
ಕಂದರ್ಪದೇಹ ಹರನ ಕಣ್ಣುರಿಯಿಂದ | ಬೆಂದುದು ನಿಮಿಷಮಾತ್ರದಲಿ ||೪೦||
ಕರಗಸವೆತ್ತ ಕಂದಳ[2]ಯೆತ್ತ ಕಾಲಸಂ | ಹರನೆತ್ತ ಕಂದರ್ಪನೆತ್ತ ||
ತರವಲ್ಲದ ಕಾರ್ಯವ ನೆಗಟ್ಟಿಡೆ ಸುರ | ನರನಾಗಲೋಕ ಮೆಚ್ಚುವುದೇ||
ಗಜವೆತ್ತ ಕಂಠೀರವವೆತ್ತ ರಜನಿಯು | ವೃಜವೆತ್ತ ಭಾಸ್ಕರನೆತ್ತ ||
ಭುಜಗಭೂಷಣನೆತ್ತ ಸ್ಮರನೆತ್ತ ಸೆಣಸಲ್ಕೆ | ತ್ರಿಜಗದೊಳಾರು ಮೆಚ್ಚುವರು
ನಿಜವಾಗಿ ತನ್ನ ಸತ್ವವ ತಾನಱಿಯದೆ | ಭುಜಬಲವಿಕ್ರಮರೊಡನೆ ||
ಗಜಬಜದಿಂದೆ ಕಾದಿದೊಡೆಯಂತಹುದು ಪಂ|ಕಜಲೋಚನೆ ಚಿತ್ತೈಸು||೪೩||
ವರಮೋಹನತರಂಗಿಣಿಯೆಂಬ ಕಾವ್ಯವ | ಬರೆದೋದಿ ಕೇಳದ ಜನರ ||
ತರಣಿ ಚಂದ್ರಮರುಳ್ಳನಕ ಸತ್ಕೃಪೆಯಿತ್ತು |ಪೊರೆವ ಲಕ್ಷ್ಮೀಕಾಂತ ಬಿಡದೆ||

— ಅಂತು ಸಂಧಿ ೭ಕ್ಕಂ ಪದ ೪೫ಕ್ಕಂ ಮಂಗಳಂ —

## ಎಂಟನೆಯ ಸಂಧಿ

**ರತಿಯ ಪ್ರಲಾಪ —**

ವೇದಶ್ರುತಿಯ ಬಾಯ ಬೀಯಗ ತರ್ಕವಿ| ಚ್ಛೇದ ಸಜ್ಜನಸಮಾಧಿಗಳ||
ಭೇದಕ್ಕೆ ನಿಲುಕದ ಶ್ರೀಕೃಷ್ಣರಾಯನ | ಪಾದವ ಕೂರ್ತು ಪೇಳ್ವೆ ಕತೆಯ ||೧||
ಕುವಲಯದಳನೇತ್ರ ಕೇಳು ಕೇವಲ ವೈ | ಷ್ಣವರಾಯರುಗಳರ್ದೆಸೆಯ||
ಪವನ ಬಂದೆಱಗೆ ಸನ್ಮತಿವೆತ್ತು ಪೇಳುವೆ | ಶ್ರವಣಕಾನಂದವೆಂದೆನಿಸಿ ||೨||
ಕಂದರ್ಪನ ದೇಹ ಹತವಾಗೆ ಮರುತ, ಸು|ಗಂಧವಾಸನೆಯ ಕಂಡಱಿದು||
ಸಂದುದು [3]ನಿಶ್ಚಯವಹುದೆಂದು ರತಿ ದುಃಕ್ಕ | ದಿಂದೆ ಪ್ರಳಾಪಿಸುತಿರಲು,||೩||
ರಾಜಶೇಖರನುರಿಗಣ್ಣಿಂದ ಸ್ಮರಗೆ ಪ|ರಾಜಯವಾಯ್ತೆಂದು ರತಿಗೆ ||
ಮಾಜದೆ ಪೇಳಲಾಕ್ಷಣ ಬಂದಳು ಸ | ರೋಜಾಕ್ಷಿ ಶಿವನಿದ್ದ ಬಳಿಗೆ ||೪||
ಬಂದ ಮಾತ್ರದಿ ನೋಡಿ ಕಂಡಳು ರುದ್ರನ ಮುಂದೆಸೆಯಲಿ ಬಿಸಿವಡೆದ||

ಕ. ಪ. ಅ—1. ಐದಲಗೋಲು = ಅರವಿಂದ, ಅಶೋಕ, ಚೂತ, ನವಮಲ್ಲಿಕೆ, ನೀಲೋತ್ಪಲಗಳೆಂಬ ಐದು ಬಾಣಗಳು. 2. ಬಾಳೆಯಮರ.
3. ಧಾ. ಸಲ್—ಮರಣೇ.

ಗಂಧಸಂಯುಕ್ತ ಭಸ್ಮದಿ ತನ್ನ ವದನಾರ | ವಿಂದವ ಚಾಚಿದಳಲ್ಲುತ ||೫||
ಬಿಸರುಹದಳನೇತ್ರೆಯು ಕಣ್ಣ ನೀರಿಂದ | ಕೇಸರುಹಾದುದೊಡಲ ತಾಪದಲಿ||
ರಸವಱಿತೊಡನೆ[1] ಭಸ್ಮೀಕೃತವಾಯ್ತು ಬ | ಣ್ಣಿಸ ಬಲ್ಲರಾರು ದುಃಖವನು||
ಗಿಳಿವೇಣಿಗಳೆಲ್ಲಿ ಕವಿದಲ್ಲಿ ಮೊರೆವ ಬಾ | ಲಳಿವೆಣೆ ಪೂಗೋಲ್ಗಳೆಲ್ಲಿ||
ತಳರ ಖಂಡೆಯ[2] ವಿಮಾನಧ್ವಜವೆಲ್ಲಿ ತೋಱೆಂದು ಕಳೆಗುಂದಿ ಹಲುಬಿದಳಲ್ಲುತ||
ವೀರಚಕೆನ್ಮುರಿಯು ಪೆರ್ದುಱುಬೆಲ್ಲಿ ಪೆಱೆಯಂತೆ ರಾರಾಜಿಸ ನೊಸಲೆಲ್ಲಿ||
ಧೀರರ ಸಿಂಗಾಡಿಯು ಪೋಲ್ವ ಪುರ್ಬೆಲ್ಲಿ | ತೋಱೆಂದು ಹಲುಬಿದಳಲ್ಲುತ ||
ಸಕಲಗಸಾಧ್ಯ ಸಿನ್ನಯ ಪತಾಕೆಯೊಳಹ| ಮಕರಾಯುತನೇತ್ರವೆಲ್ಲಿ ||
ವಿಕಸಿತತಿಲಪುಷ್ಪದಂತೆ ರಂಜಿಸುವ ನಾ | ಸಿಕವೆಲ್ಲಿ ತೋಱೆಂದಳಲ್ಲುತ ||೯
ವರ್ಣಾಧಿಕ ಶ್ರೀಕಾರಂಗಳಂತಿರ್ಪ | ಕರ್ಣಂಗಳೆಲ್ಲಿ ರಂಜಿಸುವ ||
ಸ್ವರ್ಣದರ್ಪಣವನೇಳಿಪ ಕದಪುಗಳೆಲ್ಲಿ | ಮನ್ಮಥ ತೋಱೆಂದಳಲ್ಲುತ ||
ಹೊದರಾಂತ ಕೊನೆವಿಾಸೆಯೆಲ್ಲಿ ಪವಳದ ಪೋಲ್ವಧರವೆಲ್ಲಿ ರಂಜಿಸುವ||
ವದನದೊಳಮಳರತ್ನಗಳಂತೆ ರಾಜಿಪ | ರದನವ[4] ತೋಱೆಂದಳಲ್ಲುತ ||೧೧||
ಅಂದವಡೆದ ಮಿಸುನಿಯ[5] ಶಂಖದಂತಿರ್ಪ | ಕಂಧರದೆ ಮಾಱೆಯೆಲ್ಲಿ||
ಸೌಂದರತೆಯನಾಂತ ಭುಜಯುಗಳವ ತೋ|ಱೆಂದು ಹಲುಬಿದಳ್ ಬೆದೆವಿಡದೆ||
ಎಲ್ಲಾ ಕಲೆಗಳನೊಳಕೊಂದು ರಾಜಿಪವೊಲ್ಲದೆಗುಱುಹೆಲ್ಲಿ ತೋಱು ||
ಸಲ್ಲಲಿತಮಳ ತಳೋದರ ಸುಳಿನಾಭಿ | ಯೊಲ್ಲವ ತೋಱೆಂದಳಲ್ಲುತ ||
ಅಪ್ಪುವ ನಳಿತೋಳ್ಗಳೆಲ್ಲಿ ಮುತ್ತು ಚದ ಮೇಲೊಪ್ಪುವ ಸಿರಿಗೆಯ್ಗಳೆಲ್ಲಿ||
ಬೆಳ್ಪುವಡೆದ ಸೆಳ್ಳುಗುರ್ಗಳ ತೋಱೆಂದು ನೆಪ್ಪಿನೊಳ್ ಬೆದಕಿ ನೋಡಿದಳು||
ಎಳವರೆಯುದ[6] ಸಿಂಹಮಧ್ಯದಂತೊಪ್ಪುವ ಸೆಳ್ನಡುವೆಲ್ಲಿಗೆ ಹೋಯ್ತು ||
ಪೊಳೆಯುವ ಪೊಂಬಾಳೆದೊಡೆಯೆಲ್ಲಿ ಹೋಯ್ತೆಂದು | ಹಲುಬಿದಳಲ್ಲುತಾ
[ಯುತಾಕ್ಷಿ ||೧೫||
ತುಱುಗಿದ ಬಾಣತೂಣೀರ[7] ದಂತೊಪ್ಪುವ | ಕಿಱುದೊಡೆ ಮೊಗಳವದೆಲ್ಲಿ||
ಮಿಱುಗುವಚರಣಾಂಗುಲಿಯೆಲ್ಲಿ ತೋಱೆಂದು ಮಱುಗಿದಳ್ ಬುಜಾಯುತಾಕ್ಷಿ||
ಪಾತಕ ಹರನೊಳು ಸೆಣಸಬೇಡೆನಲಾಗಿ ಮಾತಾಡಲೊಲ್ಲದ ಮುನಿಸೋ||

---

ಕ. ಪ. ಅ—1 ರಸವು ಬತ್ತಿಹೋಗಿ. 2 ಖಡ್ಗ, ಕತ್ತಿ. 3 ಚಂದ್ರ. 4. ಹಲ್ಲನ್ನು. 5. ಚಿನ್ನ 6 ಚಿಕ್ಕಪ್ರಾಯದ. 7. ಬತ್ತಳಿಕೆ.

ನಾ ತಾಳಬಲ್ಲೆನೆ ವಿರಹವನೆಂದಾಕೆ | ಭೂತಳದೊಳು ಹೊರಳಿದಳು ||೧೭||
[ಭೂಷನೆ ಸಕಲಕಲಾಪನೆ ಸತ್ಕುಲ | ದೀಪನೆ ಲಲಿತಪುಂಡ್ರೇಕ್ಷು[1] ||
ಚಾಪನೆ ಮೋಹನರೂಪನೆ ನಿನ್ನ ಬಿಟ್ಟೆಂತಿರಿಯಲಿ ಬಾಳ್ವೆ ಜೀಯ[2] ||೧೮||
ಪಂತಿಯ ಮಾಟದ ಚಂದ್ರಮನಿಲ್ಲ ಸರವೇ | ಕಾಂತವಲಿಪ ಮಂದಮಾರುತ||
ಇಂತಾಗಲಪ್ಪುದೆ ! ನಿನ್ನನೊರ್ಪನ ಕಾ | ಲಾಂತಕಗೊಪ್ಪಿಸಿ ಕೊಟ್ಟು] ||೧೯||
ಬೋಧಿಸಿ ಪೇಳ್ದೆನ್ನಯ ಮಾತ ವಿಷವೆಂದಾ ಸ್ವಾದಿಸಲೊಲ್ಲದೆ [ಬಿಸುಟು ||
ವಾದಿಗಳಾಚಾರಿಯನಾಗಿ ಹರನೊಳು | ಕಾದಿ ಬೂದಿಯನೆಯ್ದಿದೆಮಾ||೨೦||
ಹುತವಹನೆಡೆಯೊಳು ಹುದುಗಿರ್ದ ಚಿನ್ನಕ್ಕೆ ಹಿತವಾಗಿ ಬಣ್ಣ ಬಂದಂತೆ||
ಚಿತಭಸ್ಮಲಿಪ್ತದೇಹವಿರ್ದುದು ಪೂ | ರಿತಹೇಮಕುಂಡಲದಂತೆ ||೨೧||
ಹೊಳೆವ ಪೊಂಬೊಗರಿಗೆ ಬೆಟ್ಟಕ್ಕೆ ಕೈಯಾಂತ ಬೆಳಗಿನೊಡೊಪ್ಪುವೆತ್ತ
ಅಳಲಿನ ರತಿಯುರಸ್ಥಳದ ಭಸ್ಮಾಂಕಿತ | ಕುಚಕುಂಭಂಗಳೊಪ್ಪಿದುವು ||೨೨||
ಮಾಳ್ದುಂಬಿ ನವ್ಯೋಲಪರ್ಣಿಕೆಯೊಳ್ ಬಿದ್ದುದು | ಗಳ್ ಬೆಳರ್ [ಣ್ಣವಾದಂತೆ ||
ತುಱುಬೊಂದಾಕಾರವಳ್ದು ಭಸ್ಮಾಂಕಿತ | ನಿಱಿಗುರುಳ್ ಮೊಗವ [ಮುಚ್ಚಿದುವು ||೨೩||
ಕಕ್ಕಸವೆತ್ತ ಬಲ್ಸೃತಿ ಮುತಿ ತೆರಪ | ಲಕ್ಕಸಹಿಯದಾಯತನ ||
ದುಕ್ಕವಿನ್ನೆಂತುಟೊ ನೋಳ್ಪರ ಕಣ್ಣ ಸೀರೊಕ್ಕುವದೇನ ಪೇಳುವೆನು ||
ಅಱಿವವರಱಿತಿರ್ದರು ರತಿಕಾಂತನ | ಸಱನಳಿಸುವ ಪ್ರಳಾಪವಲಿ ||
ಬಳಿಕ ಕಂಡೀಶ್ವರಿ ಗಂಧೋದಕದಿಂದೆ | ತೊಳೆದಳು ರತಿಯ ಸುಹೊಮ್ಮಗವ||
ಮುತ್ತಿನ ಸೆಱಗ ಮುಚ್ಚಿದಳು ಬಲ್ಮೊಲೆಗೆ ಪಿನ್ನೆತ್ತಿಯೊಳ್ ತುಱು [ಬಸಿಕ್ಕಿದಳು ||
ಹತ್ತಿದ ಮೆಯ್ಯೊಳ್ದೂಳ ಕೊಡಹಿ ಕರವ ಪಿಡಿದೆತ್ತಿದಳ್ ಬುಜಾಯತಾಕ್ಷಿ ||೨೪
ಬಂದೊಂದ ಹಱಿವಿಸಲೇಕೆ ನಿನ್ನಾಳ್ದನ | ಕೊಂದ ಮದೀಯವಲ್ಲಭನ ||
ಸಂದಯಶನನ ಮಾಡೇೞೆಂದು ಚರಣಾರ | ವಿಂದಕೆ ಪೊಡೆಮಡಿಸಿದಳು ||
ಲೋಲಲೋಚನೆ ಕಣ್ಣಸೀರಿಂದೆ ಪಾದಪ್ರ | ಕ್ಷಾಲನೆಗೆಯ್ದಂಘ್ರಿಯುಗವ||

---

ಕ. ಪ. ಆ–1. ಪಟಾಪಟಿಯ ಕಬ್ಬಿನ ಬಿಲ್ಲಿಂದ ಮನೋಹರನಾದವನೇ. 2. ಸ್ವಾಮಿ.

ನೀಲೋತ್ಪಲದಿಂದೆ ಪೂಜೆಯ ವಿರಚಿಸಿ|ದಾಲತಾಂಗಿಯ ಕಂಡ ಹರನು ॥
ನುಡಿಸಿದ ಮಗಳೆ ನಿನ್ನಾಳ್ದನೆನ್ನಯ ತಪ | ಗೆಡಿಸಿದ ಕಾರಣದಿಂದೆ ॥
ಕಿಡಿ ಸುರಿವಕ್ಷಿಯಿಂದುರುಹಿದೆ ನೀಂದುಃಖ | ಪಡಬೇಡೆವೆಂದು ಪೇಳಿದನು ॥
ಸಿರಿಕರಯುಗಳದಿಂ ಪಿಡಿದೆತ್ತಿ ಪರಮತಾ|ತ್ಪರಿಯದೆ ಮೊಗವನಿಟ್ಟಿಸಲು ॥
ಸುರಿವ ಕಂಬನಿಯಿಂದೆ ಬಿನ್ನಹಗೆಯ್ದಳು | ಕರಿಚರ್ಮಾಂಬರ[1]ನೊಡನೆ ॥
ಬಂದಪರಾಧವ ಕಾಯರೆ ಕರುಣಾ|ಸಿಂಧುಗಳಾಗಿಯಿರ್ದವರು ॥
ನೊಂದು ಸ್ವೈರಣೆಗೊಂಡುದಿಲ್ಲ ಕೇಳೀಶ್ವರ | ಕಂದರ್ಪನನೆಂತುಮುರಿದೆ ॥
ಕೊಲ್ಲಲುದ್ಯೋಗಿಸಲಪ್ಪುದೆ ರಸದಾಳಿ | ವಿಲ್ಲ[2]ನಂತವರುಗಳಹರೆ ॥
ಬಲ್ಲದ ಹೆಣ್ಣುಗಂಡುಗಳನೊಂದಾಗಿಸ | ಬಲ್ಲಭಾವಜ್ಞರ ತೋಱು ॥೩೨॥
ಪಾಪಕ್ಷಯಕೆಂದು ಗಂಗೆಯೊಳ್ಮಿಂದರೆ | ಪಾಪಿಯು ಮೊಸಳೆ ತಿಂದಂತೆ ॥
/ ತಾಪಸ್ಥ ಸುರರಿಂಗೆ ಹಿತಗೈಯ ಬಂದ ಪ್ರಾ|ಣೋಪವನನುರಿಹಿದೆ ನೀನು ॥೩೩॥
ನಾರಾಯಣನ ವಾಕ್ಯವ ಕೇಳಿ ತ್ರಿದಶೋಪ|ಕಾರಕ್ಕೆ ಸ್ಮರ ತನ್ನನೆಚ್ಚ ॥
ಬಾರದ ಬಟ್ಟೆಯ ಬಳಿವಿಡಿದನ[3]ಬಿಟ್ಟು | ನೀರದಿ ಬಾಳೆಂದು ನುಡಿದ ॥
ಪದಿನಾಲ್ಕುಜಗದ ಜನಂಗಳು ಕರುಣಾ | ನಿಧಿಯೆಂದು ನಿನ್ನ ಕೀರ್ತಿಪರು ॥
ಕುದಿಗಣ್ಣೊ[4]ಳೆನ್ನಾಳ್ದನ ಸುಟ್ಟುನನಗೊಂದು|ಬದುಕಿನ ತೆಱನ ಪೇಳ್ದಪಿರೇ ॥
ಸರ್ವರೊಳಗೆ ಮುತ್ತೈದೆಯಾಗಿರ್ದ ವೈ | ಧವ್ಯವನಾಂತು ಬಾಳುವೆನೆ ॥
ಗರ್ವದ ನುಡಿಯಲ್ಲ ತನಗೆ ತನ್ನಾಳ್ದನ | ತರ್ವಾಯ ಮಾಡೆಂದಳೞುತ ॥
ಕೊಂಡವ ತೋಡಿಸಬೇಡ ಶುಷ್ಕವ[5]ಸುಟ್ಟು | ಕೆಂಡವ ಮಾಡಿಸಬೇಡ ॥
ಖಂಡೇಂದುಶೇಖರ ಕಣ್ಗಿಚ್ಚಿನಿಂದೆನ್ನ | ಗಂಡನನುರುಹಿದಂತುರುಹು ॥೩೪॥
ಎಂದೆನಲಾಕ್ಷಣ ಪೇಳ್ದಳು ಗಿರಿರಾಜ | ನಂದನೆ ತನ್ನಾಳ್ದನೆಡೆಯ ॥
ಕಂದರ್ಪನರ್ಧಾಂಗಿಯು ಮೇಲೆ ವೈದವ್ಯ|ವೊಂದದೊಲ್ ಮಾಡೆಂದಳೊಲಿದು ॥
(ಜಡದಕುಟ್ಮಲಕುಚಾನ್ವಿತೆಯ ಕಂಬನಿಗಳ | ತೊಡೆದು ಕುಸ್ತರಿಸಿ [ ಬೋಳೈಸಿ ॥
ಮೃಡನು ತಾತ್ಪರಿಯದಿ ಕಾಮನರ್ಧಾಂಗಿಯ | ನೊಡಬಡಿಸಿದನಾಕ್ಷಣದಿ ॥ )

---

ಕ. ಪ. ಅ—1. ಆನೆಯ ತೊಗಲನ್ನು ಉಟ್ಟಿರುವವನು—ಯಾರು ? 2. ರಸದಾಳಿಯ ಕಬ್ಬಿನ ಬಿಲ್ಲುಳ್ಳ ಮನ್ಮಥ. 3. ಸತ್ತುಹೋದವನು. 4. ಹಣೆಯಲ್ಲಿರುವ ಉರಿಗಣ್ಣಿನಿಂದ. 5. ಸೀದೆ.

ನಿನಗೆ ವೈಧವ್ಯಲಕ್ಷಣವಿಲ್ಲ ಮನದೊಳು|ನೆನೆದೊಡೆ ಬರ್ಪ ನಿನ್ನಾಳ್ದ ||
ಮನಸಿಜ[1]ನೆನಿಸಿ ಜೀವಿಪನೆಂದು ಪುತ್ತ್ರಿದೆ ತನವಿತ್ತನೀಶ್ವರ ರತಿಗೆ ||೪೦||

ಆಡಿದ ಶಿವನ ವಾಕ್ಯವ ಕಾಣಬೇಕೆಂದು | ನೋಡಿಳಾತ್ಮದೃಷ್ಟಿಯಲಿ ||
ಗಾಡಿಕಾಱನ[2]ಕಂಡು ಘನಪರಿತೋಷವ | ಮಾಡಿದಳಂತರಂಗದಲಿ ||೪೧||

ಸರ್ಪಾಭರಣ ಭೂಷಿತ ನಿಮ್ಮ ವರವಾಕ್ಯ | ತಪ್ಪದಿಂದೆನಗೆ ಸಿದ್ಧಿಸಿತು ||
ಪುಷ್ಪಬಾಣನ ಕಂಡೆನಿನ್ನೊಂದು ಬಿನ್ನಹ|ದರ್ಪಕವೈರಿ ಚಿತ್ತೈಸು ||೪೨||

ಸಿತಗಿರಿಯಂತಿದೆ ಮದ್ವಲ್ಲಭನಂಗ | ಜಿತಭಸ್ಮಗೆಯ್ಯಬೇಕೆನಲು ||
ಕೃತಪುಣ್ಯನಾಗಲೆಂದಭವ ತನ್ನೊಡಲ್ಗೆ ಧೂ|ಳಿತವಮಾಡಲುಕಂಡಳಬಲೆ||೪೩

ಆದುದು ಕಾಮುಗಿಂದತಿಶಯಪುಣ್ಯವು | ಮಾದೇವ ಕೇಳೆನ್ನ ಪುರಿಗೆ ||
ಹೋದಪೆ ಕಳುಹ ಚಿತ್ತೈಸಬೇಕೆಂದು ರತಿ|ಪಾದಕೆ ನೊಸಲ ಚಾಚಿದಳು ||

ನಾಗಕಂಕಣ ಕರಯುಗದಿಂದೆ ಪಿಡಿದೆತ್ತಿ | ಪೂಗೋಲನರ್ಧಾಂಗಿಗಾಗ ||
ರಾಗದಿ ವಸ್ತ್ರಭೂಷಣವಿತ್ತು ಕರುಣದಿ|ಪೋಗೆಂದು ಬೀಳ್ಕೊಡಲೊಡನೆ ||

ಕುಳಿರುವೆಟ್ಟನ[3]ಕುವರಿಯುಶ್ರೀಪದಯುಗ | ನಳಿನಸುಗಂಧವಿದ್ದೆಡೆಗೆ ||
ಅಳಿ[4]ಬಂದೆಱಗುವಂತೆಱಗಲ್ಕೆ ತೆಗೆದಪ್ಪಿ | ತಿಳುಹಿದಳವಳ ದುಕ್ಕವನು||೪೬||

ಚಂದನಗಂಧಿ ನಿನ್ನಾಳ್ದ ಚಿತ್ತಜನಾದ ನೆಂದಳವಱಿಯದಿರವ್ವಾ ||
ಕಂದರ್ಪ ಕೃಷ್ಣನಾತ್ಮಜನಾಗಿ ಪುನರಪಿ | ಬಂದಪನಾಂತು ವಿಗ್ರಹವ[5]||೪೭||

ಮಗಳೆ ನೀನಾತನ ಕೈವಿಡಿದೆಂದಿನ | ಬಗೆಯ ಸುಖಂಗಳನಾಂತು ||
ಮಿಗೆ ಜೀವಿಸುತಿರೆಂದುಡುಗೊಱೆಗಳನಿತ್ತು|ನಗರಾಜಸುತೆ ಕಳುಹಿದಳು||೪೮

ಮುಕ್ಕಣ್ಣ[6]ನರಸಿಯ ಬೀಳ್ಕೊಂಡು ರತಿದೇವಿ | ದುಕ್ಕದಿಂದಾಯಾಸ [ಗೊಳುತ ||
ಅಕ್ಕರಿಗನ[7]ನೇಱಿಕೊಂಡು ತೀವ್ರದಿ ಬಂದು|ಪೊಕ್ಕಳು ಕುಸುಮಾವತಿಯ ||

ವರಮೋಹನತರಂಗಿಣಿಯೆಂಬ ಕಾವ್ಯವ | ಬರೆದೋದಿ ಕೇಳ್ದ ಜನರ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವಲಕ್ಷ್ಮೀಕಾಂತಬಿಡದೆ ||

— ಅಂತು ಸಂಧಿ ೮ ಕ್ಕಂ ಪದ ೪೭೩ ಕ್ಕಂ ಮಂಗಳಂ —

---

ಕ. ಪ. ಅ—1. ಮನದಲ್ಲಿ ಹುಟ್ಟಿದವನು, ನೆನಸಿಕೊಂಡಾಗ ಹುಟ್ಟುವನು.
2. ಸುಂದರನ. 3. ಹಿಮವತ್ಪರ್ವತ. 4. ದುಂಬಿ. 5. ಶರೀರವನ್ನು.
6. ಮೂರು ಕಣ್ಣುಳ್ಳವನು-ಯಾರು? 7. ಗಿಳಿಯನ್ನು.

*

# ಒಂಬತ್ತನೆಯ ಸಂಧಿ

---

**ರತಿಯು ಶಂಬರಾಸುರನ ಪಟ್ಟಣಕ್ಕೆ ಹೋದುದು—**

ಅಂಭೋರುಹನಾಭನ ಪಾದಪದ್ಮರೋ|ಲಂಬ[1] ಕೇಳೆನ್ನಯ ಕಿವಿಗೆ ||
ಸಂಭ್ರಮವಡೆದ ನಾನಾಶಬ್ದನಿಚಯವಿ| ದೆಂಬಂತೆ ಪೇಳು ಮೋಲ್ಗತೆಯ ||೧||
ಬಾಳೆ ಮಂದಾಗ್ನಿ ಬಕ್ಕೆಯೊಳುಂಟು ಮಿಶ್ರಿತ|ವೀಳೆಯೊಳ್ ಪುಟ್ಟಿವರೆ
[ದಿಹುದು ||
ಕಾಳಂಗ ಹರಿಕಥಾಮೃತಪಂಚಧಾರೆ ಸ|ಮ್ಮೇಳವಾಗಿಹುದೆನ್ನ ಹೊನ್ನೆ(?) ||
ರಾಜಮಂದಿರದೊಳು ಬೆದಕಿ ನೋಡಿದಳುಸ|ರೋಜಾಕ್ಷಿ ತನ್ನವಲ್ಲಭನ||
ತೇಜೋಮಯಚಿತ್ರಪಟವ ಕಂಡಮರ್ದಪ್ಪಿ|ನೈಜವೆಂದೊಡಬಡಿಸಿದಳು||೩||
ಇನಿಯ ಕೇಳೆಲವೊ ನಾ ಮಾಡಿದ ತಪ್ಪೆಂಬು|ದನಿತಿಲ್ಲವೆಂದಿನಂತೆನ್ನ ||
ಸ್ತನವ ಪಿಡಿದು ಮುಂಡಾಡಿ ಮುದ್ದಿಸಲೊಲ್ಲ|ದಿನಿಪರಿಯನು ಪೇಳು ಜೀಯ||
ವಚನಂಗಳಿಲ್ಲದಿದ್ದರೆ ಮಾಣಲೆನ್ನಯ | ಕುಚವಿನ್ಯಸ್ತ ಹಸ್ತದಲಿ ||
ಕಚಕುಚುಕಾ[2]ಗ್ರವ ಪಿಡಿದೊತ್ತಿ ಚುಂಬಿಸ|ಸಚಳತ್ವ ಮೆಯ್ಗಱಗಿದುದೇ ||
ಕೋಪವುಂಟಾದೊಡಾಜ್ಞಾಪಿಸುಕಮನೀಯ|ರೂಪನೀಕಣ್ದೆಱೆದೆನ್ನ ||
ಆಪಾದಮಸ್ತಕಪರ್ಯಂತ ನೋಟ್ಪುದೆಂ|ದೋಪಂಗೆ ಬಿನ್ನಯಿಸಿದಳು ||೬||
ನೋಡದೆ ನುಡಿಸದಿರ್ದೊಡೆ ಮಾಣುಸಂಜ್ಞೆಯ|ಮಾಡರೆ ಮನವೇ
[ದನರು[3] ||
ಕಾಡಲುಚಿತವಲ್ಲ ಕರುಣದಿಂದೆನ್ನೆರ್ದೆ|ಗೂಡ ಚಿತ್ತೈಸೆಂದಳಬಲೆ ||೭||
ಎಡದೆಡೆವೆರಲ ಸೆಳ್ಳುಗುರಿಂದೆ ಕಂಬನಿ| ಗಡಣವ ಮೊಗೆದು ಸಿಂಪಿಸುತ ||
ಸಡಗರವಾಂತನ ಚಿತ್ರಪಟದ ಪಾದ | ಜಡಜಕ್ಕೆ[4]ನೊಸಲ ಚಾಚಿದಳು ||೮||
ಇನಿವಿಲ್ಲನ ಚಿತ್ರಪಟವಿದು ನಿರ್ಜೀವ|ದನಿದೋಱಲಱಿಯದೆಂದೆನುತ ||
ಮುನಿ[5]ದಱಲುವ ರತಿದೇವಿಯ ಕಂಬನಿ|ಯನು ತೊಡೆದರು ಕೆಳದಿಯರು||೯||
ಚಂದನಸೌರಭ್ಯದೇಹಿಯ ವದನಾರ|ವಿಂದಕೆ ಪಸಿನೀರ ನಾದಿ[6] ||
ಹಿಂದಣ ದುಕ್ಕವ ಬಿಸುಡೆಂದು ಮಾಣ್ದರೆ|ಕಂದರ್ಪನಿರವ ನೋಡಿದಳು||೧೦||

---

ಕ. ಪ. ಅ—1. ಭ್ರಮರ. 2. ಗಲ್ಲ. 3. ಮನಸ್ಸನ್ನು ತಿಳಿದವರು.
4. ಕಮಲಕ್ಕೆ. 5. ಮತ್ಸರದಿಂದ. 6. ತೊಡೆದು.

ನಿಡಿದೋಳು ಹಸ್ತಾಂಬುಜವಿರ್ದು ಮತ್ಕಚ|ವಿಡಿದಪ್ಪಿಕೊಳ್ಳದೀಪರಿಯು||
ಬಿಡಿಬೀಸಿ ಬಿಟ್ಟನೆಂತು ಸ್ವೈರಿಪೆನೆಂದು | ಮಿಡುಕಿದಳಾತ್ಮವಲ್ಲಭಗೆ ||೧೧||

ವಾಚಾಳೆ ಮೌನವದೇಕೆಹೇೞೆಲೆ ಹಿಮ|ರೋಚಿಮಸ್ತಕ[1]ನೊಳುಸೆಣಿಸಿ||
ನಾಚಿದೆನೆನಬೇಡ ಗೆಲವು ಸಂಭವಿಸಿದೆ | ಯೋಚಿಸಿಕೋ ನಿನ್ನ ನೀನೆ ||೧೨

ಜ್ವಾಲಾಂಬಕನ ತಪೋಭ್ರಷ್ಟನ ಮಾಡಿ|ದೋಲೆಯ ಕಾಱನದಾರು ||
ಮೂಲೋಕವಿಜಯ ಮೂಮುಡಿವೀರ ಕರ್ಮಲ|ಗೆಲನಲ್ಲವೆಪೇೞು ಜೇಯ||

ಮಿಗೆ ನೋಡಿ ನುಡಿಸುವ ಲೋಚನಯುಗಳಕ್ಕೆ | ಹೊಗೆಸುತ್ತಿಱಿಪ್ಪೆ
[ಮುಚ್ಚಿದುವೇ ||
ಢಗೆ[2]ವಡೆದೊಡಲೊಳು ಸ್ಫೋಟಕ[3]ವೆದ್ದ ನಾ|ಲಗೆ ನುಡಿಗೆಟ್ಟುವೆ ಜೇಯ||

ಸುಟಿವೆತ್ತು ಕಿಡಿಗಣ್ಣನೊಳು ಕಾದಿದುಷ್ಣ ಸಂ|ಘಟಿಸಿದ ತನುತಾಪಬಹಳ||
ಕುಟಿಲವರ್ಜಿತಚಂದ್ರಗೆಣೆಯಪ್ಪ[4]ತನ್ನಚೆಂ|ದುಟಿಯಪೀರ್ದಡೆಶೈತ್ಯವಹುದು||

ಕುಂಭಿನಿ[5]ಗತಿಜಾಣೆ ಕೇಳವ್ವ ಪಠಚಿತ್ರ | ಚುಂಬಿಸಲಱಿಯದೆಂದೆನುತೆ ||
ತುಂಬಿಗುರುಳ ತುಱುಬಿಕ್ಕಿದಾದಿಯರು ನಿ|ತಂಬಿನಿಯೊಡನೆ ಪೇೞಿದರು||೧೬

ಬಱಿಯ ಗೋಡೆಯ ಮೇಲೆ ಬರೆದ ಚಿತ್ರವ ಕಂಡು | ಮುಱುಗಿ ಮಾಡು
[ವುದೇನು ಮಗಳೇ ||
ತುಱುಗೆವೆಕಣ್ಬನಿಗಳನೋಸರಿಸದೆ | ಬಱಿದಿಹುದೇನವ್ವ ತಾಯೇ ||೧೭||

ವಾರಿಜಗಂಧಿ ನಿನ್ನಯ ಕಾಂತ ತಿರುಗದ| ದಾರಿಯು[6] ಹೋದಾತ ಬಹನೆ ||
ಯಾರಿಯುಮಾಡದೆ[7] ಮನೆವಾರತೆಯ ವಿ|ಚಾರಿಪುದೆಂದರಾಳಿಯರು ||೧೮||

ಬಗತನ[8]ಬಿಟ್ಟು ಹೋಹಾಗ ಹಾಲಿಗೆ ಹೆಪ್ಪು | ಮೊಗೆದಿಕ್ಕಿದವರಾರುಂಟು||
ಜಗದೇಕಜಾಣನ ಕಾಣದರಣ್ಯವ | ಹೊಗಬೇಕು ತಾನೆಂದಳಬುತ ||೧೯||

ಕರ್ತರ್ ನಾನಾದಡೆ ಸ್ಮರಗೇಹದೊಳಗಿರ್ದ|ಮುತ್ತುರತ್ನವನೊಯ್ವುದಿಲ್ಲ||
ಸತ್ತೆಡೆಯಾಡುವ ಸಡೆವೆಣನೊಲು ಕೈ|ಹೊತ್ತುಕೊಂಡಿದೆ ತೆರಳದೆನು ||೨೦||

---

ಕ. ಪ. ಅ—1. ಚಂದ್ರನನ್ನು ತಲೆಯಲ್ಲಿ ಉಳ್ಳ ಶಿವ. 2. ಉರಿ, ಶಾಖ. 3. ಹೊಪ್ಪಳೆ. 4. ಸದೃಶವಾದ. 5. ಭೂಮಿ. 6. ಯಾವ ದಾರಿಯಲ್ಲಿ ಸಂಚರಿಸಿದನು ಹಿಂದಿರಿಗಿ ಬಾರನೋ ಅಂಥ ದಾರಿ, ಯಮಲೋಕದ ದಾರಿ. 7. ಭ್ರಮಿಸದೆ; ಯಾರಿ = ತಿರುಗುವ ಬುಗರಿ. 8. ಸಂಸಾರ ಮಾಡುವಿಕೆ.

ಆಳಿಯು[1] ಗರ್ಭಾತ್ಮಧಾತ್ರಿಯರಿಂಗೆ ಬುದ್ಧಿಯ| ಹೇಳಿ ಮಂದಿರವನಪ್ಪೈಸಿ||
ತಾಳದ ವಿರಹಸಂತಾಪದಿ ಪೊಱಮಟ್ಟ|ಳೂಳಿಗದಬಲೆಯರೊಡನೆ ||೨೧||

ಅಬ್ಬರಿಸುತ ಬರ್ಪ ಹೆಂಗಳ ಬೀಳ್ಕೊಂ|ಡೊಬ್ಬಳು ಕೆಳದಿಯ ಕೂಡಿ||
ನಿಬ್ಬರದಲಿ[2] ಕಾಮನರ್ಧಾಂಗಿ ನಡೆದಳು | ಹೆಬ್ಬನವನು ನಿಟ್ಟಿಸುತೆ ||೨೨||

ಮಾಮರದೆಡೆಯಲ್ಲಿ ತುಱುಗಿರ್ದ ಗಿಳಿವಿಂಡು | ರೋಮಾಳಿ(?)ಕಲಕಂಠ [ನಿಚಯಂ ||
ಕೋಮಲರೋಲಂಬಗಳರ ನಿನ್ರಾಳ್ದನ | ಕಾಮನ ತೋಱಿಂದಳೆಲುತ ||

ಹೂವಿನ ಬನದಲಿ ಹೊಗವಿಟ್ಟು[3] ತನಿರರಸ | ತೀವಿದ ಪಣ್ಗಳ ತಿನಿಸಿ ||
ಓವಿದ ಕರ್ತನ ತೋಱೆಂದು ವರರತಿದೇವಿ ದುಃಖದಿ ಹಲುಬಿದಳು ||೨೪||

ಗಜ ರಥ ತುರಗ ಪಾದಪ ಚಾತುರ್ಬಲ|ವ್ರಜ ವಿಳಾಸಲೀಲೆಯುದಂತಿರ್ದು||
ಭುಜಗಭೂಷಣನ ಕಣ್ಗಿಚ್ಚಿಂಗೆ ಮಕರಧ್ವಜ ದೇಹವ ಸಾರ್ಚ ಬಹುದೇ ||

ತಡೆಯದೆ ತಳತಂತ್ರ[4] ನುಗ್ಗಿದೊಡೆ[5] ಕಟ್ಟ|ಕಡೆಯಲ್ಲಿ ದೊರೆ ಸಿಕ್ಕಬೇಕು|
ಒಡೆಯನನೊಪ್ಪಿಸಿಕೊಟ್ಟು ನೀವಿಂ ಬನದೆಡೆಯಲ್ಲಿ ಬಂದಿರ ಬಹುದೇ||೨೬||

ಭೂತಳದೊಳಗುಳ್ಳ ನೀತಿ ತಪ್ಪುವುದೆ ಸ|ತ್ತಾತನ ಬಾಯೊಳೆ ಮಣ್ಣು ||
ಚಾತುರ್ಬಲವಿದ್ದು ನೀ ಪೋದೆ ಮಚ್ಚಿತ್ತ| ನಾಥ ಹಾಯೆಂದಱಲಿದಳು||೨೭||

ತಳಿರ ತೊಂಗಲ ತೂಗುವಣೆ[6]ಯಲ್ಲಿ ಬೇಡಾ | ಕುಳಿಯ(?) ಸರೋಜನ [ಧ್ಯದಲಿ ||
ಸುಳಿದಾಡುವ ಮಂದಮರುತ ಮತ್ತಾಂತನ | ಬಳಿಗೆನ್ನ ಸಾರ್ಚೆಂದಳೆಲುತ||

ಪೇಳಲುದ್ಯೋಗಿಸಬಾರದೆ ರಾಜಮ|ರಾಳ ಬೊಮ್ಮಗೆ ಪೇಳಿ ತನ್ನ ||
ತೋಳೊಳಪ್ಪುವನ ಸೃಷ್ಟಿಸಿ ಕುಡಬೇಕೆಂದು| ಭಾಳವನಡಿಗೆ ಸಾರ್ಚಿದಳು||

ಕುಚದ ವೃತ್ತತೆಯ ಕೊಟ್ಟಳು ಕೋಕಪಕ್ಷಿಗೆ | ಕಚದ ಭಾರವ [ಕೊಟ್ಟು ನವಿಲ್ಗೆ ||
ವಚನಸುಸ್ವರ ತನಗೇಕೆಂದು ಶುಕಪಿಕ | ನಿಚಯಕ್ಕೆ ಹಂಚೆ ಹಾಯ್ಕಿದಳು||

ಕಂಗೊಳಿಸುವ ನಾನಾವೃಕ್ಷದೆಡೆಯ ಪ್ಲ|ವಂಗ[7] ದಂಪತಿಗಳೊಪ್ಪಿದುವು ||
ಅಂಗಜಾತನ ಕಂಡರೆ ತೋಱಿಸೆಂದಾಗ | ಭೃಂಗ ಕುಂತಳೆ ಹಲುಬಿದಳು ||

---

ಕ. ಪ. ಅ—1. ಗೆಳತಿಯರಿಗೆ. 2. "ಒಚ್ಚತವಿಲ್ಲೆಂಬುದರ್ಥ" ಚತು. ನಿ.
3. ನುಗ್ಗಿಸಿ. 4. ಸೇನೆ. 5. ಸೋಲಿಸಲ್ಪಟ್ಟು ಚೆಲ್ಲಾಪಿಲ್ಲಿಯಾದರೆ.
6. ತೂಗುಮಂಚ. 7. ಕಪಿ.

ಮುಂತಣ ವಿಪಿನಾಂತರದಲ್ಲಿ ವೀರ|ವಸಂತ ಪಾದಪನಿಚಯವನು ||
ಸಂತಸಗೊನರಿಸುತಿರುತಿರೆ ರತಿ ತನ್ನ|ಕಾಂತನ ಬೆದಕಿ ನೋಡಿದಳು ||೩೨||

ಹಿಡಿವ ಪೂಸರಳುಗಳವೆ ನಿನ್ನಪರವು ಸಂ|ಗಡಿಗ ಚೈತ್ರನ ಕಾಣಲಿವಕೋ
ನುಡಿವ ಪಿಕಾಳಿಗಳವೆ ತಳತಳಿಸುವ | ನಿಡಿಗಣ್ಣ ನಿಲ್ಲೆಂದಳಳುತ ||೩೩||

ಹಿಂಡಿನಗಲಿದ ಹುಲ್ಲೆಯು ನಸೆ[1]ಯೊಳಗಿಪ್ಪ | ಗಂಡೇಣ[2]ತನ್ನ ವಲ್ಲಭನ||
ಕಂಡುದುಂಟಾದಡೆ ತೋಱು ತೋಱೆನುತಲಿ | ಪುಂಡರೀಕಾಕ್ಷಿ ಕೇಳಿದಳು||

ಅಲ್ಲಿಗಲ್ಲಿಗೆ ಸಾಲುಸಾಲಾಗಿ ನಿಂದಿಹ | ಜಲ್ಲಿಯು ಮೃಗಪಕ್ಷಿಗಳಿರಾ ||
ಮಲ್ಲಿಗೆಗೋಲನ ಕಂಡರೆ ತೋಱೆಂದು | ಸೊಲ್ಲಿಸಿದಳು ದೈನ್ಯದಲಿ ||೩೫||

ನೆಲನಾಕಾಶ ದಿಕ್ಕೆಂಟು ಷೋಡಶಕೋಣ[3] | ಜಲಗಿರಿ ನಳಿನಂಗಳಿರಾ ||
ಅಲರಂಬನ ಕಂಡರೆ ತೋಱಿಸೆಂದು ವ್ಯಾ|ಕುಲದಿಂದೆ ಹಲುಬಿದಳಬಲೆ||೩೬||

ಸ್ತನಜಘನವ ಪೊತ್ತು ಪದಯುಗಳಕ್ಕಲೋ|ಚನತಪ್ತ ಜಲವ ಸಿಂಪಿಸುತ||
ಘನಪರಿತಾಪದೆ ರತಿದೇವಿ ಬಂದಳು | ಮನದೆಱೆಯನ ನೋಡಿಕೊಳುತ ||

ಚರಣಾಂಗುಳಿಯೆಡಹಿದಡಾತಾವಿಲಿ | ಹರನಡಿ ಸಲಹಲೆಂದೆನುತ ||
ತರಹರದಲಿ ಬಂದಳಬುಜಾಕ್ಷಿ ಶಂಬರಾ|ಸುರನ ಪಟ್ಟಣವನೀಕ್ಷಿಸುತ||೩೮||

ತಪನನುಷ್ಣತೆಯಿಂಗೆ ತನುಲತೆ ಬೆಂಡಾಗಿ|ಲಪನಾಂಭೋರುಹ[4]ಕೊಱಗಿ||
ಅಪರಾಹ್ಣಕಾಲದಿ ರತಿ ಶಂಬರಾಸುರ|ನುಪವನವನು ಪೊಕ್ಕಳಂದು ||೩೯||

ಲೋಲಲೋಚನೆ ಬೞಲಿದುದ ಕಾಣುತ ವನ|ಪಾಲರು ಪಕ್ಷಪಾತದಲಿ ||
ಬಾಲೇಂದುಕಾಂತಸೋಪಾನದೆ ಬಿಗಿದ ವಿ|ಶಾಲಸರಸಿಯು ತೋಱಿದರು ||೪೦||

ಪಳಿಕಿನ ಪಟ್ಟಿಕೆಯಲಿ ಪೊಂಬಾೞೆಯು | ಸುೞಿಯಲ್ಲಿ ರತಿಯು ಕುಳ್ಳಿರಿಸಿ||
ನಳನಾಕ್ಷಿಯರೊಡತಿಯು ಕಾಲೆರಡುವಮಾಂ|ದಳರನು ಜಲದೊಳದ್ದಿದರು ||

ಹದಿನಾಱುಬಣ್ಣದ ಸೊನ್ನೆಯು ಸರಳ್ಗಳ | ಕುದಿಗಾಸಿ ನೀರೊಳಟ್ಟಂತೆ ||
ಉದಿಸಿತು ಘುಳುಘುಳು ಘುಳುಘುಳು ಧ್ವನಿ ತಂ|ಗೊಳದೊಳು ತನು
[ತಾಪದಿಂದೆ ||೪೨||

ಲಾಲಿಪ ಪದ್ಮ ಕೈರವನಾಳ ಸತು[5]ಗುಂದಿ|ವಾಲಿದುವೆಸಳ್ಗಳು ಬಾಡಿ ||
ಆಲಿಗಳ[6]ಉಗದ ವನಚರ ಬೆಂಡೆದ್ದು| ತೇಲಿದನುಷ್ಣ ಸಂಘಟಿಸಿ ||೪೩||

---

ಕ. ಪ. ಅ—1. ಕಾಮವಿಕಾರ. 2. ಗಂಡುಹುಲ್ಲೆ. 3. ೧೬ ವಿದಿಕ್ಕುಗಳು. 4. ಮುಖಕಮಲ. 5. ಸತ್ವ, ಪ್ರಕಾಶ. 6. ಕಣ್ಣುಗಳು.

ಚಕ್ರಪಾಣಿಯ ಮೂಲಮೂರ್ತಿಗಳೆಂಬಂತೆ | ಶಕ್ರನ ಮೆಯ್ಗಣ್ಗಳಂತೆ ||
ವಕ್ರಾಂಬಕ ವಿರೋಧಿಯ[1]ಬಲು ಪಟದಂತೆ | ಪುಷ್ಕರ[2]ವಿಹಂಗಳೊ
[ಪ್ಪಿದುವು ||೪೪||

ಬಿಸಿವಡೆದಾಸರೋವರದಲ್ಲಿ ವಿಹಂಗಳು ಬಿಸಿ|ತಾಗಿ ಬಾಯ್ಬಿಡುವುದನು ||
ಅಸಿಯಳುಮುಖದಿಟ್ಟಿಯಲಿ ನೋಡಲ್ಕಾಗ|ಪಸಿ ತಾಪ ಪರೆದುದಾಕ್ಷಣದಿ ||

ತೋಟಗ[3]ರೊಳಗೊರ್ವ ಶಂಬರದೈತ್ಯವ ಧೂಟಿಯ[4]ವರನಿದ್ದ ಬೞಿಗೆ||
ಸೂಟಿಯೊಳೈತಂದು ರತಿಯ ಪ್ರಸಂಗವ | ನಾಟಿಸಿದನು ಕಿವಿಯೊಳಗೆ||೪೬||

ವರಮೋಹನ ತರಂಗಿಣಿಯೆಂಬ ಕಾವ್ಯವ | ಬರೆದೋದಿ ಕೇಳದ ಜನರ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವ ಲಕ್ಷ್ಮೀಕಾಂತ ಬಿಡದೆ||

— ಅಂತು ಸಂಧಿ ೯ ಕ್ಕಂ ಪದ ೫೨೦ ಕ್ಕಂ ಮಂಗಳಂ —

# ಹತ್ತನೆಯ ಸಂಧಿ

ರತಿಶಂಬರಾಸುರರ ಸಂಧಾನ —

ಉರಗನ ಬೆನ್ನ ಮೇಲೊಗೆದಿರ್ದ ತಾಳೇೞು[5]|ಸರಳಿಂದ ಕಡಿದ ರಾಘವನ||
ಪರಮಕಾರುಣ್ಯಾವಲೋಕನದಿಂದೆ ವಿ| ಸ್ತರಿಸೆನ್ನ ಕಿವಿಗೆ ಲೇಸೆನಿಸಿ ||೧||

ಸಿಂಗರದೋಟದ ಸಿರಿಗಂಪ ಸುಜನರ್ಗೆ | ತಂಗಾಳಿ ತಂದೀವ ತೆಱದೆ ||
ಮಂಗಳ ಹರಿಕಥಾಮೃತವ ನಾನಿನ್ನ ಕ|ರ್ಣಂಗಳಿಗೆಱೆವೆ ಲೇಸೆನಿಸಿ ||೨||

ಕ್ಷಿತಿನಾಥರೆಱೆಯ ಚಿತ್ರೈಸು ಬಂದಾಕೆಯ|ರತಿದೇವಿಯೆಂಬರಾಕೆಯನು
ಅತಿವಿಶ್ವಸಿಸುವ ಕೆಳದಿಯರಿಂ ಕೇಳ್ದ | ಪತಿಕರಿಸೆಂದ ತೋಂಟಿಗನು ||೩||

ಭಾಸಿಪ ರಂಭೆಯೂರ್ವಶಿ ತಿಲೋತ್ತಮೆ ಮಂಜು|ಘೋಷೆ ಮೇನಕೆ
[ಯರು ಸಹಿತ ||
ಸಾಸಿರಗಣ್ಣನ ಪಟ್ಟಣದಬಲೆಯ|ರೀಸುಂದರಿಗೇನು ಸಾಟಿ ||೪||

ಸಿರಿ ಗಿರಿಜಾತೆ ಶಾರದೆ ಶಚಿ ಮುಖ್ಯರು | ಸರಿಯಲ್ಲ ವಿವಳಚ್ಚು ಬೇಱೆ||
ಹರಿಹರವಿಧಿ[6]ಪುರಂದರರು ಜೀವಾವಧಿ | ಸ್ಮರಿಸಲ್ಕೆ ಮೊಗವ ತೋಱುವಳೇ||

---

ಕ. ಪ. ಅ—1. ಮನ್ಮಥ; ಹೇಗೆ? 2. ಕೊಳ. 3. ತೋಟಗಾರ. 4. ಹೆಣ್ಣಾಳು. 5. ಸಪ್ತತಾಲವೃಕ್ಷಗಳನ್ನು–ಇಲ್ಲಿ ಪೂರ್ವಕಥೆ ಏನು? 6. ಬ್ರಹ್ಮ.

ಹಿಂದಣ ಜನ್ಮದ ಸುಕೃತವಿನ್ನೆಂತುಟೊ । ಮಂದಸ್ಮಿತಮುಖಿ ನಿನ್ನ ॥
ನಂದನದೊಳು ಬಂದು ಕೈಸಾರ್ದಳು ರೂಪ।ಕಂದರ್ಪ ಕರಸಿಕೋ ಜೇಯ।

ಮತ್ತೇಭಗಮನೆಯ ಪರಮಲಾವಣ್ಯವ । ಚಿತ್ತರಿಸುವ್ರೊಡೆನ್ನ ಹವಣೆ ॥
ಚಿತ್ತದೊಳಂಗೀಕರಿಸಿ ಪಲ್ಲಕ್ಕಿಯ । ನಿತ್ತಡೆ ತರಬಹುದೆಂದ ॥೭॥

ಎಂದೊಡಾಮಾತಿಂಗೊಡನೆದ್ದು ದೈತ್ಯ ಹೊ।ನ್ನಂದಣ[1]ದಣ್ಣರಕಳುಹೆ ॥
ಸಂದಣಿಸಿದರಣ್ಣಗಳು[2]ನಿಯೋಗಿಗಳ್[3]। ಬಂದರು ರತಿಯಿದ್ದ ಬಳಿಗೆ ॥೮॥

ಬುದ್ಧರು ಕೊಜ್ಜೆಯರಾ[4]ದಾದಿಯರೊಂದಾ। ಮಧುರಸುಸ್ವರದಿ ಬಿನ್ನೈಸೆ
ಉದರಾಗ್ನಿಯ ತಿರಸ್ಕರಿಸಿಯಂದಣದೊಳು ಚದುರೆಯನೊಪನೆ ಸಾರ್ಚಿದರು

ಮಾಣಿಕವೆಸದ[5]ಹೊನ್ನಂದಣದೊಳು ಕಂತು।ರಾಣಿಯ ಮುಚ್ಚಿ ಬೈತಿಟ್ಟು
ಓಣಿಯೊಳ್ ಮೆಱೆಸುತ ಕರಕೊಂಡು ಬಂದಾಗ । ಕಾಣಿಸಿದರು ಶಂಬರಗೆ॥

ಘನಸೌಂದರಿಯ ಸಿಟ್ಟಿಸಿದೊಡಾಕ್ಷಣಕೆ ಜೇ।ವನಕೆ ಸಂತಾಪತೋಱಿಸಲು
ವನಜಾಕ್ಷಿ ತನಗೆ ತಕ್ಕವಳೆಂದು ಮೂರ್ಛೆಯ।ಮನದಿ ತಾಳಿದನು ರಕ್ಕಸನು॥

ಎಚ್ಚೆತ್ತು ಮಗುಳೆ ನೋಡಿದೊಡೆ ಮನ್ಮಥ ಬೀಱಿ।ಲೆಚ್ಚನು ದೈತ್ಯೇಶ [ನೊಡಲ ॥
ಎಚ್ಚಱು ಪಲ್ಲಟವಾಗಿರೆ ಕಣ್ದೆಱೆ[3]।ದೆಚ್ಚೆತ್ತು ರತಿಯ ಸಿಟ್ಟಿಸಿದ ॥೧೦॥

ಬಿಸರುಹದಳಲೋಚನೆ ಕೇಳು ನಿನ್ನಯ । ಪೆಸರಾವುದೆಲ್ಲಿಂದ ಬಂದೆ ॥
ಅಸಮಾಕ್ಷನಾಣೆ ಮಾಜದೆ ಪೇೞು ಪೇೞೆಂದು । ಬೆಸಗೊಂಡ ವಿನಯೋ [ಕ್ತಿಯಲಿ॥೧೧॥

ನೀಚೋಕ್ತಿಯ ದನಿಯನು ಕೇಳಿ ತಲೆಗುತ್ತಿ[6]।ಲೋಚನತಪ್ತವಾರಿಯನು॥
ಭೂಚಕ್ರದೊಳು ಹರಿಸುವ ದುಃಖ್ಖಯ ಕಂಡು।ನಾಚದೆ ಮಗುಳೆ ಸೊಲ್ಲಿಸಿದ॥

ಪುರುಷರ ನುಡಿ ಹೊಱಡದ ಮುನ್ನ ಸ್ತ್ರೀಯರು । ಹರಿಸದೆ ಮೋ [ಲಿಕ್ಕುವರು॥
ವರಿಸಾಱುತಿಂಗಳು ನನ್ನ ನೀನಂಗೀ।ಕರಿಸ ಬೇಕೆಂದು ಪೇೞಿದನು ॥೧೨॥

ಮುಖಪರಿಚಯವಿಲ್ಲದೆ ನುಡಿದೊಡಮೇನೊ । ಸಕಲಕಲಾಭಿಜ್ಞೆ ನೀನು॥

---

ಕ. ಪ. ಅ—1. ಪಲ್ಲಕ್ಕಿ. 2. ಅಂತಃಪುರದಲ್ಲಿರುವ ನಪುಂಸಕರು.
3. ಓಲೆಕಾರರು. 4. ಸದಾ ಸ್ತ್ರೀ ವೇಷಧಾರಿಗಳಾದ ನಪುಂಸಕರು.
5. ಕೆಲಸ ಮಾಡಿದ. 6. ನಾಚಿಕೆಯಿಂದ ತಲೆಯನ್ನು ತಗ್ಗಿಸಿಕೊಂಡು.

ಮಕರಧ್ವಜನುಪಟಳಕೆನ್ನನೊಪ್ಪಿಸಿ | ವಿಕಳನ ಮಾಡಲೇಕೆಂದ ||೧೬||
ಏಣನಿಭಾಯತೇಕ್ಷಣೆಮಾತನಾಡದೆ | ಮಾಣಲೆಂದಸುರೇಶ ತನ್ನ ||
ಪ್ರಾಣವಲ್ಲಭೆಯನಾಕ್ಷಣದಲ್ಲಿ ಕರೆಸಿ ಪ್ರ | ಬಾಣನರಸಿಯ ತೋಱಿಸಿದ ||
ಬಟ್ಟಮೊಲೆಯ ಬಾಲೆಯೊಡಲ ಸಂತಾಪವ | ತಟ್ಟನೆ ತರಿದು ಕುಚ್ತರಿಸಿ||
ನೆಟ್ಟನೆ ತನಗೀಡಮಾಡೆಂದು ಕೈಯೆಡೆ | ಗೊಟ್ಟ ಕುರಂಗಲೋಚನೆಯ ||
ಮಡದಿ ಮನೋನಾಥನ ವಾಕ್ಯವ ಕೇಳಿ | ಯೊಡಗೊಂಡು ಬಂದ [ಳಾಲಯಕೆ ||
ಸಡಗರದಿಂದುಪಚರಿಸುತೆ ಮೆಲ್ಲನೆ | ಪಡೆದಳಾ ರತಿಯು ಚಿತ್ತವನು ||೧೮||
ಸಾಸಿರವಗೆಯ ಬೋಟಿಯು[1]ಮಾತ ಕಿವಿಯೊಳು | ಸೂಸಿ ಮಜ್ಜನ [ಭುಕ್ತಿಗೆಯ್ಸಿ ||
ಆಸತಿ ಬೆಸಗೊಳಲುಸಿರ್ದಳು ಪರರತಿ | ದೇಸಿಗತನದ[2]ಸುದ್ದಿಯನು ||೨೦||
ಹರಸುರಿಗಣ್ಣೊಳೆನ್ನಾಳ್ದ ದೇಹವ ಬಿಟ್ಟ | ವಿರಹದೆ ದೇಶಾಂತರವ ||
ಭರವಶದೊಳು ಸಿಕ್ಕಿದೆ ನಾನು ಮುಂದಕೆ | ಸ್ಮರನೆ ಶರಣನೆಂದಳವಳು ||
ಸತ್ತವರೊಡನೆ ಸಾವವರುಂಟೆ ಮಗುಳೊಂದು | ಚಿತ್ತೈಸುವೊಡೊಕ್ಕ [ತನವ ||
ವೃತ್ತಕುಚಾನ್ವಿತೆ ನಿನಗೆ ತನ್ನಾಳ್ದನ | ನಿತ್ತಪೆನೆಂದಳಾಕಾಂತೆ ||೨೧||
ನಾರಾಯಣಕೃಷ್ಣಗೋವಿಂದ ಬಹಳಾಪ ಚಾರದ ಮಾತ ಕೇಳದೆನು |
ಆರಾದೊಡೆ ಹದಿಬದೆ[3]ಯರಿಗನುಭೋಗ | ವೇಱುಂಟೆ ಮತ್ತೊರ್ವರೊಡನೆ ||
ಮೀನಾಂಕ ಮೃತವನೊಂದಿದಮೇಲೆ ನಮ್ಮಮ್ಮ | ನೀನಾರಿಗೊಗೆತನಗೈವೆ||
ನಾನಾಕಲೆವಂತನೆನ್ನಯ ಪುರುಷನಿ | ಧಾನವ ನೋಡೆಂದಳೊಲಿದು ||೨೪||
ನಿನ್ನ ಮೇಲಣಭ್ರಾಂತಿ ಬಿಡದು ನಿಶಾಚರ | ತನ್ನ ಸಂತಾಪಿಸುತಿಹನು ||
ಎನ್ನ ಮೆಲ್ನುಡಿಯ ನಿವಾರಿಸಬೇಡೆಂದು | ಬಿನ್ನಹಗೈದಳು ರತಿಗೆ ||೨೫||
ವಾಮಲೋಚನೆ ಕೇಳು ಜಗವ ಮೋಹಿಸುತಿಹ | ಕಾಮನ ತೆಕ್ಕೆ [ಗೊಂಡಿರ್ದ ||
ಕೋಮಲತರಬಾಹುಗಳಿಂದೆ ಪುರುಷವಿ | ರಾಮದೇಹವ ಮುಟ್ಟಬಹುದೆ||೨೬||

---

ಕ. ಪ. ಅ—1. ನಾನಾರೀತಿಯ ಮರುಳುಮಾತುಗಳನ್ನು ; ಬೋಟಿ—ಸಮರುವಿಕೆ.
2. ದಿಕ್ಕೆಟ್ಟತನದ. 3. ದ್ಘ. ಪತಿವ್ರತೆ.

ಜಡಜಕುಟ್ಮಲಕುಚಾನ್ವಿತೆ ನಿನ್ನ ಕಂಡಡೆ । ಬಿಡಲಾರ್ಪರೆ ಗಂಡುಜನರು॥
ಒಡಬಡದಿರೆ ಬಲುಹಿಂದಲಿ ಮತ್ಕಾಂತ। ತುಡುಕದೆ ಮಾಣ ಕೇಳ್ ಮಗಳೇ ॥
ಉಗ್ರ ಕಣ್ಣಿಂದೆ ಕಾಮನಸುಟ್ಟು ಮನಸಿಜ।ವಿಗ್ರಹವನು ಮಾಡಿಕೊಟ್ಟ॥
ನಿಗ್ರಹದಿಂದೆ ತೋಳ್ವಿಡಿದಡೆ ಶಾಪಾ । ನುಗ್ರಹದಿಂದೆ ಭಂಗಿಸುವೆ ॥೨೮॥
ಹರಣವ ಬಿಡುವುದೇನರಿದಲ್ಲ ಪೆಣ್ಗೆ ದು।ರ್ಮರಣ ಹೊಲ್ಲೆಹ ಕೇಳ ಬಲ್ಲೆ॥
ಕರಣವಿಕಾರ ಬೇಡೆಂದು ಪೇಳ್ ನಿನ್ನಯ ಹರಣವಲ್ಲಭಗೆಂದಳಬುತ ॥
ತೊಡೆದಳು ರತಿಯ ನೇತ್ರಾಂಬುವನುಗುರಿಂದೆ, ಮಿಡಿದಳು ತನ್ನ ಕಣ್ಣೀರ॥
ಪಿಡಿದಳು ಗಲ್ಲವ ಮುದ್ದಿಸಿ ಮುದವೆತ್ತು ।ನುಡಿದಳು ಖಳರಾಯನರಸೀ ॥
ಲೋಕೇಶ್ವರನೆಂಬ ಪಾಪಿಷ್ಠ ಹೆಂಗಳ।ನೇಕೆ ನಿರ್ಮಿತವ ಮಾಡಿದನೋ॥
ಸಾಕೀಜನ್ಮವಿದೇಕೆಂದಾಕೆಯೊ।ಳಾಕೆ ಪೇಳಿದಳು ದುಃಖವನು ॥೩೧॥
ಚಿಂತಾತುರ ಬೇಡವಬುಜಾಕ್ಷಿ ನಿನ್ನ ವೃ।ತ್ತಾಂತವ ಖಳರಾಯಗುಸಿ॥
ಮುಂತಾವ ತೊಡಕಿಲ್ಲದಂತೆ ಮಾಡುವೆನೆಂದು। ಕಾಂತನ ಹೊರೆಗೈದಿದಳು ॥
ಬಂದಳು ಭಾಮಿನಿರನ್ನೆ ನಿನ್ನೊಳಗೇ । ನೆಂದಳು ಬಿಱುನುಡಿಗೇಳ್ದು ॥
ಕೊಂದಳೆ ಪತಿಭಕ್ತಿಯೆಂಬ ಕೂರಸಿಯಿಂದೆ।ಕೊಂದಳೆ ಹೇಳೆಂದು ನುಡಿದ ॥
ಬಯ್ದಳೆ ಬಾಷ್ಕಳ[1]ನೆಂದು ಕಣ್ಣೀರಿಂದೆ । ತೊಯ್ದಳೆ ಕಾಂತನ ನೆನೆದು॥
ಹೊಯ್ದಳೆ ನೆಲನ ಶಪಿಸಿ ನನ್ನ ಕೊರಲ ತಾ।ಕೊಯ್ದಳೆ ಪೇಳೆಂದು
[ನುಡಿದ ॥೩೩॥
ಕಂಡವರುಗಳು ದೂಷಣವ ಮಾಳ್ಪರು ಭ್ರಾಂತಿ।ಗೊಂಡಾಡುವ ಮಾತ
[ಬಿಸುಡು ॥
ಚಂಡವಿಕ್ರಮ ಧೈರ್ಯವನಾಂತು ಕೋ ಎಂದು।ಗಂಡನನೊಡಬಡಿಸಿದಳು ॥
ರಾಯ ನೀನಾರ ಬುತ್ತಿಗೆ ಚೀಟು ರೊಟ್ಟಿಯು।ಕಾಯ ಕೊಯ್ದಪೆ ಕೇಳು
[ಕುಸುಮ ॥
ಸಾಯಕನರ್ಧಾಂಗಿಯ ರೂಪ ಕಂಡು ವ್ಯ।ಥಾಯ[2] ದುಃಖವ ಮಾಡಬೇಡ ॥
ಮನದನ್ನ ಮದ್ವಾಕ್ಯವ ಕೇಳು ನೀನು ಊರ್ವ।[3]ತನದಿಂದೆ ಪಿಡಿದರೆ ನೀಱು[3]॥
ಘನಶಾಪವ ಕೊಟ್ಟಯಿಗಾಕ್ಷಣ ಭೂಮಿಭಾ । ಜನವ ಮಾಳ್ಪಳು[3] ಜೀಯ
[ನಿಮ್ಮ ॥೩೬॥

---

ಕ. ಪ. ಅ—1. ಬಾಹಿರ, ನೀಚ. 2. ವ್ಯರ್ಥವಾಗಿ, ಬರಿದೆ. 3. ಎಂದರೇನು?

ಮಂಡಲದೊಳು ಹದಿಬದೆಯು[1] ಸಂಗವ ಮಾಡಿ ಭಂಡ ತಾ ವಜ್ರಿಯು[2] [ನೋಡು ||
ಗಂಡನುಳ್ಳವಳಾಸೆಬೇಡೆಂದು ನೆರೆ ಬೇಡಿ|ಕೊಂಡೆಱಗಿದಳು ವಲ್ಲಭೆಗೆ ||೩೮||

ಮತ್ತೀಭಗಮನೆ ಕೇಳ್ ನಿನ್ನಂತೆ ಚೆಲುವಿನೊ|ಳುತ್ತಮನಾರಿಯರುಂಟೆ||
ಚಿತ್ತಜನರ್ಧಾಂಗಿ ನಿನ್ನರಮನೆಯಲ್ಲಿ | ತೊತ್ತಾಗಿ[3]ರಲೆಂದು ನುಡಿದ ||೩೯||

ಅಱಡಿ[4]ಗುರುಳ ಮಾನಿನಿ ಕೇಳು ಕರ್ವಿಲ್ಲ|ಗಾಱನ ರಾಣಿ ರಕ್ಕಸನ ||
ನೀಱೆಯು ಮನೆಯ ತೊತ್ತಾದಳು ಪ್ರಾಪ್ತಿಯ|ಮಿಱಲೊರ್ವರಿಗೆ ಸಾಧನವೆ||

ಇನಿಯನ ವರವಾಕ್ಯವ ಕೇಳ್ದು ಮಾನಿನಿ | ನನೆಗೋಲನರ್ಧಾಂಗನೆಗೆ ||
ಮೊನೆದೋಱದೆ ಮೃದುವಾಕ್ಯದಿಂದಡಿಗೆಯ | ಮನೆಗೆಲಸಕೆ ಸಾರ್ಚಿದಳು ||

ಕೆತ್ತಿದ ರತ್ನಾಭರಣಭೂಷಿತ ಬೋನ | ಗಿತ್ತಿ[5]ಯಸರ್ವಾರಿ[6]ಗಳಿಗೆ ||
ಅತ್ಯಧಿಕಾರದಿ ನೀನಿರ್ಪುದೆಂದು ಕೈ | ವರ್ತಿಸಿ ಕೊಟ್ಟಳಾಯುಕಗೆ ||೪೦||

ವಾಸಿಯೊಳ್ ತನ್ನನೊಲ್ಲದ ರತಿದೇವಿಯ | ದಾಸಿಯ ಮಾಡಿದೆನೆಂಬ ||
ಭಾಷಿತಮಹದೈಶ್ವರ್ಯದಿ ಮದನ | ದ್ವೇಷಿ ಮಂದಿರದೊಳೊಪ್ಪಿದನು ||೪೧

ವರಮೋಹನತರಂಗಿಣಿಯೆಂಬ ಕಾವ್ಯವ | ಬರೆದೋದಿ ಕೇಳ್ದ ಜನರ||
ತರಣಿಚಂದ್ರಮನುಳ್ಳನಕ ಸತ್ಕೃಪೆಯಿತ್ತು|ಪೊರೆವ ಲಕ್ಷ್ಮೀಕಾಂತ ಬಿಡದೆ||

— ಅಂತು ಸಂಧಿ ೧೦ ಕ್ಕಂ ಪದ ೫೬೪ ಕ್ಕಂ ಮಂಗಳಂ —

## ಹನ್ನೊಂದನೆಯ ಸಂಧಿ

ಮಾರಜವನ:—

ಸೌಂದರಮಯಸುರಾರ್ಚಿತಪಾದಪದ್ಮ ಗೋ | ವಿಂದ ಗೋವರ್ಧನೋ [ದ್ಧರಣ ||
ಎಂದನವರತ ಕೀರ್ತಿಸುವ ನಾಲಗೆಯಿಂದೆ|ಮುಂದಣಕೃತಿವೇೞು ಮುದದಿ ||

ಬಾೞಿನ್ನ ಭಾಗ್ಯದ ನಿಧಿಯೆಂದೆನಿಪ ಸು|ಡಾಳ[7] ಬಲ್ಮೊಲೆವೆತ್ತ ನೀಱೆ ||
ಕೇಳಲಾಲಸ್ಯವಿಲ್ಲದೆ ನಿನ್ನ ಕಿವಿಗೆ ಸಂ|ಮೇಳವ ಮಾೞ್ಪೆ ಸತ್ಕೃತಿಯ ||೧

ಕ. ಪ. ಅ—1. ಪತಿವ್ರತೆಯು, ಇಲ್ಲಿ ಅಹಲ್ಯೆಯು. 2. ಸಹಸ್ರಾಕ್ಷನಾದ ಇಂದ್ರನ.
3. ಸೇವಕಿಯಾಗಿ. 4. ಷಟ್ಪದ, ದುಂಬಿ. 5. ಅಡಿಗೆಮಾಡುವ ಹೆಂಗಸು.
6. ಮೇಲುವಿಚಾರಣೆ, ಪಾರುಪತ್ಯ (?) 7. ಒಳ್ಳೆಯಕಾಂತಿಯುಳ್ಳ.

ಇನಿವಿಲ್ಲನರ್ಧಾಂಗಿಯು ಕೋಳುವಿಡಿದ [1]ಭೂ|ವನಿತೆಯುವರ[2]ನೋಲಗದಿ||
ದನಿಗೆಯ್ವ ಗೀತವಾದ್ಯವ ಕೇಳೆ ನಾರದ|ಮುನಿಮಾರಾಯ ಬಂದಿಳಿದ ||೩||

[3]ಚಂದ್ರನಂದದೆ ಚಂದ್ರಶೇಖರನಂತೆ ಮೃ|ಗೇಂದ್ರನಂತಹಿರಾಜನಂತೆ ||
ಇಂದ್ರನೈರಾವತದಂತೆ[3] ನಾರದಮೌ|ನೀಂದ್ರ ಶಂಬರನ ಕಣ್ಗೆಸೆದ ||೪||

ಶಂಬರಾಸುರ ನಾರದನ ಕಂಡೆದ್ದು ಪಾ|ದಾಂಭೋರುಹಕೆ ವಂದಿಸಲು ||
ಮುಂಬರಿದರ್ಘ್ಯಪಾದ್ಯವನಿತ್ತು ರತ್ನಕ | ದಂಬವಿಷ್ಟರವನೇಱಿಸಿದ ||೫||

ಪರಮಮುನೀಂದ್ರ ಗದ್ದುಗೆಗೊಳಲಸುರೇ|ಶ್ವರ ತನ್ನ ಪೀಠದೆ ಕುಳಿತು||
ಕರಮುಕುಳಿತನಾಗಿ ಕೇಳದ ನೀಂ ಬಂದ | ಭರವಶವೇನೆಂದು ನಗುತ ||೬||

ರಕ್ಕಸರೆಂದೆಂಬ ಮಾತ್ರವಲ್ಲದೆ ಸಮ್ಮ|ಮಕ್ಕಳಾಗಿರುವಿರಿ ನೀವು ||
ಕಕ್ಕಸದಿಂದೊಂದು ಬವರ[4]ಬಂದಡಸಿತು| ಬಕ್ಕಣಿಸಲು[5] ಬಂದೆ ನಿನಗೆ ||೭||

ಸುಟ್ಟನೀಶ್ವರನೊಡೆಯುರಿದಿಹ ಕಾಮನ| ಪಟ್ಟದ ರಾಣಿ ದುಕ್ಕದಲಿ ||
ನೆಟ್ಟನೆ ದೇಶಾಂತರವೈತರಲಾಗಿ | ದಿಟ್ಟಾಗಿ ಕೋಳ್ಗೊಳ[6]ಬಹುದೆ ||೮||

ರಾಣಿಯು ಕೈದುಡಿಕಿದನ ಕೊಳ್ವರೆ ಚಕ್ರ| ಪಾಣಿಯು ಪ್ರಾರ್ಥನೆಗೈದು ||
ಕ್ಷೋಣಿಯೊಳೊಡಲ ಪಿಡಿದುಬಂದ ಪೆಮ್ಮಂಡೆ|ಮಾಣಿಕ [7]ಹರಿವಧೂಟಿಯುಲಿ||

ಮುಗುಳಂಬ[8]ನೊಡಲ ಬೇಡಿದಳು ರುಕ್ಮಿಣಿ ಗಂಡು | ಮಗನಾಗಬೇಕೆ
[ನಲೊಡನೆ ||
ನಗಧರ ಕೊಟ್ಟನಿವಳ್ಗೊಂದು ವರವನು | ಜಗತಿಗಾಶ್ಚರ್ಯವಾಯಿತ್ತು ||೧೦

ಕಂಜದಳಾಯತಾಕ್ಷನ ಮಗನಾದ ಕೇ | ಳಂಜ ಮತ್ತಿನ್ನೊರ್ವರಿಗೆ ||
ರಂಜಕಬೇಡ ಮನ್ಮಥ ಪಾಲಿಪುದು ಧ| ನಂಜಯಾಂಬಕ[9]ನಾಣೆ ನಿನಗೆ||೧೧

ಬಳೆಯುಗುಡದೆ ತನಗಹಿತರಾದವರನು|ಮೊಳೆಯೊಳೆ ಮುರುಟಿಸಬೇಕು||
ಇಳೆಯಾಣ್ಮರಾಯರಾಯತವಿದು ನಿನ್ನ ಮೈ|ವಳಿಯುವದೇನೊ ನಾನಱಿಯೆ||

ಕಳಿಲೆಯು[10] ನಖದಲಿ ಚಿವುಟಲಹುದು ಮುಂದೆ ಲಳಿಗೆ [11]ಕೂರುಗುರಿ
[ಗಂಜುವುದೇ ||
ಉಳಿದ ಮಾತೇನು ಆಲಸ್ಯದಿಂದಮೃತವು|ಗಳಿಲನೆ ವಿಷವಾಗದಿಹುದೇ ||೧೨

---

ಕ. ಪ. ಅ–1. ಬಲಾತ್ಕಾರದಿಂದ ಬಂದಿಬಿದ್ದ. 2. ಶಂಬರಾಸುರ 3...3. ಚಂದ್ರ, ಇತ್ಯಾದಿಯಾದ ಬಿಳಿಯವಸ್ತುಗಳಂತಿರುವ, ಎಂದರೆ ಮಹಾಸತ್ವಪ್ರಚುರನಾದ. 4, ಯುದ್ಧ. 5. ಹೇಳಲು. 6. ಸೂರೆಗೊಳ್ಳ. 7. ಸ್ತ್ರೀಶಿರೋರತ್ನ. 8, ಮನ್ಮಥ. 9. ಈಶ್ವರ; ಹೇಗೆ? 10. ಬಿದಿರಿನಮೊಳೆ. 11. ಬಲಿತಬಿದಿರು.

ಗರುವರ ದೇವ ನಾರದಮುನಿ ಪೇಳ್ದುದು|ಗುರುವಾಕ್ಯವೆಂದುಕೈಕೊಂಡು||
ಮರುತರೂಪದೆ ಕೃಷ್ಣನರಮನೆಯನು ಹೊಕ್ಕು | ತರುಣನ ತಂದು
[ಮರ್ದಿಸುವೆ ||೧೪||

ಅಸುರಕರ್ಮವಿದಹುದೆಂದು ಪೇಳ್ದುದೈ|ತ್ಯೇಶನ ಬೀಳ್ಕೊಂಡು ಮುದದಿ||
ಕೇಶವ ನಾರಾಯಣ ಕೃಷ್ಣ ಎನುತಲಾ | ಕಾಶಕೆ ತೆರಳ್ದ ನಾರದನು ||೧೫||

ಗಗನದೆಬರ್ಪನಾರದನಕಾಣುತಸೂರ್ಯ|ಭಗವಾನುತನಗೊಬ್ಬರೊಡನೆ||
ಜಗಳವ ಗಂಟಿಕ್ಕದೆ ಬಿಡನೆಂದಂಜಿ|ಹುಗಲೊಡರ್ಚಿದ ಪಡುಗಡಲ ||೧೬||

ಮೂವೀಧಿಗೊಂಡುಮುನ್ನೀರ[1]ಬೀಳುತಚಂದ್ರ| ಗಾವಿಯುವಸನವತಳೆದು||
ಸಾವಿರಕೈಯಿಂದೆ ಪೊಡೆವಟ್ಟನೆಂಬಂತೆ | ತೀವಿತು ಕಡುಸಂಜೆಗೆಂಪು ||೧೭||

ಬಿತ್ತರಿಸಿದ ಸಂಜೆಗೆಂಪು ನುಂಗಿದ ಕ|ರ್ಗತ್ತಲೆಯೊಳು ನಿಶಾಚರನು ||
ಜತ್ತಾಯತ[2]ವೆತ್ತು ನಡೆತಂದು ಕಂಡ ದೇ|ವೋತ್ತಮನಿರ್ದ ಪಟ್ಟಣವ||೧೮||

ಮಿಸುನಿಯಕೋಟೆಕೊತ್ತಳದಿವ್ಯರತ್ನ ತೆ | ತ್ತಿಸಿದ ಹೊಂಗಳಸವೆತನಗೆ||
ಸಸಿನಿಟ್ಟ ಹಣತೆ[3]ಜ್ಯೋತಿಶ್ಚಕ್ರದಂತೆ ರಂ| ಜಿಸಿತು ರಕ್ಕಸನ ಕಣ್ಮನಕೆ||೧೯

ಭೇರಿತಂಬಟಡೋಳುಮುಂತಾದಬಹುವಾದ್ಯ|ಭೂರಿಬೊಂಬಾಳದೀವಿಗೆಯ[4]
ಪಾರಿಯ[5]ಪಟುಭಟರುಗಳು ಸುತ್ತಿದರಾಳು|ವೇರಿಯ[6]ಮೇಲಿಡಿಕಿಱಿದು||೨೦||

ಎಚ್ಚಱು ಬಹಳ ಪೋಪರೆ ಶಕ್ಯವಿಲ್ಲೆಂದು|ಮುಚ್ಚರವಱಿದು ಕೊಂಡಾಡಿ||
ಸ್ವಚ್ಛದಿ ಮಗುಳೆಂದು ಬುದ್ಧಿಯನೆನೆದುಕೊಂ|ಡುಚ್ಚರಿಸಿದ ಮನದೊಳಗೆ||

ಗುಣನಿಧಿಶುಕ್ರದೇವರು ಕೊಟ್ಟ ಮಂತ್ರದೆ| ಕ್ಷಣದಲ್ಲಿ ವಿಶ್ವರೂಪಾಂತ||
ಝಣಮಣಿಸದೆ ಶಂಬರಾಸುರವರ ಸಮೀ|ರಣ[7]ನಾಗಿ ಪೊಕ್ಕದ್ವಾರಕಿಯ||೨೧

ಪುರವನಿಟ್ಟಸುತ ನಿರ್ಜರಭೇದಿ ಕೃಷ್ಣನ| ಅರಮನೆಯೊಳಗೆ ರುಕ್ಮಿಣಿಯ
ವರಸದನವಪೊಕ್ಕುಕುವರನ ಕೊಂಡು ಶಂ|ಬರಪೋಱಮಟ್ಟನಾಕ್ಷಣದಿ||೨೨

---

ಕ.ಪ.ಅ—1. ಸಮುದ್ರದಲ್ಲಿ. 2. ಎಚ್ಚರಿಕೆ, ಜತನ. 3. ದೀಪ.
4. ಒಂದು ಕಬ್ಬಿಣದ ಕೋಲಿನ ತುದಿಗೆ ಬಟ್ಟಲಂತೆ ಸಲಾಕಿಗಳಿಂದ ಮಾಡಿ ಸೇರಿಸಿ, ಅದರಲ್ಲಿ ಬೆರಣಿಸೌದೆ ಮುಂತಾದ ಬೆಳಕು ಕೊಡುವ ಪದಾರ್ಥಗಳನ್ನು ಹಾಕಿ ಉರಿಸಿ, ಮೆರೆವಣಿಗೆಗಳ ಮುಂದೆ ತೆಗೆದುಕೊಂಡು ಹೋಗುತ್ತಿದ್ದರು; ಅಂಥ ದೀಪ. 5. ರಾತ್ರಿಯಲ್ಲಿ ಗಸ್ತುತಿರುಗುವ(?)
6. ಕೋಟೆಯ ಪೌಳಿಗೋಡೆ. 7. ಗಾಳಿ. 8. ಮನ್ಮಥ.

ಬಿಸರುಹದಳಲೋಚನೆ ಕೇಳು ನೀನೆನ್ನ | ಬೆಸಗೊಳುತಿರ್ದ ಮೇಲ್ಕತೆಯ ||
ಅಸಮಾಸ್ತ್ರ[4]ತಾಯ ಮಗ್ಗುಲೊಳೊರಗಿರಲು ರ | ಕ್ಕಸ ಮಾಯದಲಿ
[ಸೆಱೆಕೊಂಡ ||೨೪||

ಸಱಿಮಿಂಡಿವೆಣ್ಣೆ ಕೇಳ್ ದೈತ್ಯಮಾಯವ ಕೃಷ್ಣ | ನಱಿಯನೆಂದೆನಬೇಡ ಪವನ
ಮುಱಿಸಬೇಕಾಶಿಶುವಿನ ಕೈಯೊಳದಱಿಂದೆ | ಕಱುಬರಂದದಿ ನೋಡುತಿರ್ದ ||
ಅಂತಕನೆಂಬಂತೆ ಕುವರನ ಕದ್ದುಕೊಂ | ಡಂತರದಲಿ ಪೋಪ ಖಳನ ||
ಅಂತರಾತ್ಮಕನಾಗಿ ಶ್ರೀಕೃಷ್ಣ ಬೇಱೊಂದು | ಚಿಂತಾತುರವನಿಕ್ಕಿದನು ||೨೬||
ಈತರಳನ ಮರ್ದಿಸಿ ಭ್ರೂಣಹತ್ಯ[1] | ಪಾತಕವನು ಕಟ್ಟಿಕೊಳಲು ||
ಏತಕೆ ತನ್ನತಾನೇ ಸಾಯಲೆನುತೆ ಕೈ | ಸೋತಂತೆ ಬಿಸುಟನಬ್ಧಿಯಲಿ ||೨೭||
ಏಣಾಂಕ[2]ಗಗನದೊಳಿರ್ದು ತಾ ಪುಟ್ಟಿದ | ತಾಣವ ನೋಡುವಂದದಲಿ ||
ಕೇಣವಿಲ್ಲದೆ ಕಡಲಿಱಿವಂತೆ ಮತಿ ಪಂಚ | ಬಾಣ ನೀರೊಟ್ಟಿಲೊಳ್ ಬಿದ್ದ ||
ಮತ್ತಾರ ಕಣ್ಣಿಗೆ ಸಂದಿಸಲಿಲ್ಲ ಕ | ಗ್ಗತ್ತಲೆಯೊಳು ನಿಶಾಚರನು ||
ನೆತ್ತರ ಕರಣೆ[3] ನೀರೊಳು ಬಿದ್ದುದನು ಕಂ | ಡತ್ತರು ದಿಗ್ವನಿತೆಯರು ||೨೯||
ಆನುವರಿಲ್ಲದೆ ಬಿದ್ದ ಶಿಶುವನು ಪೆಣ್ಮೀನು ನುಂಗಿತು ತತ್ಕ್ಷಣದೆ ||
ತಾನೂರ ಹೊಕ್ಕ ಪೂರ್ವಾಚಲಶಿಖರದಿ | ಭಾನುಮಂಡಲ ಶೋಭಿಸಿತು ||೩೦
ಪ್ರಾತಃಸ್ನಾನವ ಮಾಡಿ ರಕ್ಕಸರಾಯ | ಭೂತೇಶನ[4]ಪಾದಯುಗವ ||
ಶ್ವೇತಾಬ್ಜದಿಂದರ್ಚಿಸಿ ದಾನವ ಬುಧ | ವ್ರಾತಕೆ ಕೊಟ್ಟನುತ್ಸವದಿ ||೩೧||
ಅಗಣಿತ ದಾನಶೀಲವ ಮಾಡಿ ನವರ | ತ್ನಗಳಡಸಿದ ವಿಷ್ಟರದೆ ||
ವಿಗಡರಕ್ಕಸರಾಯ ಕುಳಿತಿರ್ದನೊಡ್ಡೋ | ಲಗದಲ್ಲಿ ಸಾಮಂತರೊಡನೆ ||
ಪರಮೈಶ್ವರ್ಯಸಂಪನ್ನರಾಕ್ಷಸರಾಜ | ನಿರಲಿತ್ತ ಲವಣಾಬ್ಧಿಯಲಿ |
ತರಳನ ನುಂಗಿದ ಪೆಣ್ಮೀನನೊರ್ವನು | ವರಕಟ್ಟುಗಾಳದೆ ಪಿಡಿದ ||೩೩||
ಮಾಣಿಕಮೆಯ್ವಣ್ಣದ ಚಾಯಮೀನ ಕಂ | ಡಾಣಿಕಾರಿಕೆ ಜಲಗಾಱ ||
ಕ್ಷೋಣೀಶ್ವರನಾಸ್ಥಾನಕೆ ತಂದು ಕೈ | ಗಾಣಿಕೆ ಕೊಟ್ಟ ರಕ್ಕಸಗೆ ||೩೪||
ಹರಗೆ ಹೆರಳು ಹದ್ದುತೋಱಿನೆ ಕೆಮ್ಮೀನು | ತೊರೆಗಡಲೊಳಗುಂಟುಬಲ್ಲೆ ||
ನೆರೆದುರ್ಗಂಧವಿಲ್ಲದೆ ಪರಿಮಳವಾಂತು | ಮೊಱೆವಂತೆ ತಂದೆ ಕೇಳಯ್ಯ ||೩೫

---

ಕ. ಪ. ಅ—1. ಶಿಶುವನ್ನು ಕೊಲ್ಲುವ ಪಾಪ. 2. ಚಂದ್ರ; ಹೆಗೆ? 3. ರಕ್ತದ ಹೆಪ್ಪು, ಗರಣೆ. 4. ಈಶ್ವರನ.

ಮೀನ ತಂದವಗೆ ಬೇಡಿದ ವಸ್ತುಗಳ ಕೊಟ್ಟು|ಭೂನಾಥ ತಾತ್ಪರಿಯದಲಿ||
ತಾನೊರ್ವ ಹೆಗ್ಗಡತಿಯು ಕೈಯ ಕಳುಹಿದ| ಬೋನದ ಮನೆ[1]ಗೀವುದೆನುತ||
ನಿಡಿದೇಹ ಸ್ವರ್ಣಚ್ಛಾಯೆ ಮಂಜಿಷ್ಠೆ[2]ಬಾ|ಯ್ವಿಡುವ ಪೆಣ್ಮೀನ ತಂದವಳು||
ಪಿಡಿನಡುವಿನ ಮಾಯಾಂಗನೆಗಿತ್ತುಬೇ | ಗಡಿಗೆಯ ಮಾಡಹೇಳಿದಳು ||೩೭

ತಾ ಸಿರಿಹಸ್ತಯುಗ್ಮದೊಳಾಂತು ಪಿಡಿದು ಮಾ|ರಾಸಿಯೊಳಿರ್ದ ಪೆಣ್ಮೀನ ||
ಭಾಸಿತ ದಿವ್ಯದೇಹವ ಕಂಡು ಕಣ್ಣೀರ | ಸೂಸಿದಳಖಿಳದುಃಖದಲಿ||೩೮||

ಸಾಗರದೊಳಗಿರ್ದ ಜಲಗನ[3] ಬಲೆಯೊಳ | ಗಾಗಬರ್ಪುದೆ ನೀ ನಿನ್ನ||
ಭೋಗ[4] ಬೊಗ್ಗಾದುದೆನುತ[5] ವಿಚ್ಛೇದನೋದ್ಯೋಗವ ನೆನೆದಳರ್ತಿಯಲಿ||

ಮಿಸುನಿಯ ಕಾಳ್ವಲಗೆಯ ಮೇಲೆ ಪೆಣ್ಮೀನ| ಬಸಿಱ ಬಗಿವೆನೆಂದೆನುತ ||
ಅಸಿಧಾರೆ[6]ಯಲಿ ಮೆಲ್ಲರ್ದೆಯ ಬಗಿಯಲಾ| ಶಿಶು ಪೊಱಮಟ್ಟುದಾಶ್ಚರ್ಯ ||
ಜಲಚರ[7]ಗರ್ಭದಿಂ ಪೊಱಮಟ್ಟು ಬರಲಾ | ವಿಲಸಿತಶಿಶುವ ರೂಪಿಂಗೆ ||
ಅಲರಂಬನರಸಿಯ ದೃಢಚಿತ್ತ ದೃಗುಸಂ | ಚಲಿಸದೆ ನಿಂದು ನೋಡಿದಳು ||
ನಿಟ್ಟಿಸಲಕ್ಷಿಯು ಬೆಂಡೆದ್ದ ನವಿ[8]ರ್ಗುಡಿ ಗಟ್ಟಿತು ಬೆಮರ್ವನಿ ಮೊಳೆತು||
ಪುಟ್ಟಿತು ಗದ್ಗದ ಮೆಯ್ ಝುಮ್ಮಝುಮ್ಮೆಂದು | ತಟ್ಟಿತು ಮನಮೂರ್ಛೆ [ರತಿಗೆ ||೪೦||

ಪರಮಪವಿತ್ರತೆಯಾಗಿರ್ದ ತನಗೀ | ತರಳನ ಮೇಲೆ ಭ್ರಾಮಕವ ||
ಇರಲೀಯದೊಡಲನೀಡಾಡುವೆ ನೆನಲಾಗಿ| ವರನಭೋವಚನ ಸೊಲ್ಲಿಸಿತು||
ಕಂದನ ಕಾದುಕೋ ಮೀನ ಗರ್ಭದಿ ಪುಟ್ಟಿ |ಬಂದ ಮನ್ಮಥ ಶಂಬರನ|
ಕೊಂದಾಕ್ಷಣ ನಿನ್ನಾಳಿದನಾದಪ | ನೆಂದುದು ವರನಭೋವಚನ ||೪೪|

ಸತ್ಯವಿದಹುದು ನನ್ನಾಳಿದನಾದ ನಿ | ಮಿತ್ಯದಿ ಮನ ಮೂರ್ಛಿಸಿತು ||
ಅತ್ಯಂತ ಮಮಕಾರದಿ ಸಲಹುವ ಪಾರು | ಪತ್ಯವ ನೆನೆದಳರ್ತಿಯಲಿ ||೪೫

ಬಿಸಿನೀರಿಂದೆ ಮೆಯ್ದೊಳೆದು ಪಕ್ಕಯೊಳೂರ | ಗಿಸಿ ವಸ್ತ್ರದಿಂ [ಮುಚ್ಚಿ ಹೊದಿಸಿ ||
ಭಸಿತವ[9] ಮಂತ್ರಿಸಿ ಕಪ್ಪಿಟ್ಟು ನಯನದೊ | ಳಸಿತಾಂಜನವನಿಕ್ಕಿದಳು|೪೬||

ಗಂಡನ ಪಿಡಿದು ನುಂಗಿದ ಮೀನ ತಾ ಚೆನಿ|ಖಂಡವ ಕೊಯ್ವಂತೆಕೊಯ್ದು||

---

ಕ. ಪ. ಅ—1. ಅಡಿಗೆಯ ಮನೆ. 2. ಕೆಂಪುಬಣ್ಣದ ಲತೆ. 3. ಬೆಸ್ತನ. 4. ಮೈಯು. 5. ಪರಿಪಾಕವಾಗುವುದೆನುತ. 6. ಕತ್ತಿಯ ಅಲಗು. 7. ಇಲ್ಲಿ ಮೀನು. 8. ಕೂದಲು. 9. ವಿಭೂತಿಯನ್ನು.

ಸಂಡಿಗೆಗೆಯುಲು ಶಸ್ತ್ರದೊಳಗಾಯ್ ವರ ಮೇಲು । ಗೆಂಡದಿ ಕರೆಯುಕಾ
[ಸಿದಳು ||೪೭||

ಮಿಕ್ಕ ಮಾಂಸವ ಬಲುಕ್ಕೈಗೆಲಸಗಳಿಂದೆ । ಚೊಕ್ಕಟಗೊಳಿಸಿಭೀತಿಯುಳಿ||
ರಕ್ಕಸರಾಯುಗಾತಿಥ್ಯವ ಗೆಯ್ದಳು । ಸಕ್ಕರೆವಿಲ್ಲನರ್ಧಾಂಗಿ ||೪೮||

ನಾನಾಭಕ್ಷ್ಯಭೋಜ್ಯಂಗಳಧಿಕವಾಗಿ । ಬೋನಗಾರ್ತಿಯರ ಕೈಯಿಂದೆ||
ಭೂನಾಥಗುಣಬಡಿಸಿದೊಡಂಡು ಮೆಚ್ಚಿದ । ಮೀನಾಂಕನರ್ಧಾಂಗನೆಗೆ ||

ಅಡಬಲ್ಲಜಾಣೆ ಮೆಚ್ಚಿದೆನಾನದರಿಂದೆ। ಪಡೆದಳೆ ಪತಿವ್ರತಸ್ತ್ರೀಯು||
ತಡೆಯುವುದಿಲ್ಲವಿನ್ನಾಲಯದೊಳಗೆ ವಿಂ । ಗಡವಾಗಿ ಸುಖಬಾಳಿಂದ||೫೦||

ನೀ ಧರ್ಮಿಷ್ಟ ನಿರ್ಜರವುನೋಧರ್ಮನೆ। ಕ್ರೋಧವ ಬಿಡು ದೈತ್ಯೇಶ ||
ಭೇದವಿಲ್ಲದೆ ನಂಬುಗೆಗೊಟ್ಟು ಸನ್ನಪ । ರಾಧವ ಮಾಣಿಯೆಂದಳಬಲೆ ||೫೧||

ಮತ್ತೋರ್ವ ಸ್ಮರವಿಳಾಸಿನಿ ಸನ್ನೆಳು ಬಂದು । ಪೆತ್ತಳನ್ನೊಂದು
[ಶಿಶುವನು ||
ಪುತ್ರನ ಸಲಹಲೊ ಬೇಡವೊ ಹೇಳೆಂ । ದತ್ತಳು ಕಂಬನಿಗರೆದು ||೫೨||

ರೋದನಗೆಯ್ವಲೇತಕೆ ಕೇಳು ಕೇಳು ತ । ಳೋದರಿ ನಿನ್ನೊಳು ಶಿಶುವ||
ಸಾದರದಿಂದೆ ನೀಕಾದುಕೋ ಎಂದು ವಿ । ನೋದದಿ ಪೇಳ್ದನಾಯಕಗೆ ||೫೩

ಕ್ಷಿತಿನಾಥನ ಕೈಯ ಬೀಳ್ಕೊಂಡು ಬಂದಳು।ರತಿದೇವಿ ತನ್ನಮಂದಿರಕೆ||
ಅತಿಜಾಣ್ಮೆಯೊಳೊಬ್ಬ ಕೆಳದಿಯ ಹಡೆದ ಬಾ । ಣತಿಯಂತೆ ಸಿಂಗರಿಸಿದಳು||

ಕೆಳದಿಯು ವರಕುಮಾರಕನ ನಿಟ್ಟಿಸುವಂತೆ।ಕಳಹಂಸಗಮನೆ ಬಾಲಕನ।
ತಳತಳಿಸುವ ದಿವ್ಯದೇಹದ ಮೇಲೆ ಕಂ । ಗಳ ಹರಹಿದಳೆತ್ತಯುಲಿ ||೫೫||

ನೆಟ್ಟನೆ ಮೊಗನೋಡಿ ಮುದ್ದಿಪ ತರಳನ । ಪುಟ್ಟ ಕೈಗಳ ತಂದು ತನ್ನ।
ಬಟ್ಟ ಬಲ್ಮೊಲೆಗಡರ್ಚುವಳು ಬಾಯೊಳು ಬಾಯ । ನಿಟ್ಟು ಗಲ್ಲವ
[ಪಿಡಿಪಳು ||೫೬||

ಸುತನಂತೆ ನುಣ್ಮೊಲೆವಿಡಿವನು ಶತನಖಾಂ। ಚಿತವಾಡುವನುರಸ್ಥಳದಿ||
ಕೃತಕದಿಂ ನಸುನಕ್ಕು ಮುದ್ದಿಸಲಧರಾ । ಮೃತವುಂಡು ಬಳೆದುದಾಶಿಶುವು ||

ತಿಂಗಳಾದುದು ತಿಂಗಳೆರಡಾದುದು ಮೂರು।ತಿಂಗಳಾದುದು ನಾಲ್ಕೈದು||
ತಿಂಗಳಾದುದು ತಿಂಗಳಾರೇಳು ನೆರೆದೊಂಬ। ದಿಂಗಳಾದುದು ಕಂತುವಿಗೆ||೫೮||

ನೂತನ ಮೊಳೆವಲ್ಲೊಗೆದುದು ತೊದಲ್ವಾತ । ಮಾತನಾಡುವ ಮುದ್ದ
[ಗೆಯ್ವ ||

ಭೂತಳದೊಳಗಂಬೆಗಾಲಿಟ್ಟು ನಡೆವಂತೆ | ಚೇತನವಾದುದಂಗಜಗೆ ||೫೯||

ಮಿಗಿಲು ಶೋಭಿಸುವ ಹೊನ್ನುಡೆನೂಲು[1] ಕಾಲಂ | ದುಗೆ ಗೆಜ್ಜೆ ಘಣಿ [ರೆಂಬ ರವದಿ ||
ಪಗೆವನೆಯೊಳಗೆ ನರ್ತಿಸುತಿಹ ಬಾಲನ | ಬಗೆ ಲೇಸಾಯ್ತು ನೋೞ್ಪರಿಗೆ ||
ರಾರಾಜಿಸುವ ಹೊಂದೊಡಿಗೆಯು ಕುವರ ನೀ|ನಾರವನೆಂದು ಕೇಳಿದೊಡೆ||
ಮಾರ[2]ನನರ್ಧಾಂಗಿಯು ಸಖಿ ಪೆತ್ತ ಕುವರನೆಂ ದೋರಂತೆ ಪೇೞ್[3]ದರವಗೆ ||
ಅಕ್ಕಱಿಂ ತಲೆದೋಱಿತವನಿಯೊಳಹ ಗಂಡು|ಮಕ್ಕಳ ಮಾಣಿಕವೆನಿಪ||
ಚೊಕ್ಕನ ಪಿಡಿದು ಮುಂಡಾಡುತ ಗರುಡಿಯ|ಹೊಕ್ಕನು ದೈತ್ಯಸಾಧನೆಗೆ||೬೦||

ಈತರಳನನಾಗರುಡಿಯು ಜಗತಿಯು ಭೇತಾಳನೆಡೆಯು ಕುಳ್ಳಿರಿಸಿ ||
ತಾ ತೊಡೆ ಚಟ್ಟಣವೆರಸಿ ಕಾಸೆಯು ಕಟ್ಟಿ|ಭೂತಾಕೃತಿವೆತ್ತು ನಿಂದ ||೬೨||

ನಿರ್ದೈವ[4] ದೈತ್ಯ ತನ್ನಂತರಂಗದೊಳಡಿ | ದಿರ್ದ ವಿದ್ಯವ ರತೀಶ್ವರಗೆ||
ನಿರ್ಧರವಾಗಿ ಸಮರ್ಪಿಪ ತೆಱದಡ ಬಿದ್ದ ಭೇತಾಳ ದೇವರಿಗೆ ||೬೩||

ಪೊಡೆವಟ್ಟು[5] ಬೇಡಿಕೊಂಡೆದ್ದು ಸಾಧನೆಗೆಯ್ಯ|ತೊಡಗಿದ ಜಗಜಟ್ಟಿದೈತ್ಯ||
ಜಡಜಸಂಭವ ಮುಖ್ಯ ಸುರರಿಂಗೆ ಭೇದವ|ಕೊಡದ ಮಾಯಾವಿರಾಣವನು ||
ದೆಸೆಯಿಂದೆ ದೆಸೆಯಾವ ತಾಣಕ್ಕೆ ಹೂಡಿದ|ಹೊಸಮುಸೆವೆತ್ತ ಖಡ್ಗದಲಿ ||
ಕುಸಿವೆತ್ತು[6] ಖಳನ ಮಸ್ತಕವ ಕೀೞ್ಪಡಿಸಿ ರಂ|ಜಿಸೆ ಕಾಮದೇವ ನಿಟ್ಟಿಸಿದ||
ಕತ್ತಿಯು ಹೊಳಹು ತೋಱಿತು ಸೂರ್ಯನ ಮೆಯ್ಯ|ಮುತ್ತಿದ ಕಿರಣ [ಗಳಂತೆ ||
ಎತ್ತಿದ ಚಳಯು ವೃತ್ತತೆಯು ನೋೞ್ಪೊಡೆ ಕಣ್ಣ|ಕುತ್ತಿದುವೇನ ಬಣ್ಣಿಸುವೆ||
ಲಾಗಿಸಿ ನಭಕುಪ್ಪರಿಸುವ ಬಂದಿದಿ ರಾಗಿ ನಿಲ್ಲುವ ಭೂತದಂತೆ ||
ತಾಗುವ ಶಸ್ತ್ರಕೆ ಸಿಕ್ಕದೆ ಬಯುಲಾಗಿ | ತಾಗಿ ಗರ್ಜಿಪ ಸಿಂಹದಂತೆ ||೬೮||

ವಿಧಿಯಿಂದೆ ಶುಕ್ರದೇವರು ತನಗಱುಹಿದ|ಹದಿನಾಱು ಶತವಿದ್ಯವನು ||
ತುದಿ ಮೊದಲಿಂದೆ ವಿಸ್ತರಿಸಿದ ಕೌಟಿಲ್ಯ|ನಿಧಿ ಶಂಬರಾಸುರ ಖಳನು ||೬೯||

ಕಂತುಪಿತನ ಮಾನಸ ಮಾಯತಾಣವಿ|ನ್ನೆಂತುಟೊ ಶಂಬರಾಸುರನ ||
ಭ್ರಾಂತಿಗೊಳಿಸಿ ಮಹದಾದಿವಿದ್ಯವ ಸ್ಯೆ|ಪಿಂ ತೋಱಿಸಿದನು ಕಂತುವಿಗೆ||೭೦||

---

ಕ. ಪ. ಅ—1. ಉಡಿದಾರ. 2. ಮನ್ಮಥ. 3. ಪ್ರೀತಿ.
4. ಅದೃಷ್ಟಗೇಡಿ. 5. ನಮಸ್ಕರಿಸಿ. 6. ತಗ್ಗಿ.

ಬಂದರೆಗಳಿಗೆ ನೋಡಿದ ಮಾತ್ರದಿ ಕಾಣ|ಬಂದುದಾವಿದ್ಯೆ ಕಂತುವಿಗೆ ||
ಸಂದುದು ಮನದಭಿಪ್ರಾಯ ಸತ್ಕರುಣಾ ಸಿಂಧು ಶ್ರೀಕೃಷ್ಣನಾಜ್ಞೆಯಲಿ||೨೧||
ಮರುಳು ದೈತ್ಯಾಧೀಶ್ವರ ಸಾಧನೆ ಮುಗಿ ದರಲಂಬನಪರಾವತಾರ ||
ತರಳ ಸಹಿತ ಪೊೞಮುಟ್ಟಿ ಬಂದನು ಕೆಂ|ಬರಲಂತೆ ಬೆಮರ್ವನಿದಳೆದು||೨೨
ಬಣ್ಣ ಬಂಗಾರವನುಡತೊಡಕೊಟ್ಟು ಹೊಂ|ಬಣ್ಣ ಚಂದನವ ಪೂರೈಸಿ||
ಚೆಣ್ಣನ ಬೀೞ್ಕೊಡಲೈತಂದ ರತಿಯೊಸಗಣ್ಣ ಪುಣ್ಯದ ಸಿದ್ಧಿಯೆನಿಪ ||೨೩||
ಈಗ ನಿಖಿಳರಾಯನ ಗರುಡಿಯು ಹೊಕ್ಕು|ಬೇಗಲೈತಂದೆ ಬಾಯೆನುತೆ ||
ಪೂಗೋಲನ ಬಿಗಿಯಪ್ಪಿ ಮುಂಗಾರಿಯ[1] ದಾಗಮಾಂತರವ ಪೇೞಿದಳು||೨೪||
ಆತನ ಮಾಯಾಪಾರಾಣದ ವಿದ್ಯಾ|ವ್ರಾತವ ತನಗನುಗ್ರಹಿಸಿ ||
ಭೇತಾಳ ವಿಘ್ನೇಶ್ವರರು ಕೊಟ್ಟರು ಕೇಳು|ಪೀತಾಂಬರನಾಜ್ಞೆಯಲಿ ||
ಬಂದುದು ಕೃಷ್ಣರಾಯನ ಕೃಪೆಯಿಂದಲಿ|ಹಿಂದಣ ವರಮೂಲಶಕ್ತಿ ||
ಮುಂದಾವುದಕ್ಕೆ ಚಿಂತಿಸಬೇಡ ಸುಖಬಾೞಿಂದ ಕಂದರ್ಪ ಮಾನಿನಿಗೆ||೨೬||
ಸೀಱ್ ಕೇಳ್ ಮಾಯಕಾಂತನ ಮೂಲಶಕ್ತಿಯು | ತೋಱ್ನೆ ಬಳೆದು
[ತೋಱಿಸಿದ ||
ಗಾಱಾದ ಶಂಬರಾಸುರನೆಂದು ಕವಿಲ್ಲ|ಗಾಱನ ಕೊಂಡಾಡಿದಳು ||೨೭||
ಸ್ಮರರತಿದೇವಿಯರಿರಲಿತ್ತ ಶಂಬರಾ|ಸುರ ಮಿಂದು ಭೋಜನಗೆಯ್ದು ||
ವರರತ್ನಮಂಟಪವೆಡೆಗೈದಿ ಸಿಂಹವಿಷ್ಟರದಲ್ಲಿ ಕುಳಿತ ವೈಭವದಿ ||೨೮||
ಶಂಬರಾಸುರನೋಲಗ ಸೀರೊಟ್ಟಲೆಂ|ದೆಂಬಂತೆ [2]ರಾಜಿಸುತಿರಲು ||
ಕುಂಭಸಂಭವ[3]ನಂತೆ ನಾರದಮುನಿರಾಯ|ಮುಂಬಾಗದಲಿ ಬಂದಿೞಿದ ||೨೯||
ವರಮೋಹನತರಂಗಿಣಿಯೆಂಬ ಕಾವ್ಯವ| ಬರೆದೋದಿ ಕೇಳಿದ ಜನರ ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವ ಲಕ್ಷ್ಮೀಕಾಂತ ಬಿಡದೆ||

— ಅಂತು ಸಂಧಿ ೧೧ಕ್ಕಂ ಪದ ೬೪೪ಕ್ಕಂ ಮಂಗಳಂ —

ಕ. ಪ. ಅ—1. ಮುಂದಣಕಾರ್ಯ. 2. ಸಮುದ್ರದಂತೆ.
3. ಅಗಸ್ತ್ಯ: ಈ ಪದ್ಯಗಳಲ್ಲಿ ತೋರುವ ಭಾವವೇನು?

# ಹನ್ನೆರಡನೆಯ ಸಂಧಿ

---

**ಶಂಬರಾಸುರನ ವಧೆ:—**

ಭೂತಳದೊಳು ಸತ್ಯಭಾಮೆಗೋಸುಗ ಪಾರಿ|ಜಾತವೃಕ್ಷವ ಕಿತ್ತು ತಂದ|
ಧಾತರೊನ್ನತನ[1] ಕಾರುಣ್ಯದಿ ಮನ್ಮನೋ|ನಾಥ ವಿಸ್ತರಿಸು ಮೇಲ್ಕತೆಯ||೧||
ನೆನೆಯಲಾತ್ಮನೊಳುದಿಸಿದ ಮಾತ ನಾಲಗೆಗೊನೆಯಲ್ಲಿ ವಿಸ್ತರಗೆಯ್ದ||
ಇನಿಯಳೆ ಕೇಳ್ ನಿನ್ನ ಕರ್ಣರಸಾಯನ|ವೆನಲುಸಿರುವೆನೀ ಕೃತಿಯ ||೨||
ಲಿಪಿಕರ್ತೃವಿನ[2] ಮಾನಸಪುತ್ರ ಮತ್ಕರ್ಮ|ವಿಪಿನಕುಠಾರ ನೀ ಬಂದ ||
ಗುಪಿತವ ಪೇಳೆಂದು ಬೆಸಗೊಳಲವ ಪುನ|ರಪಿ ಪೇಳ್ದ ಶಿಳರಾಯನೊಡನೆ||
ವನಜಾಕ್ಷನಣುಗನ ಮರ್ದಿಸೆಂದೆನಲುದಾ|ಸಿನನ[3]ಮಾಡಿದೆ ಪಾಪಿ ನಿನ್ನ ||
ಘನಸತ್ವ ಸಫಲವಲ್ಲಗೆ ಕ್ರೋಪುದದ ಕಂಡು|ಮನನಿಲ್ಲದೈತಂದೆ ಮಗನೆ ||೪||
ತಂದು ನಾ ಬಡಕುವರಾರಕನನು ಕಡಲೊಳ|ಗಂದೆ ಹಾಯಿಕಿ ಮರ್ದಿಸಿದೆ|
ತಂದೆ ನೀನೆನ್ನ ಮೇಲಣ ಮಮಕಾರದಿ|ಬಂದೆ ಬದುಕಿದೆನು ಜೀಯ ||೫||
ಇಲ್ಲ ರಕ್ಕಸ ನೀನು ಕುವರನ ಕೈಯಾಳಿ ಕೊಲ್ಲದೆ ಕಡಲೊಳು ಬಿಸುಟೆ||
ಹೊಲ್ಲೆಹದೊಂದು ಪೆಣ್ಮೀನು ಕಂಡೆಱಗಿ ಪೂವಿಲ್ಲನ ನೆಱೆ[3] ನುಂಗಿತಾಗ||೬||
ಬಬ್ಬರ ಕಣ್ಗೆ ಗೋಚರಿಸದಂದದಿ ಮೀನ ಗರ್ಭವ ರತಿದೇವಿ ಬಗಿಯೆ ||
ಅರ್ಭಕ ಪೊಱಮಟ್ಟು ಬಂದನು ಪಳಚಂದ್ರ| ಸ್ವರ್ಭಾನು[1] ತಾನೆಂಬಂತೆ||೭||
ಲಲನೆ ತನ್ನಯ ವಿಲಾಸಿನಿನ ನಂದನನೆಂದು| ಸಲಹಿದಳಾಹೆಣ್ಣು ನಿನ್ನ ||
ಹಲವು ವಿದ್ಯೆಯ ಗರುಡಿಯ ಹೊಕ್ಕು ಕಲಿತನು| ಗೆಲವುಂಟು ಸೋಲ [ಕೇಳ್ ನಿನಗೆ ||೮||
ಪುಟ್ಟ[5]ನೆಂದೆನ ಬೇಡ ಪರಮಶಕ್ತಿಯ ತಂದು|ಕೊಟ್ಟನು ಕೃಷ್ಣ ಮ [ನ್ಮಥಗೆ ||
ಧಟ್ಟೈಸಿ ನೀ ಬಾಹುಬಲದಿಂದೆ ಕಾದಲು|ಪೆಟ್ಟಸಿಕ್ಕದೆ ಬಿಡನೆಂದ ||೯||
ಕುಡಿಮೀಸೆ ಕುಣಿದುವು ನಾಸಿಕ ಹೊಗೆ ಸುತ್ತಿ|ಕಿಡಿಗಳನಕ್ಷಿ ಮುಕ್ಕುಳಿಸೆ
ಜಡಿದನು ಕೆಯ್ಯ ಖಡ್ಗವ ಜಳಪಿಸಿ|ದೈತ್ಯ|ನುಡಿದ ಕಠೋರವಾಕ್ಯಗಳ ||೧೦||

---

ಕ. ಪ. ಅ—1. ಶಕ್ತಿವಂತನ. 2. ಬ್ರಹ್ಮ; ಹೇಗೆ? 3. ಉದಾಸೀನವೆಂದು ಸರಿಯಾದ ಪದ. 4. ರಾಹು. 5. ಸಣ್ಣವನು.

ಸಱ್ರನೆ ಸೀೞ್ವ ದಿಗ್ಗಜದ ಮಂಡೆಯ ಮೆಟ್ಟಿ|ಸುಱ್ರನೆ ಸುರಿವೆನೀೞ್ಗಿಡಲ|
ತಿಱ್ರನೆ ತಿರುಹುವ ಧರಣಿಯ ಮಹದಾದಿ ಪರ್ವತವನು ಕೀೞ್ವ ನೋಡು ||

ಕೋಪವಿನ್ನೇತಕೆ ಮಗನೆ ನಿನ್ನೊಳು ಕಾದ ಲಾಸಱ[3] ಸುರನರೋರಗರು|
ಈಪಡುಜನ[1] ಕೆಯ್ಯ ಕಾರ್ಯವೇನೆಂಬುದ|ನೀಪರಿಕಿಸಿ ಕೇಳ್ದಱಿಯ||೧೩||

ಆದಿಯೊಳಜ ಕೊಟ್ಟ ವರ ನಿನ್ನ ವಿದ್ಯೆಯ|ಸಾಧಿಸಿದನ ಕೆಯ್ಯ ನೀನು ||
ಭೇದಿಸಿಕೊಂಬ ಸಂಪ್ರಾಪ್ತಿಯುಂಟೆಲವೊ ವಿ|ಭೇದಿಸಿ ನೋಡಿಕೊ ಮಗನೆ||

ನೀತಿಯಿದಹುದು ಸನ್ಮುನಿರಾಯ ನಿನ್ನಯ ಮಾತ ಮೀಕ್ಕುವನಲ್ಲ ನಾನು ||
ಈತರಳನ ಕೆಯ್ಯಕೊಂಬೆನೆ[2] ಸಮರಕ್ಕೆ|ಪೀತಾಂಬರ ಬಂದರೇನು ||೧೪||

ಅಂತಕಹರ|ನಾದೊಡಾಗಲಿ ಬೞಿಬಾಯ ಪಂತದ ಮಾತ ಸೊಲ್ಲಿಪರೆ ||
ಎಂತಾದೊಡೆ ಕಾದಿಮೆಡರಿಲ್ಲದೆ ಗೆದ್ದು|ನಿಂತರೆ ನಿಜವೆನ್ನ ಬಹುದು ||೧೫||

ಹುಟ್ಟಿದ ದಿನವೇೞಱೊಳಗೆ ಷಣ್ಮುಖ ಹುಡಿ ಗುಟ್ಟಿದು ತಾರಕಾಸುರನ||
ನೆಟ್ಟನೆ ಮುಱಿದು ನಿರ್ಜರರಿಗೆ ಪಟ್ಟವ ಕಟ್ಟಿದ ಕತೆಯ ಕೇಳ್ದಱಿಯಾ|೧೬||

ಸಣ್ಣವನೆನಬೇಡ ಹರಿ ತನ್ನ ಪೆತ್ತನ ಕಣ್ಣಸ ಮುಂತಿಹ ಮೇದಿನಿಯ ||
ತ್ರಿಣ್ಣ[4]ವನಿೞುಹಿದ ಬಾಹುಬಲಾಢ್ಯರ|ಕಣ್ಣಱ[3] ಕಂಡು ನೀನಱಿಯಾ ||೧೭||

ಕಪಟನಾಟಕಸೂತ್ರಧಾರನ ಸುತ ನಿನ್ನ|ಕಪಟವಿದ್ಯೆಗಳ ಸಾಧಿಸಿದ ||
ಕಪಟಾನ್ವಿತನೊಳು ನಾನೊಮ್ಮೆ ಪೋಗಿ ನಿಶ್ಕಪಟದಿ ಮಾತಾಡಿಬರಲೆ ||

ನಾರದಮುನಿಪುಂಗವ ನಿನ್ನ ಹೋಗೆನ ಬಾರದು ಬೇಡೆನಬಹುದೆ ||
ಆರ ಮೇಲಾಪೇಕ್ಷೆಯಿದ್ದಂತೆ ಪರಮವಿ|ಚಾರವ ಮಾಡು ಹೋಗೆಂದ ||೧೮

ಒರಂತೆ ಮಧುಘೃತಂಸದಾಳರಸಗೋ|ಕ್ಷೀರದಂತೆಸೆವ ಕಾರ್ಯಕ್ಕೆ ||
ನೀರಂತೆ ಕಡಜಿಗ[5]ನೆಸಱಂತೆ ಪುೞಿಯಂತೆ|ನಾರದ ಬಂದನಾಯೆಡೆಗೆ ||೨೧||

ಬೋಧಾರುಹನಾಗಿ ಮುನಿರಾಯ ನೀ ಬಂದ ಭೇದವ ತಿಳಿದೆನೆಂದೆನುತೆ ||
ಪಾದಕೆ ಪೊಡೆಮಟ್ಟು ರತಿದೇವಿ ಪರಮಪುಣ್ಯೋದಯ ಸಲಹೆಂದಳೞುತೆ ||

ಕೊರಲೊಳುಗದ್ಗದ ಸುರಿವ ಕಣ್ಬನಿ ಕೆಯ್ಯ|ಬೆರಲನೆಗ್ಗಿಸುವ ಸಂಪಗೆಯ
ಅರಳುಂಡ ಪೆಣ್ದುಂಬಿಯಂದದಿನಿಯಪ್ಪೊ|ಸರಲನ ತಂದು ತೋಱಿದಳು ||೨೨||

---

ಕ. ಪ. ಅ.—1. ಸಣ್ಣವ. 2. ಲಕ್ಷ್ಯಮಾಡುವೆನೆ? 3. ಈಶ್ವರ; ಹೇಗೆ? 4. ಭಾರ. 5. ಕಡಜಿಗನೆಸರು– (?)

ಕಂಡನುಮುನಿರಾಯ ಕಮನೀಯಕುಸುಮಕೋ|ದಂಡನ ತರಳವಿಗ್ರಹವ||
ಚಂಡವಿಕ್ರಮದೇಟಿಗೆಯ ನೋಡಿ ಮನಸೋತು|ಕೊಂಡಾಡಿದನು ಕೂ
[ರ್ಮೆಯಲಿ ||೨೪||

ಮುದ್ದಡಸಿದ ಚೆಣ್ಣ ತಾವರೆಗಣ್ಣನಿ|ರುದ್ಧ ತಾತ್ಸರಿಯದಿ ನಿನಗೆ ||
ದುರ್ಧರಪರಮಶಕ್ತಿಯ ಕೃಪೆಮಾಡಿದ|ಕದ್ದೆಯ್ಸದೆ ಕಾದು ಮಗನೆ ||೨೫

ದೇವಾಧೀಶ ನಿನ್ನಯ ಸದುಹೃದಯಾ| ಜೀವದೊಳಿರಲೆಂದು ಹರಸಿ ||
ಕಾವನ ಕೆಯ್ಯ ರಕ್ಕಸರಾಯನಾಯ ಷ್ಯ|ತೀವಂತೆ ಮಾಡಿದ ಮುನಿಪ||೨೬||

ಮುರಹರಹೃದಯ ನೀನಾದ ಸನ್ಮನಿ ನಿನ್ನ|ವರವಾಕ್ಯವಜ್ರಜೋಡಾಯ್ತು[1]
ತರಳನೆಂದೆನ ಬೇಡ ತವಕಿಪ ದೈತ್ಯನ|ಹರಣವ ಕೊಂಬೆ ನೋಡೆಂದ ||೨೭||

ಶಿವನಿಂದಲೀಬಟ್ಟೆ ಬಂತು ಮತ್ತಾಂತಗಿಂ ದಿವನಿಂದಲೇನಾದಪುದೊ ||
ಅವಗಡವಾಗಿದೆಯೆನಗೆ ವಿಸ್ತರಿಸೆಂದು|ಯುವತಿ ತನ್ಮಸಿಗೆಱಗಿದಳು ||೨೮||

ಮಲ್ಲಿಗೆಗೋಲನ ಮಡದಿ ಕೇಳ್ ನಿನಗಾವು|ದಿಲ್ಲವೆಂದಾಡಿ ಮನ್ಮಥಗೆ|
ಗೆಲ್ಲವಱಿತು ನಾರದಮುನಿ ತೆರಳಿಸಿ ದ್ದಲ್ಲಿಗೆ ಬಂದನಾಕ್ಷಣದಿ ||೨೯||

ಬಾರದ ಮುನ್ನ ಧಿಕ್ಕರಿಸಿ ಕೇಳ್ದಸುರಂಗೆ|ಮಾರನವಾಕ್ಯ ನಿಷ್ಠುರವ ||
ನಾರದಮುನಿ ವಿಸ್ತರಿಸಲ್ಕೆ ಕರ್ಣಕ|ಠೋರವನಾಂತು ಕೋಪಿಸಿದ ||೩೦||

ನೀರಜಭವನ ಮಾನಸಪುತ್ರ ನೀನಲ್ಲ|ದಾರಾದೊಡೀಮಾತುಗಳ ||
ಭಾರಾಂಕನಾಗಿಯೆನ್ನೊಡನೆ ಪೇಟಿರ್ದೊಡೆ ಸೀಟಿ|ತೋರಣಗಟ್ಟಪೆನೆಂದ ||
ಕಂಡುದ ನುಡಿದರೆ ಕೋಪವೆ ಕುಸುಮಕೋ|ದಂಡ ಕಾದಲಿಕೆ ಬಂದಿಹನೆ||
ಅಂಡಲೆದಾತನ ಪಿಡಿತಂದು ನಡುವಿಗೆ|ತುಂಡ ಮಾಡಲು ಬಿಡಿಸಿದನೇ ||೩೧||

ಪೊಟ್ಟೆಯ ನುಡಿ[2]ಗಳಂತಿರಲಿ ನಾರದ ನಿನ್ನ|ದಿಟ್ಟಗಚ್ಚರಿಯಿಾವೆನೆನುತೆ ||
ಜಟ್ಟಿಗ ದೈತ್ಯರ್ಗೆ ಬೆಸಗೊಟ್ಟು ಹಿಡಿತರ|ಲಟ್ಟಿದ ತಳಕುವರನನು ||೩೨||

ಹಂತವ ಮುಱಿಯ ಬಂದಸುರರಿಗಿದಿರ್ವಂದು|ನಿಂತಿರೆ ಕಂಡು ಸೈರಿಸದೆ ||
ಮುಂತೊರ್ವ ತುಡುಕಲು ತಿವಿದ ಬಾಯೊಳಗಿದ್ದ|ದಂತವು ಕೆಲ ಸಿಡಿವಂತೆ||

ಮತ್ತೊರ್ವ ದಡಿಗದಾನವ ಬಂದು ಕೈವಿಡಿ|ದೊತ್ತಲು ಬಿಡಿಸಿಕೊಂಡವನ ||
ಕತ್ತಿಯಿಂ ತಿವಿಯಲ್ಕೆ ಮೂಗುಬಾಯೊಳಗೆಲ್ಲ|ನೆತ್ತರುಬಸಿವಂತವಾಯ್ತು||

ಕ. ಪ. ಅ—1. ಕವಚವಾಯಿತು. 2. ಹೊಳ್ಳುಮಾತು.

ಎಡಬಲದಲಿ ಪಿಂತೆ ಮುಂತು ಬಂದಸುರರು|ತುಡುಕಲು ಬಿಡಿಸಿಕೊಂ
[ಡವರ ||
ಮೃಡನ ನಾಟ್ಯವನಾಡಿ ದಂಡೆ ಕೈಕಾಲಿಂದೆ|ಹೊಡೆದುರ್ವಿಯಲಿ ಮಗ್ಗಿಸಿದ ||
ಪಱಿದಿಟ್ಟ ದಿಟ್ಟಿಯ ಬಱಿಕೊರ್ವನ ಕಾಲ ಮುಱಿದಿಟ್ಟ ನಿಟ್ಟೆಲುಗಳನು||
ನಿಱಿನಿಟಿಲೆಂಬಂತೆ ಕಿತ್ತು ಮಸ್ತಕವನು ತಿಱಿಕಲ್ಲನಾಡಿ ಬೊಬ್ಬಿಱಿದ||೩೭||

ಕಾದಿಯೊಳ್ಗವರನ ಪಿಡಿವರು ತಿರುಗದ|ಹಾದಿಯ ಹತ್ತಿದರ್[1] ಮಗಳ್||
ಭೇದಿಸಲರಿದೆನೆ ಬಱಿಕ ಹೆಬ್ಬಲವು ವಿ ರೋಧಿಯ ಮುತ್ತಿತೆಂನೆಂಬೆ ||೩೮||

ಕಾಯ್ದುರಿಯೊಳು ಕರ್ಬುನದ ಮೊಲ್ಗಂಬದಿ|ಸಾಧನೆಗೆಯ್ದು ಪ್ರುಲ್ಸರದಿ ||
ಐದಿದ ದಾರಿ ತಾ ನಾಲುತೆಱೆ ತಾ ನಾವುದು ಬಂದ ದೈತ್ಯರಿಗೆ ||೩೯||

ಮೃಡನ ಕಣ್ಣುರಿ ಕಾಮನ ಬಾಹುಬಲದೊಳ|ಗಡಗಿರ್ದು ತಲೆದೋ
[ಱುವಂತೆ ||
ಬಿಡದೆ ಕಂತುವಿನ ಪ್ರತಾಪಾಗ್ನಿ ಬೆನ್ನಟ್ಟಿ|ಸುಡತೊಡಗಿತು ನಿಶಿಚರರ ||೪೦||

ಕದನದೆ ಮುಱಿದಿಕ್ಕಿ ಖಳರಾಯನ ಶಸ್ತ್ರ|ಸದನವ ಹೊಕ್ಕು ಲೂಟಿಯಲಿ||
ಹದವಿಲ್ಲ ಕೋಲ್ಗಳ್[2] ಕೈಕೊಂಡುಬತ್ತಿಸಾ|ಯುಧನಾಗಿ ಪೊಱವಟ್ಟು ಬಂದ||
ಕೊಲುವುದೇನಚ್ಚರಿ ರಣರಂಗದೊಳು ನೀವು|ಹುಲುರಕ್ಕಸರೆ ಮುನಿದರೆ||
ಚಲವುಳ್ಳೊಡೆ ಬರಹೇೞಿಂದು ಮನ್ಮಥ|ಕಲುಹೃದಯನ ಕರೆಸಿದನು ||೪೧||

ಬಿಡಿಸಿಕೊಂಡೊರ್ವ ಬಂದುಸಿರಿದ ಕುವರನ ತುಡುಕಿದ ನಿಖಿಳರಾಕ್ಷಸರ|
ಮುಡಿ ತೋಳ್ತೊಡೆಗಳ ಕಿತ್ತಿಟ್ಟನೆನೆ ಕೇಳ್ದು|ಹುಡುಗನ ಪರಮಪೌರುಷವ||
ರಣಹೇಡಿಗಳಾದವರ ಕಣ್ಮನಕೆ ನೀರ್ನೆಣ ಗರುತ್ಮಂತನಂತಿಹುದು ||
ಬಣಗರ ತೊಲಗಹೇೞಿನುತೆ ಮುಮ್ಮಡಿ ರಾ|ವಣನಂತೆ ನಿಂದು ಗರ್ಜಿಸಿದ ||

ಬಟ್ಟಮುತ್ತುಗಳು ಕೇವಣಿಸಿರ್ದ[3] ಪಾರಿಯ|ಪಟ್ಟಾವಳಿ ಚಲ್ಲಣವ ||
ತೊಟ್ಟು ಪೆರ್ದೊಡೆಗೆ ಕೇಸರಿಮಧ್ಯಕೆ ಬಿಗಿ|ದುಟ್ಟುಕಾಸೆಯ ರಣೋತ್ಸವದಿ ||
ನೀರ ಚೆಮ್ಮರಿಯ ಸುತ್ತಿದ ಸಿರಿಮುಡಿಗೆ ಮಂ ದಾರಮಾಲೆಯ ಸುತ್ತಿ
[ಹಣೆಗೆ ||
ರಾರಾಜಿಪ ತಿಲಕವನಿಟ್ಟು ಗಂಧವ|ಪೂರಯಿಸಿದನು ನುಣ್ಮೆಯ್ಗೆ ||೪೬||

ಕ. ಪ. ಅ—1. ಸತ್ತರು. 2. ಬಾಣಗಳನ್ನು. 3. ಘೋಣಿಸಿದ್ದ.

ಬಿಡದೊದರುವ ಗಂಟೆ ಸರಪಣಿ ಸುರಹಾಕೆ|ದೊಡರು[1] ಮಾಣಿಕ್ಯದಿನೆಸೆವ
ಕಡೆಯ[2] ಪೆಂಡೆಯ[3] ವಿಟ್ಟು ಕಾದುವ ರಣಧರೆ|ಯೆಡೆಗೈತಂದು ನಿಂದಿರ್ದ ||೪೭||

ಪರಿಮಳತಾಂಬೂಲ ಕಾಸೆ ಚೆಲ್ಲಣಪ್ರೊಂ|ಬರಿಯಣ[4]ದೊಳು ಕುವರನಿಗೆ|
ಸರಿವೈಭಾಗವ ಕಳುಹಲು ಕೈಕೊಂಡು|ಪಿರಿದು ಸಿಂಗರವಾಂತು ಬಂದ ||

ಹಜ್ಜೆಹಜ್ಜೆಗೆ ತೊಡೆಚಲ್ಲಣವಡಸಿರ್ದ | ಗೆಜ್ಜೆಯು ಗಲಿರೆಂಬ ರವದಿ ||
ನಿರ್ಜರರಿಪುವಿರ್ದ ಬೞಿಗೆ ಬಂದನು ಕಂತು|ದುರ್ಜಯಕೃಷ್ಣಸಂದದಲಿ ||೪೯||

ಬಾಲನಂತೆಸೆದನು ಸುಜನರ ಕಣ್ಗೆ ಪೂ|ಗೋಲನಂದದಿ ಪೆಣ್ಜನಕೆ ||
ಕಾಲನಂತೆಸೆದ ಶಂಬರನ ಕಣ್ಮನಸಿಗೆ|ಲೋಲಾಕ್ಷಿ ಕೇಳ ಚಿತ್ತೈಸು ||೫೦||

ಕಾಳೆಗಕಿದಿರಾಗಿ ನಿಲ್ಲಲಾಜಿದೆ ಚೆಣ್ಣ|ಡಾಳಕತನದೊಳೋಡುವನು ||
ಕಾಳಾಸವ[5] ಮಾಡಿಸೆಂದು ಬಂಧಿಸಿದ ಮ|ರಾಳಾಸನ[6] ಕಪಟದಲಿ ||೫೧||

ಕಂಡ ಮಾತ್ರದಿ ಖಳರಾಯ ನೇವರಿಸಿ ಕೋ|ದಂಡವತೀವಿಜೇವೊಡೆಯೆ||
ಸೊಂಡಿಲ ನೆಗಹಿ ಭೂಮಿಯ ಹೊತ್ತಸತ್ವವೇ|ತಂಡ[7]ಗಳೊರಲಿದಂತಾಯ್ತು ||

ರಂಜಿಪ ಹೊಂಗಟ್ಟಿನ ಬಿಲ್ಲ ಮನ್ಮಥ| ಸಿಂಜಿನಿ[8]ಗೊಳಿಸಿ ಜೇವೊಡೆಯೆ||
ಅಂಜಿದು ಫಣಿರಾಯ ತಲೆದೊನೆಯಲು ರತ್ನ|ಗುಂಜೆಯಂತೆಸೆವ ಚೆಲ್ಲಿದುವು||

ದ್ವಿತಯಕಾರ್ಮುಕ ನಿಷ್ಠುರದಿಂದಖಿಳದೇ|ವತೆಗಳೆಲ್ಲರ ಭೀತಿಗೊಳಿಸಿ ||
ವ್ಯಥೆಗೊಂಡು ಶಂಬರಾಸುರನೆಚ್ಚ ರೌದ್ರೋ|ನ್ನತಬಾಣದಿಂದೆ ಬಾಲಕನ ||

ಶರಸಂಧಾನವಿನ್ನೆಂತುಟೊ ಬಂದ ನಿ|ಷ್ಠುರಬಾಣನಿಚಯವ ಕಡಿದು ||
ಸ್ಮರ ಬೊಬ್ಬಿಱಿದೆಚ್ಚ ಶಂಬರಾಸುರನ ಪೇ|ರುರದಲಿ ಧಟ್ಟಿಗಿವಂತೆ ||೫೫||

ಇಂತು ಕೈಚಳಕದ ಬಿಲುಗಾಱತನ ಕಾಣ|ಬಂತು ನೀನೆನಗಿದಿರ್ವಂದು ||
ಗೊಂತಾಗಿ[9] ನಿಲಬೇಡವೆನುತೆ ಕೂರ್ಗಣೆ[10]ಯಿಂದೆ|ಕಂತುವಿನೆರ್ದೆಯೊಳಿಕ್ಕಿ
[ದನು ||೫೬||

---

ಕ. ಪ. ಅ—1. ದೇವತೆಗಳ ಆಕಾರವನ್ನು ಕೆತ್ತಿರುವ ಕಾಲಿಗೆ ಹಾಕಿಕೊಳ್ಳುವ ರುಳಿ; ಸಕಲ ದೇವತೆಗಳನ್ನು ಜಯಿಸಿದನು ಎಂಬುದನ್ನು ತೋರಿಸುವ ಬಿರುದಿನ ಬಳೆ. 2. ದ್ಭ. ಕಟಕ, ಕಡಗ. 3 ಮುತ್ತುಸರ. 4. ಚಿನ್ನದ ತಟ್ಟೆ. 5. ಕುಣಿಕೆ. 6 ನಾರದ. 7. ಒಲವುಳ್ಳ ಆನೆ. 8. ಬಿಲ್ಲಿನ ಹೆದೆ. 9. ಗುರಿಯಾಗಿ. 10 ಹರಿತವಾದ ಬಾಣ.

ಈಪಾಡುಪಂತದ ಮಾತನಾಡುವ ಶರ|ಚಾಪಾಗಮಜ್ಞ ನೀನಹುದು ||
ನಾ ಪರಣವ[1] ಕೊಂಬೆ ನೋಡೆಂದು ದೈತ್ಯಚ|ಮೂಪನನೆಚ್ಚು ಬೊಬ್ಬಿಱಿದ||
ಎಲೆ ಮಂಕುಮದನ ನಿನ್ನರಳಂಬು ಕಂಗಳ|ಮೊಲೆಗುಱಿದಾಗುವುದೆನ್ನ||
ಕಲುವಕ್ಷದೊಳು ನಾಂಟಲರಿಯವು ಹೋಗೆಂದು ಸಲೆ ಕರ್ಗಣೆಯೊಳ
[ಕ್ಕಿದನು ||೫೯||

ಪಿಂತೆ![2] ನೀನೇನು ದೊಡ್ಡಿತು ನನ್ನ ಸರಲಮು | ಯ್ಯಾತು ಕೊಂಬೊಡೆ
[ರುದ್ರಗರಿದು ||
ಮಾತುಗಾಱಿಕೆ ಬೇಡ ಹಿಡಿಯೆಂದು ಭಾಳದೆ ತೂತೇಱಲೆಚ್ಚು ಬೊಬ್ಬಿಱಿದ||
ನಡವೆತ್ತ ನೀಲಾಚಲಶಿಖರದ ಕಲ್ಲ|ಪಡಿಯೊಳಗಿದ್ದ ಕೆನ್ನೀರು ||
ಒಡೆವಾಯ್ವಂತೆ ರೋಹಿತಧಾರೆ[3] ಸುರಿದು ಕಿ|ಗ್ಗಡಲಲ್ಲಿ ವಾಹಿನಿಯಾಯ್ತು ||
ಸಿಟಿಲದೆ ಸುರಿವ ರಕ್ತವ ಕಟ್ಟುಗೊಳಿಸಿ ಧೂ|ರ್ಜಟಿಯ[4] ಹೃತ್ಕಮಲದೆ
[ನೆನೆದು ||
ಸುಟವೆತ್ತು ಕೂಗಿ ಬೊಬ್ಬಿಱಿದು ಸತ್ರಾಣಸಂಘಟಿಸೆ ರಕ್ಕಸರಾಯನುಡಿದ|
ಕಱ್ಗೊರಲನ ಕಣ್ಣ ದಳ್ಳುರಿಯುಲಿ ಬೆಂದ|ಕೊಱ್ಗೊಳ್ಳ ನಿನಗೇಕೆ ಪಂತ ||
ನೆಱ್ ಕರ್ಗಣೆಯಿಂದೆ ಕಾಯ್ದುಕೊಳ್ಳನುತಾರ್ದು | ಪೊಱ್ನೊಸಲೊಡೆಯ
[ಲಿಕ್ಕಿದನು|೬೦||

ಮಸ್ತಕ ಬಿರಿದು ಸುರಿವ ರಕ್ತವ ಸಿರಿ|ಹಸ್ತದಿನೊತ್ತಿ ನಿಲ್ಲಿಸುತೆ ||
ದುಸ್ತರಶರದಿಂದೆ ಕಡಿದ ರಕ್ಷಸನ ಕ| ರಸ್ಥಳದೊಳಗಿರ್ದ ಧನುವ ||೬೩||
ಖಂಡಣೆಗೆಯ್ದ ಕಾರ್ಮುಕದರ್ಧಭಾಗದ | ದಿಂಡಸೆ[5] ತಿರುಹಿ ಮನ್ಮಥನ ||
ಮಂಡೆಯ ಮೇಲೆ ಗಟ್ಟಿಸಲೊಡ್ಡಿಕೊಳಲು ಕೋ| ದಂಡ[6]ವಿಕ್ಕಡಿಯಾಯ್ತು
[ಕರದೆ ||೬೪||

ಕಲಹದೆ ಖಂಡಿತವಾದ ಬಿಲ್ದಂಡನು | ಬಲರಾಮನಂದದೆ ಪಿಡಿದು ||
ಚಲದಂಕಮಲ್ಲನ ರಣರಂಗದೆಡೆಯಲ್ಲಿ | ನಿಲಲೀಯದಟ್ಟಿಯಾಡಿದನು ||೬೫||
ಅಪ್ಪಳಿಸಿದ ಗಾಯವಹುದೆಂದು ಸೊಂಟದ|ಮುಪ್ಪಿಡಿ[7]ಯನು ಕಿತ್ತುಕೊಂಡು
ದರ್ಪಕನೆರ್ದೆಯಲ್ಲಿ ತಿವಿದು ರಕ್ಕಸ ಬಹು|ದರ್ಪವಡೆದು ನಿಂದಿರ್ದ ||೬೬||

---

ಕ. ಪ. ಅ—1. ಪ್ರಾಣವನ್ನು. 2 ಪ್ರೇತವೇ, ಪಿಶಾಚಿಯೋ. 3. ರಕ್ತಧಾರೆ 4. ಹರ, ಈಶ್ವರ, 5. ಗಟ್ಟಿಯಾದ ಭಾಗ. 6. ಧನುಸ್ಸು. 7. ಕಠಾರಿ.

ಎಡಗೆಯ್ಯೊಳೇನು ಚಮತ್ಕಾರದೆಹಾರಿ ಹೊಡೆದು[1] ಮುಷ್ಟಿವಕಿತ್ತುಕೊಂಡು||
ದೃಢಗಲಿ ಖಳನುರಸ್ತಲದೆ ಕಠಾರಿಯ | ಬುಡಮುಟ್ಟಿ ಚಾಚಿ ಬೊಬ್ಬಿಱಿದ||
ಹೊನ್ನಿನಹೊಳೆವಕಠಾರಿಯು ಮೊನೆಮೊಳೆ ಬೆನ್ನೊಳು ತಲೆದೋಱಿಸಲು||
ತನ್ನೆಡಗಾಲ ರಕ್ಕಸನೆರ್ದೆಯೊಳು ಚಾಚಿ | ಬಿನ್ನಾಣದೊಳು ಕಿತ್ತು ತೆಗೆದ ||
ಸುರಿದುದು ಖಳನ ಗಾಯದಿ ರಕ್ತ ಕಣ್ಣೀರು ಸುರಿದುದವನ ಪೆಣ್ಜನಕೆ ||
ಸುರಿದುದು ಪೂವೞಿ[3] ಕಾಮುಗೆ ನೇತ್ರದೆ| ಸುರಿದುದಾನಂದಾಶ್ರು ರತಿಗೆ ||೧೯||
ಗೆಲವಾದುದಸುರನ ಕೀಲ್ಪಿಡಿಸಿದ ಬಾಹು | ಬಲವಂತ ಕಾಂತನ ಕಂಡು ||
ಲಲನೆ ಬಂದಮರ್ದಪ್ಪಿ ಮುಂಡಾಡಿ ಕುಟುಕುದಂ ಬುಲವಿತ್ತುಉಪಚರಿಸಿದಳು||
ಗಾಯದೊಳೊರೆವ ರಕ್ತವ ಕಟ್ಟಿ ಕುವರನ | ಬಾಯ ತಂಬುಲವನು [ಕೊಟ್ಟು ||
ಆಯತಾಕ್ಷಿಯುರು ಬೀೞ್ಕೊಡಲಾಗಿ ರಕ್ಕಸ| ರಾಯ ಬಂದಿಱಿದ ಶೂಲದಲಿ||
ಶೂಲವ ಖಂಡಣೆಗೆಯ್ದು ಖಂಡೆಯದಿಂ ಪೂಗೋಲ ದೈತ್ಯನಕಡಿಯಲ್ಕೆ||
ಕಾಲಭೈರವನಂತೆ ಗದೆಯೊಳಪ್ಪಳಿಸಲಾ|ಬಾಲ ತದ್ಗದೆಯೊಳೊತ್ತಿದನು| ೨೦
ಪೆಟ್ಟಿಗೆ ಪೆಟ್ಟ ಕೋ ಎನುತ ಮಸ್ತಕದಲ್ಲಿ |ಕುಟ್ಟಿದ ಗದೆಯ ಗಾಯದಲಿ||
ಕುಟ್ಟಿದ ಸಿಟ್ಟಿರದಸಿಗೆ[2] ಖಾತಿಯಲಿ ಕಂ ಗೆಟ್ಟುದು ಸುರನಿಶಾಚರರು |೨೩||
ಕೊಂಡಾಡುವಂದದೆ ಕಡಿದಾಡುತಿರ್ದವುದ್ದಂಡವೀರರ ಕೆಯ್ಯೊಳೆಸೆವ ||
ತಂಡತಂಡದ ಖಡ್ಗಧಾರೆಯ ಕೆಂಗಿಡಿ | ಕೆಂಡದ ಮೞೆಯಾದುದಿಳೆಗೆ |೨೪|
ಬಾಣಪಂಚಕನೊಳು ಬತ್ತೀಸ[3] ಖಡ್ಗ ಪ್ರವೀಣತೆಯಲಿ ಕಾದಿ ದಣಿದು||
ಕೇಣವಿಲ್ಲದೆ ಮುನ್ನ ಕಲಿತಿರ್ದ ಮಾಯಾ|ತಾಣವನುದ್ಯೋಗಿಸಿದ |೨೫||
ಹರನರಸಿ[4]ಯೊಳಂದು ಸೋಸಿದ ಮಹಿಷಾ|ಸುರನೇನು ಲಕ್ಷ್ಯವೆಂದೆನುತೆ||
ವರಸೈರಿಭನ[5] ರೂಪಾಗಿ ಬಂದೆಱಗಿದ| ಸ್ಮರನೊಡಲೊಡನೊಡೆವಂತೆ |೨೬||
ವಾರಿಜಲೋಚನೆ ನೀಕೇಳು ರಣಮಹಾ|ಮಾರಿಯಮುಂದೆ ಬೊಬ್ಬಿಱಿದು
ತೋರಿದು[6] ಕೋಣನ ತಲೆಗಡಿವಂತೆ ಹ|ರಾರಿ ಖಂಡಿಸಿದ ಖಂಡೆಯದ ||೨೭||
ಅದಱ ಮಸ್ತಕವುಡಿದುರುೞ್ದೊಡೆ ಮತ್ತೊಂದು| ಮದಗಜರೂಪಿನೊಳ್ [ಬರಲು ||
ತ್ರಿದಶಾರಾತಿಯ ನರಸಿಂಹನಂದದಿ | ಕದನದಿ ಮೆಟ್ಟಿ ಸೀೞ್ದನು |೨೮|

ಕ. ಪ. ಅ—1. ಹಾರಿಹೋಗುವಹಾಗೆ 2. ಭಯಂಕರವಾದ ಧ್ವನಿಗೆ. 3. ಮೂವತ್ತೆರಡು. 4. ಚಾಮುಂಡಿ. 5. ಕೋಣನ. 6. ದೊಡ್ಡದಾದ.

ಸೀಳಲು ಬಟಿಕೊಂದು ಸಿಂಹರೂಪದಿ ಬಂದು | ಘೀಳಿಡುತುಗುರ್ಗಳಿ [ಸೀಳಿಯೆ ||
ದಾಟಿಗೆ ಬೆದಱದೆ ಶರಭವಿಗ್ರಹದೆ ಧ | ಡಾಳಿಸಿ ಮುಱಿದೊದರಿದನು ||೪೯||
ಗಂಡಾಳುತನದಿ ಸಿಂಹವ ಸೀಳ್ದು ಶರಭಭೇ|ರುಂಡನೋಲ್ ಖಗರಾಯ [ಬರಲು ||
ತುಂಡದ [1]ಕುಂತದಿ ತಿವಿದರೆ ಕುಸುಮಕೋ|ದಂಡನೊಂದೆಸೆಗೆ[2] ಲಂಘಿಸಿದ ||
ಮಕರಾಂಕ ಗಾರುಡವಿದ್ಯೆಯು ಗರುಡಿಯು ಚೋ|ರಕನಾಗಿ ಕಲಿತ [ಕೌತುಕದಿ ||
ಪ್ರಕಟಿತ ಘನವ ಮಾರ್ಜಾರ[3]ದೆ ಖಗನಾ|ಯಕನ ವಿಗ್ರಹವ ನೆಗ್ಗಿಸಿದ ||೫೧||
ನೆಲೆಗಾಣಿಸದೆ ಶಂಬರದೈತ್ಯ ಕರ್ಗತ್ತಲೆಯಾಗಿ ಕುವರನ ತುಡುಕೆ ||
ಸಲೆ ಭಾಸ್ಕರರೂಪ ತಾಳ್ದು ಮನ್ಮಥ ಮೆಟ್ಟಿ ತುಳಿಯು ಕಡಿದನು ಕೌತುಕದಿ||
ನೂತನವಿದ್ಯೆ ಸಿದ್ಧಿಸಿತೆಂದು ಖಗ ವಿಮಾನ ಕೇತುವ ಕೊಂಡಾಡಿದನು ||
ಚೇತನಗಿಡದೆ ಮುಷ್ಟಿಕನಾಗಿ ಸಿಲ್ಲಿಂ ವಾತನ ಕರೆದು ಬೊಬ್ಬಿಱಿದ ||೫೨||
ದರ್ಪಕ ದೈತ್ಯನಲ್ಲಿ ಭನೋಗಿದಿರಾಂತು ನಿಸ್ಪೃಹದೆ ತೋಳ ಮೊದಲ ||
ಚಪ್ಪಳೆಗೊಳಿಸಿ ದಂಡೆಸು ಹೂಡಿ ನಿಂದಿರು ಪ್ರೊಸ್ಪವನೇನ ಬಣ್ಣಿಪೆನು ||೫೩||
ತ್ರಾಣಾನ್ವಿತ ಶಂಬರಾಸುರನವರಸಂಚ ಚಾಣೂರ ಬಿಱಿಮುಷ್ಟಿಗಳು ||
ಚಾಣೂರಮಲ್ಲಕೃಷ್ಣರ ಕಾಳಗವಾದು|ದೇನಾಯತಾಕ್ಷಿ ಚಿತ್ರೈಸು ||೫೪||
ಹೊಗುವರು ಹೊಱಡುವರೆಲ್ಲಿ ಸಿಕ್ಕಿದರಲ್ಲಿ ಬಿಗಿವರು ಬಿನ್ನಣಿಸುವರು||
ತೆಗೆವರು ಕೆಳಗುಮೇಲಾಗುವರೊಡನೊಡ|ನೆಗೆವರು ನಿಂದು ಕಾದುವರು ||
ಎಡಗೆಯ್ಯ ಮುಷ್ಟಿಯು ತಾಣದೊಳಗೆ ಕೆಯ್ಯಡಗಿ ತೂಗುವ ಪಾದ [ದ್ವಯದಿ ||
ಪೊಡವಿ ತಲ್ಲಣಿಸಂತೆ ಖಗರಾಯ ಗರ್ಜಿಸಿ|ವೃಢತಪಧ್ವಂಸಿಯು ತಿವಿದ||೫೫
ಪೆಟ್ಟಿಗೆ ಮೆಯ್ಯುಗ್ಗಡಬೆಡಗೆಯ್ದೊಳಣೆದು ಬೊಬ್ಬಿಟ್ಟಿದಿರಾಂತು ರಕ್ಕಸನ ||
ಗಟ್ಟಿವಾಳಕೆಯ ವಂಚಿಸಿ ನೊಸಲೊಡೆವಂತೆ ಹೆಟ್ಟಿದ ವಜ್ರಮುಷ್ಟಿಯಲಿ ||
ಹಣೆಯೊಡೆದುಗುವ ರೋಹಿತಧಾರೆ ಕಮ್ಮಲರ್ಗಣೆಯನ ಮೇಲೆ [ಚೆಲ್ಲಿದುವು ||

---

ಕ. ಪ. ಅ—ಕೊಕ್ಕೆಂಬ. 2. ಒಂದು ಕಡೆಗೆ. 3. ಬೆಕ್ಕು.

ತ್ರಿಣಯನ ಕಣ್ಣ ಕೆಂಗಿಡಿ ಬಂದುದೆನುತೆ ಘೋ|ಷಣೆಯಿಂದೆ ಕಡಗೆ ಚೆಲ್ಲಿ
[ದುವು ||೮೯||

ನಿಟಿಲರಂಧ್ರವ ಮುಚ್ಚಿ ಖಳನ ಕುತ್ಸ್ರಿಸಿದು|ಕುಟಿಲಾಳಕಿಯುರಾಷಧವ||
ಸುಟಿವೆತ್ತು ಮದನಗೆ ರತಿ ತನ್ನ ತೊಂಡೆವ ಣ್ದುಟಿಯು ಕವಳವಿತ್ತಳೊಲಿದು||

ಮಂಡೆಯನೊತ್ತಿ ಪೆರ್ಭುಜಗಳನೊರಸಿ ಹೊ ನ್ನಂಡೆಯೊಳ್ ಪನಿನೀ
[ರನಿತ್ತು ||
ಖಂಡೇಂದುವದನಬಾಲೆಯುರು ಗೆಲಿಸಿಕುಡೆ ಗಂಡೆಂಟು[1]ಮಾತನಾಡಿದಸು||೯೧||

ಪತಿಯಿಲ್ಲದವಳೆನುತೆನ್ನಯು ಮಿಂಡಿವೆಂ|ಡತಿಯು ಕೋಳ್ಗೊಂಡಿಹ ಕುನ್ನಿ[2]||
ಧೃತಿಗಿಡಬೇಡ ಧೈರ್ಯವನಾಂತು ಬಾರೆಂದು ರತಿರಾಜ ಮಾಂದಲಿಸಿದನು ||೯೨||

ಎಂದೆನಲಿನಿತೊಂದು ಗರ್ವದ ಬಿಱುನುಡಿ | ಚೆಂದವೆ ನಿನಗೆಂದು ದೈತ್ಯ ||
ಬಂದಡಹಾಯ್ದು ರಟ್ಟೆಯು ಪಿಡಿವತಲಾಗಿ ಕಂದರ್ಪ ನಿಂದನಾಗಸದೆ ||೯೩||

ಹಕ್ಕಿಗಳರಸ ಜೋಮೂತವಾಹನಗೆ ದುಃವ್ಮ್ರಕ್ಕಿದೊಲೆಱಗಿ ರಕ್ಕಸನ ||
ಸಿಕ್ಕಿಸಿ ತಲೆಮುಱಿವಂತೊದ್ದು ನೆಲಗೊಳ ಗಿಕ್ಕಿದ ಕಾಮ ಖಾತಿಯುಲಿ ೯೪||

ನಿಲ್ಲದೆ ರತಿಯು ಕೋಳ್ಪಡಿಪಾತನ ಪಾಣಿ ಪಲ್ಲವಗಳ ಕಿತ್ತು ಬಿಸುಟ ||
ಫುಲ್ಲಶರಗೆ ಮೆಚ್ಚಿ ಸುರರು ಪೂಮುಱಿಗಱಿ|ದೆಲ್ಲರು ಕೊಂಡಾಡಿದರು||೯೫||

ವರಮೋಹನತರಂಗಿಣಿಯೆಂಬ ಕಾವ್ಯವ ಬರೆದೋದಿ ಕೇಳಿದ ಜನರ ||
ತರಣಿ ಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವ ಲಕ್ಷ್ಮೀಕಾಂತಬಿಡದೆ||

— ಅಂತು ಸಂಧಿ ೧೨ ಕ್ಕಂ ಪದ ೭೪೦ ಕ್ಕಂ ಮಂಗಳಂ —

## ಹದಿಮೂಱನೆಯ ಸಂಧಿ

**ರತಿಯ ವಿವಾಹ :—**

ನೀಲೋತ್ಪಲಶ್ಯಾಮ ಕಮಲಾಂಬಕ[4] ಸಂಕ[5]|ಮಾಲಾಸುಪ್ರಬಂಧವನು ||
ಆಲಸ್ಯ ಪರಿಹರವಪ್ಪಂತೆ ಪೇೞ್ ನಿನ್ನ | ನಾಲಗೆ ಪರಮಪವಿತ್ರ ||೧||

ಕ. ಪ. ಅ—1. ಗಂಡುತನಹೆಚ್ಚಿ, ಬಲಹೆಚ್ಚಿ. 2. ಮರಿನಾಯಿ. 3. ಅಡ್ಡಹಾಕಿ. 4. ಕೃಷ್ಣ. 5. ಯುದ್ಧ.

ಒಡಲಾಂತು ಹರಿಯ ಕೀರ್ತನೆಗೆಯ್ಯದ ಜಿಹ್ವೆ | ಕಡಲ ನಾಲಗೆಯಾಗದಿಹುದೆ
ಮಡದಿ ಕೇಳದಱಿಂದೆ ಕೃಷ್ಣಚರಿತ್ರವ | ತಡೆಯದೆ ನಿನಗೆ ವಿಸ್ತರಿಪೆ ||೨||

ಕಂದರ್ಪ ಖಳನೊಡಲಿಂದೆ ಸುರಿವ ರಕ್ತ | ಚಂದನ ಬೊಟ್ಟಿಟ್ಟು ರತಿಯ ||
ಹಿಂದಣ ನೋವ ಕುಸ್ತರಿಸಲು ನಾರದ ಬಂದಂಗಜನ ಕೀರ್ತಿಸಿದ ||೩||

ಶಂಬರಾಸುರನ ಮರ್ದಿಸಲಾಗಿ ತ್ರಿದಶಕ | ದಂಬ[1] ಸಗ್ಗದೆ ಗುಡಿಗಟ್ಟೆ[2] ||
ಜಂಭಾರಿಮುಖ್ಯನಿರ್ಜರರೈತಂದು ದಿ | ವ್ಯಾಂಬರಗಳನಿತ್ತರೊಲಿದು ||೪||

ಭೂರಿವೃಂದಾರಕಾ[3]ದಿಗಳು ಬಲ್ಲಂತೆ ಕೈ | ವಾರಿಸಿ[4] ಖಳನುಪಟಳವ ||
ತೀರಿಸಲಂಗಜಾತಗೆ ಮೆಚ್ಚಿ ವರಶಂಬ | ರಾರಿನಾಮವನಿತ್ತರೊಲಿದು ||೫||

ಕುಂಭಕರ್ಣನವ್ರೊಡಲಂದದೆ ಕೆಡೆದಿರ್ದ | ಶಂಬರನೊಡಲ ರೋಹಿತವ ||
ಕಂಬನಿಯಿಂದೆ ನಿವಾರಿಪ ವಧುಸಿಕು | ರುಂಬ[5]ವನೇನ ಬಣ್ಣಿಸುವೆ ||೬||

ನಾರಾಯಣನಾತ್ಮಸಂಭವ ದೈತ್ಯಗ | ಭೀರಮಂತ್ರೀಶನ ಕರೆಸಿ |
ಊರೊಡೆತನದ ಪಟ್ಟವ ಕಟ್ಟಿ ಪರಮವಿ | ಚಾರದ ಬುದ್ಧಿವೇಳಿದನು ||೭||

ರಕ್ಕಸನೊಡಲಿಂಗೆ ಸಂಸ್ಕಾರವನು ಮಾಡು | ಬೊಕ್ಕಸ ಬಂಡಾರ ಜತನ ||
ಚೊಕ್ಕಟವಾಗಿ ರಾಜ್ಯವನಾಳು ದ್ವಾರಕಿ | ಹೊಕ್ಕು ಬರುವೆನು ಬೇಗದಲಿ ||೮||

ಪ್ರೋಪ್ಪದುಚಿತವಲ್ಲ ಜೀಯ ಕೇಳ್ ದೈತ್ಯಚ | ಮೂಪನ ಮಹದೈಶ್ವರ್ಯ ||
ನೀಪರಿಗ್ರಹಿಸಿಕೊಂಡಿಹುದೆಂದು ರತಿಯ ಪ್ರಾ | ಣೇಶಗೆ ಖಳಮಂತ್ರಿನುಡಿದ

ಒಪ್ಪವಡೆದ ಮಾತಹುದಿದು ಜೋಪಾನ | ತಪ್ಪದೆ ರಾಜಮಂದಿರವ ||
ಸರ್ಪ ನಿಧಾನವ[6] ಕಾಯ್ವಂತೆ ಕಾದಿರೆಂ | ದಪ್ಪಣೆಗೊಟ್ಟ ರಕ್ಕಸಗೆ ||೧೦||

ನಿಗ್ರಹವಡಿಸದೆ ಪ್ರಜೆ ಪರಿವಾರವ | ನೆಗ್ಗಳದಿಂ ತುಷ್ಟಿಬಡಿಸು ||
ಅಗ್ರಹಾರದ ದೇವಸ್ಥಾನ ಮಾನ್ಯಂಗಳ | ಕುಗ್ರಾಸವಡಿಸಬೇಡೆಂದ ||೧೧||

ಮುರಹರನಾಣೆ ಘೋಷಣೆಯಲಿ ಜವಿಬೀಸರು[7] ಹೊಗದಂತೆ ನೀನಿರ್ದು ||
ಕರೆಯಲಟ್ಟಿದರೆ ದ್ವಾರಕಿಗೆಯ್ದುವುದು ಚಕ್ರ | ಧರನಱಿಕೆಯಮಾಡಿಪ್ಪೆನೆಂದ ||

ಎನಲಂಗಜಾತಗೆ ಪೊಡೆಮಟ್ಟು ಖಳಮಂತ್ರಿ ತನಗಿದ ತಪ್ಪಬೇಡೆನುತೆ ||
ಘನವಿಶ್ವಾಸವಡೆದು ಬಿನ್ನೈಸಿದ | ಮನದಭಿಪ್ರಾಯವನಱಿದು ||೧೩||

---

ಕ ಪ. ಅ—1. ದೇವತಾಸಮೂಹ 2, ಸಂತೋಷಸೂಚಕವಾದ ಬಾವುಟಗಳನ್ನು ಕಟ್ಟಿ. 3. ದೇವತೆಗಳು 4 ಹೊಗಳಿ, ಸ್ತೋತ್ರಮಾಡಿ 5 ಸಮೂಹ. 6. ನಿಧಿಯನ್ನು. 7. ಕೂದಲಷ್ಟು ಪಾಲುಮಾರಿಕೆ.

ಮಕರಕೇತನ ಕೇಳು ಮದ್ವಲ್ಲಭಸಲ್ಲಿ | ಸಕಲಲೋಕಕೆ ಸಂಚರಿಸುವ ||
ಅಕಳಂಕ[1] ರತ್ನಪುಷ್ಪಕವಿದೆ ನೋಡೆಂದು | ಪ್ರಕಟದೆ ಬಿನ್ನಯಿಸಿದನು ||೧೪||

ನೋಡಿದ ಕಣ್ಗೆ ಮಂಗಳವಪ್ಪ ಪ್ರತಿಸೂರ್ಯ | ಮೂಡಿದಂತಿರ್ಪ ಪುಷ್ಪಕವ ||
ಮಾಡಿದ ಕೆಲಸಕೆ ಪ್ರತಿಯಿಲ್ಲವೆನುತೆ ಕೊಂ | ಡಾಡಿದನಧಿಕಸಂತ ದಿ ||೧೫||

ನೆನೆದ ಕಾರ್ಯವು ಸಿದ್ಧಿಸಿತೆಂದು ನಿರ್ಜರ ಜನವ ಬೀಳ್ಕೊಟ್ಟು ರಕ್ಕಸನ |
ಮನಕೆ ಸಂತಸವಿತ್ತು ಬರಿಸಿದ ನಿಬಿಡಯೌವ್ವನ ವಧೂರತ್ನವನೆನಲು ||೧೬|

ಅತಿರಮ್ಯವಡೆದ ನಾನಾವಸ್ತುಗಳ ತುಂಬಿ | ರತಿಸಹಿತಡರಿ ಪುಷ್ಪಕವ ||
ಗತಿಸೂತ್ರವ ಮೆಟ್ಟ[2] ತೆರಳಿದ ದ್ವಾರಾವತಿಯ ಮಾರ್ಗವನೋಡಿಕೊಳುತೆ ||

ಏನ ಬಣ್ಣಿಸಬಪ್ಪುದು ರತ್ನಶಿಖೆ ವಿ | ಮಾನ ಶೇಖರಮಾರ್ಗದಲಿ ||
ಮೀನಾಂಕನ ಕೊಂಡು ಬಂದುದಾಕ್ಷಣ ಪವ | ಮಾನವೇಗವ ಕೀಳ್ಪಡಿಸಿ ||

ಒಡೆದ ಮುಗಿಲ್ಗೆ ತೇಜವಸಿಕ್ಕ ಹಂಸಾ | ರೂಢ ನಾರದನ ಹಿಂದಿಕ್ಕಿ ||
ನೋಡಲಾಕ್ಷಣ ಪುಷ್ಪಕವಿಳಿದುದು ದೇವ | ಚೂಡಾಮಣಿಯ ಪಟ್ಟಣಕೆ ||೧೯

ಸ್ಮರನ ಪುಷ್ಪಕವ ಕಣ್ಣೊಳು ಕಂಡು ಕೃಷ್ಣನ | ಅರಮನೆಹೆಂಗಳು ಮುದದಿ
ಪರಪುರುಷನನೀಕ್ಷಿಸಬಾರದೆಂದು ಮಂ | ದಿರವನು ಹೊಕ್ಕರಾಕ್ಷಣದಿ ||೨೦||

ಕಾಮನ ಕಂಡಾಕ್ಷಣದಲ್ಲಿ ಸುರಸಾರ್ವ | ಭೌಮಶ್ರೀಕೃಷ್ಣನೆಂದೆನುತೆ ||
ವಾಮಲೋಚನೆಯರು ತನುಪುಳಕಿತರಾಗಿ | ಭ್ರಮಕವಡೆದಿರ್ದರಾಗ ||೨೧||

ಕೆಲಬರು ಕೃಷ್ಣನೆಂಬರು ಕೃಷ್ಣನಲ್ಲೆಂದು | ಕೆಲಬರು ಜೂದಕಟ್ಟುವರು
ಕೆಲಬರು ಸೀನೇನ ಬಲ್ಲೆಯೆಂದಲಸದೆ ನೆಲೆ ನಿಂದು ನೋಡುತಲಿಹರು ||೨೨||

ಫಣಿತಲ್ಪನಾದುದುಂಟಾದಡೆ ಕೌಸ್ತುಭ ಮಣಿಯಿಲ್ಲ ವಕ್ಷಸ್ಥಳದಿ ||
ಗಣಿಸಿದೊಡಚ್ಯುತನಿರವಿಹುದೆಂದು ರು | ಕ್ಮಿಣಿ ನಿಂದು ನೋಡಿದಳಾಗ ||೨೩||

ಇನ್ನಾವ ಪುಣ್ಯಸ್ತ್ರೀ ತಪವಿದ್ದು ಪಡೆವಳೊ | ಚೆನ್ನದ ಬೊಂಬೆಯಂತವನ
ಎನ್ನಯ ಕುವರನಿದ್ದೊಡೆಯಿಂತಹನೆಂದು | ಚೆನ್ನಾಗಿ ಮೊಗವ ನೋಡಿದಳು ||

ಪುಣ್ಣಮೆಯಾದುದು ಮುಖಚಂದ್ರಮಂಡಲ | ತಣ್ಣಸವೆದೆಯೊಳಾದರಿಸೆ ||
ಕಣ್ಣುಱಿಮುಗೊಡೇನು ಕರುಳ್*ಬಲ್ಲುದೆಂಬಂತೆ ಚೆಣ್ಣನ ತಾಯಿ ನೋಡಿದಳು ||

---

ಕ. ಪ. ಅ—1. ಶ್ರೇಷ್ಠವಾದ 2 ನಡೆಸುವುದಕ್ಕೆ ಇರುವ ಯಂತ್ರಗಳನ್ನು ತಿರಿಗಿಸಿ, ಎಂದರೆ–ಈಗಿನ ಮೋಟಾರುಬಂಡಿಗಳನ್ನು ನಡೆಸಲಿಕ್ಕೆ ಮಾಡಿರುವ ಯಂತ್ರಗಳಂತೆ ಮುಂದಕ್ಕೆ ನಡೆಸಲಿಕ್ಕೆ ಮಾಡಿರುವ ಸಲಕರಣೆಗಳನ್ನು ಮೆಟ್ಟಿ.

ಗಂದೇಭಗಮನೆ ಕೇಳ್ ಬಲರಾಮಸಹಿತ ಗೋವಿಂದನೊಂದೆಸೆಗೆ [ಪೋಗಿರ್ದ ||
ಬಂದನಾಕ್ಷಣವೆ ಮಂದಿರದಲ್ಲಿ ಹೊಕ್ಕಿರ್ದ| ಕಂದರ್ಪನಿರವನೀಕ್ಷಿಸಿದ||೨೬||
ಈತನದಾರು ಬಂದಾತನೆಂದೆನುತಗ್ರ | ಜಾತನ ಬೆಸಗೊಳಲಾಗಿ ||
ಭೂತಾಂತರಾತ್ಮಕ ನೀ ಬಲ್ಲೆ ಪೇಳೆಂದು ಪೀತಾಂಬರನ ಕೇಳಿದನು ||೨೭||
ನೆರೆದಿರ್ದ ಸತಿಯರು ಭಾವನ ನುಡಿಗೇಳುತಿರಲಂಜಿಹೊಕ್ಕರಾಲಯವ|
ದರಹಾಸಮುಖಿ ರುಕ್ಮಿಣಿದೇವಿ ಕಾಂತರ ಹೊರೆಗೈತಂದಳುತ್ಸವದಿ ||೨೮||
ಕುಂಭಕುಚಾನ್ವಿತ ಕುವಲಯನೇತ್ರ ದಾ|ಳಿಂಬದ ಬಿತ್ತಿನಂತೆಸೆವ ||
ಕೆಂಬಲ್ಲ ರುಚಿದೋಱೆ ಬಿನ್ನವಿಸಿದಳು ಪೀತಾಂಬರಧರಗೊಂದು ಮಾತ ||
ಸಕಲಜೀವರುಗಳಂತರ್ಭಾವದಲಿ ವ್ಯಾಪಕಮೂರ್ತಿ ನೀನಿದ ಬಲ್ಲೆ ||
ಪ್ರಕಟವ ಮಾಡುವರಾರಿವ ಮುಕುಮಾರಕನಲ್ಲವೆ ಪೇಳು ಜೀಯ||೩೦
ಒಡಲೊಳಗೊಂಬತ್ತು ತಿಂಗಳು ಹೊತ್ತಿರ್ದ| ಪಡೆದಳ್ಗೆ ಪರವಶವಾಯ್ತು ||
ಕಡೆಯೊಳಿದ್ದಾತನೆಂತಱಿವೆನು ನಾನೆಂದು|ಮಡದಿಯೊಳ್ ಮಾತನಾಡಿದನು ||
ಏಣಿಸಿಭಾಯತೇಕ್ಷಣೆ ಕೇಳು ವರಪಂಚ ಬಾಣನ ಕತೆಯ ಪೇಳುವೊಡೆ|
ಮಾಣದೆ ರಾಜಹಂಸೆಯನೇಱಿ ಕಲಹಪ್ರ|ವೀಣ ನಾರದನು ಬಂದಿಳಿದ||೩೨
ಬಂದನಾರದಗುಪಚರಗೈದು ಮುನಿಯನು ಹೊಂದವಗ[1]ದೊಳು ಕುಳ್ಳಿರಿಸಿ||
ಗಂಧಕತ್ತುರಿಯ ಲೇಪವನಿತ್ತು ದೇವಕಿ|ನಂದನ ಮಾತನಾಡಿದನು ||೩೩||
ಹಕ್ಕಿಯನೇಱಿಯಾಯುಧವಡುತೆಲ್ಲಿ | ತುಕ್ಕಿ[2] ಬಂದಿರಿ ಪೇಳ್ವುದೆನಲು||
ಸೊಕ್ಕಿದ ಶಂಬರಾಸುರನ ವಿಗ್ರಹವ ಸೀ|ಳ್ದಿಕ್ಕಿಸಿ ಬಂದೆನು ಜೀಯ ||೩೪||
ತ್ರಿಜಗದೊಳದಟುಳ್ಳ[3]ದೈತ್ಯನ ಮಡುಹಿದ ಭುಜಬಲನಾರು ಪೇಳೆನಲು||
ನಿಜಗಲಿ[4]ಯಿವನೀಗ ನೋಡೆಂದು ಮಕರ|ಧ್ವಜನ ವಿಗ್ರಹವ ತೋಱಿಸಿದ ||
ಎನಲಿವನಾರ ಕುಮಾರಕನೆಂಬುದ ಘನಪೌರುಷದಿ ರುಕ್ಮಿಣಿಗೆ ||
ಕನಲದೆ ಪೇಳು ಪೇಳೆನಲಾಗಿ ನಾರದ|ಮುನಪ್ರೊಲಿದೊರೆದನಾಯಕಗೆ[5] ||೩೬||
ಭಿನ್ನವಿಲ್ಲದೆ ಪೇಳ್ವೆ ಬಿಸಜಾಕ್ಷಿ ಕೇಳೀತ|ಮುನ್ನಲೀಶ್ವರನ ಕಣ್ಣುರಿಗೆ ||
ತನ್ನ ದೇಹವ ತೆತ್ತು ಮನಸಿಜನಾಗಿರೆ | ಗನ್ನಗತಕವಾದುದೊಡನೆ ||೩೭||

---

**ಕ. ಪ. ಅ**—1. ಅಗಲವಾದ ಚಿನ್ನದ ಜಗಲಿ. 2. ನುಗ್ಗಿ.
3. ಪರಾಕ್ರಮವುಳ್ಳ. 4. ಸತ್ಯವಾದ ಪರಾಕ್ರಮವುಳ್ಳ. 5. ಅಕ್ಕಗೆ.

ಭೂತಲದೊಳು ಶಂಬರನೆಂಬ ರಕ್ಕಸ|ನಾತಗೆ ರತಿ ಸಿಲುಕಿರಲು ॥
ಆತನ ಕೊಲಲಂಗಜನು ದೇಹವ ಬೇಡಿ| ಪೀತಾಂಬರನ ಪ್ರಾರ್ಥಿಸಿದ ॥೩೮॥
ಮಧುಮಥನನು ಮೆಚ್ಚಿ ಕಾಮಗೆ ತನ್ನಯ|ಯದುವಂಶದೆ ಬಹುದೆನಲು॥
ಅದು ನಿಮಿತ್ತದೊಳೆ ನಿನ್ನಯ ಜಠರದಿ ಬಂ ದುದುಭವಿಸಿದ ಕೇಳು ತಾಯೆ ॥
ಮುದ್ದುಮುಖಾನ್ವಿತ ಶಿಶು ನಿನ್ನಮಗ್ಗುಲೊಳಿದ್ದುದ ಮಟಮಾಯಗೆಯ್ದು
ಕದ್ದುಕೊಂಡುಯ್ದು ಶಂಬರ ಶರಧಿಯೊಳಿಡೆ | ಬಿದ್ದುದು ಮೀನ ಬಾಯೊಳಗೆ॥
ಮೃಡತಪಧ್ವಂಸಿಯ ನುಂಗಿದ ಪೆರ್ಮೀನು| ಕಡಲೊಳಗಿರಲೊರ್ವ ಪಿಡಿದು॥
ಪೊಡವಿಯನಾಳ್ವ ಶಂಬರಗೀಯಲದನು|ಸೀಳ್ದಡಿಗೆಯ ಮಾಡೆಂದ ರತಿಗೆ ॥
ಆಮಾಮೀನಗರ್ಭವ ಸೀಳಲೊಳಗಿದ್ದ| ಕಾಮನ ತರಳವಿಗ್ರಹವ ॥
ಹೇಮಾಂಬುರುಹನೊಗ್ಗೆ ಮೊಲೆಯ ಮಾನಿನಿ ಕಂಡು|ಭ್ರಾಮಕವಡೆದವಳಾ
[ಕ್ಷಣದಿ ॥೪೨॥
ಹಲವು ದಾಯವ ಪೇೞೆ ನಾ ಪೋಗೆ ಬಾಲನ|ಸಲಹಿದಳತಿಕಾಂಕ್ಷೆಯಲಿ॥
ನಲಿದು ಶಂಬರನ ಮಾಯಾವಿದ್ಯದೇೞ್ಗೆಯ|ಹೊಲಬ ತೋಱಿದಳಾಳ್ದನಿಗೆ ॥
ಭೇದಿಸಲಱಿದೆಂಬ ಮಾಯೆಯ ವಿದ್ಯವ | ಸಾಧಿಸಿ ಶಂಬರನೊಡನೆ ॥
ಕಾದಿ ಬಂಡಣ[1]ದೊಳು ಸತಿಶಿರೋಮಣಿಯ ಸಂ|ಪಾದಿಸಿ ತೆಗೆ ತಂದೆನಿದೆಕೊ॥
ಮಾಧವನರ್ಧಾಂಗಿ ಮಱೆಯದೆ ಕೇಳೆಂದು| ಪೋದ ತತ್ಸುತಪುಣ್ಯದಿಂದೆ॥
ಕಾದಲೆ[2]ಸಹ ಬಂದ ಕೈಕೊಂಬುದೆಂದು ಶ್ರೀ|ಪಾದಕೆ ಪೊಡೆಮಡಿಸಿದನು ॥
ಚರಣದೊಳೆಱಗಿದ ತನಯನ ಪಿಡಿದೆತ್ತಿ | ಭರವಶದಿಂದೆ ತಕ್ಕೈಸೆ ॥
ತೊರೆದು ನುಣ್ಮೊಲೆವಾಲು ಕಂದನ ಮೈಮೇಲೆ|ಸುರಿದುದಿನ್ನೇನ ಬಣ್ಣಿಸುವೆ॥
ನೋಡುವಳಣುಗನ ಬಿಗಿಯಪ್ಪಿ ಬಿಡದೆ ಮುಂ|ಡಾಡುವಳ್ ಮೊಲೆವಾಲು
[ಸುರಿಯೆ ॥
ಊಡುವ ಕರಯುಗದೊಳಗುಪಚಾರವ|ಮಾಡುವಳ್ ಮಱೆಯದೆಸೊಸೆಗೆ॥
ಮಗಸೊಸೆಸಹಿತ ರುಕ್ಮಿಣಿ ಕಾಂತನಪಾದ|ಯುಗಳಕ್ಕೆ ಪೊಡೆಮಡಿಸಿದಳು॥
ನೆಗಹಿದು ಶ್ರೀಕೃಷ್ಣವಲ್ಲಭೆಗೊರ್ವ ಮೊ|ಮ್ಮಗನಾಗಲೆನುತೆ ಹರಸಿದ॥೪೮॥
ದೃಢಗಲಿಯಹುದೆಂದು ಮಗನ ಮಸ್ತಕವ ಮೊ|ಯ್ದಡಹಿ ತಕ್ಕೆಯೊಳಿ
[ಟ್ಟುಕೊಂಡು ॥

ಕ. ಪ. ಅ—1. ಯುದ್ಧ. 2. ಪಕ್ಷಿ.

ಸಡಗರದಿಂದೆದ್ದು ಬಲರಾಮನಂಘ್ರಿಗೆ । ಪೊಡೆಮಡಿರೆಂದನು ನಗುತ ||೫೦||

ನೀಲಾಂಬರಗ[1] ಸತ್ರಾಜಿತಸುತೆಗೆ ಪೂ ಗೋಲ ವಂದನೆಗೆಯ್ದು ತನ್ನ ||
ಲೋಲಾಕ್ಷಿಯೊಡನೆ ನಿಂದಿರಲಾಗಿ ಪರಮಾನು।ಕೂಲ ಶ್ರೀಕೃಷ್ಣ [ನೋಡಿದನು ||೫೧||

ವಿನಯದೊಳಗ್ರಜಾತನ ಕೂಡೆ ಕೃಷ್ಣ ಯೋಚನೆಗೊಂಡು ಪೇಳಿದ ನಿನ್ನ||
ತನಯಗೆ ತತ್ಪುರಸ್ಥಸದ ಶುಭವೆತ್ತ।ಮನೆಗುಡಬೇಕೆಂದ ನಗುತ ||೫೨||

ಅಂಗಜಾತಗೆತಕ್ಕ ಮನೆಯಾವುದೆನುತಶ್ರೀ।ರಂಗನೊಳ್ ಬಲರಾಮನುಡಿದು||
ಮಂಗಳಶುಭಮುಹೂರ್ತವ ಕೇಳಲೆಂದು ಪಂ।ಚಾಂಗಪ್ರಜ್ಞರನು ಕರೆಸಿ||

ಬಂದರನೇಕಜ್ಯೋತಿಷ್ಕರಾಶೀರ್ವಾದ । ದಿಂದೆ ಮಂತ್ರಾಕ್ಷತೆಯಿತ್ತು ||
ಅಂದವಡೆದ ಪಂಚಾಂಗಪ್ರಶ್ನೆಯ ಗೋವಿಂದಗೆ ಬಿನ್ನವಿಸಿದರು ||೫೪||

ಕೇಶವಮುದವೆತ್ತು ಬೆಸಗೊಳಸಿಖಿಲಜ್ಯೋ।ತೀಷರೊಳಧಿಕಶಾಸ್ತ್ರಗಳು ||
ಭೂಸುರವೆತ್ತ ಪ್ರದ್ಯುಮ್ನ ಸದ್ಗೃಹದ ಪ್ರವೇಶಕೆ ಪಿಸನೋಡಿರೆಂದ ||೫೫||

ತಿಥಿವಾರನಕ್ಷತ್ರ ಯೋಗಕರಣಗ್ರಹ । ಗತಿ ನೆಲೆಗಳ ನೆರೆ[3] ಗುಣಿಸಿ ||
ಮಿತಿಮಾಡಿದರು ಮಾಘಸಿತಪಂಚಮಿ ಬೃಹಸ್ಪತಿವಾರನೊಳಗೊಳ್ಳಿತೆಂದು||

ಗುಣಿಸುವರಾವೇನ ಬಲ್ಲೆವು ಶ್ರುತಿಶಿರೋಮಣಿಯೆ ಸರ್ವಜ್ಞನೀಬಲ್ಲೆ||
ಫಣಿತಲ್ಪ ಸೂರ್ಯಸಿದ್ಧಾಂತ ನಿನ್ನಯ ಕಣ್ಣ।ಕಣಿಕೆಯೊಳಹುದೆಂದರವರು ||

ಸಾರದ[2] ಮಾತನಾಡಿದಿರಿ ನೀವಹುದೆಂದು ನಾರದನವರ ಸುಸ್ತರಿಸಿ ||
ಓರಂತೆ ಭಕ್ತಿಪೂರ್ವಕದಿಂದೆ ಶ್ರೀರಮಣೀರಮಣನ ಹೊಗಳಿದರು ||೫೮||

ನಿಗಮಾಗಮಶಾಸ್ತ್ರವುಪನಿಷತ್ಪುರಾಣಾದಿಗಳನವರತ ಕೊಂಡಾಡಿ ||
ಜಗದಧಿಪತಿಕೃಷ್ಣರಾಯನ ಶ್ರೀಪಾದ।ಯುಗಳವ ಕಡೆಗಂಡುದಿಲ್ಲ||೫೯||

ಅಜಭವೇಂದ್ರಾದಿವೃಂದಾರಕಮನುಮುನಿ ವ್ರಜದೊಳು ಪಿರಿಯ [ಜ್ಞಾನಿಗಳು ||
ಭಜನೆಯ ಮಾಳ್ಪರು ಬಕುತಿಯಿಂದಲಿ ಚತು।ರ್ಭುಜ ನಿನ್ನ ನೆಲೆಗಂಡುದಿಲ್ಲ||

ನಾಟಕವಲ್ಲದೆ ನರರಂತೆ ನಕ್ಷತ್ರ । ಪಾಠರ[3] ಪ್ರಶ್ನೆಗೇಳುವುದು ||
ಕೀಟಕರೇನ ಬಲ್ಲರು ಕೃಷ್ಣ ನಿನಗೆ ಚು।ನ್ನಾಟ[4] ಬೇಡೆಂದ ನಾರದನು||೬೧||

ಸರ್ವಜ್ಞ ಸರಸಿಜೋದರ ಕಂತು ರತಿಗೆ ಗಾಂ।ಧರ್ವ ವಿವಾಹವಮಾಡಿ||

---

ಕ. ಪ. ಅ—1. ಬಲರಾಮ.　　2. ಸ್ಥಿರವಾದ.　　3. ಜ್ಯೋತಿಷರು.
4. ಸಿಂದೆಯಾಟ ; “ ಚುನ್ನಮೆನೆ ನಿಂದೆ ” ನಿಘಂಟು.

ನಿರ್ವಾಣಗೊಟ್ಟು[1] ಬೇಱರಿಸೆಂದು ಮುನಿ ನಿ|ರ್ಗರ್ವದಿಂ ಬಿನ್ನಯಿಸಿದನು||೧೬

ಜನನಾಥ ಮುನಿಯ ವಾಕ್ಯವ ಕೇಳಿ ನಿಬಿಡ ಸ್ತನಭಾರಭರಿತೆ ರುಕ್ಮಿಣಿಗೆ||
ವಿನಯದಿ ಬೆಸಸಿದ ರತಿಕಂದರ್ಪಗೆ ಮ|ಜ್ಜನವ ಮಾಡಿಸು ಹೋಗೆನಲು ||

ಲೇಸೆನುತ್ತೈತಂದು ಮಗಸೊಸೆಗೆಣ್ಣೆಯ|ಪೂಸಿ ಪೊಂಬಚ್ಚಲೊಳ್ ನಿಲಿಸಿ||
ಮೀಸಿದ[2]ಬೞಿಕ ಸಿಂಗರಗೆಯ್ದು ರನ್ನದ ಬಾಸಿಗವನು ಕಟ್ಟಿದರು ||೧೭||

ದುಂಡುಮುತ್ತಿನ ರತ್ನ ಕೆೞವಣಿಸಿದ ಪೊನ್ನ|ತೊಂಡಲ ಸೂಡಿದು ಮುದದಿ
ಖಂಡೇಂದುಮುಖಕೆ ಕತ್ತುರಿಯಿಟ್ಟು ವಿ ಶಾರ್ವರ|ಗಂಡಸ್ಥಳಕೆ ಕಜ್ಜಳವ[3] ||

ಕೆಳದಿ ಕೇಳ್ ಮಾಣಿಕಮಯರತ್ನದಾರತಿ ಗಳ ತಂದು ಪೊಂಬರಿಯಣದೆ||
ಕಳಸಕನ್ನಡಿವೊತ್ತ ಗೋಪಿಯರ್ ಶೋಭನ|ಗಳನು ಪಾಡಿದರು ರಾಗದಲಿ ||

ಫಣಿನಿಭಾಯತೇಕ್ಷಣೆಯರ ಸಂದೋಹ ಬಾಣಸಂಚಕರತಿಯರನು ||
ಕೇಣವಿಲ್ಲದೆ ತಂದು ಸಂಭ್ರಮವೆತ್ತ ಕಲ್ಯಾಣಮಂಟಪವ ಸಾರ್ಚಿದರು ||

ನೆಟ್ಟನೆ ತೆರೆವಿಡಿದರು ಕ್ಷತ್ರವಿಧಿಯಿಂದೆ ಮೆಟ್ಟಕ್ಕಿಯ ಮೇಲೆ ನಿಲಿಸಿ ||
ಶ್ರೇಷ್ಠರು ಮಂಗಳಾಷ್ಟಕದಿ ನಿರೀಕ್ಷಣೆ|ಗೊಟ್ಟರು ದಂಪತಿಗಳಿಗೆ ||೧೮||

ಮಧುಪರ್ಕ ತಂಡುಲಾರೋಪಣ ಮೊದಲಾದ|ವಿಧಿಯಿಂದಲಾಪುರೋಹಿತರು||
ವಧುವನನಲಸಾಕ್ಷಿಯೊಳಗೆ ಧಾರೆಯ|ಪದುಮಾಸ್ತ್ರಗೆಱೆದರುತ್ಸವದಿ||೧೯

ಶೂರ್ಪ[4] ಸಾಮುದ್ರಿಕಗುಡಮುಖ್ಯದಾನವ|ವಿಪ್ರೋತ್ತಮರಿಗೆ ಕೊಟ್ಟು||
ದರ್ಪಕ ರತಿಗೂಡಿ ತಾಯುಮಂಪಿರದೊಳ|ಗಿರ್ಪ ಸಂಭ್ರಮವನೇನೆಂಬೆ ||೨೦

ಪ್ರಣಯೋಪಚಾರಗಳಿಂದೆಸದ್ವಾದ್ಯಘೋಷಣೆಯಿಂದೆಧವಳಶೋಭನದೆ||
ಗುಣನಿಧಿಶ್ರೀಕೃಷ್ಣರಾಮರು ಸಕಲನಿಬ್ಬಣ[5] ಗೂಡಿ ಪೊಕ್ಕರಾಲಯವ||೨೧||

ಮುತ್ತಿನ ಸೇಸೆಯೊಳೆಸೆವ ರತ್ನಂಗಳು|ತೆತ್ತಿರ್ದ ಹಸೆಯ ವಿಷ್ಟರದಿ ||
ಹತ್ತಿದ ದಂಪತಿಗಳ ವಿಗ್ರಹಂಗಳು|ತೆತ್ತಿಸಿದಂತೆ ಶೋಭಿಸಿತು ||೨೨||

ನೋಡಿದೊಡೊಂದೇ ದಿವಸದೆ ದಿನನಾಲ್ಕ|ಜೋಡಿಸಿ ವೈವಾಹವಿಧಿಯ ||
ಮಾಡಿದರ್ ಮಂಗಳೋತ್ಸವದಿಂದೆ ಹಣವನೀ|ಡಾಡಿದ ಕೃಷ್ಣ ಬ್ರಾಹ್ಮಣರ್ಗೆ||

ಸಡಗರದಿಂ ಕೃಷ್ಣ ಸರ್ವಜ್ಞ ಸಭೆಗೆ ಹೊನ್ನುಡುಗೊರೆಗಳನಿತ್ತು ಕಳುಹಿ||
ಮಡದಿ ರುಕ್ಮಿಣಿಗೂಡಿ ಮದವಕ್ಕಳ ತಂದು ಪೊಡೆಮಡಿಸಿದರು ನಾರದಗೆ ||

---

ಕ. ಪ. ಅ—1. ಇಲ್ಲಿ, ಸ್ವಾತಂತ್ರ್ಯವನ್ನು ಕೊಟ್ಟು. 2. ಕಾಡಿಗೆಯನ್ನು. 3 ವಿಸಾಣಮಾಡಿಸಿದ. 4. ಮೊರ. 5. ಮದುವೆಯಲ್ಲಿಕೊಟ್ಟ ಬಹುಮಾನಗಳು.

ಚರಣದೊಳೆಱಗಿದ ಚಾರುದಂಪತಿಗಳ್ಗ|ವರವಿತ್ತು ವಾತ್ಸಲ್ಯದಿಂದ ‖
ಮುರಹರಮುದ್ದು ರುಕ್ಮಿಣಿಗೆ ಕೈಯೆಡೆಗೊಟ್ಟು|ಕರವ ಸಂತಸವನೈದಿಸಿದ ‖
ಹೊನ್ನೊಡಲನ ಪುತ್ರ[1] ಕೇಳು ಖೇಚರದಿಂದ|ಲೇನಾತ್ಮಜ ಬಂದ ಮನೆಗೆ‖
ನಿನ್ನಿಂದೆ ಕೈಸಾರಿದುದು ನಿಶ್ಚಯವೆಂದು ಬಿನ್ನಯಿಸಿದಳು ನಾರದಗೆ ‖೭೬‖
ಅಪರಾವತಾರದ ಸಿರಿದೇವಿ ಕೇಳ್ ನಿನ್ನ|ಲಪನಾಬ್ಜಮಿತ್ರ[2] ಮಾಧವನ ‖
ಕಪಟವಿದಲ್ಲದೆ ನಾನೇನ ಬಲ್ಲೆನೆಂ|ದುಪಮಿಸಿ ನಾರದ ನುಡಿದ ‖೭೭‖
ಹಮ್ಮನಾಡಿದೊಡಾಕ್ಷಣದಲ್ಲಿ ಮುರಿದಿಕ್ಕಿ|ಬೊಮ್ಮಾದಿಗಳ ಶಿಕ್ಷಿಸುವ ‖
ನಮ್ಮನದಾರು ಬಲ್ಲರು ಮಶಕಿಯಮಾತ್ರ|ನಿಮ್ಮಾಣೆ ಕೇಳವ್ವ ತಾಯೇ ‖
ಹೂಡುವ ಜಗವನೊಂದೆವೆಯಾಟದೆ ಬಯ|ಲ್ಮಾಡುವ ಮರಳಿ ಸೃಷ್ಟಿಸುವ ‖
ನೋಡುವ ತಾನಲ್ಲದವನಂತೆಯೊಳಹೊಱ|ಗಾಡುವ ಚೇಷ್ಟಕನೀತ ‖೭೯‖
ಹಿತನೀತ ಶತ್ರುರೂಪಕನೀತ ವಿಧಿಭವಾರ್ಚಿತಪಾದಾಂಬುಜ ಸರ್ವ |
ಗತನೀತ ಘನವಿವೇಕದಿ ನಿರೀಕ್ಷಿಸಲ ಚ್ಯುತನೀತ ನೋಡವ್ವ ತಾಯೆ ‖೮೦‖
ಇತಿಹಾಸ ನಿಗಮಾಗಮಶಾಸ್ತ್ರ ಪೌರಾಣ|ತತಿಗಗೋಚರನೆನ್ನ ಸ್ವಲ್ಪ ‖
ಮತಿಗೆಂತು ಕಾಣಿಸಿಕೊಂಬನು ತ್ರೈಲೋಕ್ಯ ಸತಿಶಿರೋಮಣಿ ಲಾಲಿಸವ್ವ‖
ಸಾರಲಿಲ್ಲದ ಪೂರುಷನೀತ ದ್ವಿತೀಯಾವ|ತಾರದ[3] ಶ್ರೀದೇವಿ ನೀನು ‖
ಓರಂತೆ ಸೊಗವಾಳುವುದೆಂದು ಬೀಳ್ಕೊಂಡು|ನಾರದನಡರಿದ ನಭವ ‖೮೨
ವರಮೋಹನತರಂಗಿಣಿಯೆಂಬ ಕಾವ್ಯವ|ಬರೆದೋದಿ ಕೇಳಿದ ಜನರ ‖
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವ ಲಕ್ಷ್ಮೀಕಾಂತ ಬಿಡದೆ‖

ಅಂತು ಸಂಧಿ ೧೩ಕ್ಕಂ ಪದ ೮೩ ಕ್ಕಂ ಮಂಗಳಂ.

## ಹದಿನಾಲ್ಕನೆಯ ಸಂಧಿ

ಜಲಕ್ರೀಡೆ.—

ಗದೆ ಶಂಖ ಚಕ್ರ ಪಂಕೇರುಹಪಾಣಿಯ ಹೃದಯದೊಳಿಂಬಿಟ್ಟುಕೊಂಡು‖
ಸೊದೆಗಡಲೊಳ್ದೆರೆಯಂತೆ[4] ಮೇಲ್ಗತೆಯ ಮಾ|ಣದೆ ಪೇಳುಮನ್ಮನೋನಾಥ‖

ಕ. ಪ. ಅ—1. ಹಿರಣ್ಯಗರ್ಭನ ಮಗ, ನಾರದ. 2. ಮುಖಕಮಲಕ್ಕೆ ಸೂರ್ಯನಾದ. 3. ಶ್ರೀದೇವಿಯ ಎರಡನೆಯ ಅವತಾರವಾದ ರುಕ್ಮಿಣಿ; ಮೊದಲನೆಯ ಅವತಾರ ಸೀತೆ. 4. ಕ್ಷೀರಸಮುದ್ರದ ಅಲೆ.

ಬಡನಡುವಿನ ಚೆನ್ನೆ ಭಾಮಿನಿಯರ ರನ್ನೆ| ಕೊಡವೊಲಿವೆಣ್ಣೆ ಪೂಗಣ್ಣೆ||
ಸಡಗರದಿಂ ನಿನ್ನ ಕರ್ಣಕೆ ಕಡುರುಚಿ| ವಡಿಸುವೆ ಪೇಳಿ ಮೇಲ್ಗತೆಯ ||೨||
ಮುದವೆತ್ತು ಕಮಲದಳಾಯತಾಕ್ಷ ಗೆಹಲಾ| ಯುಧಪೇಳ್ದಚದುರುಮಾತಿನಲಿ |
ಮದವಕ್ಕ[1]ಳೂಟವ ಮಾಡಲಾರೋಗಿಪ| ಸದನಕ್ಕೆ ತೆರಳೆಂದ ನಗುತ ||೩||
ಮಾಧವ ಕೇಳ್ದು ರುಕ್ಮಿಣಿ ಸತ್ಯಭಾಮೆಮುಂ| ತಾದ ವಧೂಟಿಯರೊಡನೆ||
ಭೂದೇವರುಗಳ[2] ಬೀಳಿ[3]ಕ್ಕಟ್ಟು ಬಂದ ಶ್ರೀ| ಪಾದನೂಪುರ ಜಣರೆನಲು ||೪||
ಅಕಳಂಕಮಣಿಪಾತ್ರೆಯೊಳಟ್ಟ ತಪ್ತೋ| ದಕವ ಹೊಂಗೊಡದಲ್ಲಿ ತಂದು||
ಪ್ರಕಟಿತಪಾದಪ್ರಕ್ಷಾಲನಗೆಯ್ದ ರಾ| ನಕದುಂದುಭಿಯ[3]ನಂದನನ ||೫||
ಕರಚರಣಂಗಳ ತೊಳೆದು ಕೊಂಡೊಳಪೊಕ್ಕು| ಮುರಹರ ಬಲರಾಮ [ಕಾಮ ||
ಸುರುಚಿರರತ್ನಪೀಠಗಳಲ್ಲಿ ಕುಳ್ತರು| ವರವಧೂಟಿಯರೊಂದುಗೂಡಿ ||೬||
ಮುತ್ತಿನ ಗದ್ದುಗೆಗಳ ಮುಂದೆ ನವರತ್ನ| ಕೆತ್ತಿದಡ್ಡಣಿಗೆಯ[4]ಮೇಲೆ ||
ತೆತ್ತಿಸಿ ಹೊಂಬರಿಯಣ[5]ವಿಟ್ಟು ಸೊಡರ್ಗಳ[6] ನೆತ್ತಿದರುಭಯಪಕ್ಷದಲಿ ||೭||
ಇಂತೆಸೆದಿಹ ಶ್ರೀ ಕೃಷ್ಣದೇವೇಶನ| ಹಂತಿಯೊಳ್[7] ಸಮ್ಮೋಹನದ ||
ತಿಂತಿಣಿಯೆನೆ ಬೋನಗಾರ್ತಿಯರ್[8] ಬಡಿಸಿದ| ರಾಂತ ಸಂತೋಷದಿಂ ತೊಡಗಿ||
ಆಗಾಗಳೊಗ್ಗರಿಸಲು ಬಿಸಿವಡೆದ ಮೇ| ಲೋಗರ ಪಳದ್ಯಪಲ್ಯಗಳ ||
ರಾಕೇಂದು[9]ವದನೆಯರೆಡೆಮಾಡುವ ನೃಪ| ಯಾಗವನೇನ ಬಣ್ಣಿಪೆನು ||೯||
ಪಿಡಿನಡುವಿನ ಪೆರ್ಮೊಲೆವೆಣ್ಗಳು ಹೋ| ಹಿಡಿನೊರೆಗಳ ಬೊಗ್ಗಯ್ಯು ||
ಪಿಡಿದರನೇಕಸತ್ಪರಿಕರಗಳ ತಂದು| ಬಡಿಸಿದರತಿಜಾಣ್ಮೆಯಲಿ ||೧೦||
ಸಿತರಾಜಾನ್ನದಕ್ಕಿಯ ನೈವೇದ್ಯ ಸ| ದ್ಘೃತ ಪಳದ್ಯವನೆಸಱುಗಳ ||
ಮಿತಿಯಿಲ್ಲದಡಿಗೆಗಾರ್ತಿಯರುನೀಡಲ್ಕೆಯ| ಚ್ಯುತೆಹೆಂಗಳೊಡನೆಭುಂಜಿಸಿದ ||
ಗುಣಯುತಬಲರಾಮಸಾತ್ಯಕಿ ಪ್ರದ್ಯುಮ್ನ| ಪ್ರಣವಜ್ಞರುದ್ಧವಾದಿಗಳು||
ಉಣಲು ಬಂದರು ವಧೂಜನಗೂಡಿ ಕೃಷ್ಣಾ| ರ್ಪಣವೆಂದು ತುತ್ತನೆತ್ತಿದರು||
ತೋಯಾನ್ನವನುಂಡು ಬಳಿಕಾಜ್ಯ ಬಹುವಿಧ| ಪಾಯಸನಿಖಿಳಕಜ್ಜಾಯ||

---

ಕ. ಪ. ಅ—1. ವಧೂವರರು. 2. ಬ್ರಾಹ್ಮಣರು. 3. ವಸುದೇವನ. 4. ಕಾಲಿರುವ ಹಲಗೆ. 5. ಚಿನ್ನದ ಹರಿವಾಣ. 6. ದೀಪಗಳನ್ನು. 7. ಗುಂಪು. 8. ಅನ್ನ ಬಡಿಸುವರು. 9. ಪೂರ್ಣಚಂದ್ರ.

ಪ್ರೀಯದಿ ದಧ್ಯನ್ನವನು ಕೈಕೊಂಡು ರ|ಸಾಯನಗಳ ನೀಂಟಿದರು ||೧೩||
ಉಚಿತವಱಿದು ಮಿಂಡಿವೆಣ್ಗಳು ನವರತ್ನ|ಖಚಿತಭೂಷಣಹಸ್ತದಲಿ |
ರುಚಿವೆತ್ತು ಬಡಿಸಲ್ಕೆ ಶ್ರೀಕೃಷ್ಣರಾಯನು ರುಚಿಗೆಯ್ದು ಸೊಗವನೀಕ್ಷಿಸಿದ||
ಬಡಿಸಿದರ್ ಮಂಡನೆ ಮಜ್ಜಿಗೆ ಕೆಲಬರ್ಗೆ ನಿಡಿವೆತ್ತ ತಿಳಿ ಕೆಲಬರ್ಗೆ ||
ಹಿಡಿಪೊನ್ನಹೂಜೆಗಳಿಂದ ಸೌರಭವೆತ್ತ|ಕುಡಿನೀರ ಕುಡಲೀಂಟಿದರು ||೧೫||
ಊಟವ ಮಾಡಿದುವಧು ಬಂಧುಗಳು ಚೆನ್ನಾಟದಿ ಕೃಷ್ಣ ಕೈದೊಳೆದು ||
ಮೀಟಾದ ಸಿರಿಗಂಪ ಕೈಕೊಂಡು ಕರ್ಪೂರ|ಕೂಟವೀಟಿಕೆಯನು ಸವಿದು ||
ಮಣಿಮೂರ್ತಿಗಳೆನೆ ವರಸತ್ಯಭಾಮೆ ರು|ಕ್ಮಿಣಿ ವಸಂತಾಪೇಕ್ಷೆಯಲಿ ||
ಫಣಿತಲ್ಪಂಗೆ ಬಿನ್ನೈಸಲು ಮನಗೊಳಿಟ್ಟಣಿಸಿದ ಕೇಳಾಯತಾಕ್ಷಿ ||೧೭||
ಭಕ್ತರಾಲಯ[1]ನಾಗ ಪೊಱಮಟ್ಟು ಮಾಣಿಕ|ವೆತ್ತ ಪೊಂಬಾವುಗೆ[2]ವೆರಸಿ||
ರಕ್ತಾಧರೆಯರುಗ್ಗಡಿಸಲು ಹಿಂಸಕ|ನಕ್ತಂಚರಭೇದಿ[3]ನಡೆದ ||೧೮||
ಇಳೆಯನೀರಡಿಮಾಡಿದ ಪಾದ ಜತನ ! ಬಾಂ|ಬೊಳೆ[3]ಯ ಪರಿಸಿದಂಘ್ರಿ [ಜತನ ! ||
ಹೆಱಗಲ್ಲಾಗಿದ್ದ ಮುನಿವಧುವಿಗೆ ಜೀವ ಕಳೆಯಿತ್ತ ಪಾದವೆಚ್ಚಱಿಕೆ ! ||೧೯||
ಸಿಟ್ಟಿಸಿ ಯಮಳಾರ್ಜುನರ ಬಿಂಕವ ಮುರಿದೊಟ್ಟಿದ ಪಾದವೆಚ್ಚರಿಕೆ ||
ತೊಟ್ಟಿಲಂತೆಸೆದಿರ್ದ ಶಕಟನ ನೆಲಕಿಕ್ಕಿ|ಮೆಟ್ಟಿದ ಪಾದವೆಚ್ಚಱಿಕೆ ! ||೨೦||
ತಡರುದೆ ಕಾಳಿಂದಿಯೊಳಗಿರ್ದ ಫಣಿಪನ ಹೆಡೆಯ ಮೆಟ್ಟಿದ ಪಾದಜತನ! ||
ಸಡಗರದಿಂ ಹರ್ಮ್ಯದೊಳಗಿರ್ದ ಮಾವನ ಕೆಡಹಿ ಮೆಟ್ಟಿದ (ಪಾದ) ಜತನ ! ||
ಎಲ್ಲಾದೇವರ ಸಿರಿಮುಡಿಗಡರ್ಚುವ | ಮೆಲ್ಲಡಿ ಜತನವೆಂದೆಂಬ ||
ಸಲ್ಲಲಿತಾಂಗಿಯರುಗ್ಗಡಿಸಲು ಮಾ|ವಲ್ಲಭ[4]ನೈತಂದನೊಲಿದು ||೨೨||
ಪೊಗಳಲಚ್ಚರಿ ರುಕ್ಮಿಣಿಸತ್ಯಭಾಮೆಯ|ರುಗಳು ಸಖೀಜನವೆರಸಿ ||
ಜಗದೀಶ್ವರನೆಡಬಲದಲ್ಲಿ ಬರಲು ಹೊ|ಮ್ಮಿಗವೇಂಟೆಯಂತಾದುದೆಂದು||೨೩
ಬಾಲೆ ರುಕ್ಮಿಣಿಸತ್ಯಭಾಮೆಯರ್ ಕೃಷ್ಣಾನು|ಕೂಲೆಯರ್ ಹೊನ್ನ [ಹಾವುಗೆಯ ||
ಲೀಲೆಯಿಂ ಮೆಲ್ಲಡಿಯಿಡುತ್ತೈತರೆ ರಂಗವಾಲಿಯ ಪಜ್ಜೆಯೊಪ್ಪಿದುವು||೨೪||
ಮುರಹರನರ್ಧಾಂಗಿಯರ ಕೋಮಲವೆತ್ತ|ಚರಣಾಂಗುಲಿಯಭೂಷಣದ

---

ಕ. ಪ. ಅ—1. ಭಕ್ತರೇ ತನಗೆ ವಾಸಸ್ಥಾನವಾಗಿರುವ ಕೃಷ್ಣನು. 2. ಪಾವುಕೊರಡು. 3. ರಾಕ್ಷಸ ಸಂಹಾರಕನಾದ ಕೃಷ್ಣ. 4. ಲಕ್ಷ್ಮೀಪತಿ.

ವರರತ್ನಗಳ ಢಿಯಿಂ ಹಲುದುರಿದ ಪುಡಿ | ಮೆಱೆದುದು ಮಣಿದೀಪದಂತೆ ||೨೫||
ವರನಾರಾಯಣನ ರಾಣಿಯರ ಪಾದದ ಹೊನ್ನ | ಸರಪಳಿಯೊಱೆಯುತ್ತೆ [ಬರಲು ||
ವರನೀಲದ ನೆಲಗಟ್ಟಲ್ಲಿ ಪೊಂಬಳ್ಳಿ | ವೆರೆದಂತೆ ರೇಖೆದೋಱಿದುವು ||೨೬||
ತುಂಟರಕ್ಕಸರ ಹಾಹೆಗಳ[1] ಮಧ್ಯದಹೊನ್ನ | ಗಂಟೆಯ ನಾದವಂಘ್ರಿಯೊಳು ||
ವೆಂಟಣಿಸಲು[2] ಕೃಷ್ಣನಂದು ಕ್ರೀಡಾಕುಲ | ಮಂಟಪವನು ಸಾರ್ದನೊಲಿದು ||
ನೋಡಲು ಕಣ್ಗೆಸೆದುವು ಚಂದ್ರಕಾಂತದ | ಕ್ರೀಡಾಕುಳಿಗಳ[3]ಲ್ಲಲ್ಲಿ ||
ಜೋಡಣೆಗೆಯ್ದ ಸುವರ್ಣಮಂಟಪದ ಕೈವಾಡವನೇನ ಬಣ್ಣಿಪೆನು ||೨೮||
ಕುಂಭಸ್ತನ ಬಾಹುಲತೆ ವಕ್ಷ ಮುಖಚಂದ್ರ | ಬಿಂಬಲಾವಣ್ಯದೆ ಮೆಱೆವ ||
ಹೊಂಬುತ್ತಳಿಗಳಿರ್ದುವು ರತ್ನಮಯ ಹೇಮ | ಗಂಭ ಚಾವಡಿಗಳಭ್ರದಲಿ ||
ನರ್ತನ ಕೋಲಾಟಹೊನ್ನಂಡೆಗಳ ನಾಂತು | ಪುತ್ತಳಿ ಮದನಕೈಯೊಡೆಯ ||
ಚಿತ್ರರಗೈದಿರ್ದ ಬಿನ್ನಾಣಗಳ ನೋಡಿ | ಚಿತ್ರೈಸಿದನು ಕೃಷ್ಣ ನಗುತೆ ||
ಮುಡಿವಾಳ ದವನ ಪಚ್ಚೆಯ ತೆನೆ ಸೌರಭ್ಯ | ಪಡೆದ ಪೊಂಬಾಳೆ ಪೂದಂಡೆ |
ನಿಡಿದಾದ ವೃಗರ್ಝಲ್ಲಿ ನಿಖಿಳಪುಷ್ಪಂಗಳು | ಜಡಿದಿರೆ ಕೃಷ್ಣ ನಿಟ್ಟಿಸಿದ ||೩೧||
ಶಾಲೆಗಳಿಂದೆ ಕುಚ್ಚುಗಳಿಂದೆ ಕಮ್ಮಲ | ಮಾಲೆ ಝಲ್ಲರಿ ಝಲ್ಲಿಯಿಂದೆ ||
ಬಾಲೆಯರುಗಳ ಕಣ್ಮನಕೆ ರಾಟಣದು | ಯ್ಯಾಲೆ ನಾಲ್ದೆಸೆಯೊಳೊಪ್ಪಿದುವು ||
ಕೆಳದಿ ಕೇಳಿಂತಪ್ಪ ಶಶಿಕಾಂತಕ್ರೀಡಾ | ಕೊಳವಿರಲೊಂದೊಂದ ನೋಡಿ ||
ಬಲರಾಮ ಸಾತ್ಯಕಿ ಪ್ರದ್ಯುಮ್ನಗೆಯಿತ್ತು | ಜಲರುಹದಳನೇತ್ರ ನಗುತ ||೩೩||
ಅವರವರುಗಳು ತಮ್ಮಯ ಪ್ರಾಣಕಾಂತರ | ನಿವಹವೊಂದಾಗಿಯಾಕೊಳದಿ
ಬೆವಹರಿಸಿದರಾಯತವೆತ್ತು ಧರಣೀ | ಧವನೋಕುಳಿಗೆ[4] ನೇಮಿಸಿದ ||೩೪||
ಲೀಲೆಗಾರ್ತಿಯರಚ್ಯುತನಾಜ್ಞೆಯಿಂದೆ ಪೆರ್ಗಾಲ[5] ಹೊಂದೊಂಬನು ನೆಗಹೆ ||
ಕೀಲಣೆಗೆಯ್ದ ಸುವರ್ಣವೇತಂಡ ಶುಂ | ಡಾಲದೆ[6] ಸುರಿದುದು ಸಲಿಲ ||೩೫||
ನಳಿನಾಕ್ಷಿಯರ ಕಂಧರದ ಪ್ರಮಾಣಕ್ಕೆ | ಸಲಿಲಪೂರಿತವಾಗಲೊಡನೆ ||
ಬಲಿದರು ಮೇಲೆ ಪೊಂದೊಂಬ ನವಾಂಬುವು | ಚ್ಚಳಿಸಿತು ಸಿಂಗರಬನದಿ ||೩೬||

---

ಕ. ಪ. ಅ—1. ಬೊಂಬೆಗಳು. 2. ವೃದ್ಧಿಹೊಂದಲು. 3. ಕ್ರೀಡಾಸರಸ್ಸು; ಹೀಗೆ ಅರಿಸಮಾಸ ಮಾಡಬಾರದು. 4. ವಸಂತೋತ್ಸವಕ್ಕೆ. 5. ದೊಡ್ಡ ಕಾಲುವೆ. 6. ಆನೆಯ ಸೊಂಡಿಲಿಂದ.

ಹಿಮರುಚಿಕಾಂತತತ್ಕ್ರೀಡಾಕುಟಿಗೆ ಕುಂ|ಕುಮದಲರ್ದುಳದೊಡೆಗಲಸಿ||
ರಮಣಿಯರ್ ತಳರಡಿದಳೆದಿರ್ದ ಲತೆಯಂತೆ|ರಮಣೀಯಮಾಯ್ತು ಕೆನ್ನೀರು||
ಸಕಲಪರಿಮಳದ್ರವ್ಯಂಗಳ ಗಂಧೋ|ದಕದಲ್ಲಿ ಹದಮಾಡಲೊಡನೆ ||
ವಿಕಸಿತಕಮಲದಳಾಕ್ಷ ತನ್ನಯ ವಧೂ|ನಿಕರಕೆ ಸೂಚನೆಗೆಯ್ದ ||೩೮||

ಖಂಡೇಂದುಭಾಳದ ಸತಿಯರ್ಗೆ ರನ್ನದೊ|ನ್ನಂಡೆ ಜೀರ್ಕೊಱವೆ[1] [ಯೊಳ್ಳಲರ ||
ಚೆಂಡಲರಿನ ಪೊಟ್ಟಣ ದಿವ್ಯಚಂದನ|ದುಂಡೆಗಳನು ಕೊಟ್ಟ ನಗುತ ||೩೯||
ಆರಾರಿಗೇನೇನ ಕೊಡಬೇಕಾದುದ|ತಾರತಮ್ಯದಿ ನಿಯೋಗಿಸಲು ||
ತೋರನುಣ್ಮೊಲೆಯ ಮಾನಿನಿಯರುಗಳು ಶೃಂ|ಗಾರವ ತಾಳ್ದರುತ್ಸವದಿ ||

ಕೋವಿದೆ[2] ಕೇಳು ರುಕ್ಮಿಣಿ ಸತ್ಯಭಾಮಾ|ದೇವಿಯರ್ ಕುರುಳ [ಬಾಸಣಿಸಿ |
ಪೂವಿಡಿಕಿಱಿದು ಪೆರ್ಜಡೆವೆಣೆದರು ಕೃಷ್ಣ|ಮೂವೀದಿಗೊಂಡು ನೋೞ್ಪಂತೆ
ಭೃಂಗಕುಂತಲವನು ಬಾಗಿಸಿ ನಿಖಿಲಗೋಪಾಂಗನೆಯರು ಜಡೆವೆಣೆಯೆ||
ತುಂಗಸ್ತನದ ಕೊಪ್ಪರಿಗೆಯ ಕಾವ ಭು|ಜಂಗನವೊಲು ಬೆನ್ನೇಱಿದುವು||೪೦

ಧರ್ಮ[3] ಕಲಶಕುಚೆಯರು ಕೃಷ್ಣರಾಯನ ತಮ್ಮರ್ದವನೆಯೊಳಂಬಿಡಲು
ನಿರ್ಮಲಬಹಿರ್ಭಾಗದೊಳೆಸೆವಂತೆ ಪೆ|ರ್ಧಮ್ಮಿಲ್ಲ[4] ಜಡೆಗಳೊಪ್ಪಿದುವು ||
ಜಡೆಗೆ ಪೂಸಿದರು ಕತ್ತುರಿ ಕಮ್ಮಲರ್ಗಳ|ಬಿಡಯವಿಲ್ಲದೆ[5] ಕೇವಣಿಸಿ[6]||
ತಡೆಯದೆ ಕಪ್ಪುರವಟ್ಟುಗಳನು ಶಿರ|ದೆಡೆಯಲ್ಲಿ ನೆಲೆಗೊಳಿಸಿದರು ||೪೧||

ನೊಸಲ ಕತ್ತುರಿಯೂರ್ಧ್ವಪುಂಡ್ರದ ಕರ್ಣದೊ|ಳೆಸೆವ ಜವಾದಿ [ಮೆಯ್ಯೊಳಗೆ |
ಬಿಸಜಗಂಧಿಯರಾಯತವೆತ್ತು ಕಾವನ | ಮಸೆದ ಕೂರ್ಗಣೆಗಳಂತೆಸೆಯೆ ||
ನೀಱೆಯರುಗಳಾಯತವೆತ್ತು ಬರಲಾಗಿ|ಬೇಱೆ ಬೇಱವರವರುಗಳ ||
ಮೋಱೆಯ ಸೊಬಗನೀಕ್ಷಿಸಲು ಕೃಷ್ಣನ ಮನ|ಸೂಱೆವೋಗದೆ [ಸುಮ್ಮನಿಹುದೆ ||೪೨||

---

ಕ. ಪ. ಅ—1. ನೀರನ್ನು ಎರಚುವ ಜಲಯಂತ್ರ. 2. ವಿದುಷಿಯೇ. 3. ಚಿನ್ನದಿಂದ ಮಾಡಲ್ಪಟ್ಟ. 4. ತುರುಬು, ಕಬರಿ. 5. ಗುಂಪಾಗದಂತೆ, ವಿರಳವಿರಳವಾಗಿ. 6. ಸೇರಿಸಿ, ಮುಡಿದು.

ಇಂದುವದನೆ ರುಕ್ಮಿಣಿ ಸತ್ಯಭಾಮೆಯು|ಗಂದುಗೆ ಘುಲಿರೆಂಬ ರವದಿ ||
ಬಂದು ವಸಂತಪೂಜೆಯ ಮಾಡಬೇಕೆನ|ಲಂದು ಸಾರ್ಚಿದರು ವಸ್ತುಗಳ ||
ತೋರ[1]ತೆಂಗಾಯಿ ನಾನಾವಿಧಪರ್ಣ ಫಲಾ|ಹಾರವ ರಾಸಿಮಾಡಿದರು ||
ಓರಂತೆ ಗಂಧಾಕ್ಷತೆ ಪುಷ್ಪ ನಿಖಿಲೋಪ|ಚಾರವಸ್ತುಗಳನಿಕ್ಕಿದರು||೪೮||

ತಾಳ ದಂಡಿಗೆ[2]ವಿಡಿದಮಳಗಾನೆಯರು ಹಿಂ|ದೋಳವಸಂತರಾಗದಲಿ ||
ಆಳಾಪಗೈದುತ್ಸವದಿ ಪಾಡಿದರು ಗೋ|ಪಾಲಕೃಷ್ಣನ ಮುದ್ರಿಕೆಯ ||೪೯||

ಬಳಿಕ ರುಕ್ಮಿಣಿ ಸತ್ಯಭಾಮೆಯರುಗಳೊತು|ಪಳಕಿನ ಕಲ್ಲತಣ್ಣೊಗ್ಳದಿ||
ತಳುಕು[3]ಕಡಗ ಕಂಕಣ ಝುಣಝುಣಿಸಲು|ತುಳುಕಿದರ್ ಗಂಧೋದಕವ|೫೦
ನಡನಡುಗಿಸಿ ನಲ್ಲನೆದೆಯ ಧೈರ್ಯವ ಮೊಲೆ|ಗೊಡದಿಂದೆ ಮೊಗೆವಂತೆ [ಮೊಗೆದು ||
ಅಡರ್ದಪೊಂಗೊಡಮೊಲೆವೆಂಗಳುಮುಸುಕಿತು|ಮೃಡತಪಧ್ವಂಸಿಯುಪಿತನ[4]||

ನೆಟ್ಟನೆ ವಿಧಿಭವೇಂದ್ರಾದಿನಿರ್ಜರರನು|ಕಟ್ಟಿಯಾಳುವ ಕೃಷ್ಣ ನಿನಗೆ ||
ಪಟ್ಟಾಭಿಷೇಕವಿದೆಂಬಂತೆ ತಂದಿಳಿ|ದಿಟ್ಟರೋಕುಳಿಯ ಮಸ್ತಕದೆ ||೫೦||

ಎಲೆಗೆ ರುಕ್ಮಿಣಿ ಸತ್ಯಭಾಮೆ ನಿಲ್ಲೆನುತೆ ಕೋ|ಮಲೆಯರ ಕೆಯ್ಯ [ಹೊಂಗೊಡನ ||
ಸೆಳೆದು ಕೊಂಡುಱ[3] ಮಸ್ತಕದಲ್ಲಿಸುರಿದನು|ಮೊಲೆ ಮುಡಿಗಳು ತೋಯ್ದು [ತೆಱದಿ ||೫೧||

ನೀರನು ಬಿಟ್ಟಿರಲಪ್ಪದೆ ಮತ್ಸ್ಯಾವ|ತಾರ ನೀನೆಂದು ನೀಱೆಯರು ||
ರಾರಾಜಿಸುತಿಪ್ಪ ಕುಂಕುಮಜಲದೊಳು|ನಾರಾಯಣನನದ್ದಿದರು ||೫೨||

ಕಮಲಾಕ್ಷ ನೀರೊಳು ಬಿರ್ದು ನಿಟ್ಟಿಸಲಾಗ|ತಮಚೋರನಲ್ಲಿಂದ [ಹೊಱಟು ||
†ರಮಣಿಯರುಗಳಬಲ್ಮೊಲೆದೊಟ್ಟಿ ಕರ್ಬಣ್ಣ|ತಮವೆಂದು ಹಿಡಿದೌಕಿದನು||
ಅಂತವಿಲ್ಲದೆ ರುಕ್ಮಿಣಿಸತ್ಯಭಾಮೆಯ|ಮುಱಂತಪ್ಪ ವಿನಾಟು[5]ವೆಣ್ಣುಗಳ||
ಕುಂತಳ ತಮವೆಂದು ನಿಡುಜಡೆವಿಡಿದು ಶ್ರೀ|ಕಾಂತ ನೀರೊಳಗೆ ನೂಕಿದನು||

---

ಕ, ಪ. ಅ—ದಪ್ಪವಾದ. 2. ವೀಣೆ, 3. ಹಾರ. 4. ಕೃಷ್ಣನ; ಹೇಗೆ?
† ಬಲ್ಮೊಲೆದೊಟ್ಟನ ಕರಿಯಬಣ್ಣವನ್ನೇ ತಮವೆಂದು ಉತ್ಪ್ರೇಕ್ಷೆ; ಇಲ್ಲಿ ಸೂಚಿತವಾದ ಪೂರ್ವಕಥೆ ಯಾವುದು? 5. ಸೊಗಸಾದ.

ಬಿಸಜಾಕ್ಷಿಯರು ತೋಯ್ದು ಪೊಱಮಟ್ಟು ಬಂದಾಗ|ವಸನವ ಮುರಿದು [ಹಿಂಡಿದರೆ ||
ಎಸೆವ ನಿರ್ಮಲದೇಹಲಾವಣ್ಯಪರಿಪೂರ್ಣ|ರಸ ಸುರಿವಂತಾದುದಬಲೇ ||೫೬||

ಕೆಂಬಾವುಡೆ[1]ಯುಡಿವಸನವು ತೋಯ್ದು ನಿ|ತಂಬವು ದೃಶ್ಯತೆವಡೆದು ||
ಪೊಂಬಾೞಿದೊಡೆ ತೋಳು ನುಣ್ಮಲೆ ಮೊೞಿಯೆ ಪೀ|ತಾಂಬರ ನೋಡಿ [ಹಿಗ್ಗಿದನು ||೫೮||

ಕಿಂಚಿನ್ಮಮಕಾರದೆ ಕೃಷ್ಣಲಾವಣ್ಯ|ಲಾಂಛಿತ ವರವಧೂಟಿಯರ ||
ಹಂಚಿಕೊಂಡಿರ್ದರೋ ಕುೞಿಯನಾಡೆಂದು ಪ್ರ|ಪಂಚ ತಾಪೇಳ್ದ ಕೇಳಬಲೆ||
ತೋಳ ಮೂಲಗಳೊಡೆವಂತೆ ಪೆರ್ಮೊಲೆಯು ಚ|ಡಾಳದಿ ಮೊೞಿವ [ಹೆಣ್ಣುಗಳು ||
ಆಳ ಹಂಚಿದರು ರುಕ್ಮಿಣಿ ಸತ್ಯಭಾಮೆಯರ|ಮೇಳಕೆ ತಕ್ಕತಕ್ಕವರ ||೬೦||

ಎಡಗರೆದೋಱುವ ಸುಲಿಪಲ್ಲ ಪೊಳೆವ ಪೆಜೆರ್ಡೆಯಲವರ್ಗಲೆ [ಹೊಂಗೆಜ್ಜೆ ||
ಬಿಡಯ[2]ವಿಲ್ಲದ ಹೊನ್ನಂಡೆಗಾತಿಯರುಬೆಂ|ಗಡೆಯ ಸಾರಿದರು ರುಕ್ಮಿಣಿಯ||
ಅತ್ಯಂತರೂಪಯೌವನಗಾರ್ತಿಯರುಹೊಂ|ಬುತ್ತೞಿ[3]ಯೆಡೆಯಾಡುವಂತೆ||
ಕೆತ್ತಿದ ರನ್ನಜೇಕರ್ೞಿವೆಯ ಕೈಕೊಂಡು|ಸತ್ಯಭಾಮೆಯನು ಸಾರಿದರು||
ಪಲ್ಲವಾಧರದಂತ(ಕುಚ ಪೊಗರುಗುವ[4])ಧ|ಮ್ಮಿಲ್ಲದೆಮೊೞಿವಹೆಣ್ಣುಗಳು||
ಫುಲ್ಲ[5]ದಳಾಕ್ಷಗೆ ಪೊಸವೇಟ[6] ಪುಟ್ಟುವಂತೆಲ್ಲರಿಬ್ಬಗೆಯಾದರಾಗ ||೬೨||

ಉಚ್ಚವ[7]ದೊಲವೊಂದು ಮನದೊಳು ಮೊಳೆದೊರ್ದ|ಮುಚ್ಚರ[8]ವೊಂದು [ಕಾಂತನಿಗೆ ||
ಹೆಚ್ಚಳವಡಿಸಲ್ಕೆ[9] ಕೊಂಬು[10]ಜೇಕರ್ೞಿವೆಯೊಳೆಚ್ಚಾಡುತಿರ್ದರೋ [ಕುೞಿಯು ||೬೪||

ಅಂಡೆಯ ನೆಗಹಿ ಕುಂಕುಮರಸದುಂಬಿಕ್ಕೆ ಯಂಡೆಯ ಕೋೞಿವೆಯ ಚಿಗಿದು||

---

ಕ. ಪ. ಅ—1. ಕೆಂಪುಬಟ್ಟೆ ; ಪಟ್ಟೇಸೀರೆ. 2. ದಾಕ್ಷಿಣ್ಯ. 3. ಚಿನ್ನದ ಬೊಂಬೆ. 4. ಕಾಂತಿಯು ಪ್ರಸರಿಸುವ. 5. ವಿಕಸಿತವಾದ ಪುಷ್ಪ. 6. ಪೊಸತಾದ ವಿರಹ. 7. ತ್ಸ. ಉತ್ಸವ. 8. ತ್ಸ. ಮತ್ಸರ. 9. ಹೆಚ್ಚುಮಾಡಲು ; ಉಬ್ಬಿಸುವುದಕ್ಕೆ. 10. ಶೃಂಗ.

ಮಂಡೆಯ ನಿಡುಜಡೆವಿಡಿದು ಹೊಯ್ದಾಡಿದರ್|ಖಂಡೇಂದುವಕ್ತ್ರಭಾಮೆ
[ಯರು ||೧೫||

ಭೇದಿಸಲಂಗಜಾತಗೆ ಭದ್ರಗಜ ನೀರ|ಸೇದಿ ಸೊಂಡಿಲೊಳೀವ ತೆಱದೆ ||
ಮಾದಿಸಿಕೊಳುತ ಜೀರ್ಕೊಳವಿಯಿಂದೆ(ಚ್ಚೆ ಚ್ಚು)'ನಾದಿದರೊ[1]ಬ್ಬರೊ
[ಬ್ಬರನು ||೧೬||

ಭೇರಿಮದ್ದಳೆ ಶಂಖಪಟಹಡಿಂಡಿಮ ಡೋಳು ಮೌರಿ ತಂಬಟದ ದನಿಗಳು ||
ಭೂರಿನಾದದೆ ಲಗ್ಗವಱ[2]ಮೊಱಗಿದುವಲ್ಲಿ|ನಾರಿಯರ್ ಪೊಯ್ದಾಡುತಿರಲು||
ನಮ್ಮೊಳು ನಾವೆ ಪೊಯ್ದಾಡಲು ಬೇಕೆಂದು|ಕಮ್ಮಲರ್ಗಂದಗಂದಿಯರು||
ತಮ್ಮನಾಳುವ ಕೃಷ್ಣರಾಯನ ತುಡುಕಿದ ಪೆರ್ಮೆಯನೇನ ಬಣ್ಣಿಪೆನು ||೧೮

ಬಂದುಗೆವಾಯ[3] ಭಾಮಿನಿ ಕೇಳು ಹೊಸಹೊನ್ನ|ಬಿಂದಿಗೆದುಂಬಿಮೋ
[ಕುೞಿಯ ||
ಇಂದಿಗೆ ಸುಖ ಸಿದ್ಧಿಸಿತೆಂದು ಚೆಲ್ಲಿದ|ರಂದು ಕೃಷ್ಣನ ತಕ್ಕೈಗೊಳಿಸಿ ||೧೯||

ಶತಪತ್ರದಳನೇತ್ರೆಯರ ಬಲ್ಮೊಲೆಗಳ|ಚ್ಯುತನದಿವ್ಯಾಂಗದೊಳಮರ್ದ
ಕೃತಪುಣ್ಯರಾದರು ಮೆಯ್ನವಿರ್ಗಳು ಪುಳ|ಕಿತರಾದರನಿಬರುತ್ಸವದೆ ||೨೦||

ರಮೆಭೂದೇವಿ ಮೂಲೋಕವೆಣ್ಣುಗಳಗು|ತ್ತಮೆಯರು ಸಲ್ಲೀಲೆಗೆಯ್ವ||
ಸಮಯದಿ ಶ್ರೀಕೃಷ್ಣರಾಯನ ಚಿತ್ತಕೆ|ಬೆಮೆ[4]ಗೊಳಿಸದೆ ಪೋದರೇಕೆ||೨೧

ಫಣಿತಲ್ಪ ಸುರನಿಶಾಚರರಿಂಗೆಯಮೃತವ|ನುಣಬಡಿಸಲ್ಕೆ ಕೋವಿದರು ||
ಗಣಿಸಲಚ್ಚರಿಯ ಮೋಹನಮೂರ್ತಿನಾರಾ|ಯಣಿಯಾಗಿಜಗವಮೋಹಿಸಿದ||

ಹೆಂಗಳು ಭ್ರಮಿಸುವುದರಿದಲ್ಲ ವಿಧಿಭವರ್[5]|ಕಂಗಳಿಗಾಶ್ಚರ್ಯವಡೆವ ||
ಮಂಗಳಪುರುಷಾಕೃತಿ ಮೋಹನರೂಪ|ರಂಗನಲ್ಲವೆ ರಾಜ[6]ವದನೆ ||೨೩||

ನಿಜಲೀಲೆಯೊಳಗಿರೆ ಶ್ರೀಕೃಷ್ಣರಾಯನ|ಗ್ರಜಕನಿಷ್ಠರುಗಳು ತಮ್ಮ ||
ಗಜಗಮನೆಯರೊಂದುಗೂಡಿ ಕ್ರೀಡಾಕುಲ|ವ್ರಜದೊಳೋಕುೞಿಯನಾಡಿ
[ದರು ||೨೪||

ಕ್ಷಿತಿಯೊಳಚ್ಚರಿವೆತ್ತ ತಣ್ಗೊಳದೊಳಗುಮಾ|ಪತಿತಸಧ್ವಂಸಿ ಮುಂ
[ಕೊಂಡು ||

---

ಕ. ಪ. ಅ—1. ನೀರಿನಲ್ಲಿ ನನೆಯಿಸಿದರು. 2 ಲಗ್ಗಯವಾದ್ಯ.
3. ಬಂಧೂಕದ ಪುಷ್ಪದಂತೆ ಕೆಂಪಾದ ಬಾಯುಳ್ಳ. 4. ಭ್ರಮೆ.
5. ಬ್ರಹ್ಮರುದ್ರರು. 6. ಚಂದ್ರ.

ರತಿದೇವಿಸಹ ವಸಂತವನಾಡುತಿರ್ದನು|ಮತಿವಂತೆ ಕೇಳದಿ ಚಿತ್ತೈಸು||೭೫||
ಶಂಬರ ಶರನಿಧಿಯೊಳು ತನ್ನ ಕೆಡಹಿದ ಪಿಂಬವಣೆಯನು[1] ತೋಱುವರೇ ||
ಚೆಂಬಣ್ಣ ಗಂಧೋದಕದಲ್ಲಿ ಸ್ಮರ ತನ್ನ|ಕುಂಭಕುಚೆಯನು ನೂಂಕಿದನು ||
ಉಟ್ಟ ಸಾಲಿಯ ಸೀರೆ ಕೊಪ್ಪು ಪೇರುರದಲ್ಲಿ|ಬಟ್ಟಬಲ್ಮೊಲೆಯು
[ಥಾಳಿಸಲು ||
ನೆಟ್ಟನೆ [ನೀರಿಂದೆ] ಬಂದು ಕಾಮಗೆ ಕೈ|ಗೊಟ್ಟಳು ಮುಂದಲೆವಿಡಿದು ||೭೭||
ಹರನುರಿಗಣ್ಣಿಂದೆ ಬಂದ ಸಂತಾಪ ಪೀ|ವರಕುಚಾನ್ವಿತೆಯುರ ತಾಪ ||
ಸ್ಮರ ನಿನ್ನಮೆಯ್ಯೊಳಗಿದೆ ತಂಪುಗೊಳ್ಳೆಂದು|ತರಳೆ ನೂಂಕಿದಳು ತಣ್ಗೊಳದೆ||
ನೂತನಕಾಮಕುಂಕುಮರಸದೊಳುತೋಯ್ದು|ಪೀತಾಂಬರನಾಗಿ ಬರಲು
ಆತನ ಕಂಡಮರ್ದಪ್ಪಿ ಲಲ್ಲೆಯನಾಂತು|ಮಾತನಾಡಿದಳು ಮಾಯಾವಿ||೭೯||
ಎನ್ನ ನೀ ಮೊದಲು ನೂಂಕಿದ ಕಾರಣದಿಂದೆ|ನಿನ್ನ ನಾ ನೂಂಕಿದೆನ್ನೈಸೆ||
ಇನ್ನಾವ ತೊಡಕು ಬೇಡೆನುತ ಮನ್ಮಥ ರತಿ|ಪೊನ್ನಂಡೆಗಳ ತುಡುಕಿದರು||
ಕುಂಕುಮಜಲವ ಹೊನ್ನಂಡೆಗಳೊಳು ತುಂಬಿ|ಮುಂಕೊಂಡು ಹೊ
[ಯ್ದಾಡಲವಳ ||
ರಿಂಕಿದ[2] ಕುಚಯುಗ ಬಾಹುಮೂಲಂಗಳ|ಕುಂಕುಮ ಜಗವ ಮೋಹಿಸಿತು||
ಹೊಗರುಗುವಂಗೋಪಾಂಗ ವಕ್ಷದೊಳು ಪೊಂ|ಬೊಗರಿಯಂತಿರ್ಪ
[ನುಣ್ಮೊಲೆಯ ||
ದೃಗುಯುಗಳದಿ ನೋಡಿ ಹೆಱಿಂಗಲಾಱದೆ|ಮುಗುಳಂಬನಮರ್ದಪ್ಪಿದನು ||
ಪಲ್ಲವಿಸಿದ ನಿರ್ಜರವೃಕ್ಷವ ಕಲ್ಪ|ವಲ್ಲಿಯು ತೊಡರಿ ಕೊಂಬಂತೆ ||
ಸಲ್ಲಲಿತಾಂಗಿ ನುಣ್ದೋಳಿಂದೆ ರಸದಾಳ|ವಿಲ್ಲನ ಬಿಗಿಯಪ್ಪಿದಳು ||೮೩||
ಇನಿವಿಲ್ಲರತಿದೇವಿಯುರ ಮುಂದೆ ವರವಿಲಾ ಸಿನಿಯರು ಹೊನ್ನಂಡೆದಳೆದು||
ತನಿಮೋಹರಸಮೊಸರ್ದಂತೆ ಪೊಯ್ದಾಡಿದ|ರನಿಬರದೇನ ಬಣ್ಣಿಪೆನು ||೮೪||
ಎಡಬಲದೊಳು ಪಿಂತೆ ಮುಂತೆ ಶೋಭಿಸುವ ಪೊಂ ಗೊಡಮೊಲೆಯ
[ವರೋಕುಟಿಯ ||
ಎಡೆವಿಡದೊಬ್ಬರೊಬ್ಬರ ಮೇಲೆ ಚೆಲ್ಲುವ|ಸಡಗರವೇನ ಬಣ್ಣಿಪೆನು||೮೫||

---

ಕ. ಪ. ಅ—1. ಹೊಳೆಯುವ (?)	2. ಹಿಂದೆ ಅನುಭವಿಸಿದ ಕಷ್ಟ.

ಆಳಿಯರು[1]ಗಳೆಣ್ದೆಸೆಯೊಳು ನೂಱಾಱು| ಜೋಳಿ[2]ಜೋಳಿಯೊಳೊಂದು [ಗೂಡಿ ||
ಗೀಳಿಟ್ಟುಪೂಮಾಲೆಗಳಂದೆ ಕಡುಗೆಲ್ಲ|ಗೂೞಿಗಳ್ ಹೊಯ್ದಾಡುವಂತೆ ||೮೬
ಕಟ್ಟಲುಜ್ಜುಗವೆತ್ತ ಪೂಚೆಂಡು ಪನ್ನೀರ|ಪೊಟ್ಟಣ ಯಕ್ಷಕರ್ದಮವ ||
ಬಟ್ಟ ಕಂತುಕ[3]ದಿಂದೆ ಬಲ್ಮೊಲೆ ಬಿದಿರುವಂ|ತಿಟ್ಟಾಡಿದುದು ಸಖಿನಿವಹ ||೮೭
ಸಿಂಗಾರವಡೆದ ಱಾಟಳದುಯ್ಯಾಲೆಯ|ಮಂಗಳವಿಭವದಿನಡರ್ದು ||
ಅಂಗಜಚಕ್ರದಿಗ್ವನಿತೆಯರೆಂಬಂತೆ|ತುಂಗಯೌವನೆಯರಾಡಿದರು ||೮೮||
ನೋಟವಿಷಯದಿಂದೊಳಗಾದ ಪುರುಷರ|ಕೋಟಲೆಗೊಳಿಸಿ ಸುತ್ತಿಸುತ||
ಆಟವಿದೆಂಬಂತೆ ತಿರುಗಿಸುತಿರ್ದರು|ಱಾಟಳದುಯ್ಯಲೆಗಳನು ||೮೯||
ಸಱಿವಿಂಡಿವೆಣ್ಗಳ ಕೊರಲಹಾರದಮುತ್ತು|ಪಱಿದುದಿರುವಮಣಿನಿಚಯ||
ಬಿಱುವೞಿಯೊಳಗಾಲಿಕಲ್ಲುಗಳಂದದಿ|ತುಱುಗಿರ್ದುದುಯ್ಯಲೆಯಡಿಯ ||೯೦||
ಉಡುವಸನಂಗಳು ತೋಯ್ದು ಕೆಂಬಣ್ಣಕಿ|ಮ್ಮಡಿರುಚಿದೋಱುತಲಿರಲು||
ಕುಡಿತೆಗಣ್ಣಬಲೆಯರುಗಳು ತಣ್ಣಸವೆತ್ತು|ನಡುಗಿದರ್ ಮೇಲೆ ನರ್ತಿಸಲು||
ವೇಢೆಯವಡೆದು[4] ನಿಂದುದು ಪೆಣ್ಣು ಹರಿ ಜಲ|ಕ್ರೀಡೆಯನಾಡಿದ ಬೞಿಕ||
ಕೂಡೆ ಸದ್ವಸ್ತ್ರಭೂಷಣಗಂಧಮಾಲ್ಯವ|ಜೋಡಣೆಗೆಯ್ದ ಶ್ರೀಧರನು||೯೧
ವರಮೋಹನತರಂಗಿಣಿಯೆಂಬ ಕಾವ್ಯವ|ಬರೆದೋದಿ ಕೇಳದ ಜನರ ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವ ಲಕ್ಷ್ಮೀಕಾಂತ ಬಿಡದೆ||

ಅಂತು ಸಂಧಿ ೧೪ ಕ್ಕಂ ಪದ ೯೧೬ ಕ್ಕಂ ಮಂಗಳಂ.

## ಹದಿನೈದನೆಯ ಸಂಧಿ

ರತಿಕಾಂತವನ್ನು ಮನೆದುಂಬಿಸಿಕೊಂಡುದು—

ಮೂಱಕ್ಷರದ ಕೀರ್ತನೆಗೊಟ್ಟುಮುಕುತಿಯ|ತೋಱಲುಜ್ಜುಗಿಸಿದಹರಿಯ
ನೀಱನ ಮಡದಿಯು ಬಲಗೊಂಡು ಕವಿತೆಯ ಬೀಱಿನ್ನ ಕಿವಿಗೆ ಲೇಸೆನಿಸಿ||೧||
ಅಕ್ಕರಿಗನ ಕುಲವೃದ್ಧನ ಮಡದಿಯ[5]|ಧಿಕ್ಕರಿಸದೆ ಪೂಜೆಗೆಯ್ದು ||

ಕ ಪ. ಅ—1. ಜತೆಗಾತಿಯರು. 2. ಜೋಡಿ. 3. ಸೆಂಡು.
4. ಸುತ್ತನಿಂದು. 5. ಸರಸ್ವತಿಯ; ಹೇಗೆ?

ಸಕ್ಕದ ಕನ್ನಡವೆರಸಿದ ಕವಿತೆಯ|ನೊಕ್ಕಣಿಸುವೆ ಕೇಳು ಕೆಳದಿ ||೨||

ಅಱಿಯಟ್ಟಿ[1] ಖಳರ ಖಂಡಿಸಿ ಬಿಸಿರಕುತಕೆಂ|ದೊಱೆ[2]ಯೊಳು ತೊಳೆದ [ಚಕ್ರವನು ||
ಬಱಿಯೊಳು ಕೃಷ್ಣ ಬೈತಿಡುವಂತೆ ಪಡುವೆಟ್ಟ|ಮಱಿಗೊಂಡು ರವಿ [ಮುಳುಗಿದನು ||೩||

ಕಂಜಬಾಂಧವನಸ್ತಮಿಸೆ ಪಡುವಣವೆಣ್ಣು|ಮುಂ ಚೇತನಗುಂದಿ ತನ್ನ ||
ಮಂಜುಲವದನದ ತಂಬುಲವುಗುಳ್ದಂತೆ|ಸಂಜೆಗೆಂಪೆಸೆದಿರ್ದುದಾಗ ||೪||

ಸುಟಿವೆತ್ತು ಮುಗಿಲಗಲದಿ ಪರಿವಾಕಾಶ|ತಟನಿಯ[3] ಬುದ್ಬುದದಂತೆ ||
ಪಟುವಾಗಿ ನಿಖಿಲನಕ್ಷತ್ರಸಂದೋಹ ಸಂ|ಘಟಿಸಿತು ಕೇಳಾಯತಾಕ್ಷಿ ||೫||

ಮಿಾಟಾದ ರೂಪುಜವ್ವನ ಬಿಡುವೆಣ್ಗಳೊಳ್ ಬೇಟವ ಮಾಳ್ಪುದನ್ಯಾಯ||
ಕೂಟಕೆ ತರಣಿ ಬಂದರೆ ವೃದ್ಧನೆಂದು ಕ|ವಾಟವ ಮುಗಿದುವಂಭೋಜ||೬||

ಕೋವಿದೆ ಕೇಳುಶ್ರೀಕೃಷ್ಣರಾಯನಮುಂದೆ|ತೀವಿರ್ದ ಕಮಲವಲ್ಲರಿಯ||
ಹೂವಿನ ಗೊಂಚಲೆಂಬಂದದೆ ಬೊಂಬಾಳ|ದೀವಿಗೆ ಮೆಱೆದುವಿಕ್ಕಲದೆ||೭||

ಸ್ತನವೆ ಬುಜ್ಜಣಿಗೆ(?)ವ್ಯೆಲಾವಣ್ಯರಸ ತೈಲ|ವನಜಾಕ್ಷಿಯುರತೋಳೆ ದಂಡ
ಘನಕಾಂತಿವೆತ್ತಮಾಣಿಕ್ಯದುಂಗುರವೆರ|ಲ್ಮಿನುಗಿನ ಸೊಡರೊಪ್ಪಿದುವು ||೮||

ಪರಿಪೂರ್ಣತೇಜೋಮಯಕೃಷ್ಣರಾಯನ|ಸಿರಿಮೊಗಕಾಂತಿಯಮುಂದೆ||
ತುರಿಯದಿಂ ತಮ ಹೊದ್ದದಿರಲೆಂದುನಿಂದಿ|ರ್ದರಿವ ಸೊಡರ್ಗಳೊಪ್ಪಿದುವು||

ನಳಿನಬಾಂಧವನ ಮುಂದೆಸೆಯೊಳು ಮಿಗೆ ಮಿಂಚು|ಬುಬುವಿನ ಮಿನುಗು [ರಂಜಿಪುದೇ ||
ದಳಿತಪ್ರಕಾಶಕೃಷ್ಣನ ಮುಂದೆ ಸೊಡರ್ಗಳು|ಕಳತುವು[4] ನಸುಕಾಂತಿವೆರಸಿ||

ಎಡಬಲದಲಿ ಸತ್ಯಭಾಮೆ ರುಕ್ಮಿಣಿಯುಹೊಂ|ದೊಡವಿನರತ್ನದೀಪ್ತಿಗಳ||
ಪಡೆದ ತಾಯೆಂಬಂತೆ ಕೌಸ್ತುಭ ರಮ್ಯತೆ|ವಡೆದುದು ಹರಿಯುರಸ್ಥಳದಿ||೧೧||

ಗಂಧೇಭಗಮನೆಯರುಗಳಂಘ್ರಿಸಂದೋಹ|ಚೆಂದದೆ ಘಣಿರೆಂಬ ರವದಿ ||
ಬಂದಾಗ ಕೃಷ್ಣನು ವರರತ್ನಮಂಡಪ|ಹೊಂದವಗದಲಿ ಕುಳ್ಳಿರ್ದ ||೧೨||

---

ಕ. ಪ. ಅ—1. ಹಿಂದಟ್ಟಿಕೊಂಡುಹೋಗಿ. 2. ಕೆಂಪಾದ ಪ್ರವಾಹ.
3. ಆಕಾಶಗಂಗೆ. 4. ಕಾಂತಿವಿಹೀನವಾದುವು

ವಿಘ್ನದಾಯಕಶ್ರೇಷ್ಠನೆರ್ದೆಗೇಡಿಯ[1] ಪ್ರಲಂ'ಬಘ್ನ[2]ತಾನೊಡಗೊಂ
[ಡುಬಂದು ||
ವಿಘ್ನವಿಲ್ಲದೆ ಮನೆದುಂಬಿಸಬೇಕೆಂದು|ಲಗ್ನವ ಪೇಳ್ದನನುಜಗೆ ||೧೩||
ದಾನವಮದವಿದಳಿತ ಮುಸಲಿಯು ಮಾತಿ|ಗಾನಂದವಡೆದಾಕ್ಷಣದಿ ||
ಮಿನಧ್ವಜರತಿದೇವಿಗೆ ತತ್ಪುರ|ಸ್ಥಾನಗೇಹವ ತುಂಬಿಸೆಂದ ||೧೪||
ಕಡುಲೇಸಾದುದಚ್ಯುತ ಕಾಮರತಿದೇವಿ|ಗುಡುಗೊರೆ ಬಳ್ಳವಳ್ಳಗಳ ||
ಕುಡು ಕೊಂಡುಯ್ದುಮಂದಿರವತುಂಬಿಸರೆಂದು|ನುಡಿದನುರಾಮನಚ್ಯುತಗೆ ||
ರಾರಾಜಿಸ ನವ್ಯವಸ್ತ್ರಸಂತತಿ ಸಪ್ತ|ಹಾರ ಮೆಯ್ದೊಡಿಗೆ ಮೌಕ್ತಿಕದ||
ಹಾರ ಕಿರೀಟ ವೈದೂರ್ಯಬಿನೊಳೊಪ್ಪುವ|ತೋರಮುತ್ತುಗಳ ಪಾಲಿಸಿದ ||
ಚಿನ್ನದ ಕಾಲ ಬೆಳ್ಳಿಯಕಾಲಮಂಚ ಸು|ವರ್ಣದಡ್ಡಣಿ[3] ಸುಪ್ಪತಿಗೆ ||
ರನ್ನವಿಟ್ಟರ[4] ರತ್ನಗಂಬಳಿ ತಲೆಗಿಂಬು[5]|ಹೊನ್ನಾಂಬರನಿತ್ತ ಮಗಗೆ ||೧೭||
ಮಿಗೆ ರಮ್ಯವಡೆದ ಹೊಂಬರಿಯಣತಳಿಗೆ ತಂ|ಬಿಗೆಗಿಂಡಿಗಿಣ್ಣಿಲುಗಳನು ||
ನಗೆಮೊಗದರ್ಪಣ ಹಂಸೆ ಪುತ್ತಳಿಯು ದೀ|ವಿಗೆಗಂಬಗಳನಿತ್ತನೊಲಿದು||೧೮
ಸೊಡರ್ಗುಡಿಗಳ ಸ್ವರ್ಣಬುಜ್ಜಣಿಗೆಗಳ ಪೆ|ರ್ಗೊಡಪಾಸಿಕೊಪ್ಪರಿಗೆಗಳ ||
ಅಡಲೊಡರ್ಚುವಪೊಂಭಾಂಡಗಳ ಕರಬೋನ|ಗಡಣವ ಕೊಟ್ಟನುತ್ಸವದಿ ||
ನೆಗಳ ಸೊಂಡಿಲ ಚೆನ್ನದಣಿಸಿನ ಪಲ್ಲಕ್ಕಿ|ಸೊಗಯಿಪ ರತ್ನವಿಮಾನ ||
ಮಿಗೆ ನಲ್ಕುಂಚ ಕಾಳಾಂಜಿಮುಂತಾದವ ಸ್ತುಗಳನಿತ್ತನುಕೃಷ್ಣ ಮಗಗೆ||೨೦||
ಕರ್ಮಾನಂಗಳಗೆ ಸೌಖ್ಯವನೆಯ್ದಿಸುತಿರ್ಪ ನುಹೆರ್ಮ್ಮೆಲೆಗಳನುಱಿಮೊಱಿವ ||
ಪೆರ್ಮಾಣಿಕಗಡಣವನಿತ್ತ ನೆಯ್ದಿಲ|ಗರ್ಮ್ಮೆಯ್ಯ ರತಿಮನೋಧವಗೆ ||೨೧||
ದಂತಿಘೋಟಕ[6] ಧೇನುಮಹಿಷಿವತ್ಸಂಗಳ|ನಿಂತಿರಿಸಿದರು ಸಾಲ್ಗೊಳಿಸಿ ||
ಇಂತವು ಮೊದಲಾದ ಬಟುವಟಿಗಳ ಕೃಷ್ಣ|ಕಂತುವಿಗಿತ್ತನುತ್ಸವದಿ||೨೨||
ತೊಂಡಿಲು ಬಾಸಿಗವನು ಸೂಡಿದರು ಚಂದ್ರ|ಮಂಡಲರತಿಮನ್ಮಥರ್ಗೆ||
ಸೊಂಡಿಲಿಂದೆಸೆವ ದಂತಿಯನೇಱಿಸಿದರಾ|ಖಂಡಲ ಶಚಿಯು ಕೀಲ್ಪಡಿಸಿ||೨೩||
ನಿಚ್ಚಣಿಗೆಯ ಪಂಜು ನಿಜಪಂಜು ಸೂರ್ಯನೊಳ್|ಮುಚ್ಚರಿಸುವಮಾಪಂಜು||

---

ಕ. ಪ. ಅ—1 ಮನ್ಮಥ; ಹೇಗೆ? 2. ಪ್ರಲಂಬಾಸುರನನ್ನು ಕೊಂದ ಬಲರಾಮ. 3. ಮೂರುಕಾಲುಳ್ಳ ಮಣೆ. 4. ರತ್ನಾಸನ. 5. ತಲೆಯ ದಿಂಬನ್ನು. 6. ಕುದುರೆ.

ಉಚ್ಚಳಿಸಿದುವು ಮನ್ಮಥರತಿ(?)ಲಯಕಾಲ|ಕಿಚ್ಚಿನ ಬಳಗವೆಂಬಂತೆ ||೨೪||
ಎಡೆಯು ಪಂಜುಗಳಿರ್ದುವು ನಾಗನಾಥನ| ಹೆಡೆವಣಿಗಳ ದೀಪ್ತಿಯಂತೆ ||
ಬಿಡೆಯವಿಲ್ಲದೆ ಮಧ್ಯಮಧ್ಯದೆ ಪೆಣ್ವಿಂಡು|ನಡೆಗೊಂಡುದೇನ ಬಣ್ಣಿಪೆನು ||
ಇಡಿಕಿಱಿದಿಹ ಬಟ್ಟವೊಲೆಯ ಹೊಂಗಳಸಕ| ನ್ನಡಿಯಂತೆ ನುಣ್ಮೊಗ [ಮೆಸೆಯೆ ||
ನಿಡಿದಾದ ಕಪ್ಪುಗಣ್ಗಳ ಮಾರ ನಾರಿಯ|ರಡಿಯಿಟ್ಟರರಸಂಚೆಗಮನೆ ||೨೬||
ಬಾಣಪಂಚಕ ರತಿದೇವಿಗೆ ಶ್ರೊಂಬರಿ ಯಾಣದಿಂದಾರತಿ ಬೆಳಗೆ ||
ಮಾಣದೆ ಧವಳಶೋಭನವ[1] ಪಾಡಿದರು ಗೀ|ರ್ವಾಣನಾರಿಯರ ಕೀಲ್ಪಡಿಸಿ||
ಕರಣೇಂದ್ರಿಯ ಚಿತ್ತ ಯೋಗಿಗಳೆದೆ ತಪಃ|ಕರಣವನೊಡೆಮುಱಿವಂತೆ||
ಚರಣಾಭರಣದೀಪ್ತಿಯೊಳಂಗೋದ್ಭವ|ಸ್ಮರಣದ ಹೆಂಗಳೊಪ್ಪಿದರು ||೨೮||
ದುಸ್ತರಗೀತಶಬ್ದವ ಕೊಂಬ ಪಾತ್ರಸ ಮಸ್ತವಿದ್ವಜ್ಜನರಿಂಗೆ ||
ಹಸ್ತದಿ ಹೊಮ್ಮಱಿಗಱಿದನು ಯಾದವ|ಮಸ್ತಕಮಣಿ ಕೃಷ್ಣನೊಲಿದು||೨೯
ಅಗಣಿತಕನಕದಂಡದ ಪಲ್ಲವಛತ್ರ ನೆಗಹಿರೆ ರತ್ನ ತೆತ್ತಿಸಿದ ||
ಸೊಗಯಿಪ ಮಣಿಸೊಡರ್ವೆಳಗಿನೊಳ್ ಮೆಱೆದುವು | ಗಗನತಾರಕಿಯ [ಕೀಲ್ಪಡಿಸಿ ||೩೦||
ಸಿರಿವೆತ್ತ ಕನಕದಂಡದ ಚಾಮರ ಸೀಗುರಿ ನಡೆದೋರಣನಿಚಯ ||
ಪರುರವಿಸಿರ್ದ ನಾನಾವಿಧ ಟೆಕ್ಕೆಯ[2] ತೆರಳಿತು ನಭವನಳ್ಳಿರಿದು ||೩೧||
ಅಂಗಡಿಯೆಡಬಲದಲಿ ರಮ್ಯತರಹ|ರ್ಮ್ಯಂಗಳ ತುದಿಯ ಮಂಟಪದಿ ||
ಹೆಂಗಳು ರನ್ನೆಯ ನೋಡುತಿರ್ದರು ವಿಮಾ|ನಂಗಳಮರಿಯರ ಜಱಿದು||೩೨
ಸೌಂದರಮಯವೆತ್ತು ರತಿ ಕಾಮಸಹ ಗಜ ಕಂಧರದೆಡೆಯಲಿ ಕುಳಿತು||
ನಿಂದಲ್ಲಿ ನೃತ್ಯಗೀತಗಳ ನೋಡುತಲೈ ತಂದರು ರಾಜಮಂದಿರಕೆ ||೩೩||
ಪರಿವೇಷ್ಟಿಸಿದ ಹೊನ್ನಮಗಿಲ[3]ಗ್ರದಿ ಕತೂ|ದರಿ[4] ರಮ್ಯರತ್ನಗೋಪುರದಿ||
ಸಿರಿವೆತ್ತ ಬಾಗಿಲ ಮುಂದೆಸೆಯಲಿ ಕಂತು|ಕರಿಯ ಮಸ್ತಕದಿಂದಲಿೞಿದ ||
ಬಿಡದೊದರುವ ನಾನಾವಾದ್ಯಶ್ರುತಿಗೂಡಿ ಮಡದಿಯ ಧವಳಶೋಭನದಿ||
ಸೊಡರಿಟ್ಟು ಮೆಱೆವ ರತ್ನಾಂಚಿತದುರುಹೊನ್ನ|ಗಡಣದಾರತಿಯನೆತ್ತಿದರು||

---

ಕ. ಪ. ಅ—1. ಧವಳದ ಹಾಡೆಂದು ಪ್ರಸಿದ್ಧವಾದ ಒಂದು ಬಗೆಯ ಹಾಡು.
2. ಧ್ವಜ. 3. ಪ್ರಾಕಾರ. 4. (?)

ಸೊಲ್ಲಿಸಿದರು ಜಾಗು ಬೊಲ್ಲು[1]ಶಬ್ದವ ಕೆಂ|ಬಲ್ಲ ತಳಗೆಗಾರ್ತಿಯರು||
ಮಲ್ಲಿಗೆ ದಾಸಣಹೂವ ಸಂಪಗೆಯಂತೆ|ಚೆಲ್ಲಿತು[2] ಬಣ್ಣಗೂಬುಗಳ[3] ||೩೬||
ರಥಹಸ್ತಿವಾಜಿಪಲ್ಲವ ಛತ್ರಟೆಕ್ಕೆಯ|ಶತಕೋಟಿ ಬಾಹ್ಯದೆ ಮೆಱೆಯೆ||
ಹಿತವಾದ ಯದುವಧೂಟಿಯರೊಂದುಗೂಡಿ ಮ|ನ್ಮಥ ಹೊಕ್ಕ ರಾಜ
[ಮಂದಿರವ ||೩೭||

ಶಶಿವದನೆಯರೊಂದುಗೂಡಿ ತದ್ವಿಧಿಯ ನಿ|ರ್ವಿಸಿ ಮಹದಾಗವೋಕ್ತಿಯಲಿ
ರಸಿಕಶೇಖರ ರತಿಕಾಂತನ ಮನೆಯ ತುಂ|ಬಿಸಿ ಕೃಷ್ಣಮರಳ್ದ ಮಂದಿರಕೆ||
ವರಮೋಹನತರಂಗಿಣಿಯೆಂಬ ಕಾವ್ಯವ|ಬರೆದೋದಿ ಕೇಳದ ಜನರ ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವ ಲಕ್ಷ್ಮೀಕಾಂತ ಬಿಡದೆ||

— ಅಂತು ಸಂಧಿ ೧೫ಕ್ಕಂ ಪದ ೯೫೫ಕ್ಕಂ ಮಂಗಳಂ —

## ಹದಿನಾಱನೆಯ ಸಂಧಿ

ರತಿಯ ಗರ್ಭಾಧಾನ :—

ಹೆರೆಯಾಳ್ದ[4]ಡೆಯಾಡುವನ ಸಡಗರ್ಜಿದ[5]|ದೊರೆ ದೇವದೇವಾಧಿಪನ ||
ಹೊರೆಯಿಲ್ಲದೆ[6] ಕರ್ತೃ ಕೃತಿವೇಖಖಂಡಶ|ರ್ಕರೆಯಂತೆಸವಿವಾತುವೆರಸಿ||
ಸುತೆಯನಂಗೀಕರಿಸಿದನ್ಯೆಯನ[7] ಪ್ರಣ್ಯ|ಕಥೆಯ ನಾ ವಿಸ್ತರಿಸಿದಡೆ ||
ಜತೆಯಗಲದೆ ನಿನ್ನಂತೆ ಕೇಳುವ ಗುಣಾ|ನ್ವಿತೆಯರ ತೋಱಾಯತಾಕ್ಷಿ ||೧||
ಮುರಹರ ನಿಖಿಲಯಾದವರ ಬೀೞ್ಕೊಟ್ಟು ತ|ನ್ನರಮನೆಪ್ರಗಲತ್ತಲಿತ್ತ||
ವರಚಂದ್ರಕಾಂತಮಂಟಪಕೈದಿ ಸಿಂಹವಿ|ಷ್ಟರದಲ್ಲಿ ಮದನನೊಪ್ಪಿದನು ||೩
ವಾಮದಕ್ಷಿಣಭಾಗದಲಿ ಮುಗ್ಧಸತಿಯರ|ಸ್ತೋಮ ನಿಂದಿರೆ ಸಾಲಾಗಿ ||
ಹೇಮದಂಡಾನ್ವಿತೆಯರು ನಿಂದಿರ್ದರು | ಕಾಮನ ಕೈವಾರಿಸುತ[8] |೪||

ಕ. ಪ. ಅ—1. ಶುಭಸೂಚಕಗಳಾದ ಮಾತುಗಳು. 2. ಚೆಲ್ಲಿದರು.
3. ದೃಷ್ಟಿಪರಿಹಾರಕ್ಕಾಗಿ ನಾನಾಬಣ್ಣದ ಅನ್ನಗಳನ್ನು ಮಾಡಿ ನಿವಾಳಿಸಿದರು.
4. ಶೇಷ. 5. ಸಡಗರಿಸಿದ; ಅಲಂಕರಿಸಿದ. 6. ಮೋಸವಿಲ್ಲದೆ; ಕಪಟವಿಲ್ಲದೆ. 7. ವಿಷ್ಣು; ಹೇಗೆ? 8. ಹೊಗಳುತ್ತ.

ಜಂಭಭೇದಿಯ ಮಾನಮರ್ದನ[1] ಜಯ ನಿಟಿ|ಲಾಂಬಕತಪೋವಿಘ್ನ ಜಯತು ||
ಪೊಂಬಸಿಱನ ಬಾಯ ಬೀಯಗ[2] ಜಯಯೆಂದು|ಶಂಬರಾರಿಯ ಹೊಗಳಿದರು||
ನೇಸಱ ಗರ್ವಪರ್ವತವಜ್ರ[3] ಜಯತು ಪ|ರಾಶರಚಿತ್ತವಿಭೇದ[4] ||
ದೋಷಾಕರತುಂಗಭಂಗ[5] ಪರಾಕೆಂದು|ಪೂಸರನನು ಹೊಗಳಿದರು ||೮||
ನಾಡೊಳು ಹನುಮಂತಶುಕಸಿದ್ಧರಾಮರ[6]|ಕೋಡಗಮರುಳ್ಗಳೆಂದುಳಿದು||
ಗೂಢ[7] ನಿರ್ಜರನರೋರಗರ ಭಂಗಿಸುತಿರ್ಪ|ಗಾಡಿಕಾಱನ ಹೊಗಳಿದರು||
ಎತ್ತ ಬೀಸಿದ ಗಾಳಿಯತ್ತಲು ಮಲೆತಿರ್ದ[8]|ಪೊತ್ತದ ವರಜಿತೇಂದ್ರಿಯರ||
ತೊತ್ತುಳಿದುಳಿದ ಧೀರೋದಾತ್ತ ಜಯಯೆಂದು|ಚಿತ್ತಜನನು ಹೊಗಳಿದರು|
ಸೆಱಗು ಸಂಭಾಳಕೆ ಬಹುಭೂಷಣಗಳ|ಚಚ್ಚಱ ಮೇಲಷ್ಟಾವಧಾನ ||
ಹೆಱೆನೊಸಲಬಲೆಯದಿಟ್ಟೆ ಪರಾಕು ವಿರಾಂ|ಗುಱುಹಿನ ಜೀಯ ಚಿತ್ತೈಸು||
ಗಾಣೆಯರುಗಳ[9] ಚಿತ್ತೈಸು ನರ್ತನದ ಸು ಜಾಣೆಯರುಗಳ ಚಿತ್ತೈಸು||
ವೀಣಾಪಾಣಿಯರುಗಳ ಚಿತ್ತೈಸು ಪೂಬಾಣ ಪರಾಕೆಂದರೊಲಿದು ||೧೦||
ಗುತ್ತಿಗೆವಿಡಿದಂತೆ ನೆಱೆ ಸಾಧಿಸಿದಱ|ವತ್ತು ನಾಲುಕು ಬಿಜ್ಜೆಗುಱುಹ ||
ವೃತ್ತಕುಚಾನ್ವಿತೆಯರ ಪರಿಕೆಯ[10] ನೋಡು|ಚಿತ್ತಯಿಸೆಂದರಂಗಜನ||೧೧||
ಸಕಲಕಲಾಭಿಜ್ಞೆಯರ ಕುಸ್ತರಿಸಿದು|ಮಕರಕೇತನ ತನ್ನ ಸತಿಯ ||
ಮುಖಪದ್ಮವ ನೋಡಿ ವಿನಯಾತುರದಿಂದೆ|ಪ್ರಕಟಿಸಿ ಮಾತನಾಡಿದನು||೧೨||
ನುಡಿಸಿದ ಕೆಲರ ನೋಡಿದ ವಿನಯದಿ ತೃಪ್ತಿ|ವಡಿಸಿದ ಪೆಣ್ಮನೋವ್ಯಥೆಯ||
ಬಿಡಿಸಿದ ಬೆಮರ್ವಸಿಗಳನೆಲ್ಲರಿಗೋತು|ಕೊಡಿಸಿದ ಸಕಲಸನ್ನಹವ[11] ||೧೩||

---

ಕ. ಪ. ಅ—1. ಇಂದ್ರನನ್ನು ಸಹಸ್ರಾಕ್ಷನನ್ನಾಗಿ ಮಾಡಿ ಅವನನ್ನು ತನ್ನ ವಶಮಾಡಿಕೊಂಡವನು. 2. ಬ್ರಹ್ಮನ ವದನದಲ್ಲಿ ಅವನ ಪತ್ನಿಯಾದ ಸರಸ್ವತಿಯನ್ನು ನಿಲ್ಲಿಸಿ, ತನಗೆ ಅಧೀನಮಾಡಿಕೊಂಡವನಾದ್ದರಿಂದ, ಬಾಯಬೀಗವಾದನು. 3. ಜಗಚ್ಚಕ್ಷುವಾದ ಸೂರ್ಯನನ್ನೂ ಕೂಡ ಪತ್ನೀವಿಶಿಷ್ಟನನ್ನಾಗಿ ಮಾಡಿದನಾದ್ದರಿಂದ. 4. ಪರಾಶರಮುನಿಗೂ ಕಾಮೋದ್ರೇಕವನ್ನು ಉಂಟುಮಾಡಿದವನು; ಇಲ್ಲಿನ ಕಥೆ ಏನು? 5 ದೋಷಾಕರ=ಚಂದ್ರ, ತಾರಾದೇವಿಯ ಸಂಬಂಧದಿಂದ ಹೆಚ್ಚಾದ ಅಪಮಾನವನ್ನು ಹೊಂದುವಹಾಗೆ ಮಾಡಿದವನು, ಇಲ್ಲಿ ಸೂಚಿತವಾಗಿರುವ ಕಥೆ ಏನು? 6. ಹನುಮಂತ, ಶುಕ, ಸಿದ್ಧರಾಮ—ಇವರು ಹುಟ್ಟುಬ್ರಹ್ಮಚಾರಿಗಳು. 7. ಗೂಢವಾಗಿ, ಅಂತರಂಗದಲ್ಲಿ. 8. ಗರ್ವದಿಂದ ಇದ್ದ. 9. ಗಾನಮಾಡುವ ಸ್ತ್ರೀಯರನ್ನು. 10. ಪರೀಕ್ಷೆ. 11. ಸನ್ನಾಹವನ್ನು.

ಸೆಳೆನಡುವಿನ[1] ಕಕ್ಕಸವೆತ್ತ ಬಲ್ಮೊಲೆ|ದಳೆದ ಹೆಂಡತಿಯು ಕೈವಿಡಿದು ||
ಕಳೆವೆತ್ತ ಕಂದರ್ಪ ಮಣಿಸೊಡರ್ವೆಳಗಿನ|ನಿಳಯುವ ಹೊಕ್ಕನರ್ತಿಯಲಿ ||
ಚಿತ್ರಮಯದ ಗೋಡೆ ಕಂಭ ಚಾವಡಿಹೊನ್ನ ಪುತ್ತಳಿ ಮದನಕೈ[2] ರತ್ನ||
ತೆತ್ತಿಸಿದಮಲಬೋದಿಗೆ ಲೋವೆ ಪಲಗೆಯೊ|ಳ್ಮುತ್ತಿನ ಕುಚ್ಚುಗಳ್ [ಮೆಱೆಯೆ ||೧೫||

ಜಾದಿ ಮಲ್ಲಿಗೆ ಮೊಲ್ಲೆ ಸುರಹೊನ್ನೆ ಸಂಪಗೆ | ಪಾದರಿ ಸುರಗಿ ಸೇವಂತಿ||
ರಾಜೀವ ನಿರ್ಜರಸುಮಮಾಲೆ[3] ಕಣ್ಗೆ ವಿ ರಾಜಿಸಿದುವು ರತೀಶ್ವರಗೆ ||೧೬||

ಗಂಧಸಂಯುಕ್ತಮಾಲಿಕೆಗಳು ಮೃಗ ಝಲ್ಲಿ ಕುಂದಣವೊಗಪಿಸಿಂದೆಸೆವ ||
ಬಂಧಗತಿಯ ಮುತ್ತಿನ ಕುಚ್ಚು ಮೇಲ್ಕಟ್ಟ|ನಿಂದ ಚೆಲ್ವಾದುದಾನಿಳಯ ೧೭

ಕಾಂಚನನವರತ್ನಕೀಲಿತ ಶಕುನಿಯ[4]|ಮಂಚಕೆ ಬಿಗಿದ ಬೆಳ್ವಟ್ಟೆ[5] ||
ಅಂಚೆದುಪ್ಪುಳಿಹಾಸಿನ[6] ಮೇಲೆ [ಸತಿಗೂಡಿ] |ಪಂಚಾಸ್ತ್ರಕುಳಿತನುತ್ಸವದಿ||

ಚೆಂಗಣಿಗಿಲೆ ನಂದ್ಯಾವರ್ತ ದವನ ಬೆಳ್ದಿಂಗಳ ಸಖಿಯಿರವಂತಿ ||
ಹೊಂಗೇದಗೆಯುದಿರ್ಗಂಚಿ ಕಮ್ಮಲರ್ಗಳ|ತೊಂಗಲು ಮೆಱೆದುವಭ್ರದಲಿ||೧೯

ಪೀನಕುಚಾನ್ವಿತೆ ಋತುವಾಗಿ ಶುದ್ಧ|ಸ್ನಾನವ ಮಾಡಿ ಕೈಗೈದು[7] ||
ಮೀನಧ್ವಜನ ಮಂಚವ ಸಾರ್ದು ನಿಂದಿರ್ದ|ಳೇನೆಂಬೆನವಳ ಚೆಲ್ವಿಕೆಯ|೨೦||

ಕಡೆಯಾಣಿ[8]ಚಿನ್ನದ ಪ್ರತಿಮೆಗೆ ಹುಟ್ಟಿಯುಸು|ತೊಡೆದೊಪ್ಪವಿಕ್ಕಿದಂದದಲಿ||
ಬಡನಡುವಿನ ಬಲ್ಮೊಲೆವೊಗದಿಂ ರಯ್ಯ ವಡೆದಿರ್ದಳೇನ ಬಣ್ಣಿಸುವೆ|೨೧||

ಭಾರತಿ ಮೊದಲಾದ ಸುರವೆಣ್ಗಳೊಳು ಗಾಡಿ|ಕಾಱತಿ ರೂಪಯೌವನದಿ||
ಕೀರತಿ[9]ವಡೆದಿರ್ದ ರತಿ ಜಗನ್ಮೋಹನ|ಮೂರುತಿ ಕಂಗೊಳಿಸಿದಳು ||೨೨||

ಸಲೆ ಜಗತ್ರಯವ ಮೋಹಿಪ ಕಾಮುಕಲೆಯಿಂದೆ|ನಲಿನಾಕ್ಷಿ ಕಾಮನ ಕಣ್ಗೆ||
ಮೊಲೆಯ ಸಡಾಳ[10]ವೃತ್ತತೆಯಿಂದೆ ದ್ವಿತೀಯಸಂ|ಕಲೆಯಸಿತ್ತಳು ತೋ [ಯಜಾಕ್ಷಿ ||೨೩||

---

ಕ. ಪ. ಅ—1. ಚಿತ್ತದಂತೆ ಸಣ್ಣನಾಗಿಯೂ ನುಣುಪಾಗಿಯೂ ಇರುವ ನಡುವುಳ್ಳ. 2. ಕಂಭಗಳ ಮೇಲ್ಗಡೆಯಲ್ಲಿ ಬೋದಿಗೆ ಮೇಲ್ಭಾವಣಿಗಳನ್ನು ಸೇರಿಸುವ ನಕಾಸುಕೆಲಸ ಮಾಡಿರುವ ಮರದ ಮುಟ್ಟು 3. ಮೇಲೆ ಹೇಳಿದ ಪುಷ್ಪಗಳಿಂದ ಮಾಡಿದ ನಿರ್ಜರ-ದಿವ್ಯವಾದ ಮಾಲಿಕೆಗಳು. 4. ಗಿಳಿಯ. 5. ಬಿಳಿಯ ಒಟ್ಟೆ. 6. ಹಂಸಗಳ ಗರಿಗಳಿಂದ ಮಾಡಿದ ಹಾಸಿಗೆ. 7. ಶೃಂಗಾರಮಾಡಿಕೊಂಡು 8. ಶ್ರೇಷ್ಠವಾದ. 9. ಕೀರ್ತಿ. 10. ಕಾಂತಿಯಿಂದ.

ತುಱುಗೆವೆಗಣ್ಣ ಕಟಾಕ್ಷ ಕೆಂಬಲ್ಗಳ|ಮಿಱುಗುವ ತೊಂಡೆವಣ್ದುಟಿಯ ||
ಬೆಱಗಿಂದೆ ಮಾತನಾಡಿದಳು ಬಂದುಗೆವಾಯ|ನಱುಗಂಪು ಸೂಸಲಂಗಜಗೆ ||

ವನಿತಾಶಿರೋರತ್ನ ಬಿನ್ನವಿಸಿದೊಡಿಕ್ಷು|ಧನುರ್ಧರ ಕೇಳ ಕಾತರಿಸಿ ||
ಇನಿಮಾತುಗಳಿಂದೆ ನೆರೆದಿರ್ದ ಸದ್ವಿಳಾ|ಸಿನಿಯರ ಹೋಗೆಂದ ನಗುತೆ ||೨೫||

ವರನ ವಾಕ್ಯವ ಕೇಳ್ದು ರತಿ ರಮ್ಯವಡೆದ ಪೂ|ಸರವಿಳಾಸಿನಿಯರೆಲ್ಲರನು||
ತರವಱಿತುಪಕರಣಂಗಳನಿರಿಸೆಂದು ಕರಸಂಜ್ಞೆಯೊಳು ಪೇೞ್ದಳು ||೨೬||

ಪೊಂಬರಿಯಣದಿಪ್ರೋಳ್ಮಣಿಮಯವಡೆದಿರ್ದ|ಸಂಬಳಿಗೆಯಪರ್ಣ[1]ಚೂರ್ಣ[2]||
ಕೊಂಬ ಕರ್ಪೂರಕರಂಡವ[3] ಸ್ಮರನ ತಲೆ|ಗಿಂಬಿನೊಳ್ ತಂದಿರಿಸಿದರು||೨೭||

ಗಂಗೋದಕಹೂಜೆ ಘನರತ್ನಕೀಲಿತ ಪಿಂಗಾಣಿಗಂದ[4]ಲರ್ದಟ್ಟೆ[5] ||
ಹೊಂಗಾಳಾಂಜಿಯ ಹೊಳೆವ ಬಿಜ್ಜಣಿಗೆಯ ಹೆಂಗಳು ತಂದಿರಿಸಿದರು ||೨೮||

ಭಿನ್ನವಿಲ್ಲದ ಸಂಭಾರಾನುಕೂಲತೆ ಸನ್ನಾಹಗೆಯ್ದು ದೀಪ್ತಿಗಳ ||
ಹೊನ್ನ ಪುತ್ತಳಿಯ ಕೈಲೆಡೆಗೊಟ್ಟು ಬೀೞ್ಕೊಂಡು ಚೆನ್ನೆಯರ್ ಪೊಱ
[ಮಟ್ಟರಾಗ ||೨೯||

ಚಂದಿರವದನೆಯರ್ ಚಾರುಕವಾಟವ|ಬಂಧಿಸಿ ಪೊಱಭವಂತಿಯಲಿ[6] ||
ನಿಂದಿರಲೊಳಗೆ ಕಾಮನ ಕೂಡ ಕಸ್ತೂರಿ|ಗಂಧಿ ಕೈಮೇಳವಿಸಿದಳು ||೩೦||

ಕುಂದಣದಗಡಿನಂತಿರ್ಪ ಬೆಳ್ಳಲೆಗಳ|ನೊಂದಱೊಳೊಂದ ಕೇವಣಿಸಿ ||
ಹೊಂದಾವರೆಯಂತ ಮಾನುಹಸ್ತದೊಳಾಂತ ಚೆಂದವನೇನ ಬಣ್ಣಿಸುವೆ ||೩೧||

ತನ್ನಯ ರೂಪಿಂಗೆ ಸೆಣಸುವ ಸತಿಯರ|ಬೆನ್ನ ಪಟ್ಟೆಯನೆತ್ತುವಂತೆ ||
ರನ್ನದುಂಗುರವಸಿಟ್ಟೆಳವೆರಲುಗುರಿಂದೆ|ಪರ್ಣದ ನಾರನೆತ್ತಿದಳು ||೩೨||

ಕೇಳಿಯೊಳನಿಯಂಗೆ ಸುಖವನೆಯ್ದಿಸದೆ ಘ|ಡಾಳಿಸಿದವಳ ಪೇರುರವ ||
ಬಾಳಿನೊಳ್[7] ಸಿಗಿವಂತೆಕೂರುಗುರ್ಗೊನೆಯಿಂದೆ|ಸೀೞ್ದಳೊಂದು ಬೆಳ್ಳೆ
[ಲೆಯ ||೩೩||

ಬಣ್ಣದಾವರೆಮೊಗ್ಗೆ ಮೊಲೆಯ ಮಾಸಿನಿ ತನ್ನ|ಕಣ್ಣಾಱೆ ಕಂಡುಮಚ್ಚರಿಪ||
ಹೆಣ್ಣಾವಳವಳ ಮೂಗಿನ ಮೇಲೆ ಬರೆವಂತೆ ಸುಣ್ಣವನೆಲೆಗೆ ಪೂಸಿದಳು||೩೪

---

ಕ. ಪ ಅ—1. ಎಲೆ. 2. ಸುಣ್ಣ. 3. ಪಚ್ಚಕರ್ಪೂರದ ಭರಣಿ. 4. ಬಟ್ಟಲಿನಲ್ಲಿ ಇಟ್ಟ ಗಂಧ. 5. ಪುಷ್ಪವಿಟ್ಟ ತಟ್ಟೆ. 6. ಮುಂದಣಕಟ್ಟಿನಲ್ಲಿ. 7. ಕತ್ತಿಯಿಂದ.

ತಿಳಿದು ನೋಡಲು ಮಧ್ಯರಾತ್ರಿಯನೊಂದರೆ|ಗಳಿಗೆಯು ಮಾಡಿ ಕತ್ತುರಿಯು||
ಗುಳಿಗೆ ಸೇರಿದ ಹೋಳ ಕಾಂತನ ವರಹಸ್ತ|ನಳಿನಕ್ಕೆ ಕೊಟ್ಟಳಱ್ತಿಯಲಿ ||
ಸಿತಪರ್ಣಘುಟಿಕೆವಿಡಿದ ಹೋಳ ಕೃಷ್ಣಾ|ರ್ಪಿತವೆಂದು ವದನದೊಳ್ಪಿಡಿದು||
ಕೃತಪುಣ್ಯವರವಧೂಟಿಯು ಕೆಯ್ಯ ಪಿಡಿದು ಮ|ನ್ಮಥ ತೊಡೆಯೆಡೆಗಡ
[ರ್ಚಿದನು ||೩೬||

ವಾಮಹಸ್ತವ ತುಱುಬಿನೊಳಿಟ್ಟು ಬಲಗೆಯ್ಯ|ಪ್ರೇಮದಿಂ ಚುಬುಕಾಗ್ರ[1]
[ವಿಡಿದು ||
ಕೋಮಲವಡೆದ ಬಂದುಗೆವಾಯ್ಗೆ ಪೋಳ್ದಂಬಿ|ಭ್ರಾಮಕವಡೆದು ಚುಂಬಿ
[ಸಿದ ||೩೭||

ನೆಟ್ಟನೆ ನಿಱಿಗಳೆದುದು ಚಂದ್ರಗಾವಿಯು| ಬಟ್ಟಪಾವುಡೆ ಸಹವಾಗಿ ||
ಕಟ್ಟಾಯುವಡೆದಿರ್ದನಂಗಜನಲಗೋರ್ಗಲ|ತೊಟ್ಟ ಮೋಹನಶಕ್ತಿಯಂತೆ||೩೮
ಪೊಸವಗೆವಿಡಿದಿನಿಯಳ ರೂಹ ಕಂಡು ಸೈ|ರಿಸಲಾಱದಮರ್ದಪ್ಪಿಕೊಂಡು ||

... ... ... ... ...
... ... ... ... ...
... ... ... ... ...
... ... ... ... ...

ಉದ್ದೀಪನ ತಲೆದೋಱಲು ಕಂದರ್ಪ|ನೆದ್ದು ಕೈಕಾಲ್ಗಳ ತೊಳೆದು ||
ಮುದ್ದುಮುಖಾನ್ವಿತೆ ರತಿದೇವಿ ಸಹಿತೊಱ ಗಿದ್ದನು ಮಣಿಮಂಚದೆಡೆಯು ||
ಓಪಳ ಗುರುಕುಚಯುಗಳವ ಪುಂಡ್ರೇಕ್ಷು|ಚಾಪ ಕಣ್ಣಿಟ್ಟುನಿಟ್ಟಿಸಲು|
ಸ್ಥಾಪನವಡೆದಿರ್ದ ಬಾಲೇಂದುಗೆಱಿ ಸುಸ್ವ|ರೂಪವಾಗಿರ್ದುದೇನೆಂಬೆ ||೫೧||
ಹಱಿಯೊಡಲುರಿದುನೂತನದೇಹವನುತಳೆ ದಿರಲದ ಕಂಡು ಮುಂಕೊಂಡು||
ಕೆಳೆಗೋಸುಗ ಬಂದನೆಂದು ಮನ್ಮಥನಂದು|ಎಳವೆಱಿಗುಪಚಾರಗೆಯ್ದ||೫೨
ಗಂಧಕತ್ತುರಿಯನುಲೇಪನಗೆಯ್ದಲ ವಿಂದೆ ಮನ್ಮಥ ತನ್ನ ಸತಿಯು ||
ಕುಂದಣವರ್ಣದ ಕುಚಗಿರಿಯಲಿ ಸಖ|ಚಂದಿರನಿರಲಪ್ಪಿದನು ||೫೩||
ತನ್ನ ಪ್ರಾರ್ಥನೆಗೆಯ್ದ ರತಿಕಾಮರಿಂಗೆ ಪ್ರ|ಸನ್ನತೆವೆತ್ತ ಪೂರ್ಣೇಂದು||
ಹೊನ್ನಿನುಪ್ಪರಿಗೆಯ ಕಟ್ಟು ಪಂಜರದಲ್ಲಿ|ಜೊನ್ನವ ಸುರಿದನಱ್ತಿಯಲಿ||೫೪

---

ಕ. ಪ. ಅ—1. ಗಲ್ಲದ ಕೊನೆ.

†ಚಾರಿವರಿದು ಚಂದ್ರಸುರಧೇನುಕೂರ್ತುಗಚ|ಕೋರವತ್ಸಗೆಮೊಲೆಗುಡಲು
ಪೂರಿಸಿ ಕಡೆವಾಯೊಳಚಿವ ತಣ್ಣಾಲೆನೆ|ಸೋರಿತು ಬೆಳ್ದಿಂಗಳಳಗೆ ||೫೫||
†ಸೂರಿಯುರಥಚಕ್ರಸಡಿಲಿದೊಡಿರುಳೋಜ[1] |ಹೋರಿಸಿ ಹೊನ್ನಪಟ್ಟೆಯನು||
ಸೇರಿಸಿ ಬಲಿದಂತೆ ವರಚಂದ್ರಪರಿವೇಷ | ರಾರಾಜಿಸಿತು ನೋಳ್ಪರಿಗೆ ||೫೬||
ನೀಲೋತ್ಪಲಗಾಡಿ ವಿರಹಿಗಳೆದೆಗೇಡಿ | ಜ್ವಾಲಾಂಬಕಪುತ್ರಶತ್ರು[2]|
ಹಾಲಾಹಲಬಂಧು[3] ತ್ರಿದಶಾಮೃತಸಿಂಧು[4]| ಲೋಲಾಕ್ಷಿನೋಡಪೂರ್ಣೇಂದು||
ಅಚ್ಚವೆಳ್ದಿಂಗಳ ಸಿರಿಯಂತೆ ಮನದೊಳು|ಮಚ್ಚರವಿಲ್ಲದೆನ್ನೊಡನೆ ||
ಸ್ವಚ್ಛದೊಳಿರಲು ಬೇಕೆನುತ ಸಂಪ್ರೀತಿಯಿಂ|ದುಚ್ಚರಿಸಿದಳು ಮನ್ಮಥಗೆ ||
ಪಲ್ಲವಾಧರವ ಕರ್ದುಂಕಿದು ಪೊಳೆವ ಕೆಂ|ಬಲ್ಲಿಗೆ ರಸದಂಬುಲವ ||
ಮೆಲ್ಲಗೆ ಸೋರ್ಕೆ ನಾಲಗೆಯಿಂದೆ ರತಿದೇವಿ | ಬಲ್ಲಂತೆ ಶಾಖವಮಾಡಿದಳು||೫೯
ಈತೆಱದಿಂದಿರ್ವರು ಸಂಭೋಗಕ್ಕೆ|ಪ್ರೀತಸ್ಥರಾಗಿ ತಕ್ಕೆಯೊಳು ||
ಭೂತೇಶ[5] ಶಂಬರಾಸುರನ[6] ಪ್ರಸಂಗವ|ಮಾತಾಡತೊಡಗಿದರೊಲಿದು‡ ||೬೦
ಇರಲಾಸಮಯದೊಳೆಚ್ಚತ್ತು ನೀಲಕಂ|ಧರ ಕಲಕಂಠ ಕೂಗಿದುವು ||
ಮೊರೆದುವು ಷಟ್ಪದ ರಜನಿ ತಾ ಮೆಲ್ಲನೆ|ಸರಿದುದು ಪ್ರಭೆ ಮೂಡಲೊಡನೆ||
ರೂಢಿಯೊಳದಿತಿಯ ಪುತ್ರನಂಬುಜಮಿತ್ರ|ನೋಡಲು ಗುಟ್ಟುಕೆಂಬೊಟ್ಟು||
ಬೇಡಿದನೀವ ಮಾದೇವ ಪೂರ್ವಾದ್ರಿಯೊಳ್|ಮೂಡಿದ ಸ್ತುತ್ಯನಾದಿತ್ಯ (?) ||
ಆಸಮಯದಿ ತಾಳದಂಡಿಗೆವಿಡಿದು ಸು|ವಾಸಿನಿಯರು ಬಂದು ನಿಂದು ||
ದೇಶಾಕ್ಷಿ ನಾರಾಯಣಿ ಘೂರ್ಜರಿಯಿಂ[7] ರತೀಶನ ಪಿತನ ಪಾಡಿದರು ||೬೩
ನೂತನ ಯೌವನಾಂಗಿಯರುಪಾಡುವಸುಪ್ರ|ಭಾತಕೀರ್ತನೆಯನುಕೇಳ್ದು||
ಶ್ವೇತಾಬ್ಜದಳನೇತ್ರರತಿದೇವಿಸಹ ವಿಮಾನ|ಕೇತು ಮೆಯ್ಮುಱಿದೆದ್ದನೊಲಿದು||

---

ಕ. ಪ. ಅ—† ಈ ಪದ್ಯಗಳಲ್ಲಿ ಚಮತ್ಕಾರವೇನು?

1. ರಾತ್ರಿಯೆಂಬ ಕಮ್ಮಾರನು. 2. ಈಶ್ವರನ ಪುತ್ರನಾದ ವಿನಾಯಕನಿಗೆ ಶತ್ರು, ಇಲ್ಲಿರುವ ಪೂರ್ವಕಥೆ ಏನು? 3. ಹಾಲಾಹಲ ವಿಷವೂ ಚಂದ್ರನೂ ಕ್ಷೀರಸಮುದ್ರದಲ್ಲಿ ಹುಟ್ಟಿದವರಲ್ಲವೆ? 4. ದೇವತೆಗಳು ಚಂದ್ರಕಿರಣವನ್ನು ಪಾನಮಾಡುತ್ತಾರೆಂದು ಪ್ರಸಿದ್ಧಿ. 5 ದಿಗಂಬರನಾದ ಶಿವ. 6. ಸಹಸ್ರಬಾಹುವುಳ್ಳವ. 7. ಎಂಬ ರಾಗಗಳಿಂದ.

‡. ಈ ಪದ್ಯದ ಭಾವವೇನು?

ವರಮೋಹನತರಂಗಿಣಿಯೆಂಬ ಕಾವ್ಯವ|ಬರೆದೋದಿ ಕೇಳದ ಜನರ ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು |ಪೊರೆವ ಲಕ್ಷ್ಮೀಕಾಂತ ಬಿಡದೆ||

— ಅಂತು ಸಂಧಿ ೧೬ ಕ್ಕಂ ಪದ ೧೦೨೦ ಕ್ಕಂ ಮಂಗಳಂ —

# ಹದಿನೇೞನೆಯ ಸಂಧಿ

**ಅನಿರುದ್ಧ ಜನನ:—**

ಮೞೆಗಾಲದ ನೀರು ಶರಧಿಯೊಳಡಗುವಂ'ತಿಳೆಯ ದೇವಾರ್ಚನೆಗಳನು||
ಕಳೆಯದೆ ತಾನೊಪ್ಪುಗೊಂಬ ದೇವನ ದಯೆ | ಮೊಳೆಯಲ್ಕೆ ಪೇೞು
[ಮೇಲ್ಗತೆಯ ||೧||

ಎನ್ನೆರ್ದೆಯಲರ್ದುಂಬಿ ಕುರುಳಾಂತಪೆಣ್ದಲೆ|ರನ್ನಕೇಳ್ ರತಿದೇವಿಯುಳಗೆ||
ಸೊನ್ನ ಗೇದಗೆಯ ಪೂವ್ಪೊಡೆ[2]ಯಂತೆ ಬಸಿಱಿನ ಚೆನ್ನ ದೋಱಿದುದು
[ಮೆಯ್ಯೊಳಗೆ ||೨||

ಬಾಲನ ಬಯಕೆಯೊಳವಳು ಕರ್ಪೂರತಾಂ ಬೂಲವ ರುಚಿಗೆಯ್ಯದಿರಲು||
ಆಲತಾಂಗಿಯ ದಂತ ಮೊಲ್ಲೆಯ ಮುಗುಳಂತೆ ಸಾಲಾಗಿ ಕಣ್ಗೆ ರಾಜಿಸಿತು||

ನೆಱೆ ಗಂಡುಮಗನೆನಗಾದರೆ ಮೇಲುದ|ಮಱೆಮಾಡಿಕೊಂಡಮರ್ದಪ್ಪಿ||
ಹೆಱೆಹಿಂಗದೆ ನೋಡಿ ನುಡಿಸುವೆನೆನುತ ಬಾ ಯೊಱೆ ನೀರ ಮುಕ್ಕುಳಿ
[ಸಿದಳು ||೪||

ಹುಟ್ಟುದರಿದ್ರಗೆ ಬಹಳಸಂಪದವರೆ|ನೆಟ್ಟನೆ ಕೊರ್ವುವಂದದಲಿ ||
ಕಟ್ಟಾಯತಿವೆತ್ತ ಸತಿಯ ತಳೋದರ ನೆಟ್ಟನೆ ಹೊಱಹೊಮ್ಮಿತಾಗ |೫||

ವಿಪೇೞ್ವೆ ಗರ್ಭೋತ್ಪತ್ತಿ ಸಂತಸದಿಂದೆ ತಾಪತ್ರಯ ಬೀತುದೆನಲು ||
ಆಪದ್ಮಪತ್ರಾಯತಾಕ್ಷಿಯ ತ್ರಿವಳಿಸ್ವ| ರೂಪುಗಳ್ ಮೊಯ್ಗರೆಗಿದುವು[3] ||೬||

ಮಕ್ಕಳ ಪಡೆಯದ ಮಡದಿಯ ಸಂಸಾರ ದುಕ್ಕದ ಮಡುವಿಸಂತಿರ್ದ ||
ಹೊಕ್ಕುೞು ಗುಣ್ಪು[4]ಗೆಟ್ಟುದುವೊಡಲೊಳು ಶಿಶು ತೆಕ್ಕನೆ ತೀವಿ ಜೀವಿಸಲು||

ನೆಲೆಗೊಂಡ ಪಿಂಡಭಜತ್ವವೆಂದೆಂಬ ಕ|ತ್ತಲೆ ಕಾಯ ಜಠರದೊಳಿರಲು||
ಸಲೆ ಪೊಱಮಡಿಸಿದನೆಂಬಂತೆ ಸತಿಯ ನುಣ್ಮೊಲೆದೊಟ್ಟು ಕಪ್ಪಡರಿದುವು|

---

ಕ. ಪ. ಅ—1. ಸ್ವರ್ಣ. 2. ಹೂವಿನ ಹೊಡೆ. 3. ಮರಸಿಕೊಂಡುವು. 4. ಆಳ.

ಜಡೆಗನ[1] ತಪಗೇಡಿಯ ಸೂನು ತನ್ನಯ|ತೊಡೆಯೊಳಗಿರಲು ಬಾಲಕನ||
ನಿಡಿದೋಳ ಮೊದಲ ಭೂಭಾರವ ನೆಲೆದಾಳ್ದ|ನಡೆಗೆಟ್ಟುಬಿಸುಸುಯ್ದಪಳು||
ಸ್ವರ್ಭಾನು[2]ಭಯವಿರಹಿತಚಂದ್ರವದನೆ ಕೇ|ಳರ್ಭಕಸತಿಯರಾಗಮದಿ||
ಪೆರ್ಬಯಕೆಯ ಭುಕ್ತ ನವ್ಯಾಂಬರಗಳ | ಗರ್ಭಾಂಗನೆಗುಡಿಸಿದರು ||೧೦||
ಕುವಲಯನೇತ್ರ ಗರ್ಭವನಾಂತಹರುಷದಿಂ ದವಯುವ ತುಂಬಿ ಮುಸ್ತಕದಿ||
ವ್ಯವಹರಿಸಲು ಸಿರಿಮುಡಿ ನಿಲ್ಲಲಾಱದೆ|ಕವಲೊಡೆದುವು ಕೇಶಪಾಶ ||೧೧||
ಕುಂಭಿನಿ[3]ಯೊಳು ರೂಪುವಡೆದಿರ್ದ ಸುಗುಣಾವ|ಲಂಬಿನಿಯರ ಶಿರೋಮಣಿಗೆ||
ತುಂಬಿತು ನವಮಾಸ ಮಣಿಮಂಚದೆಡೆಯ ನಿ|ತಂಬಿನಿ ನವ ಸಾರ್ಚಿದಳು ||
ಮುತ್ತಿನ ಮುಡಿಯವಿಲಾಸಿನಿಯರುಸೂಲ|ಗಿತ್ತಿಯ ಕರೆ ಪುರೋಹಿತರ||
ಸುತ್ತಿನುಂಗುರ ಮುದ್ದುಮಣಿಯಂತ್ರಗಳ ತಂದು|ತೆತ್ತಿಸಿದರು ಕಾಲ್ದೆಸೆಯ ||
ಅರಗಿಳಿಯೆಂಬಂತೆ ನುಡಿವಳು ಕೋಕಿಲ|ಸ್ವರದಿಂದೆ ಕೂಗುವಳೊಡನೆ ||
ಮೊರೆವಳು ಪೆಣ್ದುಂಬಿಯೆನೆ ಹೇಱಲಾಱದೆ|ನರಳುವಳಬುಜಾಯತಾಕ್ಷಿ ||
ಕೇಶವ ನಾರಾಯಣ ಕೃಷ್ಣ ಗೋವಿಂದ|ವಾಸುದೇವಾಚ್ಯುತ ತನ್ನ ||
ಬೇಸಱ ಪರಿಹರಿಸುವುದೆಂದು ಬಿಡದೆ ಸರ್ವೇಶನಾಮದಿ ನರಳಿದಳು ||೧೫||
ಎಡರೆಂಬಲವಣಾಬ್ಧಿಯನೀಂಟುವನೆರೆ|ಕೊಡಸೂನು[4]ಕೃಷ್ಣನಂಘ್ರಿಗಳ||
ಬಿಡದುಚ್ಚರಿಸಿ ಸದ್ಭಕ್ತರು ಮೋಕ್ಷವ|ಪಡೆವಂತೆ ಪಡೆದಳರ್ಭಕನ ||೧೬||
ಪ್ರಥಮದಿಗ್ವನಿತೆಯ[5]ಜಠರದೊಳಿರ್ದು ಸು ಪ್ರಥಿತ[6]ಸೂರಿಯನುದಿಪಂತೆ||
ಸಿತಕಂಜದಳನೇತ್ರೆಯ ಪೊಡೆ[7]ಯೊಳಗಿರ್ದ|ಸುತ ಪೊಱಮಟ್ಟು ರೋದಿಸುತ||
ಸುತ್ತಣ ರಜನೀಚರಕುಮಾರಕರಿ ನ್ನೆತ್ತ ಸಾರ್ದಪರು ನಿನ್ನಿಂದ ||
ಸತ್ತರಕಟಕಟ! ಎಂಬ ಚಿಂತೆಯ ತಾ|ಳ್ದತ್ತನು ಮಱಿಸಿಂಗದಂತೆ ||೧೮||
ಕಂಡರು ಸೂಲಗಿತ್ತಿಯರಾಗ ಹರಿಸದಿ | ಗಂಡಾದುದೆಂದು ಬಕ್ಕಣಿಸೆ ||
ಪುಂಡರೀಕಾಕ್ಷಿ ರುಕ್ಮಿಣಿದೇವಿ ಕುಸುಮಕೋ|ದಂಡಾದಿಗಳು ಹಿಗ್ಗಿದರು ||
ಹೊಗರಾಂತ ಹೊಸಹೊನ್ನ ರಸ ಕಾಯ್ದಿರೆ ಕಂಡು | ಸೆಗಣಿಯೊಳಱಿ
[ವಂತೆ ಮೊಱದಿ ||
ಮೃಗಮದಗಂಧಿಯರ್ ಗೋಮಯ[8]ದಿಂಮುದ್ದು|ಮಗನದೇಹವಸಾರ್ಚಿದರು||

ಕ. ಪ. ಅ—1 ಈಶ್ವರನ. 2. ರಾಹು. 3. ಭೂಮಿ. 4. ಅಗಸ್ತ್ಯ. 5. ಪೂರ್ವದಿಕ್ಕೆಂಬ ಹೆಂಗಸು. 6. ಪ್ರಸಿದ್ಧ. 7. ಉದರ. 8. ಸೆಗಣಿ.

ಬಳ್ಳಿಯು ಠಾವಲಿ ಪುಟ್ಟದೆ ಮುಱುವುಟ್ಟ|ತಳ್ಳಿಯು ತೊಡಕು ಬೇಡೆನುತ ||
ಬೆಳ್ಳಿಯ ಪಿಡಿಯು ಕತ್ತಿಯು ತಂದು ಹೊಕ್ಕುೞ | ಬಳ್ಳಿಯಕೊಯ್ದ
[ರರ್ಭಕನ ||

ವೃತ್ತಕುಚಾನ್ವಿತೆಯೊಡಲಮಾಸಿನಬೀಜ|ಮತ್ತೊಂದುಶಿಶುವಾಗಲೆನುತ ||
ಬಿತ್ತಲುದ್ಯೋಗಿಪ ತೆಱದಿಂದೆ ಪೂಳ್ದರು|ಚಿತ್ರಾಯುವೆತ್ತ ಪೊಮ್ಮಗೆಯು ||

ಮಜ್ಜನವಡಿಸಿ ಸುವರ್ಣಶೂರ್ಪದೊಳಾಂತು | ಸೆಜ್ಜೆಗೆ ತಂದರಾಶಿಶುವ ||
ನಿಜ್ಜರವನಿಕೆಯು ಪಕ್ಕದೊಳಟ್ಟರು|ಸಜ್ಜಾತ ಶ್ರೀಕೃಷ್ಣನಂತೆ ||೨೩||

ಕಂದನಕಮನೀಯಮಣಿಮಂಚದೊಳಗಿಟ್ಟು|ಮಿಂದಳು ವಿಧಿಪೂರ್ವಕದಿ||
ಬಂದಳು ರತಿದೇವಿ ನವ್ಯತಲ್ಪದೊಳಾ|ನಂದದಿಂದೊಱಗಿರ್ದಳಂದು ||೨೪||

ಸೂಲಗಿತಿಯುರುತ್ಸವದಿಂದ ಮಿಂದು ದು|ಕೂಲವ ನಿಱಿವಿಡಿದುಡಲು ||
ನೀಲಕುಂತಳೆಯಕ್ಷತ ಗಂಧ ದಿವ್ಯತಾಂ|ಬೂಲವನಿತ್ತಳೆಲ್ಲರಿಗೆ ||೨೫||

ಸರ್ವರಬೀೞ್ಕೊಟ್ಟುಪಿಚುಮಂದ[1] ರಸವೀಂಟಿ|ತರ್ವಾಯುಭರದಿತಂಬುಲವ||
ಚರ್ವಣಗೆಯ್ದು ದಾದಿಯರಿಂಗೆ ಸುತರಕ್ಷೆ|ನಿರ್ವಾಣಗೊಟ್ಟಳುತ್ಸವದಿ ||೨೬||

ತೋರನುಣ್ಮೊಲೆವೆತ್ತವನಿತೆಯರುಗಳು ಕು|ಮಾರನಪುಟ್ಟಬಾಯೊಳಗೆ||
ಚಾರುಜಲವನುೞ್ ಮಂತ್ರಿಸಿ ಕಳತ ಜಂ|ಬೀರದ್ರವವ ಹಿಂಡಿದರು ||೨೭||

ಪುಟ್ಟ ನೀನಹಿತಭೂಮಿಪರ ಕುಮಾರರು|ಬೆಟ್ಟುಗರ್ಚಲು ಕಾವುದೆನುತ||
ನೆಟ್ಟನೆ ಮಧುಶರ್ಕರೆಯೆಡೆವೆರೆದಿರ್ಪ|ಬೆಟ್ಟ ಸೀಪಿಸಿದರರ್ಭಕಗೆ ||೨೮||

ದಾದಿಯರಬಲಂಗೆ ಮೊಲೆಗೊಟ್ಟುಬೆಣ್ಣೆಯು|ನಾದಲಿಕೊಳಗಿತ್ತ ಹೊಱಗೆ||
ಮೇದಿನಿಯುಮರರ ಕರೆಘಿದ ದೈತ್ಯವಿ|ರೋಧಿ ವಿಚಾರಪೂರ್ವಕದಿ ||೨೯||

ತಳರುಗಾಸೆಯು ಧೋತ್ರ ಬಹಿರ್ವಾಸ ಮೂಗಿಸಿಂ |ದಿೞ್ದ ನಾಮಗಳ
[ವೈಷ್ಣವರು ||
ಗಳಲನೆ ನಿಳಯದಿಂ ಬಂದರೊಮ್ಮೊಗವೆತ್ತು | ನಳಿನಸಂಭವನಂದದಿಂದೆ||೩೦||

ಆಶೀರ್ವಾದದಿಂ ಕಂಡರು ದೈತ್ಯವಿ|ನಾಶಿಯ ಪಾದಪಂಕಜವ ||
ಸಾಸಿರ ಬಗೆಯಿಂದೆ ಹೊಗೞ್ ಕೇಳ್ದನು ಗಂಡು|ಗೂಸಿನ ಜನನಸ್ಥಿತಿಯ ||

ಆನಂದಸಂವತ್ಸರ ಮಾಘಶುದ್ಧ ನ|ವೀನ ಪಂಚಮಿಯಾದಿವಾರ ||
ಭಾನುವುದಯದ ಸ್ವಾತಿಯನಕ್ಷತ್ರದೆ ತಾನುದಿಸಿದ ಗಂಡುಮಗನು ||೩೧||

---

ಕ. ಪ. ಅ—1. ನಿಂಬೆಯಹಣ್ಣು

ಮಾಧವ ಬೆಸಗೊಳಲುಸಿರ್ದರು ಸುತನ ಶಿ|ರೋದಯಲಗ್ನವ ಗುಣಿಸಿ ||
ಆದಾಯ ವೆಚ್ಚ ಸುಕೃತದುಷ್ಕೃತವ ಬರೆ|ದೋದಲು ಸೋಜಿಗವಾಯ್ತು ||
ಜಾತಕದೊಳೆ ಚೆನ್ನಾದುದೆನುತ ಶ್ರೀ|ನಾಥ ಪುರೋಹಿತಗೊಲಿದು ||
ನೂತನವಸ್ತ್ರಾಭರಣದ್ರವ್ಯವ ಬುಧ|ವ್ರಾತಕೆ ಕೊಟ್ಟ ಲೆಕ್ಕಿಸದೆ ||೩೪||
ನೋಡಲು ದೇವೇಂದ್ರಗೆ ಶಕ್ಯವಲ್ಲ ಕೊಂ|ಡಾಡಲು ಫಣಿರಾಜಗರಿದು[1] ||
ಷೋಡಶವಿಧದ ದಾನಂಗಳ ಕುಡುವ ಕೈ|ವಾಡ ಭೂಸುರರ ಸೊಕ್ಕಿಸಿತು ||
ಸುರಧೇನು ಚಿಂತಾಮಣಿ ಕಲ್ಪವೃಕ್ಷವ|ಬರಡವು ಕಲ್ಮರವೆನಿಸಿ ||
ಮುರಹರ ತ್ಯಾಗವ ಕುಡುತಿರ್ದ ಲಕ್ಷ್ಮೀ|ವರನಾದ ಕಾರಣದಿಂದ ||೩೬||
ತನಯನ ಪುತ್ರೋತ್ಸವದಿಂದೆ ಬಲುಸೆಱ[3]|ವನೆಗಳ ತೊಳೆದರಾಕ್ಷಣದಿ ||
ನನೆಗೋಲನಾಜ್ಞೆಯಿಂ ಗುಡಿ ತೋರಣಗಟ್ಟಿ|ವಿನಿಯೋಗ ನೆಗಳ್ದುದಾಪುರದಿ||
ಪಾಳೆಯ ಪಾಳೆಯದೊಳಗೆ ಚೆಲ್ಲಿತು ಸೂಱ[3]|ವೀಳೆಯ ಹಿಡಿಹೊನ್ನು ವರಹ|
ಸೂಳೆಯರ್ ವಾಣಿಜ್ಯವೀಧಿ[2]ಯೊಳ್ ಕುಂಕುಮ ದೂಳೆದ್ದುದಾಗಸದೆಡೆಯ ||
ಕುಂಭಿನಿ ಬೆಸಲಾದುದೆಂಬಂತೆ ಹೊಂಗೊಡ|ಗಂಬಿಯೊಳ್ ತೈಲಹರಿದ್ರ[3]||
ತುಂಬಿದ ಪರಿಯಣದಬಲೆಯರ್ಪಾಡುತ|ಮುಂಬರಿದರು ಬೀದಿಯೊಳಗೆ ||೩೯
ಸರಸಿಜಗಂಧಿಯ ಧವಳಶೋಭನ ಶ್ರುತಿ|ವೆರಸಿ ಪಾಡುವ ರಾಗರಸದಿ ||
ಪರೆದುದು ಮನಸ್ತಾಪ ವಿಂಗಡಿಸಲು ಎಣ್ಣೆ|ಯರಿಸಿನಗೊಟ್ಟರೆಲ್ಲರಿಗೆ ||೪೦||
ಪಟ್ಟಣದೊಳು ಸಂಭ್ರಮವೆಡೆವಿಡದೆ ಮೂ| ವಟ್ಟಲಮಾಡಿದರೊಲಿದು ||
ತೊಟ್ಟಿಲಿಕ್ಕುವೆವೆಂದು ಹನ್ನೆರಡಿರುಳಿಂಗೆ ನೆಟ್ಟನೆ ಕೈಕೊಂಡರೊಲಿದು ||೧೪||
ಉದ್ಯೋಗಿಸಿದರಾಗ ಮನದಲ್ಲಿ ಹವನವ|ತಿದ್ದುತೆ ದಾನದಕ್ಷಿಣೆಯ ||
ಶುದ್ಧಿಯ ಮಾಡಿದು ಮನೆಯ ಸುಲಗ್ನದಿ|ಬದ್ಧಿಸಿದರು ಮೌಹೂರ್ತಿಕರು ||
ಕೊಪ್ಪರಿಗೆಯ ನೀರ ಮಿಂದಳಾಗಮವಿಧಿ | ತಪ್ಪದಾರೋಗಿಸಲೊಡನೆ ||
ಪುಷ್ಪಸರನ[4] ರಾಣಿಗೆ ಮೆಯ್ದೊಡವನು | ವೊಪ್ಪಿಸಿ ತುತಿಯ ಮಾಡಿ
[ದರು ||೪೨||

---

ಕ. ಪ ಅ—1. ಸಾವಿರ ಕಣ್ಣುಳ್ಳ ದೇವೇಂದ್ರನಿಗೆ ನೊಡುವುದಕ್ಕೂ, ಎರಡುಸಾವಿರ ನಾಲಿಗೆಗಳುಳ್ಳ ಆದಿಶೇಷನಿಗೂ ಹೊಗಳುವುದಕ್ಕೂ ಕಷ್ಟವಾಗಿದ್ದಿತು, ಎಂದರೆ ಅಷ್ಟು ಅತಿಶಯವಾಗಿದ್ದಿತು. 2. ಅಂಗಡಿಬೀದಿ. 3. ಅರಿಸಿನ 4. ಮನ್ಮಥನ.

ಮಡದಿರನ್ನೆಯ ಸಿರಿಮುಡಿಗರಿಸಿನದ ಪೊ |ವುಡೆಯ ಬಂಧಿಸಿ ಕೆಲ*ರ್ದಿಟ್ಟ||
ನಡದಂತೆ ಹಣೆಗೆ ಕಪ್ಪಿನ ಬೊಟ್ಟನಿಟ್ಟರು | ಉಡುಪತಿಯೊಡಲ್*ಗಂದಿನಂತೆ[1] ||
ಗಾಡಿಕಾಱನ ತಾವರೆಗೋಲ್ಗೆ ಚಾಪವ | ಮಾಡಿ ಪೂರಿತಗೆಯ್ವಂತೆಱದಿ ||
ಖೋಡಿ[2]ಯಿಲ್ಲದೆ ರತಿದೇವಿಯ ಕಣ್ಣಿಗೆ | ಕಾಡಿಗೆವಿಡಿದೆಚ್ಚೆದರು ||೪೫||

ಅಂಘ್ರಿಮಸ್ತಕವೊದಲಾದವಯವದೊಳು | ರಂಗಿಪ ರತ್ನಭೂಷಣವ ||
ನುಂಗಿತು ಲಾವಣ್ಯರಸಪೂರಿತ ಕೋಮ|ಲಾಂಗಿಯನೆಂತು ವರ್ಣಿಸುವೆ ||೪೬||

ಕ್ಷೋಣಿಯೊಳಾತ್ಮೇಶ್ವರನ ದಿಟ್ಟಿಗೆ ರೂಹು| ಗಾಣಿಸಿ ಬಾಯಾಱಿಸುತೆ ||
ಬಾಣತಿರೂಹಿಂದೆ ಬಂದಳು ಹರಿನೀಲ| ವೇಣಿ ತೊಟ್ಟಿಲ ಕಟ್ಟುವೆಡೆಗೆ ||೪೭||

ಪಡಿಯಿಡ[3]ಲರಿದುಮುತ್ತೈದೆವೆಂಗಳು ಸಿರಿ|ಮುಡಿಯುಪೂದಂಡೆಗಳೊಡನೆ||
ಹಿಡಿಯಕ್ಕಿದಳೆದು ಬಂದರು ಮುತ್ತಿನಾರತಿ|ವಿಡಿದಾ ರತಿದೇವಿಯೊಡನೆ ||೪೮||

ಸುರುಚಿರರತ್ನದ ತೊಟ್ಟಿಲ ಪೂಜಿಸಿ | ತರಳನ ತುಂಬಿ ಸದ್ವಿಧಿಯಿಂ ||
ವರಮಂದಿರದ ಮೇಲ್ವಲಗೆಯ ಕೊಂಡಿಗೆ|ಸರಪಳಿಯನು ತೊಡಚಿದರು||೪೯

ದಶಗ್ರಂಥಿಗಳಾಗಮದಲಿ ಕೃಷ್ಣಷೋ | ಡಶನಾಮಗಳನೆ ಸಂಗ್ರಹಿಸಿ ||
ಹೆಸರನಿಕ್ಕಿದರನಿರುದ್ಧನೆಂದೆನುತೆ ತೂ|ಗಿಸಲೊಡರ್ಚಿದರು ಜೋಗುಳವ||೫೦

ಮಾಧವನಾತ್ಮಸಂಭವಸೂನು ಜೋಜೋ|ಯಾದವಕುಲರತ್ನಜೋಜೋ
ಶ್ರೀಧರಣೀಧವ ಜೋಯೆಂದು ನಿಬಿಡಪ|ಯೋಧರೆಯರು ಪಾಡಿದರು ||೫೧||

ಬೊಮ್ಮನ ವರಸಹೋದರನಸುತ ಜೋಜೋ | ಕಮ್ಮಲಗೋಲನೆ [ಜೋಜೋ ||
ನಿರ್ಮಲ ಸುಭಗಶೈಶವರೂಪ ಜೋಯೆಂದು|ಹೆಮ್ಮಕ್ಕಳೊ[4]ಲಿದುಪಾಡಿದರು||

ಅಂಗಜನರ್ಧಾಂಗಿಯ ಸೂನು ಜೋ ದೇವ|ಗಂಗಾಜಾಮಾತ[5] ಜೋಜೋ
ಪಂಗದಮಱಿಯೆ ಜೋಜೋಯೆಂದು ಪಾಡಿದ|ರಂಗನೆಯರು ಕುವರನನು ||

ರತಿದೇವಿ ಬಸಿಱಾಂತು ಪಡೆದ ದುಕ್ಕವ ಸುತ|ವತಿಯಾಗಿ ನೋಳ್ಪ [ಸಂತಸವ ||
ಮಿತಿಗೆಯ್ದಪೆನೆಂದು ತೊಟ್ಟಿಲ ತೂಗಿದ | ಳತಿಶಯದಿಂದೆ ಕುವರನ ||೫೪||

---

ಕ ಪ. ಅ—1. ಚಂದ್ರನ ಮೈಯಲ್ಲಿರುವ ಕರೆಯಂತೆ. 2. ಭಯ. 3. ಹೋಲಿಸು. 4 ಹೆಣ್ಣುಮಕ್ಕಳು. 5. ಗಂಗಾನದಿಯ ಅಳಿಯ; ಹೇಗೆ.

ನಿರ್ಧರವಾಗಿ ರುಕ್ಮಿಣಿ ಸತ್ಯಭಾಮೆಯು । ರಿದ್ದವ ಗೋಪಕನ್ಯೆಯರು ॥
ಉದ್ಧವ ಕೃತವರ್ಮಸಾತ್ಯಕಿ ಬಲರಾಮ।ನರ್ಧಾಂಗಿಯರು ಪಾಡಿದರು।೫೪
ಸಡಗರದಲಿ ಕೃಷ್ಣ ಬಲರಾಮ ಯಾದವ।ಗಡಣಕ್ಕೆ ರತಿ ಪೊಡೆಮಡಲು॥
ಉಡುಗೊರೆಯಿತ್ತು ಸಂತಸದಿಂದೆ ಬೀಳ್ಕೊಂಡು ನಡೆದರು ತಂತಮ್ಮ ಮನೆಗೆ॥
ಕಾಮಂಗೆ ಕುಂಬಿಡ[1]ಲುಡುಗೊರೆಯಿತ್ತು ಸ।ತ್ಕೋಮಲಾಂಗಿಯು ಪೇ[ರುರದಿ॥
ಹೇಮಾಬ್ಜ ಮುಕುಳಸ್ತನ ಬಿಗಿವಡೆದಿರೆ। ಭ್ರಾಮಕಗೊಂಡು ವೀಕ್ಷಿಸಿದ ॥
ಶುಭಗುಣವಾಂತ ನೀ ಮಱುವುಟ್ಟೊಳು ಪ್ರಾಣ । ವಿಭುವಾಗಿ ಬಂದೆ [ಬಾರೆನುತೆ॥
ಚುಬುಕಾಗ್ರವಿಡಿದು ತಕ್ಕೈಸಿ ಮುಂಡಾಡುತಂ।ದಬುಜಾಕ್ಷಿಯೊಡನೆ ಕ್ರೀಡಿ[ಸಿದ ॥೫೮॥
ಮಂಗಳಕಾಯ ನಡೆದ ಬಾಲನ ದಾದಿ । ವೆಂಗಳು ಸಂರಕ್ಷಿಸಲು ॥
ಅಂಗಜರತಿದೇವಿಯರ ಸಂತಸ ತುಂಬಿ । ತಿಂಗಳಾದುದು ಕುಮಾರನಿಗೆ॥೫೯॥
ಮಾಸೋತ್ಸವಗೈದರು ಕೂಡೆಕೂಡೆ ಮೂ।ಮಾಸಗಳಾದುವಂದೊಡನೆ ॥
ಮಾಸ ನಾಲ್ಕೈದಾಱೀಬಾದುವು ಶಿಶು । ನೇಸಱಂದದೆ[2] ರಂಜಿಸಿದ ॥೬೦॥
ಪೆಡೆವಣಿದಳೆದ ನಾಗರಮಱಿಯೆಂಬಂತೆ।ಹೊಡೆಮರುಳುವ[3] ತನ್ನ ತಾನೆ॥
ಪೆಡೆಯಿಕ್ಕುವ ಮುತ್ತಿನರಳೆಲೆದಾಳ್ದ ಕೆಂ।ಜೆಡೆಮುದ್ದುಮೊಗದಲ್ಲಿ ನಲಿಯೆ॥
ಮಲ್ಲಿಗೆಗೋಲನರ್ಧಾಂಗಿಯು ಸುತಮಾ । ತ್ಸಲ್ಯದಿ ಬಿಗಿಯಪ್ಪಿಕೊಂಡು॥
ಚೆಲ್ಲಿದಳವನವಯವದಲ್ಲಿ ದಿಟ್ಟಿಯ । ಸೊಲ್ಲಿಸಿದಳು ಮುದ್ದುಗೆಯ್ದು।೬೧॥
ಚೆಣ್ಣನ ಮೊಗಗಂಡು ಮುದ್ದಿಪಳ್ ತರಳಂಗೆ। ಕಣ್ಣೆಂಜಲೆಂದು[4] ತೂಪಿರಿದು॥
ಬಿಣ್ಣದಾವರೆಮೊಗ್ಗೆ ಮೊಲೆಯ ಬಾಯೊಳಗೂಡಿ । ಯುಣ್ಣಲ್ಕೆ ಪೇಸ್ಬದಕು[ವಳು ॥೬೨॥
ಕೊರಲ ಮೂರೇಖೆಯ ಮಣ್ದೊಡೆವಳು । ಸಣ್ಣ ಬೆರಲ ಕೈರೇಖೆಯು[ಜ್ಜುವಳು ॥
ತರಳನ ಪುಟ್ಟಪಾದದೊಳರ್ದ ತಾವರೆ ಯರಲನು ನೊಸಲಿಗೊತ್ತುವಳು॥೬೪

---

ಕ. ಪ. ಅ—1 ನಮಸ್ಕಾರಮಾಡ 2. ಸೂರ್ಯನಂತೆ. 3. ಮಗ್ಗುಲಾಗುವ.
4. ದೃಷ್ಟಿದೋಷವೆಂದು.

ರಾಜಾಧಿಪನೆಂಬನೆ ನಷ್ಟಪುಷ್ಟ ಸ | ರೋಜಾಪ್ತನೆಂಬನೆ ಬಿಸಿಗ ||
ತೇಜೋಮಯ ಕಂದ ಬಾರೆಂದು ರತಿ ಬೃಹ|ದ್ಭಿಜಕ್ಕೆ ಮುತ್ತನಿಕ್ಕುವಳು ||
ತೊರೆದ ನುಣ್ಮೊಲೆಯನೀಂಟುತ ಪೆಸಗಾಯದ|ಬೆರಲೊಳು ಮೊಲೆ [ದೊಟ್ಟ ಪಿಡಿದು ||
ಮರಳ್ದಣೆ ನೆತ್ತಿಗೇಱಲಿಕುಸಿರೂದುತ|ತರಳಾಕ್ಷಿ ಬೆಚ್ಚುವಳು ||೬೬||

ಜಕ್ಕುಲಿಗೊಳಿಸುವಳ್ ಮುಸಿದು ನೋಡುವಳು ತಾ | ನಕ್ಕು ತನ್ನೊಳಗೆ [ಹಿಗ್ಗುವಳು ||
ಮುಕ್ಕುಳಿಸುವಜೊಲ್ಲುವಾಯಿಗೆಕಡುನೇಹ|ಸೊಕ್ಕಾಂತುಮುತ್ತನಿಕ್ಕುವಳು
ಮಾತಾಡು ಮಜ್ಜನ್ಮದುಃಖವಿಚ್ಛೇದನ ಮಾತಾಡು ಮತ್ಪುಣ್ಯನಿಧಿಯೆ ||
ಮಾತಾಡು ಮತ್ಸುತಕುಂಜರ ನೀ ಮುದ್ದು ಮಾತನಾಡೆಂದಳರ್ಭಕನ ||೬೮||

ನಿಲ್ಲುವ ನಿರಿವಸನವ ಮೆಟ್ಟಿ ನಲಿದಾಡಿ ಕೊಲ್ಲುವ ಪುಟ್ಟಕೈಗಳಲಿ ||
ಜೊಲ್ಲುಸುರಿವ ಮುದ್ದುಮೊಗದಲ್ಲಿ ನಗೆಯಾಂತು ಸೊಲ್ಲಿಸುವನು ತೊದ [ಳ್ನುಡಿಯ ||೬೯||

ಇಳೆಯೊಳು ರತಿಕಾಮದೇವರ ಪರಿತೋಷ ಬೆಳೆಯಂಕುರಗಳೆಂಬಂತೆ ||
ಎಳೆಯಪುಟ್ಟಬಾಯೊಳುಮೆಲ್ಲಮೆಲ್ಲನೆ ಮೊಳೆವಲ್ಗಳೊಡೆದುವುಡಿದುವು
ಭೂಲೋಕಸಿಂಹಾಸನಾರೂಢಹೇರಂಬ ಲೀಲೆಯೊಳ್ ಕುಳಿತಾಡ ಕಲಿತ||
ಬಾಲಾಭ್ಯಾಸಿ ದಂಡೆಯ ನೂಂಕುವಂತಂಬೆ|ಗಾಲಿಕ್ಕ ತೊಡಗಿದನೊಲಿದು||೭೧

ದಿಟ್ಟ ತನ್ನಹಿತಭೂಭುಜಕುಮಾರರಸಿಕ್ಕ ಮೆಟ್ಟಬೇಕೆಂಬ ಸತ್ವದಲಿ ||
ಪುಟ್ಟಪಾದಗಳ ಹೊಂಗೆಜ್ಜೆಗಳ್ ಘುಲಿರೆನೆ ದಟ್ಟಡಿಯಿಡತೊಡಗಿದನು ||೭೨||
ತಾಯೊಡನುಂಬತಂದೆಯೊಳುಭುಂಜಿಸುವಕ|ಜ್ಜಾಯಪಣ್ಗಾಯ್ಗಳ ಮೆಲುವ||
ಕಾಯಕಾಂತಿಯ ಪಸರಿಸಿ ಬಳೆದನು ಕಂತು|ರಾಯನ ಸತ್ಕುಮಾರಕನು ೭೩

ವತ್ಸರವೊಂದೆರಡಾಗಲೊಡರ್ಚಿದ ರುತ್ಸವ ಮೂಱುನಾಲ್ಕೈದು ||
ನಿಚ್ಚಲೊಂದೊಂದು ವಿನೋದವಿಶೇಷವ ನಚ್ಚರಿಯೆನೆ ತೋಱುತಿರ್ದ ||೭೪||
ಬಿಕ್ಕಣಿಸುವ ಬಾಲಭಾಷೆಯ ಕೆಳೆಯರೊಳ್ ಕೆಕ್ಕಸ ಕೆಲೆದಾಡಿನಗುತ ||
ಮಕ್ಕಳಾಟದಿ ತನ್ನ ಹಡೆದ ತಾಯ್ತಂದೆಗೆ ಸೆಕ್ಕಳದೋರ್ವ ಸಂತಸದಿ ||೭೫||
ಕಾಗಿನ ಚೊಗೆ[1] ಯಾಂತು ಬಲರಾಮದೇವನಂ ತಾಗಿರ್ಪ ಜನರ ಕಣ್ಗೆನಕೆ

---

ಕ. ಪ. ಅ—1. ಕರಿಯಬಣ್ಣದ ಅಂಗಿ.

ನಾಗಿಣಿಯಾಣ್ಮನ ಪಡೆದುಟಿದವನಂತೆ|ರಾಗಿಪ ಕೇಳಾಯುತಾಕ್ಷಿ ||೭೬||
ಉಡಿಗೆಯನುಡಕಲಿತನು ರತ್ನಖಚಿತದ|ತೊಡಿಗೆಯ ತೊಡಲೊಡಂಬಟ್ಟ||
ಹುಡುಗಿಯ ಕೇಳವೋಳದೊಳರುತಿರ್ಪ ಸಂ|ಗಡಿಗರ ಟಿಕ್ಕರಿಗಳೆವ[1] ||೭೭||
ಓದಲಿಕ್ಕಿದೊಡೋದುವನು ವಾಣಿಯರಿಂಗೆ[2] | ಬೋಧಾರ್ಹನ ಸುಶಿ[ಕ್ಷೆಯಲಿ||
ಸಾಧನೆಗೈವ ಸದ್ಗುರುಡಿಯೊಳ್ ಭೇತಾಳ|ನಾದಂಗೆ ನೃಪಕುಮಾರರಿಗೆ ||೭೮
ಎಳೆಗನ[3]ನೇಱಿಸುತಿರ್ಪನು ದಾವಾ ನಲನಂತೆ ಸುಪ್ರತಾಪದಲಿ ||
ತೊಳಗುವ ತುರಗಾರೋಹಣದಲಿ ನಿ ರ್ಮಳ ಶಾಲಿಹೋತ್ರ[4]ನಂತೆಸೆವ||೭೯||
ಗಜವೈಹಾಳಿಯ[5] ಮಾಡುತೆ ನಿಖಿಳಭೂ ಭುಜರ ದೇವೇಂದ್ರನೆಂದೆನಿಸಿ||
ನಿಜದೆ ಬಿಲ್ವಿದ್ದೆಯ ಕಲಿತನು ದಶವರೂ|ಥಜನ[6] ಕೈಚಳಕವೆಂಬಂತೆ||೮೦||
ಅಧ್ಯಕ್ಷನಾಗಿ ಸಾಧಿಸಿದನು ಚೌಷಷ್ಟಿ[7]|ವಿದ್ಯದೆ ಪರಿಣತನಾಗಿ ||
ಚೋದ್ಯಚೋದ್ಯಂಗಳಮಾಟ್ಪ ದ್ವಾರವತಿಯ ಮಧ್ಯದೊಳನಿರುದ್ಧನೊಲಿದು||
ಪಿಕ್ಕಳದ್ವಿತಯಲಾವುಗೆ ತೋರಗಿರುಜೆಯ|ಕುಕ್ಕುಟತಗಱುಕೋಣಗಳ
ಸೊಕ್ಕಾನೆಗಳ ಕಾದಿಸುತಿರ್ದ ದೊರೆಗಳ|ಮಕ್ಕಳಕೂಡೆ ಬೀದಿಯಲಿ ||೮೨||
ಪದಮಾಡಿ ತಳುವಿಕ್ಕಿ ಪೊಳೆವ ಬತ್ತೀಸಾ|ಯುಧವಿಡಿದಭ್ಯಾಸಿಗಳ ||
ಮದವೆದ್ದ ಗಜಘಟೆಗಳ ಕಾದಿಸುವ ಕೋ ವಿದಶಿರೋಮಣಿಯನವರತ ||
ಬಾಲಕೇಳಿಯ ತಿರಸ್ಕರಿಸಿ ಯೌವನದಳೆ ದೋಲೈಪ ಪಿತೃಪಿತಾಮಹರ ||
ಲೋಲಾಕ್ಷಿಯರೊಳಾಯಿತು ಚಿತ್ತ ಕಮ್ರಲ ಗೋಽಳನ ವರತನುಜಂಗೆ||೮೪
ವರಮೋಹನತರಂಗಿಣಿಯೆಂಬ ಕಾವ್ಯವ ಬರೆದೋದಿ ಕೇಳದ ಜನರ ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವ ಲಕ್ಷ್ಮೀಕಾಂತಬಿಡದೆ||

— ಅಂತು ಸಂಧಿ ೧೭ ಕ್ಕಂ ಪದ ೧೧೦೪ ಕ್ಕಂ ಮಂಗಳಂ —

---

ಕ. ಪ. ಅ— 1. ಧಿಕ್ಕಾರ ಮಾಡುವನು　　2 ಓದುವ ಹುಡುಗರಿಗೆ. 3. ಹುಡುಗರು ಹತ್ತಿ ಸವಾರಿ ಮಾಡುವ ಕುರಿ.　4. ಕುದುರೆಯ ವೈದ್ಯವನ್ನು ಬರೆದವನು.　5. ಸ್ವಾರಿಯನ್ನು.　6. ದಶರಥನ ಪುತ್ರನಾದ ಶ್ರೀರಾಮನ.　7. ಅರುವತ್ತುನಾಲ್ಕು.

# ಹದಿನೆಂಟನೆಯ ಸಂಧಿ

**ಅನಿರುದ್ಧನ ನಗರಶೋಧನೆ.—**

†ಪಿಪ್ಪಲದೊಳಗಿರ್ದ ಪತಿವ್ರತೆಯುರಗೆದ್ದು ಮುಪ್ಪುರಗೊಂಡ ಮಾಧವನ ||
ಅಪ್ಪಣೆವಡೆದು ಬಿತ್ತರಿಸುವ ಕೃತಿ ಜೇನು ತುಪ್ಪದ ತೊಱೆಯಾಗಲೆಱೆಯಾ ||

ಶಶಿಲಾಂಛನಮುಖಾನ್ವಿತೆ ನಿನ್ನ ಪಿರಿದು ಬಣ್ಣಿಸಲಾಶ್ಚರ್ಯಶಬ್ದಗಳ ||
ಬೆಸಲಾದು[1]ದೆನ್ನ ನಾಲಗೆಯೆನೆ ಪೇಳುವೆ ಕುಶಲವ ಕೇಳ ಚಿತ್ತೈಸು ||೨||

ಮೇರುಪರ್ವತವ ಸುತ್ತಲು ದುಃಖಿತನಾಗಿ ತೀರುವುದಿಲ್ಲೆಂದು ಸೂರ್ಯ ||
ವಾರುವ[2]ರಥಗೂಡಿ ಪಡುವೆಟ್ಟ ಶಿಖರದಿ ನೀರೊಟ್ಟಿಲೊಳು ಬಿದ್ದ ಮುದದಿ ||

ಮಿತ್ರಮಾವುತ ಬೆನ್ನಟ್ಟ ಸೀರ್ಗಡಹದ ಮತ್ತಗಜೇಂದ್ರ ಸಾರಿ[3]ಯಲಿ |
ಎತ್ತಲೆಂದಱಿಯದೆ ಪರಿದಾಡುವಂತೆ ಕರ್ಗತ್ತಲೆ ತೀವಿತುರ್ವಿಯಲಿ ||೪||

ತಡೆಯದೆ ಭಾಸ್ಕರ ಮುಂ ಪೋಗಲಾಸತ್ತು ನಡೆಗೆಟ್ಟ ಕಿರಣಸಂದೋಹ ||
ಎಡೆಗೆಯ್ದಂತೆ ವೀಥಿಯೊಳಿರ್ಪ ಮಣಿದೀಪ ಕಡೆಯಿಲ್ಲದೆಸೆದುದಾಪುರದಿ ||೫||

ಭೂರಿಭೂರುಹಶಿಖರಿಯನಡರಿತು ಹಕ್ಕಿ ವಾರಿಜ ಮುಗಿದುವಲ್ಲಲ್ಲಿ ||
ಭೇರಿ ಮದ್ದಳೆ ಸಂಕು ನಗರಿ ಹೆಗ್ಗಾಳೆಗಳ್ ಚೀರಿದುವಖಿಲದೇಗುಲದಿ ||೬||

ಗುಡಿಗುಡಿಗಳ ನರ್ತನಗಾತಿಯರೊಳು ಪೆರ್ಬಡಿಸುವ ಗೀತಶಬ್ದಗಳ ||
ವಡಿ ತಪ್ಪದೆ ಕೋಲಚಾರಿಗಳಿಂದ ಜಕ್ಕಡಿ ಮೊಱೆದುವು ದೇವಾಲಯದಿ ||೭||

ಕೇಣವಿಲ್ಲದೆ ಬೀದಿ ಬೀದಿಯೊಳಗೆ ದೇವತಾಣ ನೋಟಕರ ಸಂದೋಹ ||
ಮಾಣದೆ ಮಣಿಸೊಡರ್ವೆಳಗಿನೊಳ್ ಕೃಷ್ಣ ದಿವಾಣ[4]ದೊಳಿರ್ದನೋಲಗದಿ ||

ಶ್ರೀನಾಥನಿರಲು ಮಾಣಿಕಪೀಠದೊಳುಗ್ರಸೇನನಕ್ರೂರನುದ್ಧವನು ||
ಆನಕದುಂದುಭಿ ನೀಲಾಂಬರ ಸುಪ್ರಧಾನರು ಕುಲವೃದ್ಧರುಗಳು ||೯||

ನಿರ್ಮಲಹೃದಯನುದ್ಧವ ಸಾತ್ಯಕಿ ಕೃತವರ್ಮ ಮುಂತಾದ ಯಾದವರು
ಧರ್ಮರತ್ನಾಂಚಿತಾಸನದಲ್ಲಿ ಕುಳ್ಳಿರ್ದ ಪೆರ್ಮೆಯನೇನ ಬಣ್ಣಿಸುವೆ ||೧೦||

ಬಲದಲಿ ಹನುಮ ಜಾಂಬವವಿಭೀಷಣಧ್ರುವ ನೆಲದಲಿ ಬಲಿ ಪ್ರಹ್ಲಾದ ||
ಜಲಜೋದ್ಭವ ಶೌನಕ ಶುಕ ವಿದುರ ಕೇವಲವಿಷ್ಣುಭಕ್ತರೊಪ್ಪಿದರು ||೧೧||

---

ಕ. ಪ. ಅ—1. ಹೆತ್ತುದು. 2. ಕುದುರೆ. 3. ವೇಗ.
4. ದರ್ಬಾರು ಹಾಲು; ರಾಜಾಸ್ಥಾನ.

† ಈ ಪದ್ಯದಲ್ಲಿ ತೋರುವ ಹಿಂದಣ ಕಥೆಯೇನು?

ಬೋಧಾಯನ ಭೃಗುನಾರದ ಕಪಿಲ ವಿ|ಬೋಧ ವಿಶ್ವಾಮಿತ್ರ ಕಣ್ವ ||
ಬಾದರಾಯಣ ಪರಾಶರ ಜಹ್ನುಧೌಮ್ಯ ಮುಂ| ತಾದ ಸದ್ಭಕ್ತರೊಪ್ಪಿದರು ||
ಶೇಷ ಗರುಡ ಬಕ ದಾಲ್ಭ್ಯರೋಮಶ ದು| ರ್ವಾಸಮಾರ್ಕಂಡೇಯ
[ಮುಖರು ||
ವಾಸಿಷ್ಠ ರತ್ರಿಭರದ್ವಾಜರೆಂಬ ಮು| ನೀಶರೊಪ್ಪಿರ್ದರೋಲಗದಿ ||೧೩||
ಸಖವೆತ್ತ ರಂಭೆಯೂರ್ವಶಿ ಮಂಜುಘೋಷೆ ಮೇ|ನಕೆ ತಿಲೋತ್ತಮೆ
[ಮೊದಲಾದ ||
ನಿಖಿಳಾಪ್ಸರವಧು ನರವೇಣ್ಯ ಳಸೆಯೆ ದೇ| ವಕಿಯು ನಂದನನೆಡಬಲದಿ ||೧೪||
ಸುರನದಿಯಣುಗಭೀಷ್ಮಕ ಸತ್ರಾಜಿತು ಯುಧಿ| ಷ್ಠಿರ ಭೀಮಾರ್ಜುನ
[ಮಾದ್ರಿಜರು ||
ಸ್ಮರಟೆಕ್ಕೆವೆಸರ[1] ಪಾಂಚಾಲ ಮುಂತಾದ ಭೂ| ಧರರಿರ್ದರೆಡದ ಭಾಗದಲಿ||
ಮಾಣದೆ ಮದಜಲಸುರಿವ ಪೆರ್ಗಜ ಕುಱ[2]| ಕೋಣಮನುಜ ಮೊಸಱ[3]
[ಗಳಂ ||
ಏಣ[2]ಘೋಟಕ ನಂದಿ ವಾಹನಸಹಿತ ಗೀ| ರ್ವಾಣರೊಪ್ಪಿರ್ದರೋಲಗದಿ ||
ಅವರವರುಗಳ ವಿದ್ಯೆಯ ನೋಡಿ ಮೆಚ್ಚಿ ಸ|ದ್ವಿವರದಿಂದುಡುಗೊರೆ
[ಯಿತ್ತು ||
ಸವಿವೆತ್ತ ಸುರನರೋರಗರ ಬೀಱ[3]ಗೊಟ್ಟ ಮಾ| ಧವ ಪೊಕ್ಕ ಮಣಿ
[ಸಜ್ಜವನೆಯ ||೧೭||
ಪೀತಾಂಬರನೋಲಗದಿಂದೆ ವರವಿಮಾನ| ಕೇತನ ನಿಳಯಕ್ಕೈತಂದು ||
ಆತಂಕವಿಲ್ಲದೆ ಸುತಗೂಡಿ ಭುಂಜಿಸಿ | ತಾ ತನ್ನ ನಿಳಯಕ್ಕೈದಿದನು ||೧೮||
ನಿರ್ಜರಹಿತ ಕಂತುಸುತ ಕೊಂಡು ಬಂದನು| ಕಜ್ಜಾಯ ತುಪ್ಪಸಕ್ಕರೆಯ||
ಕೊಜ್ಜೆಯರಿಗೆ[3] ಮೆಲ್ಲಿಸುತ ಮಿಕ್ಕುದ ಬಾಗಿ|ಲಜ್ಜೆಯರಿಗೆ[4] ತುತ್ತಿಸಿದ ||
ದಾದಿಯರುಗಳ ಕುಸ್ತರಿಸಿ ಬೊಕ್ಕಸದರ| ಬೋಧಿಸಿ ಪೊನ್ನ ಪೆಟ್ಟಿಗೆಯ||
ಭೇದಿಸಿ ತೆಗೆದು ನಾನಾವಸ್ತುಗಳನು ಸಂ|ಪಾದಿಸಿಕೊಂಡನರ್ತಿಯಲಿ ||೨೦||

---

ಕ. ಪ. ಅ—1. ಮನ್ಮಥನ ಧ್ವಜವಾದ ಮತ್ಸ್ಯದ ಹೆಸರುಳ್ಳವನು, ಎಂದರೆ ಮತ್ಸ್ಯದೇಶಾಧಿಪನಾದ ವಿರಾಟರಾಯ. 2. ಜಿಂಕೆ.
3. ನಪುಂಸಕರು; ಅಂತಃಪುರದ ಕಾವಲುಗಾರರು. 4. ಮುದುಕಿಯರಿಗೆ.

ನೀಲಾಭರಣಭೂಷಿತನಾಗಿ ಕಾಗಿನ । ಚೇಲವ ಹೊದ್ದು ಸುಗಂಧ ।
ಮಾಲಾಲಂಕೃತನಾಗಿ ಪೊಱಮಟ್ಟ ಪ್ರಾಣಾನು। ಕೂಲ ನೇಹಿಗ[1]ರೊಂದು [ಗೂಡಿ ||೨೧||

ಚಿತ್ರಜನಾತ್ಮಸಂಭವನ ಬರ್ಪ ವೀಧಿಯೊ। ಳುತ್ತಮಜಾರನಾರಿಯರು ||
ಕತ್ತಲೆಯಭಿಮಾನದೇವತೆ ಬಹುರೂಪು ವೆತ್ತಂತೆ ಸುಳಿದಾಡುತಿಹರು ||೨೨||

ಕಂಗಾಣಿಸದೆ ಪಾರಿಯಪಟ್ಟೆ ಕರ್ವಣ್ಣ । ಗೊಂಗಡಿ ಮುಸುಕಿಟ್ಟುಕೊಂಡು।
ಅಂಗಳಿ ಸೊಡರ್ಗೆಟ್ಟ ದೇಗುಲದೆಡೆಯ ದು।ಸ್ಸಂಗದಂಪತಿಗಳೊಪ್ಪಿದರು ||

ಕಳವಿನ ಕಾಮವಿನ್ನೆಂತುಟೊ ಮರ್ಮ। ಸ್ಥಳವಕ್ಕು ಕೈಮುಟ್ಟದೆಡೆಯ||
ಜೊಳೆವ ರೋಮಾಂಚದ ಗದ್ಗದರಭಸವ । ತಳೆದಿರ್ದ ರತಿಧೈರ್ಯದಲಿ ||೨೪||

ಗದೆಗುದುಗೆಯ[2]ಝಲ್ಲಝಲ್ಲೆಂದು ತಳವಾರರಿದೆ ಬಂದರೆಂದು ಕಾತರಿಸಿ||
ಬೆದೆಗಾತಿಯರನು ಬಿಟ್ಟಗಲುವ ವಿಟರುಗಳೆದೆಗೇಡನೇನ ಬಣ್ಣಿಸುವೆ ||೨೫||

ತೊಲಗಿ ಪೋದಪೆವೆಂದು ಪೋಪರು ಕಾಲೆಟ[3]। ದೊಲವಿಂದೆ ಮಗುಳಿಪ್ಪ [ವರು ||
ಜಲಜಾಕ್ಷಿಯರ ಕುಸ್ತರಿಸಿ ವಿಯೋಗವಾಂ।ತಲರಂಬಗೆರ್ದೆಯನೊಡ್ಡುವರು||

ಸೋದರಮಾವ ಮೈದುನ ಭಾವ ತಳವರ। ನಾದರೆ ತಾನಡ್ಡಬರಲಿ ||
ಹಾದರಿಗರನಿಂತು ಪೂಗೋಲೊಳಕ್ಕುವು। ದೇ ದೊರೆತನವೆಂದರಟುತೆ ||೨೭||

ಪಂಕೇರುಹಜಾತ ಪಾಪಿಷ್ಠ ಮನೆಗೊರ್ವ। ಮಂಕ ತೊಡರ್ಚಿದ ತನ್ನ ||
ಸೋಂಕಲೊಪ್ಪುವ ಕಾಂತನ ವೈವಾಹಕೆ। ಕಂಕಣಗಟ್ಟೆಂದರಟುತ ||೨೮||

ಉದ್ಯೋಗ ವೆವಹಾರ ನೃಪಸೇವೆಯಾಳ್ದರು। ಮಧ್ಯರಾತ್ರಿಗೆ ಬರ್ಪನಕ||
ನಿದ್ದೆಗೆಯ್ದಂತೆ ಮಂದಿರದೊಳು ಹಾದರ। ವಿದ್ಯೆಯಂಗನೆಗಳೊಪ್ಪಿದರು ||೨೯

ಖೋಡಿಯಿಲ್ಲದೆ ರಾಜ್ಯವನಾಳ ಕಾಲವ।ಮಾಡಿಭಾಸ್ಕರ ಹೋಗಲೊಡನೆ||
ಕ್ರೀಡಿಪ ಜಾರಚೋರರ ಶಿಕ್ಷಿಪೆನೆಂದು।ಮೂಡಿದ ಚಂದ್ರ ತಾರೇಂದ್ರ[3]||೩೦

†ನೇರಂಡವಾಗಿರ್ದ ಮುನಿಪತ್ನಿಗೆ ಸತ್ಕು। ಮಾರನ ಕೊಟ್ಟ ಸಾತ್ವಿಕನು ||
ಚೋರರ ಕೊಲಬಂದ ನೋಡೆಂದು ನೆಯ್ದಿಲೆ। ನೀರೊಳು ನಸುನಕ್ಕುವಾಗ||

---

ಕ. ಪ. ಅ—1. ಸ್ನೇಹಿತರು. 2. ದೊಣ್ಣೆಯು. 3. ನಕ್ಷತ್ರಗಳಿಗೆ ರಾಜ.

† ಈ ಪದ್ಯದ ಪೂರ್ವಾರ್ಧದಲ್ಲಿ ಸೂಚಿತವಾದ ಪೂರ್ವಕಥೆಯೇನು?

ಬಸರಿತು ಶಶಿಕಾಂತಶಿಲೆ ಸೊದೆಗಡಲ ಚುಂ| ಬಿಸಿತು ಚಕೋರಿ
[ಚಂದ್ರಿಕೆಯು ||
ಬಿಸರುಹ ರಥವಕ್ಕ್ಕ ತಸ್ಕರ ಜಾರರ್ಗೆ| ಬಿಸವಾದುದು ಶಶಿಕಿರಣ ||೩೨||
ಜೊನ್ನವೆಳಗು ಭದ್ರಮಂಟಪನಿಚಯದ| ಸೊನ್ನೆಯಾಳಿಕೆಯು ಶಾಲೆಗಳು||
ರನ್ನದೊಡವನಿಟ್ಟ ರಮಣಿಯ ಕಣ್ಬೆಳ| ಗುನ್ನತವಾಯ್ತು ಬೀದಿಯಲಿ||೩೩||
ತೋರಿಯು ನಿಖಿಳ ಪೊಂಗಳಸದಿ ಮಿಱಿವ ಚಾ| ಚಾರಿಯು ಹರ್ಮ್ಯದ
[ಮುಂದೆ ||
ವಾರಿಜದಳಲೋಚನೆಯರೊಪ್ಪುವ ಸೂಳೆ| ಗೇರಿಯು ಸೊಬಗ ಸಿಟ್ಟಿಸಿದ||೩೪||
ಜಾಣಶಿಲ್ಪಕನಿರ್ಮಿತ ಚಂದ್ರಕಾಂತಪಾ| ಷಾಣವೇದಿಕೆಯು ಸಾಲುಗಳು ||
ಏಣಾಕ್ಷಿಯರ ಮಂದಿರಗಳಿರ್ದುವು ಪಂಚ| ಬಾಣನ ರತಿಗೇಹದಂತೆ ||೩೫||
ಚೆನ್ನಾಗಿ ಪುಟಿದೊಡೆದೊಪ್ಪವಿಕ್ಕಿದ ಚೊಕ್ಕ| ಚಿನ್ನದ ಪತ್ರಮೊಗಳಂತೆ||
ರನ್ನದ ಮುತ್ತ ಹಾರವನಿಟ್ಟು ಸುಗುಣಸಂ ಪನ್ನೆಯರಿರ್ದರಿಕ್ಕೆಲದಿ ||೩೬||
ಬಾಲೆಯೊರ್ವಳು ತನ್ನ ಲಲಿತಗೇಹದ ಭದ್ರ|ಶಾಲೆಯೊಳ್ ನಿಂದು
[ಸುಕೋಮಲೆಯು ||
ಮೇಲಿಹ ಸೆಱಗ ಪಿಡಿದು ನೋಡಿದಳು ರತಿ ಗೋಲೆಯ ನೋಡಿಕೊಂಬಂತೆ||
ಮಡ[1]ಚೆಲ್ವ ಮೃದುಪಾದಾಂಗುಳಿ ಜಾನು ಜಂಘೆ ಸು|ಣ್ಪಡಸಿದ ಕರಿಕುಂಭ
[ಜಘನ ||
ಬಡನಡು ಬಟ್ಟಬಲ್ಮೊಲೆ ಕಂಬುಕಂಧರ|ವುಡುರಾಜಮುಖವು ಪದ್ಮಿನಿಗೆ ||
ಮಾತನಾಡುವ ತಾವ್ರೊಳು ಬೆಮರ್ವೆದೆಯೊಳು| ಶ್ವೇತನಾಣೊರೆವ
[ತಾವಿನಲಿ ||
ನೂತನ ಕ್ರಮುಕಯವ್ವನ ಜೋಳ ಪೊಂಬಾಳೆ|ನಾತ ಸರ್ವಾಂಗ ಶಂಖಿನಿಗೆ ||
ನೆತ್ತಿಯೊಳಟ್ಟ ಪೆರ್ದುಱುಬು ಕಂಧರದಲ್ಲಿ|ಮುತ್ತಿನಸರ ಕುಂಭಕುಚದಿ||
ಬತ್ತಿದ ತಾವು ನಾಣೊಸರ್ವ ಮರುಳ್ಗೆಯ್ವ| ಚಿತ್ತಿನಿಯರುಗಳೊಪ್ಪಿದರು ||
ಶಸ್ತದೊ[2]ಳೊಲಿದು ಸಂಚರಿಸುವ ರತ್ನಗ|ಭಸ್ತಿಭೂಷಣವಿಟರುಗಳ ||
ಸ್ವಸ್ತ್ರೀಯರುಗಳ ಮೇಲಣ ಭ್ರಾಂತ ಬಿಡಿಸುವ| ಹಸ್ತಿನಿಯರುಗಳೊಪ್ಪಿ
[ದರು ||೪೧||

---

ಕ. ಪ. ಅ—1. ಹಿಮ್ಮಡಿ. 2. ಹರ್ಷದಲ್ಲಿ.

ಸೋತ ಸೋಲಕೆ ಶಿವನೊಳು ಸೆಣಸುವ ವಿಾನ| ಕೇತನಪರಿವಾರದಂತೆ||
ನೂತನಾವಯುವ ಸದ್ಗುಣ ರೂಪು ನಾಲುಕು| ಜಾತಿಯುಂಗನೆಯರೊಪ್ಪಿದರು||
ತರಳಾಕ್ಷಿ ತನ್ನೊಳು ಪಾಡುವರಿಲ್ಲೆಂದು|ಕೊರಲೊಳಟ್ಟಳು ಕಂಠಸರವ||
ಪೊಳೆರ್ವ ವೀಣೆಗಾರ್ತಿಯರಿಲ್ಲೆನುತವೆ| ಬೆರಲೊಳಟ್ಟಳು ಮುದ್ರಿಕೆಯ||
ಆಯತವಿಡುಪು ಸುಸ್ವರ ಷಡ್ಜ ಪಂಚಮ| ಸ್ಥಾಯಿ ಸಂಚರ ಠಾಯಿ ನೇಮ||
ಬಾಯಿದೆಱೆಯಿನಾಣೆಯಾಯ ತಪ್ಪದ ಗೀತ| ಗಾಯಕಿಯರುಗಳೊಪ್ಪಿದರು||
ರಂಭಾಸ್ತ್ರೀಯನೇಡಿಸಿ ಗೀತ ಕಡೆಗಟ್ಟ| ಕೊಂಬರು ಶುದ್ಧ ಚಾರಿಯಲಿ||
ಜಂಭಭೇದಿಯುಮುದ್ದ ಪೂರ್ವಶಿಯನೆಗೆದ್ದ|ಬೊಂಬೆಯಕಾಲೊಳಟ್ಟಿಹರು ||
ಹಸ್ತ ಪಾವುಜ ವೀಣೆ ಮದ್ದಳೆ ರಾವಣ| ಹಸ್ತ ಕಿನ್ನರಿ ಜಂತ್ರವುಡುಕು ||
ದುಸ್ತರಸ್ವರಮಂಡಲಮುಖ್ಯ ಸಕಲವಿ|ದ್ಯಾಸ್ತ್ರೀಯರಿರ್ದರಿಕ್ಕೆಲದಿ ||೪೬||
ಎಲ್ಲಾ ಕಲೆಗಳ ಮೂಲಾಗ್ರವ ನೆಱೆ | ಬಲ್ಲಂಥ ವಾರನಾರಿಯರು ||
ಫುಲ್ಲಶರನ ರೂಪನೇಡಿಸುತಿಹ ಪ್ರಾಣ| ವಲ್ಲಭರೊಡನೆ ಕ್ರೀಡಿಪರು ||೪೭||
ಕೂಟದಿ ನಾಗರಿಕನ ಮಱೆದೊರಗಿಸಿ | ಪೀಠಮರ್ದನನ ಸೊಕ್ಕಿಪರು ||
ಕೋಟಲೆಗೊಳಿಪರು ವಿಟವಿದೂಷಕರ ಕ|ಣ್ಬೇಟದಿ ಮರುಳುಮಾಡುವರು||
ಲೇಸಿನ ವಿಟರವಯವದಲಿ ಮೋದದೆ| ಚೌಶೀತಿ[1] ಬಂಧದೆ ಕೂಡಿ ||
ಗಾಸಿವಡೆದು ಚಂದ್ರಶಾಲೆಯೊಳ್ ತಂಗಾಳಿ ಬೀಸಿದೊಡೆದೆಯನೊಡ್ಡುವರು||
ವಕ್ಷದೊಳಿಹ ಕುಚದರ್ಶನದುರುತಾಪ | ಪಕ್ಷಪಾತವ ನಿವಾರಿಸಿತು ||
ತಕ್ಷವಿಲೋಮಸೌಖ್ಯವ ಕಂಡ ಯತಿಗಳು| ಭಕ್ಷವ ತೊಱೆದು ದುಕ್ಕಿಪರು||
ಗಾಡಿಕಾರ್ತಿಯರಯೌವನರೂಪವಿಭವವ|ನೋಡಿದವರಜಿತೇಂದ್ರಿಯರು||
ಸೂಡಿದ ಜಡೆಮನಿಱುಹಿ ತಲೆಬೋೞ್ಗಳ | ಮಾಡಿದರೇನ ಬಣ್ಣಿಸುವೆ ||೫೧||
ಮೊಡವಿಯ ಮೊಳೆಯನೊತ್ತುತ ಕಕ್ಷಸೊನೆಬೆಮ | ರ್ವಡೆದ ಸೊಗಡ [ವಾಸಿಸುತ ||
ಬಿಡೆಯವಿಲ್ಲದ ಕುಚ ಬಿಗುಹೇಱೆ ರುತುಕಾಲ ವಡೆದ ಪುಷ್ಪಿಣಿಯರೊಪ್ಪಿದರು
ಮುಟ್ಟದಿರಾಳ್ದ ಮುಟ್ಟುವೆನಾತ್ಮೇಶ್ವರಿ|ಮುಟ್ಟಲಾಯುವು ಕ್ಷೀಣವಹುದು||
ಮುಟ್ಟದೊಡಸು ನಿಲ್ಲದೆನುತೊರ್ವತೊಲಗಿದು| ಬಟ್ಟಜವ್ವನೆ[2]ಯನಪ್ಪಿದನು||
ಮಂಗಳಾಚಾರವಂತರ ಮೇಲೆ ಕುಸುಮಶ ರಂಗಳ ಕಱೆದು ಮನ್ಮಥನು||

---

ಕ. ಪ. ಅ—1. ಎಂಭತ್ತುನಾಲ್ಕು. 2. ವೃತ್ತಸ್ತನವುಳ್ಳವಳು.

ಹೆಂಗಳವೊಲೆ ಕಣ್ಣ ಬೆಳಗ ತೋಱಿಸಿದು ಮಾ|ರ್ಗಂಗಳ ಮಾಡುತ್ತಲಿಹನು||
ಸೊಗಯಿಪ ಚಂದ್ರಕಾಂತದ ಭಿತ್ತಿಯೊಳು ತನ್ನ|ಯುಗಳಸ್ವರೂಪ ಬಿಂ[ಬಿಸಲು ||
ಅಗಲ್ದಿನಿಯನ ತೋಱಿಸು ಬಾಬಾಯೆಂದು| ಮುಗುದೆ ಬಿದ್ದಳು ಚರಣದಲಿ||
ರಂಭಾಮೂಲಪಲ್ಲವಯೋಗ ಕದಳೀ | ಸ್ತಂಭರಥಾಂಗ ತತ್ಸಂಗ ||
ಕೆಂಬಲ್ಗಳ ಬಜ್ಜರ[1]ಕೂಟ ದುಗುಡಾವ|ಲಂಬಿ ಮಾನಿನಿಯರೊಪ್ಪಿದರು ||
ಕತ್ತಲೆ ಪೆಱೆ [ಕಾರವುಗಿಲು ಸೂರಿಯ ತೋರ] | ಮುತ್ತುದಾಡಿಮ [ಶಂಖಚಕ್ರ ||
ವೃತ್ತಸಿಂಹಾದ್ರಿಯು ಪೊಂಬಾಱೆ ಮಾಂದಳ | ವರ್ತ್ತದಂತಿರ್ದುದಲ್ಲಲ್ಲಿ||
ಪಿಂತಣ ಲೋಕದ ನಳಕೂಬರರ ಜ|ಯಂತಾದಿಗಳನು ಕೀೞ್ಪಡಿಸಿ ||
ಸಂತತ[ವಿಟರು ವೇಶ್ಯೆಯರೊಳು] ವಶ್ಯಾ| ಕ್ರಾಂತರು ಸುೞಿದಾಡುತಿಹರು||
ತುಂಗಸ್ತನೆಯರನೇಕದೇಶದ ಸದ್ಭು| ಜಂಗರೊಳ್ ಕೊಱಚಾಡುತಿರ್ದು||
ಅಂಗಜನಾತ್ಮಸಂಭವನ ಲಾವಣ್ಯವ | ಕಂಗಳಂ ನೋಡಿದರೊಲಿದು ||೫೯||
ಕಾಣಬಾರದು ಪುಂಡ್ರೇಕ್ಷುಕೋದಂಡನೊ| ಬಾಣ ಪೂಸರಲುಗಳಲ್ಲ ||
ಏಣನೇತ್ರೆಯರ ಮನವನಿರ್ಕುಱಿಗೊಂಬ| ಜಾಣನಾರೆಂದು ನೋಡಿದರು ||
ಸೋಮನಾದರೆ ಕಂದುಕುಂದಿಲ್ಲಮೋಣುಸು|ತ್ರಾಮನಾದರೆಭಂಗ ನಾಸ್ತಿ||
ಕಾಮನಾದರೆ ಕೋಳವರಿಯಿಲ್ಲ ಸದ್ಗುಣ| ಧಾಮನಾರೆಂದು ನೋಡಿದರು ||
ನೊಸಲ ಕತ್ತುರಿಬಾಗಿದ ಪುರ್ಬು ತಾವರೆ |ಯೆಸಱನೇಱಿಪ ನಿಡುಗಣ್ಣು||
ಪಸರಿಪ ತಿಲಪುಷ್ಪನಾಸಿಕ ಸತ್ಕರ್ಣ| ಪೊಸರೂಪ ನೋಡಿ ಹಿಗ್ಗಿದರು ||೬೦||
ಗಂಡಸ್ಥಲವನ್ನೆ ಕೊನರುವ ಕವಿರ್ಗಸೆ ತೊಂಡೆವಣ್ದುಟದೋರೆವಲ್ಲು||
ಮಂಡಳಿಸುವ ಕಂಠಸರದ ನುಣ್ಗೊರಲನ | ಕಂಡಾಕ್ಷಣ ಸೋತರೊಲಿದು ||
ಈತನೊಳೊಡಗೂಡದಿದ್ದರೆ ಪೆಣ್ಜನ್ಮ| ವೇತಱದೆಮ್ಮ ಮೆಲ್ಲರ್ದೆಯ ||
ಕಾತರದಿಂದೆ ಪ್ರಾರ್ಥಿಸಿ ಬಾರದಿರೆ ವಿಜ್ಞಾನ| ಕೇತನಗೊಳಗಾದರಾಗ ||೬೧||
ಇಕ್ಕಲದಬಲೆಯರ್ ಮಾತಾಡಿದರು ತಮ್ಮ| ಪಕ್ಕೆಗೆ ಬರಿಸಿಕೊಂಡವನ||
ತಕ್ಕೆಯೊಳಿರ್ದಗಡರ್ಚದ ಮೊಗ್ಗೆ ಮೊಲೆಗಳು| ಮೆಕ್ಕೆಯಕಾಯ್ಗಳೆಂದೆನುತ||
ಕಾಂತಬಾಕಮನೀಯರೂಪಬಾಪರಮೋ|ಕಾಂತ ಮದ್ಗೃಹಕೆ ಬಾರೆಲವೋ||

---

ಕ. ಪ. ಅ—1. ಶ್ಲ. ವಜ್ರ.

ಇಂತಪ್ಪ ಸತ್ಕಲಾವಿದ ಸೋಲವಾಂತರ[1]| ಸಂತವಿಸದೆ ಪೋಗಬಹುದೇ||೬೬||
ಕಚದ ಹೂವನು ಕೊಡಹುವೆನೆಂದು ನುಣ್ದೋಳ | ಕುಚದ ವೃತ್ತತೆಯ
[ತೋಱಿಸುತ ||
ಸಚಲಾನ್ವಿತವಾರನಾರಿಯರುಗಳ ನಿ|ರ್ವಚನವ ಕುವರನಾಲಿಸಿದ ||೬೭||
ಸಲೆ ಮೆಚ್ಚಿದಬಲೆಯರುಗಳ ಮೆಲ್ಲೆರ್ದೆಯ ಸ|ತ್ಕಲೆಯಱಿದೆಡೆಗೊ
[ಡದಿರ್ಪ ||
ಕೊಲೆಗೇಡಿಯ ಸೃಜಿಸಿದ ಪಾಪಿ ವಿಧಿ ನಿನ್ನ|ತಲೆಪೋದುದನ್ಯಾಯವಲ್ಲ†||೬೮
ಕೇಳದನವರ ಮೆಲ್ನುಡಿಯನು ಹರಿಸವ | ತಾಳದನನಿರುದ್ಧ ತನ್ನ||
ಊೞಿಗದವರ್ಗೆ ಬೇಡಿದ ವಸ್ತುವನಿತ್ತು| ಬೋಳೈಸಿದನು ಪೆಣ್ಜನವ ||೬೯||
ದಂಪತಿಗಳಮಾಡಿ ಬೀೞ್ಕೊಟ್ಟು ಕೆಳೆಯರು| ಮುಂ ಪೋಗಲನಿರುದ್ಧ
[ನೊಡನೆ ||
ಚಂಪಕಧಾಮಕೋಮಲೆಯರು ಮರುಳ್ಗೊಂಡು | ಮುಂ ಪೋದುದೇನ
[ಪೇೞುವೆನು ||೭೦||
ನಿಱಿಗಳಚುವುದು ನಾಣೊಸರ್ವುದು ರೋಮಾಳಿ|ತುಱುಗಿರ್ಪುದವಯ
[ವದೊಳಗೆ ||
ಮಱವಿಮಾಂಗಣ್ಣು ಬೆಂಡೆರ್ದು ಮೂರ್ಛೆಯ ತಾ|ಳ್ದರು ಪೋಪೆವೆಂದವರೊ
[ಡನೆ ||೭೧||
ತೊಂಡೆವಣ್ದುಟಿ ರಸವಱತು ಮಾತಾಡುವ| ಪುಂಡರೀಕಾಯತಾಕ್ಷಿಯರ||
ಕಂಡನಿರುದ್ಧ ಕುಸ್ತರಿಸಿ ಪ್ರೀತಿಯಲಿ ಬೀ| ೞ್ಕೊಂಡೈದಿದನು ಬೀದಿಯಲಿ ||
ಗುಣವ ತೋಱಿಸಿ ಮೆಚ್ಚಿದ ರೀತಿಯ ಕಂಡು | ಹಣವ ತೆಕ್ಕೊಂಡು
[ಧಾಳಕರ ||
ಕ್ಷಣದೊಳೆಬ್ಬಟ್ಟು ಮೆಚ್ಚದಿರೆಂದು ಮಗಳಿಗೆ|ಬಣಗುವೃದ್ಧಾಷ್ಯೆ ಹೇೞಿದಳು||
ತಾಯ ಮಾತಿಗೆ ಸೊಗಯಿಸಿ ನುಡಿದಳು ಪಾಪಿ | ಸಾಯದೆ ಬದುಕುವ
[ರುಂಟೆ ||
ಪ್ರಾಯವೇನಿದು ನಿತ್ಯವಲ್ಲ ಹಣವ ಸುಡು | ಪ್ರಿಯನೊಳಹೆನೆಂದಳವಳು ||

---

ಕ. ಪ. ಅ—1. ಮೋಹಿಸಿಹೋದವರ.

†. ಇಲ್ಲಿರುವ ಪೂರ್ವಕಥೆಯೇನು?

ಹೊಸಹರೆಯದಲಿ ದ್ರವ್ಯವ ನೆಱೆಕೊಡಿಸು|ಹೆಸರಾಗುವಸ್ತ್ರಭೂಷಣದಿ||
ವ್ಯಸನಕ್ಕೆ ಪ್ರೌಢನೊಳೆಱಗದಿರೆಂದು ರ|ಕ್ಕಸಿಮುಂಡೆ ಮಗಳ ಹಿಂಡಿದಳು ||
ರಿಂಕಿದ ಕುಚ ತೋಳು ಗಳ ಗಲ್ಲದೆಡೆಯು ನ|ಖಾಂಕಿತ ಪಲ್ಗರ್ಚಿದುವೇ ||
ಸೋಂಕಿದ ಖೂಳನದಾವನೊ ತೋಱೆಂದು|ಝುಂಕಿಸಿದಳು ತಾಯಿ ಮಗಳ ||
ಖೂಳ ಕುಂಟಣಿಮುಂಡೆಯೆನಗೆ ನೀ ಪೇಳ್ದಪೆ | ಹಾಳಾದ ಕುಚಯುಗ[ಳದಲಿ ||
ಬಾಳರಕ್ತವನೀಂಟುವ ಜಿಗುಳೆಯೊಲಿರ್ದ|ತೋಳ ಮೇಗಳ ಸೀಳ್ಗಳೇನೇ||
ತಲೆಯಲಿ ಕರಿದು ಕೂಂದಲುಗಳೌಷಧಿಗಿಲ್ಲ | ಸಲೆ ಕುಚಯುಗಳ ಮಿಂಗಿ[ದುವು||
ಹೊಲೆಗೆಟ್ಟು ಹೊಸಬೇಟಗೆಯ್ವಪಾತಕಿ ಮೊಗ್ಗೆ|ಮೊಲೆವೆಂಗಳಿಗೆ ಪೇಳ್ದಪರೇ
.................................................. ||೭೯||
ಜಗಳವಾಡುವರಲ್ಲಿ ಕೆಲಗು ಮಾತಯುರಿಕ್ಕಿ|ದುಗುಳ ದಾಂಟಿದರಂದು [ಕೆಲರು ||
ಹೊಗಳಲಚ್ಚರಿಗೆಯ್ವ ಚಕಿತನಾರಿಯುರನು| ಮುಗುಳಂಬನಣುಗನೀಕ್ಷಿಸಿದ||
ಗಾನವೇತ್ತರು ಕೆಲಬರು ಕಾಮಶಾಸ್ತ್ರವಿ| ಧಾನಗಳಲ್ಲಿ ಕೆಲಬರು ||
ನಾನಾದ್ಯೂತವಿದ್ಯದಿ ಕೆಲರಿರೆ ಮದ್ಯ| ಪಾನಗೋಷ್ಠಿಯನೀಕ್ಷಿಸಿದ ||೮೧||
ಮನೆಯ ಸಾರಿಸಿ ರಂಗವಲ್ಲಿಯನಿಕ್ಕಿ ಭೋಂಕನೆ ಭಕ್ಷ್ಯಭೋಜ್ಯವ [ಸವಿದು ||
ನನೆಯಕ್ಕಿ ಕಡಲೆ ಪಣ್ಯಾರದಿ ನಿಖಿಲಾ| ರ್ಚನೆಯ ವಸ್ತುಗಳ ಸಾರ್ಚಿದರು||
ತಂಡುಲರಾಶಿಯೊಳ್ ಕೊಡನಿಟ್ಟು ಬೇವಿನ|ದಂಡೆಯ ಕೊರಲ್ಗಿಟ್ಟು ಗಂಧ||
ಭಂಡಾರವನಿಟ್ಟು ಧೂಪದೀಪಾರತಿ| ಕೆಂಡವ ಸುಳಿಸಿದರೊಲಿದು ||೮೨||
ರುಚಿವೆತ್ತು ಪರಮಶಕ್ತಿಯ ಪಾದಪೂಜೆಯ| ರಚಿಸಿದರಾಗಮೋಕ್ತದಲಿ ||
ವಚಿಸಿ ತನ್ಮಂತ್ರಕರ್ಮಾದಿ ಹೇಮನವರತ್ನ| ಖಚಿತಪಾತ್ರೆಯೊಳೀಂಟಿದರು ||
ರಂಭೆ ಕೋ ರತಿಯುಸ್ವರೂಪೆ ಕೋ ಹೊಸ ಹೊನ್ನ| ಬೊಂಬೆ ಕೋ [ನೆಱೆಮೆಱೆ[1] ಮೊಗದ ||
ತುಂಬಿಗುರುಳ ತುಱುಗೆವೆಗಣ್ಣ ಕೇಳ್ದಿ ಕೊ|ಳ್ಳೆಂಬ ಮಾತಿನಲೀಂಟಿದರು ||

ನಲ್ಲ ಕೋ ನಾಗರೀಕನೆ ಕೊಳ್ಳೊ ರಸದಾಳ|ವಿಲ್ಲನರೂಪಕೊಳ್ಳೆಲವ್ಪೋ||
ಬಲ್ಲದೊಡೆನ್ನ ಕೊಂದಪೆಯೆನುತೀಂಟಿಸಿ|ಪಲ್ಲವಾಧರೆಯರೀಂಟಿದರು ||೮೬||
ಸಂಡಿಗೆ ಸಂಭಾರಗಡಲೆ ಪ್ರಾಸಕಕುಕ್ಕು| ಟೊಂಡವನವಲಕ್ಕಿಗಳನು ||
ದುಂಡರಳ್ಗಡಲೆ ಭಕ್ಷ್ಯಗಳ ಬಡ್ಡಿಸಿಕೊಳು| ತುಂಡರು ನೆಱೆ ಸೊಕ್ಕುವನಕ||
ಅಪ್ಪಕೊಳ್ಳೆಲವ್ಪೊ ಅಗ್ರಜ ಕೊಳ್ಳೊ ಹಿಂಡಿಯು| ಸೊಪ್ಪ ಕೋ ಸುಲಿವ [ಣ್ಗಳವೆ ಕೋ ||
ಜಿಪ್ಪ ಕೋ ಕುಡಿಯೆಂದು ಕುಡಿಸಿ ತಾ ಕುಡಿದು ಕೈ| ಚಪ್ಪಳೆಗೊಲೆದಾಡು [ತಿಹರು ||೮೮||
ಕೋಪದೆ ಗಜಱುವರೊಡನೆ ಕ್ರೀಡಿಪರು ಪ್ರಲಾಪವ ಮಾಳ್ಪರು ರತಿಗೆ||
ದೀಪನಗವಳವಿದೆನುತ ಚೆಂದುಟಿಯು ಪ್ರಾ|ಣೋಪನ ಬಾಯೊಳಕ್ಕುವರು||
ಏಱೆನ್ನ ವಕ್ಷಮಾನಸದಿ ಕ್ರೀಡಿಸುವ ಮ|ರಾಳಗಮನೆ ನೀನೇಱೆನುತ||
ತೋಳೆರಡಱೊಳಪ್ಪಿ ತೊರೆದು ತೊಟ್ಟಿಡುವ ಪ್ರವಾಳಾಧರವ ಚುಂಬಿಸಿದ||
ಕಾನನದೊಳಗಿರ್ದ ಬೆಟ್ಟದ ಗಿಡುಗಾಡು | ತಾನೆನ್ನ ಮಱೆದೊಱಗಿಸಿತು||
ಪೀನಕುಚಾನ್ವಿತೆ ನಿನ್ನಧರಾಮೃತ| ಪಾನ ಸೊಕ್ಕಿಸದೆ ಮಾಣ್ದಪುದೇ ||೯೦||
ಮೆಚ್ಚಿದಳನಿಯುನಾಡಿದ ಮುದ್ದುಮಾತಿಗೆ|ಮುಚ್ಚಿದು ದೃಗುಯುಗಳವನು ||
ಬಿಚ್ಚಿನಿಟ್ಟಿಸಿ ಪಾದಕೆಱಗಿಯುಂಗುಟವನು| ಕಚ್ಚಿದಳ್ ತರಹರಿಸುತಲಿ ||೯೧||
ಮೊಱೆಗೆಟ್ಟು ಮಾತನಾಡುವರು ಪಾಡುವರು ಕೈ| ಪೞೆತಾಳಗತಿಗೆ [ಜಗ್ಗುವರು ||
ಪೆಱೆನೊಸಲೊಳು ನೊಸಲಿಟ್ಟು ಮುಂಡಾಡಿ ಕಣ್ದೆಱೆಯದೆ ಮಱೆದೊಱ [ಗಿಹರು ||೯೨||
ಮಲಯಜಗಂಪ ಮೆಯ್ಯೊಳಗೆ ಪರ್ಬಿಸುವ ಕೋ| ಮಲೆಯರು ತಮ್ಮ [ಜವ್ವನವ ||
ಬೆಲೆಗಟ್ಟುವರೆ ತಂದಿರಿಸಿದಂದದಿ ಬಟ್ಟ| ಮೊಲೆ ಮುಡಿದೆಱೆದು ಬಿದ್ದಿಹರು ||
ದರ್ಪಕ ಮಡಗಿರ್ದ ದ್ರವ್ಯಪೂರಿತ ಹೇಮ| ಕೊಪ್ಪರಿಗೆಯು ಕುಡಿರೆನಲು||
ಬಪ್ಪವಡೆದ ವೃತ್ತಕುಚ ತೋಱಿದುವು ತೋಱ ದಿಪ್ಪುವು ಮಿಕ್ಕವಸ್ತುಗಳ||
ದಾಷ್ಟಿಕತನಗೆಟ್ಟು ದರಹಾಸಮುಖಿ ಪರಿ| ವೇಷ್ಟಿಸಿದಮಳಸೌಂದರದಿ ||
ಚೇಷ್ಟಿಪ ವೇಶ್ಯಾಭುಜಂಗರ ಮಧುಪಾನ ಗೋಷ್ಠಿಯ ಸೊಬಗನೀಕ್ಷಿಸಿದ||

ಅಂಗಡಿಯೆಡಬಲದಲಿ ನಾನಾವಿಷ|ಯಂಗಳ ನೋಡುತ್ತೈತಂದು ||
ಸಂಗಡಿಗರ ಬೀೞ್ಕೊಟ್ಟು ಕುವರನಂತ | ರಂಗದೆ ಹೊಕ್ಕನಾಲಯವ||೯೮||
ಬಾಗಿಲ ಬೀಗಮುದ್ರೆಯುವಮಾಡಿಸಿಕೊಂಡು| ಪೋಗಿತೆತ್ತಿಗರ[1]ಬೀೞ್ಕೊಂಡು||
ರಾಗಿಸಿ ಮಣಿಸಜ್ಜೆವನೆಯೊಳುಭ್ರಾಮಕ|ವಾಗಿ ಮಂಚದಲಿ ಮಂಡಿಸಿದ ||
ಮಿಂಡಿಯರ್ ಪೊಂಬಡಿಗವ ಸಾರ್ಚೆ ಬಿಸನೀರ | ಗಿಂಡಿಯೊಳ್ ತಂದು [ಕಾಲ್ದೊಳೆಯೆ ||
ಪಂಡಿತವಕ್ಕಿಯು[2] ಮಾತನಾಡಿಸುತವೆ | ಚಂಡವಿಕ್ರಮನೊಱಗಿದನು ||೯೯||
ನಾರಿಯರ್ ನಿಖಿಲೋಪಚಾರವ ಮಾಡಿ ಕೈ|ವಾರಿಸಿ ತೊಡೆದಟ್ಟಲೊಡನೆ||
ಪಾರಿಯ[3]ವಾದ್ಯಘೋಷಣೆಸಲ್ಕೆ ದಿವ್ಯವಿ|ಭೇರಿಯಹೊಡೆದರೂರೊಳಗೆ ||೧೦೦||
ಕ್ಷೀರಾರ್ಣವದೊಳು ನಿಖಿಳನೀರ್ಮಸುಜರು ಪಾರವ[4]ಬೆದಕುವಂದದಲಿ||
ಪೂರಾಯ ಬೆಳ್ದಿಂಗಳೊಳು ಬೇಡರೊಗ್ಗಾಗಿ| ದ್ವಾರಾವತಿಯನು ಸುತ್ತಿದರು||
ಅಲ್ಲಿಯದಲ್ಲಡಗಿತು ಮಂದಿ ಮೞ್ಗೆಯೊ| ಳಲ್ಲಲ್ಲಿ ಮುಂದೊತ್ತರಿಸದೆ ||
ಮಲ್ಲಿಗೆಯರಳ್ಗಡಿ ಪಾಲ್ದಳದಂದದಿ | ಚೆಲ್ಲಿತು ಬೆಳುದಿಂಗಳಳೆಗೆ ||೧೦೨||
ಹೊಳೆವ ಕಠಾರಿ ಕೈಗತ್ತಿ ತೋಮರ ಬಿಲ್ಲು | ಬಲುದಡಿ ಪಿಡಿಚಕ್ರದಲಿ ||
ಕಳಬಂಟ ಕಂಠವಿಚ್ಛೇದ ವಿನೋದದ | ತಳವಱರೂರ ಕಾದಿಹರು ||೧೦೩||
ಮೆಟ್ಟಿದ ಕೆರ್ಪುಗಳುಡೆಯ ಬದ್ದುಗೆ[5]ದಾರ| ದಟ್ಟಿಯ ಮೇಲೆ ವಂಕುಡಿಯ[6] ||
ಕಟ್ಟಿದ ಹೊದೆಯೋಱ್ಸಿದ ಬಿಲ್ಗೋಲಿನ| ಗಟ್ಟಿವಾಳರು[7]ತಿರುಗಿದರು||೧೦೪||
ಗುತ್ತಿಗೆವಿಡಿದ ವೇಶ್ಯಾಕಾಂತವ್ಯಭಿಚಾರ|ಕರ್ತರ ಕರ್ಣಯುಗ್ಮವನು ||
ಕಿತ್ತು ಕಠಾರಿಯೊಳ್ ತಿವಿದಂತೆ ಸುಸ್ವರ| ಪೆತ್ತು ಕೂಗಿದುವು ಕೋೞ್ಗಳು||
ಆವಾಗ ತನ್ನೆದೆಯಡಗನೆ ಕೊಯ್ತುಂಬ | ದೇವರ್ಕಳಟ್ಟುಳಯಿಂದೆ ||
ಸಾವುದೆ ಸುಖವೆಂದು ಪಶ್ಚಿಮಾಂಬುಧಿಯೊಳು | ಜೀವನ ತೊಱ್ದ ಚಂದ್ರ [ಮನು ||೧೦||
ಪೋಗಲಾಣ್ಮನ ಕೂಡೆ ನಕ್ಷತ್ರನಿಶಿವೆಣ್ಣು| ಸಾಗಮನವನೆ ಮಾಡಿದುವು ||
ಪೋಗಲಾಱದೆ ನೆಯ್ದಿಲೆ ಮುಂದೆ ಮುಚ್ಚಿತು|ಮೂಗಾಯ್ತು ಜೊನ್ನವಕ್ಕಿಗಳು

---

ಶ. ಪ. ಅ—1. ಸ್ನೇಹಿತರ. 2. ಗಿಳಿ. 3. ಗಸ್ತು ತಿರುಗುವಿಕೆ.
4. ತೀರವನ್ನು. 5. ನಡುಕಟ್ಟು. 6. ಬಾಗಿದ ಕತ್ತಿ.
7. ದೃಢಾಂಗರು.

ಪರಿಣಮಿಸಿತು ಪಂಕಜದೊಳು ಪೊಕ್ಕ ಷಟ್ಚರಣ ರಥಾಂಗಪಕ್ಷಿಗಳು ॥
ತರುಣಾರ್ಕಗರುಡಿಯು ಕೆಮ್ಮಣ್ಣಿನಿಂದಲೆ ಯರುಣೋದಯವು ತೋರಿಸಿತು
ಮಡಿವಸ ವನುಟ್ಟು ಪೂರ್ವದಿಗ್ವನಿತೆಯು ಮುಡಿಯೊಳು ಹೊತ್ತ ಹೊಂ
[ಗಳಸ ॥
ನಿಡಿನಿಂದ ರಥದ ಮೇಲಡರ್ಜಿದ ರನ್ನಗನ್ನಡಿಯಂತೆ ಸೂರ್ಯ ಮೂಡಿದನು ॥
ವರಮೋಹನತರಂಗಿಣಿಯೆಂಬ ಕಾವ್ಯವ । ಬರೆದೋದಿ ಕೇಳದ ಜನರ ॥
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು ಪೊರೆವ ಲಕ್ಷ್ಮೀಕಾಂತ ಬಿಡದೆ ॥

— ಅಂತು ಅಧ್ಯಾಯ ೧೮ ಕ್ಕಂ ಪದ ೧೩೧೪ ಕ್ಕಂ ಮಂಗಳಂ —

## ಹತ್ತೊಂಬತ್ತನೆಯ ಅಧ್ಯಾಯ

**ಬೇಟೆಯವರ್ಣನೆ:—**

ನಾರಾಯಣನಾಮಾಮೃತಜಂಬೂಫಲರಾಜ ಕೀರ[1] ನಿನ್ನಯ ಸವಿಮಾತು ॥
ಆರಾದೊಡು ಕಿವಿಗೊಟ್ಟು ಕೇಳ್ದೊಡೆ ಸಂಸಾರಭ್ರಾಂತಿಯ ಬಿಡಿಸುವುದು
ಕೆಂಚೆ ಕೇಳಧಿಕ ಕೇವಲಜ್ಞಾನ ರಹಿತಪ್ರಪಂಚೆ ಮತ್ಕೃತಿ ರಸಭರಿತ ॥
ಬೆಂಚೆ[2]ಯೆಂದೆನಬೇಡ ಶೃಂಗಾರರಸಪೂರ್ಣ ಪಂಚೆನಡೆಯಳ ವಿಶ್ರಮಿಸೆ ೨
ವೇದಘೋಷಣೆ ವಿಪ್ರನಿಲಯದೆ ಸಂಗೀತ ನಾದ ಗಾಣರು[3]ಗಳಾಲಯದೆ॥
ಅದಂದನೇಕದೇವಸ್ಥಾನದೆ ವಾದ್ಯ ನಾದ ಪೂಜೆಗಳ ಮಾಡಿದರು ೩॥
ಉದಯಸತ್ಕರ್ಮದೇವಾರ್ಚನೆಗೆಯ್ದ ಸದ್ಧೃದಯ ಬ್ರಾಹ್ಮಣನಿಯೋ
[ಗಿಗಳು ॥
ಪದಶ್ರೇಷ್ಠರಾಗಿ ಬಂದರ ಮನೆವಾಗಿಲ ಕದಬೀಯುಗವ ತೆಗೆಸಿದರು ೪॥
ಬಗ್ಗವಡೆದ ಕೃಷ್ಣ ಬಲಭದ್ರರಾಮ ಕಂದರ್ಪಕಾದ್ಯಖಿಲಯಾದವರು ॥
ತಪ್ಪದೆ ನಾವ ತೀರ್ಥವ ಮಾಡಿಕೊಂಡು ಕಂದರ್ಪನ ಸುತ ಬಂದಹೊರಟು॥
ಕೊರಗಟ್ಟಿದ ಜೆಸ್ವಗ ಸಾಧ್ಯ ಗ್ರಾಮಸಿಂಹಗಳ[4]ಕ ಧಂಪಾಶಪಿಡಿದು॥

---

ಕ ಪ ಅ—1 ನಾರಾಯಣನ ನಾಮವೆಂಬ ಅಮೃತಪ್ರಾಯವಾದ ನೇರಲೆಯ ಹಣ್ಣುಗಳನ್ನು ಆಸ್ವಾದಿಸುತ್ತಿರುವ ಅರಗಿಳಿಯೆ 2. ಕೊಳ.
3. ಗಾನ ಮಾಡುವವರು. 4. ನಾಯಿಗಳ.

ನಿಗಳವ ತಾಳ್ದ ಕಾಲ್ವೆಂಟೆಕಾಱರು ಕೂಡಿ ಮೃಗಯಾತ್ರೆಗೆ ತೆರಳಿದರು ||
ದ್ವಾರಾವತಿಯಲ್ಲಿ ಹೆಸರಾಂತ ರಾಜಕುಮಾರಸಂದೋಹ ಸಂದಣಿಸಿ ||
ವಾರುವಧರ್ಮದ ಹಯಮೇಱಿ ತೆರಳೆ ಕಾಂತಾರ ತೀವಿತು ವಾದ್ಯರವದಿ ||೭||
ಎಡಬಲದಲಿ ಹೊಂಗಟ್ಟಿನ ಛಿಲ್ಲರ ಗಡಣ ಚಾಮರಛತ್ರವೆರಸಿ ||
ಕಡೆಯ ಪೇಡೆಯ[1] ಸರಪಳಿ ಗಂಟೆಯುಲುಹಿಂದೆ ನಡೆವರು ಮುಂದೆ ಬೊಬ್ಬಿಡುತೆ ||೮||

ಮಾಣಿಕ್ಯರಚಿತ ಕೆಂಬಟ್ಟೆ ಪೊಂಬಣ್ಣಿಸಿನ ನೇಣ ಚತುಷ್ಪಾದಿಗಳ ||
ಪಾಣಿ[2]ಯೊಳಾಂತ ಪೆರ್ಗಡಿಗಳ ಲುಬ್ಧಕ ಶ್ರೇಣಿ ಬೊಬ್ಬಿಡುತಲೈದಿದುದು ||
ಮೇಲುತರದ ಪಟ್ಟೆ ಮೆರಸೂಪು ಸಕಲಾತಿ ಜೂಲುಗಳಂದೆ ರಂಜಿಸುವ ||
ಕಾಲುವೇಗದ ಶುಸಿವಿಡಿದ ಕಿರಾತರು ಸಾಲಿಟ್ಟು ನಡೆವರೊಗ್ಗಿನಲಿ ||೯||

ಹಮ್ಮುಗೆ ಮರಕನಮನ ಬಾಲ ಹೊಂಗಂಟೆ ಹೊಮ್ಮೆಳದ ಕರಾರಿಗಳು
ಚಿಮ್ಮುವ ಕನಕದಂಡದ ಚಮರದ ಬೇಡರಿಮ್ಮೆಯ್ಯೊಳೊದವಿತೊಗ್ಗಿನಲಿ
ಉಡುಮೊಲ ನರಿಹುಲ್ಲೆಮರೆ ಸಾರಂಗಗಳ ಕಂಗಿಡಿಸುವ ಜಂಘಾಲಿಗಳು[3] ||
ನಡುವಿನ ರತ್ನಮೇಖಲೆಯಾಂತು ಬಾಲವ ಬಡಿಯುತೆ ನಡೆದವೊಗ್ಗಿನಲಿ
ಆಗಳಿಸುತ ಬಾಯ ಸವರಿಯೊಗ್ಗಿಸುತ ಕಮ್ಮೂಗಿಂದ ನೆಲನ ವಾಸನಿಸಿ ||
ಮೇಘಾಳಿಯನಾರೈವ ಚತುಷ್ಪದ ವೇಗದಿ ನಡೆವುವಾಕ್ಷಣದಿ ||೧೦||

ಧಗೆ ಹೊಡೆದಳ್ಳಿಹೆ ಸುಯ್ಯುತ ಬಿಸಿಲಿಂಗೆ ನಾಲಗೆ ನೀಡು ತಟಗುಟ್ಟಿಸುರಿಯೆ
ಮಿಗೆ ಪಿಡಿದವನ ಮುಂಬರಿ ಬೀಱಲೆಟಿವ ನಾಯಿಗಳಡಸಿದುವೆಡಬಲದೆ ||೧೧||
ಗಗನದೊಳಗೆ ಹುಣ್ಣಿಮೆ ಹೋದ ಮಱುದಿನ ಪಗಲೆಸೆದಿರ್ಪಲಾತನೊಡಲ[4] ||
ಮೃಗವೊಲಗಂಡುಮೊಗ್ಗಿಸ ಪೊಂದಂದದ ಮೊಗವೆತ್ತಿಗಳಹುತ[5]ಯ್ದಿದುವು
ಪಿಡಿವಲೆ ಸೆಱಿನಲೆ ಕಾಲ್ವಲೆ ಕೊರಲ್ವಲೆ ನಿಡಿವಲೆ ಪಾಜೆ[6] ಬೆಳ್ಳಾರ[7] ||
ಬಡಿವಲೆ ಬಲುವಲೆಗಾಱರು ಕೂಗಿ ಬೊಬ್ಬಿಡುತಲೈದಿದರು ಮುಂಗಡೆಯ ||
ಮುಟ್ಟುವ ಫಣಿ ಹುಲಿ ಕರಡಿ ಸಿಂಹದ ಬಾಯ ಕಟ್ಟು ಬೇಂಟೆಯ ಪಡೆ ಮುರುಹೆ ||

---

ಕ. ಪ. ಅ—1. ಪಾಯವಟ್ಟ, ಕಾಲುಗಡಗ. 2. ಹಸ್ತ. 3. ನಿಲ್ಲದೆ ಅತಿವೇಗದಿಂದ ಓಡುವ ನಾಯಿಗಳು. 4 ಹುಣ್ಣಿಮೆಯಾದ ಮರುದಿನ ಹಗಲಲ್ಲಿ ಕಾಣಬರುವ ಚಂದ್ರಬಿಂಬದಂತಿರುವ. 5. ಬಗಳುತ್ತ. 6. ಸಣ್ಣ. 7. ಒಂದು ವಿಧವಾದ ಬಲೆ.

ಬೆಟ್ಟುವ ಕಾಲ್ಗಟ್ಟಿಗೆ ಕಾಲ್ಗ ದಾಳ್ದಡ|ಗಟ್ಟುವ ಬೇಡರ್ಯೆದಿದರು ||೧೭||
ಬೇಸಱದುಲಿವ ಬೇಂಟೆಯ ರವ ಬಹುವಾದ್ಯ|ಘೋಷಣೆಯಿಂದೆ ಕಂಗೆಟ್ಟು||
ಆಸಾರಗಮುಖ್ಯಮೃಗವೋಡಲು ನಾಯ|ಹಾಸವ ಕಳಚಿದರಾಗ ||೧೮||
ಅರೆಯಟ್ಟಿ ಬರ್ಪ ನಾಯಿಗೆ ಮೃಗನಿಚಯ ಕೈ|ಸೆಱೆಗೊಟ್ಟುಪೋಪಂತೆ [ಭಯದಿ ||
ನೆರೆ ಗರ್ಭದ ಕೂಸುಗಳುರ್ಚೆ ಬೀಳ್ವಂತೆ ಮುಱಿದುವು ಮಿೞ್ತು[1]ಗಳೆನಿಸೆ||೧೯
ಹಿಡಿವ ಮಿಗಂಗಳ ಬಿಡದಿರೆ ಬಾಯೊಳು|ಬಡಿಗೋಲ್ಗಳನಿಕ್ಕಿ ಕಿವಿಯ ||
ಬಡೆಮುರುಹಿದೊಡೊದರುವ ಶಬ್ದ ವಿಪಿನದೊ|ಳೆಡೆಗೊಂಡುದೇನಬಣ್ಣಿಸುವೆ
ಕಾಬಾೞೆ[3] ದೀಪದ್ರಾಕ್ಷೆ ಕೇತಕೆ ತೋರ|ಸೀಬಾಂತ ಬಿದಿರ್ವೆತ್ತಗಳ ||
ಲೋಬಾನ ಚಂದನಗಾಡಿನೊಳ್ಪಂದಿ ಮತ್ತೇಭಂಗಳರೆ ಕಂಡರವರು ||೨೧||
ತೊಡೆಗಿಕ್ಕಿ ಬಿಲ್ಗಳನೇಱಿಸಿ ಹೆದೆಯ ಜೇ|ವೊಡೆಯಲ್ಕೆ ಮಿಗವಿಂಡು [ಬೆದಱಿ ||
ಹೊಡೆಮುಗ್ಗಿದೊಡಲನಡ್ಡೈಸಿ ಕೂರ್ಗಣೆಯಿಂದೆ ಕೆಡೆಯೆಂದುಬೀೞಲಿಕ್ಕಿದರು
†ಎಚ್ಚೊಡುಚ್ಚಳಿಸಿದ ಬಾೞೆ ಹೆಬ್ಬಿದಿರ್ಗಳ|ಕೊಚ್ಚಲು ವನಲಕ್ಷ್ಮಿಭಟರ್ಗೆ
ಮೆಚ್ಚಿಕೊಟ್ಟಂತೆ ಮುತ್ತುಗಳುದುರಿತು ಪೇೞೆ ಲಚ್ಚರಿ ಕೇಳಾಯತಾಕ್ಷಿ||೨೩
ಅಂಗಜನಣುಗನ ಬಲಗೊಂಬ ವನಲಕ್ಷ್ಮಿ|ರಂಗವಾಲಿಯನಿಕ್ಕಿದಂತೆ |
ತುಂಗವಿಕ್ರಮರಂಬುಗಡಿಯಿಂದೆ ಸುರಿದ ರತ್ನಂಗಳೊಪ್ಪಿದುವಾಬನದಿ||೨೪
ತಡೆಯದೆ ಮುಗುಳೊರ್ವ ಶಾರ್ದೂಲವನೆಚ್ಚೊ|ಡೊಡೆ ಹಾಯುತುರ್ವಿ [ಚಂದನವ ||
ತಡೆಗಡಿಯಲು ಸುತ್ತಿಕೊಂಡಿರ್ದ ನಾಗರ|ಹೆಡೆಮಣಿ ಸುರಿದುವೇನೆಂಬೆ ||೨೫||
ಚಂದಿರದೊರೆ[2]ಬಾಣದಿಂದೊಬ್ಬ ಕೊಚ್ಚಿದ|ಹಂದಿಯನದಱ ಕೋಡುಡಿದು||
ಮುಂದುರುೞ್ದುವು ವರಾಹ ಬೆಳ್ಳಿಯ ತೋಳ|ಬಂದಿಯನುರ್ಚಿಕೊಂಡಂತೆ |
ಸೊಕ್ಕಾನೆಗಳದಿರ್ವಂದೊಡೆ ತಲೆಗಳ|ಚಕ್ಕನೆ ಕಡಿದ ಲುಬ್ಧಕನು ||
ಹೆಕ್ಕಳದಿಂದೆ ಹೊತ್ತನು ವಿಘ್ನರಾಜನ | ಮಕ್ಕಳ ಬಳಗವೆಂಬಂತೆ ||೨೭||
ಕುಂತಳಮಯವಾಗಿರ್ದ ಪೆರ್ಗರಡಿಯ|ಕೊಂತದಿ ಕಡಿದ ಪೆರ್ದಲೆಯ ||

---

ಕ. ಪ. ಅ—1. ಮೃತ್ಯು.

† ಬಿದಿರಿನಲ್ಲಿ ಮುತ್ತು ಹುಟ್ಟುತ್ತದೆ ಎಂದು ಪ್ರಸಿದ್ಧಿ.

2. ಚಂದ್ರನಹಾಗೆ ಗುಂಡಗಿರುವ.

ಸಂತಸಬಿಡದೆ ಹೊತ್ತಿರ್ದರು ಅಜಾಂಬವಂತನ ಮೊಮ್ಮಕ್ಕಳಂತೆ ||೨೮||
ಭೂಸುರವಡೆದ ಕಾಟಿಕ್ರೋಣನ ತಲೆಗಳ ನೋಸರಿಸದೆ ಹೊತ್ತುಕೊಂಡು
ಬೇಸಱದ್ವೈತರ್ಪ ಬೇಡರಿರ್ದರು ಮಹಿ ಷಾಸುರಬಹುರೂಪಿನಂತೆ ||೨೯||
ಕೆಂಗಿಡಿಗಣ್ಣ ಕೇಸರಿಯ ಮಸ್ತಕವ|ಬಾಣಂಗಳಿಂದಿಱಿದು ತಾಳ್ದವರು ||
ಕಂಗೊಳಿಸಿದರು ಕಾಂತಾರದೆ ಸಿರಿನರ ಸಿಂಗನ ಲೆಂಕರೆಂಬಂತೆ ||೩೦||
ಬೇಡರ ಬೀಲ್ಗೋಲಿಂವಲಿಸುವ ಕೈ ವಾಡವ ಕಂಡು ತನ್ನದಟ ||
ನೋಡಬೇಕೆಂದು ವಾಜಿಯನಿಱಿದನುವಾದ ಕಾಡೆರಳೆಯ ಕಾಂತನಂತೆ ||೩೧||
ಚರಣದೊಳೆಸೆವ ಜೆಮ್ಮ್ರಯ ಕೆಂಪುಬಿಗಿದುಟ್ಟ ಮರಕತವಟ್ಟೆವಾಂದಳರು
ಸಿರದಲಿ ಮಿಱಿಯ ಸಿಂಜಿನಿಗೆಯ್ದ ಬಲುಬಿಲ್ಲ ಕರದೊಳಗಾಂತು ಜೇವೊಡೆದ||
ಬಿಲ್ಲ ಝುಂಕಾರವ ಕೇಳಿ ಜೇವಾದಿಗಳೆಲ್ಲವು ನಿಲ್ಲದೋಡಿದುವು ||
ಫುಲ್ಲಶರಾತ್ಮಸಂಭವನ[1] ಕಣ್ಗೆಸೆದುದು ಹೊಲ್ಲಹ ಮೃಗವೆನ್ನ ಹೊನ್ನೆ||೩೨||
ಹೇರಾನೆಯ ತಲೆಯಡಗ ಭಕ್ಷಿಸುವ ಕಂಠೀರವನೊಡಲ ನೆಗೊತ್ತಿ ||
ಘೋರಾಕೃತಿವೆತ್ತು ಹಿರಿತಿಂಬ ಶರಭ ಹೂಂಕಾರದಿಂದಿದಿರ್ದಂದುದಾಗ||೩೪
ಹೊಳೆವ ಕೂರ್ಗಣೆಯಿಂದ ಹೊಡೆದೆಕ್ಕನ ಪೆರ್ಗಳದೊಳು ಸುರಿವ
[ರೋಹಿತದ[2] |
ನೆಱಲೊಳು ಕಣ್ಗೆ ಕಾಣಿಸಬಂತು ಗಗನಸ್ಥಳದಲಿ ಹೊಳೆವಂತೆ ವಿಪಿನ||೩೫||
ಸೊಂಡಿಲೊಳ್ ಕೊನೆವೆತ್ತ ಮದಹಸ್ತಿಗಳ ಕಚ್ಚಿ ಕೊಂಡಿರ್ದ ಕೇಸರಿಗಳನು||
ತುಂಡದೊಳೆರಡು ಕಾಲ್ಗಳೊಳೆರಡಾಂತ ಭೇರುಂಡನ ಬೀಱಲಿಕ್ಕಿದನು ||೩೬
ಬಿದ್ದುದು ವೃಕ್ಷವೃಕ್ಷದಮೇಲೆ ಮದಹಸ್ತಿ|ಬಿದ್ದುದು ಕೇಸರಿಯೊಡನೆ ||
ಬಿದ್ದುದು ವಿಹಗೇಶ ಬೀಱುವ ನೆಲದೆ ನಿಂದಿರ್ದ ಕಿರಾತರೋಡಿದರು ||೩೭||
ಭಟ್ಟರ[3] ಗುರುಗಳೆಂದೆನಿಸಿ ಕುಮಾರನ ಬೊಟ್ಟೆತ್ತಿ[4] ಪೊಗಳ್ದ ಲುಬ್ಧಕರು||
ಕೊಟ್ಟರೊಂದೊಂದು ಕೂರ್ಗಣೆಗಳು ಬಿದ್ದಪೆ ರ್ಬಟ್ಟೆಕೆಮಿಗಿಲಾದುದೆನಿಸಿ||
ಅರಿದೆನೆ ತೋಱಿದ ಕೈಚಳಕವನಿನ್ನು ಕುಱುಹಿನ ಬಿಲ್ಗಾಱನೆನಿಸಿ ||
ಬಿರುದಿನ ದಿವ್ಯವಾಜಿಯನೇಱಿ ಜಯವಾಂತ ಪರಿಯನು ತೋರ್ದನಾಲ್ದೆಸೆಗೆ||
ದೂರತ್ತಲೋಡಿದ ಚಮರೀಖಡ್ಗಸ ದ್ವಾರಾಹನಿಂದೆ ಕೈಮುಗುಚೆ ||

---

ಕ. ಪ. ಅ—1. ಮನ್ಮಥನ ಮಗನ.　2. ರಕ್ತದ.　3 ಹೊಗಳುವವರ.
4. ಬೆರಳೆತ್ತಿ ತೋರಿಸಿ.

ತೋರಭಲ್ಲೆಯದಿಂದೆ ಹೊಡೆವ ಹೊಮ್ಮೃಗವ ಕಾಂತಾರದಿ ಜರಿಯು
[ಕುಟ್ಟಿದನು ॥೪೦॥
ಕೋಣನೊಂದುರ್ದುದು ಜವನಿಂದೆ ಸಲೆ ಜಗತ್ರಾಣ ಚಂದಿರನ
[ಧೂರ್ಜಟಿಯು ॥
ಏಣಗಳ್ ಮೂಱುರ್ದುವು ಮಿಕ್ಕ ಮೃಗಗಳ ಗೋಣಖಂಡಿಸಿದ ಖಂಡೆಯದಿ ॥
ಮಕರಕುಂಡಲ[1] ಪರಮೇಷ್ಠಿ[2] ನಾರದ[3] ಷಣ್ಮುಖವಾಹನಂಗಳನುರ್ದು ॥
ಪ್ರಕಟಿತವಾಗಿರ್ದ ಖಗನಿಚಯವ ಕುಮಾರಕ ಬೇಂಟೆಯೊಳಗೆ ನೆಗ್ಗಿಸಿದ
ಉದುರಿತು ಮೃಗಪಕ್ಷಿ ಕುವರನ ಬೇಂಟೆಗಿನ್ನಿದಿರಿಲ್ಲ ವಿಪಿನಾಂತದೆ ॥
ಬೆದರಿಸಿಕೊಳಬೇಕೆಂದು ಭಾಸ್ಕರ ಬಿಸಿಲ್ಗದುರೆಯ ಪೌಜನಟ್ಟಿದನು ॥೪೧॥
ದಪ್ಪಗನಣುಗನ[4] ಒಲದ ಮಸ್ತಕದ ಮೇಲಪ್ಪಳಿಸಿದ ಬಿಸಿಲ್ಗಿಡಿಗೆ ॥
ಕುಪ್ಪಟೆ[5]ಯಾದುದುರುವೀರುಹ ಕಳತಿರ್ದ ತಪ್ಪಲ ತಱಗೆಲೆಯಾಯ್ತು ॥೪೨॥
ಕಪ್ಪೋಣಿಯೊಳೇಬಲ್ಬಿಸಿಲಿಂದೆ ಕಡುಗಾದ ಬಾಣಲಿಯೆಣ್ಣೆಯೊಳಬುದಿ[6] ॥
ಹೊಣಿಸಿ ಕುದಿಗೊಂಡು ಮುಱಳ್ದುದು ವನಚರ ಶ್ರೇಣಿ ಬೆಂಡೆವ್ದತೇಲಿದುವು
ಗಾಳ ಘುಮ್ಮೆಂಬುವೊತ್ತುದು ಭೂಮಿ ಬಿಕ್ಕನೆ ಸಿರ್ತುಕೂರ್ಮನಬೆನ್ನು ॥
ಹೊಳಗೆವಡದುದು ಬಲುಬಿಸಿಲೊಂದು ಚಡಾಳಕೆ ಜಗವ ಂಗಿಸಿತು ॥
ಛಿಟಿಛಿಟಿಲೆಂಬ ಮಧ್ಯಾಹ್ನದ ಬಿಸಿಲಿಂಗೆ ಸಿಟಿಲಾಕ್ಷ ಭೀತಸ್ಥನಾಗಿ ॥
ಕುಟಿಲವರ್ಜಿತ ನಿಡುಜಡೆಯೊಳಗಂಕಾಶ ತಟಿನಿಯ[7] ನೆಲೆಗೊಳಿಸಿದನು ॥
ಆರ ಕೈಕೊಂಬುದೀಬಿಸಿಲು ವೈಕುಂಠದ ನಾರಾಯಣ ಸಿಲಲಂಜಿ ॥
ನೀರೊಳು ಮುಳುಕಿ ಮೀನಾದ ಮಿಕ್ಕಿನ ದೇಹ ಧಾರಕರಿಗೆ ಶಕ್ಯವಹುದೆ ॥
ಹರನುರಿಗಣ್ಣ ಚಡಾಳವಿದಾರಣ ನರಸಿಂಹನಕ್ಷಿಯಿಂಗಳದ[8] ॥
ಉರವಣೆಗಿಮ್ಮಡಿ ಬಿಸಿಲಿಂದೆ ಭಟರು ಪೆರ್ಮರಗಳನೆಳಲ ಸಾರಿದರು ॥೪೩॥
ಬಟಲಿದ ರತಿರಾಜನಾತ್ಮಸಂಭವ ಪಾಯು ದಟಿದೊಳು ತೇಜಂಧ್ರರಿಗೆ ॥
ಹೊಳೆವ ಸುವರ್ಣಕಾರಂಡದ[9] ಕಡುಶೈತ್ಯ ದಳದ ಕಪ್ಪುರವ ವೆಚ್ಚಿಸಿದ ॥
ಬಿಸಿಲ ಚಡಾಳದ ಮೆಯ್ ಬೆಮರ್ದೊಡಲು ಧೂಪಿಸಿದ ಮಹಾತ್ಮರ ಕಂಡು ॥
ಮಸಿವಣ್ಣದ ಬೇಡರಡವಿಯೊಳ್ ಪೊಕ್ಕು ನಿಟ್ಟಿಸಿದರು ನೀರಜವನವ[10] ॥೪೪॥

ಕ. ಪ. ಅ—1. ಗರುಡ. 2. ಹಂಸ. 3. ನವಿಲು. 4 ಅನಿರುದ್ಧನ.
5. ಅಗ್ಗಿಷ್ಟಿಗೆ. 6. ಸಮುದ್ರ. 7. ಗಂಗೆಯನ್ನ.
8. ಕಣಿನ ಬೆಂಕಿಯ. 9. ಬರಣಿ. 10. ಕಮಲವನ, ಕೊಳ.

ಗಿರಿಶಿಖರದೊಳಿರ್ದು ನಿರ್ಝರಜಲವುಕ್ಕಿ ಪರಿದು ಸಾಲ್ಮಡುಗಟ್ಟಿಕೊಂಡು |
ಸಿರಿವೆತ್ತೊಬ್ಬನ ಕಣ್ಗೆ ರಂಜಿಸಲು ಕಂಡರಿದರು ಹಗೆಯ ತೀರ್ಕಾಣಿಸಿ ||
ತೇಜಂಧ್ಯರುಗಳು ಮುಂಪೋಗಿ ವಿಮಲಸರೋಜಪತ್ರಿಕೆಯ ಪೊಟ್ಟಣದಿ |
ರಾಜಾಮೃತ[1]ವೆನೆ ತಣ್ಣೀರ ತಂದಿತ್ತು ರಾಜಿತಕಂತುನಂದನಗೆ ||೫೩||

ತೊಡೆ ಯೆರ್ದೆ ಕೊರಲುದ್ದ ಸಲಿಲವಾವೆಡೆಯೆಂದು. ಬಿಡಯವಿಲ್ಲದೆ [ನೀರ್ಗುಡಿದು |
ಪೊಡವಿಗೆ ಪೊಱಮುಟ್ಟು ಕಳವಣ್ಗಳ ತಿನ ತೊಡಗದರೇನ ಹೇೞುವೆನು ||೫೪||
ಮಾಡಲ ಪಲಸು ದಾಡಿಮದ್ರಾಕ್ಷೆ ಖರ್ಜೂರ ಮಾದಿಹ ಬಾೞೆ ಕಾಬಾೞೆ ||
ಮೋದ ಸಕ್ಕರೆಮಾವು ನೇಱಿಲವಣ್ಗಳ ಯಾದವರಿತ್ತರಾಳ್ದನಿಗೆ ||೫೫||

ಬೆಳಲು ಬಿಲ್ವತ್ರಿಫಲಾಟಕಿ ಬಿಕ್ಕೆ ನೇಮಿ ಹೆಗ್ಗಳಪಿ ಕಡಸು ಕಾರೆ ಬೋರೆ |
ಗುಳವತ್ತಿ ತುಂಬುರು ನಗರೆ ಮುಂತಾದ ಪಣ್ಗಳ ತಂದರಾಳ್ದನ ಬೞಿಗೆ |
ಪಾದರಿ ಕಾಡಮಲ್ಲಿಗೆ ಮೊಲ್ಲೆ ಹೊಂಬಣ್ಣ ಕೇದಗೆಯೆಲ್ಲ ಹೂವುಗಳ |
ಸ್ವಾದ ಸೋಱುವ ಜೇನೊಡನೆ ಸದ್ಭಟರು ವಿನೋದದೆ ತಂದರಾಳ್ದನಿಗೆ ||

ತಡೆಯದೆ ಗಜಮುಸ್ತಕವೆಚ್ಚು ಹಾವಿನ ಹೆಡೆಯನಂತರಿಸಿ ಸೀೞ್ದಿಕ್ಕಿ ||
ಬಿಡಯವಿಲ್ಲದೆ ತಂದದ್ವಿತಯರತ್ನಂಗಳ | ತಡೆಯದೆಲ್ಲವ ಕೊಟ್ಟರವಗೆ ||೫೮||
ಅನಿರುದ್ಧನಖಿಳಸೇನೆಗೆ ಪರಿಮಳದಲರ್ | ತನಿವಣ್ಣನಿತ್ತು ತಾ ಸವಿದು |
ಪನಿನೀರನೀಂಟುತೆ ದಿವ್ಯತಾಂಬೂಲವ ನನಿಬರಿಗಿತ್ತು ಸಂತಸದೆ ||೫೯||

ಹಸಿವು ನೀರಡಕೆ ಸಂತಾಪವ ನೆರೆ ವಾರಿಸಿಕೊಂಡು ಬಲಗೂಡಿ ತೆರಳ್ದು |
ರಸಿಕರಾಜೇಂದ್ರ ಮುಂಬನದಲ್ಲಿ ಕಂಡು ರಂಜಿಸುವಹೆಂಚಿತಿಯ[2]ರಾಟಗಳ ||
ಚಿತ್ತಜವಿಧಿ[3] ನಿರ್ಮಿಸಿ ರಂಗುನೀಲದ ಪುತ್ತಳಿಗಳಿಗೆ ಚೇತನವ ||
ಇತ್ತರೀಬನದೊಳು ಬಂದರೆಂಬಂತೆ ಪೆಣ್ಮುತ್ತವೊಪ್ಪಿರ್ದುದಲ್ಲಲ್ಲಿ ||೬೧||

ತಿಣ್ಣಜವ್ವನದ ಹೆಂಚಿತಿಯರ ಮೆಯ್ಕಾರ್ಬಣ್ಣದ ಚೆಲ್ವ ನೋೞ್ಪರಿಗೆ |
ಹುಣ್ಣಮೆಯಾಳ್ದ ತನ್ನೆಸಕವನವರೆಸಲ್ ಬಿಗ್ಗೆಣ್ಣಳು ಸಾರ್ಚಿದಂತಿಹುದು ||
ಮದನಮಂದಿರದ ಬಾಗಿಲಿಗೆ ತೋರಣವ ಕಟ್ಟಿದವೊಲು ತಳರುಡೆ [ಮೆಱೆಯೆ |

---

ಕ. ಪ. ಅ—1. ಇಂದ್ರನ ಅಮೃತ. 2. ಬೇಡತಿಯರು.
3. ಮನ್ಮಥಬ್ರಹ್ಮನು.

ಹೃದಯಮಂಟಪಶಿಖರದ ಜೋಡಿಗಳಸದಂ|ತೆದೆಯೊಳದರ್ಪುಕುಚಯುಗಳ
ಲೆಕ್ಕಿಪರಾರು ಕಲ್ಲರೆಗಳಮೇಲೆ ಧು| ಮ್ಮಿಕ್ಕಿ ನೃತ್ಯವನಾಡುವಂತೆ ||
ಸೊಕ್ಕಿದ ಗಜದಂತಮುಸಲದಿ ಪೆರ್ಬಿದಿ| ರಕ್ಕಿಯ ಮಿದಿವ ಹೆಣ್ಣುಗಳ ||೧೪||

ಕದಲುವ ಚರಣ ಕಂಪಿಸುವ ನುಣ್ದೊಡೆಗಳ|ಬಿದಿರುವ ಜಘನ ತೆಳ್ವಸಿಱು|
ಅದಿರುವ ಮೊಲೆಗಳಾಡುವ ತೋಳ್ದುರುಬೆಯರ್| ಮಧುರಸುಸ್ವರದೆ ಪಾ [ಡಿದರು ||೧೫||

ಸುವ್ವಿ ಪೂರಿತಕಾಮ ಸುವ್ವಿ ಸದ್ಗುಣಧಾಮ| ಸುವ್ವಿ ಸುರೇಂದ್ರಲಲಾಮ||
ಸುವ್ವಿ ಸರ್ವರ ಭೌಮ ಸುವ್ವಿ ರಾಘವರಾಮ| ಸುವ್ವಿ ಸಾಸಿರಪುಣ್ಯನಾಮ||
ನಿಗಮದುರ್ಲಭ ಸುವ್ವಿ ನಿರ್ಜರಾರ್ಚಿತ ಸುವ್ವಿ|ಯಘಹರ ಭವದೂರ ಸುವ್ವಿ||
ಗಗನಚರಣ ಸುವ್ವಿ ಗರುಡಗಮನ ಸುವ್ವಿ| ಜಗದಧಿಪತಿ ಕೃಷ್ಣ ಸುವ್ವಿ ||೧೬||

ಪರಮಾತ್ಮಕ ಸುವ್ವಿ ಪ್ರದ್ಯುಮ್ನಪಿತ ಸುವ್ವಿ|ವರಚತುರ್ಮುಖತಾತ ಸುವ್ವಿ||
ಹರಬಾಂಧವಸುವ್ವಿ ಹವ್ಯಪೋಷಕಸುವ್ವಿ| ನರನಾರಾಯಣ ಸುವ್ವಿ ||೧೭||

ಮಂದರಧರ ಸುವ್ವಿ ಮಾಮನೋಹರ ಸುವ್ವಿ|ವೃಂದಾವನವಿಭು ಸುವ್ವಿ||
ನಂದನಂದನ ಸುವ್ವಿ ನತಜನಹಿತ ಸುವ್ವಿ|ಯೆಂದವರೊಲಿದು ಪಾಡಿದರು||೧೮||

ಪಾಡುವರ್ ಕೆಲರು ಪೆರ್ಮೆಗಱದೊಳಕ್ಕಿಯುಸಿಕ್ಕಿ|ಮಾಡುವರ್ ಕೆಲರು [ಬೇಂಟೆಗಳ ||
ನೋಡುವರ್ ಕೆಲರು ಬಿಲ್ಗೋಲಾಂತು ನಿಂದುದು | ಬೇಡವೆಣ್ಗಳು ಕಣ್ಗೆ [ರಮಿಸಿ ||೨೦||

ಗಂಡನ ಮೇಲಣಪೇಕ್ಷೆ ತೀಕ್ಷ್ಣ ಮೂಱು|ತುಂಡಾದುದೀಕುಮಾರಕನ||
ಕಂಡ ಮಾತ್ರದಿ ಚೆಂಚಿತಿಯರ ಕುಸುಮಕೋ|ದಂಡನ ಸರಲ್ಗಳಗೆರ್ದೆಯು||
ಓರಂತೆ ಮರುಳಾದುದು ಕಣ್ಣುವೇಟ ಕಾಂ|ತಾರದ ಮಿಗವೆಣ್ಣುಗಳು ||
ತೋರ ನುಣ್ಮೊಲೆಯೆದೆ ದಿಗಿಲಾಂತು ಪತ್ರೋಪ|ಹಾರವ ತಂದಿತ್ತರವಗೆ ||
ಬಿದಿರಕ್ಕಿಯಿನಿಜೇನುತುಪ್ಪ ಕರ್ಜೂರದ್ರಾಕ್ಷೆ|ಬದರಿ[1]ಮುಂತಾದ ಸತ್ಫಲವ|
ಉದುರಿದ ಕಟಿವಣ್ಣ ಪೊಟ್ಟಣಂಗಳ ತಂದು|ಇದಿರಿಕ್ಕಿದರು ಮೇಲ್ಮೇಲೆ||೨೧||

ಕಾಡೆಮ್ಮೆಯ ಕೋಡು ಮರಹದಂತಿಯ ದಾಡೆ|ನಾಡೆ ಶಾರ್ದೂಲಸಿಂಹಗಳ
ಗೂಢ ಪಾದಾಂಗುಳ ನಖ ಭೇರುಂಡನರೂಢ ಪೆರ್ಗಱಿಯಿತ್ತರೊಲಿದು||೨೨||

ಕ. ಪ. ಅ—1. ಎಲಚಿಯ ಹಣು

ಕರಿಯ ಝಲ್ಲರಿಗಳು ಬೆಳ್ಜವ್ವಾದಿ ಕತ್ತುರಿಯೇಣ ಪುಣುಗಿನ ಚಟ್ಟು ||
ಹರಿಣಗೋರೋಜನ ಕೃಷ್ಣಾಜಪುಲಿಚರ್ಮ ನರಿಗೊಂಬುಗಳಸಿತ್ತರೊಳಿದು ||
ತುಱುಬಿಂಗೆ ನವಿಲು ಬಲ್ಮೊಲೆಗಳಗೆಣೆವಕ್ಕಿ ಯುಱುವ ಮಧ್ಯಕೆ ತೋರ್ಪ
[ಸಿಂಹ ||
ಮಿಱುಗುವ ಮೆಲ್ಲಡಿನಡೆಗಳ್ಗೆ ಹಂಸೆಯ ಮಱಿಗಳ ಕೊಟ್ಟಿರುತ್ತವದಿ ೨೬ ||

ಪಾಡುವಿಂಚರಕೆ ಕೋಗಿಲೆ ತೊದಲ್ನುಡಿಯ ಮಾತಾಡುವುದಕೆ ರಾಜಕೀರ ||
ನೋಡುವುದಕೆ ಹುಲ್ಲೆಯ ಹೆಣ್ಣುಮಱಿಗಳ ಜೋಡಿಸಿಕೊಟ್ಟಿರುತ್ತವದಿ ೨೭

ಮಱೆಯದೆ ಮನೆಯೊಳಗಿರ್ದುದೆಲ್ಲವ ಜಗದೆಱೆಯನ ಪೌತ್ರಗೆ ಸಾರ್ಚಿ ||
ನೆಱೆಯದ ಕಡಮೆಗೆ ತಮ್ಮ ಕಣ್ಮನವ ಕೈಸೆಱೆಗೊಟ್ಟರಡವಿವೆಣ್ಣುಗಳು ||

ಆಸಮಯದೊಳೈತಂದರು ತಪವಿ ನ್ಯಾಸಮುದ್ರೆಯ ಮಹೋನ್ನತರು ||
ಪೂಸರನಾತ್ಮಸಂಭವಗೆ ಕಾಣಿಕೆಯಿತ್ತು ಲೇಸಾಗಲೆನೆ ಪರಸಿದರು |೨೯||

ಏಕಮುಖದ ರುದ್ರಾಕ್ಷ ಪನ್ನಗವೇತ್ರ| ಕಾಕಮೃತ್ತಿಕೆ ಬಲಸಂಕು ||
ಬೇಕಾದ ದಿವ್ಯೌಷಧಗಳ ಮುನಿವರ ರಾಕುವರಸಿಗೆ ನೀಡಿದರು ೩೦

ಅನಿರುದ್ಧನ ಸಮ್ಮುಖದಿ ಚಂದನಗಾಢ,ವನಿತೆಯರ್ ನಿಂದಿರಲವರ ||
ತನುರುಚಿ ಸಣ್ಮೊಲೆಗಳ ಮೇಲೆ ನಟ್ಟುದು ಮುನಿಗಳ ಕಡೆಗಣ್ಣನೋಟ

ಅಚ್ಚರಿವಡೆದ ಭ್ರೂಲತೆ ಸಿಂಗಾಡಿ[1]ಗಳೊಚ್ಚೇರೆಗಣ್ಣ[2]ಪೂರದ ||
ಎಚ್ಚಱು ವರಜಿತೇಂದ್ರಿಯರೆರ್ದೆಯನು ತಟ್ಟುರ್ಚಲು ವನವಧೂಟಿಯರು

ಯತಿಗಳು ಜಡೆಮುಡಿದಾಳ್ದರೆ ತಂದರು ಪತಿಶತ್ರು ಶಿವನೆಂದುಱಿದು
ರತಿ ವಿಶ್ವರೂಪವಂತು ಜಯಿಸಿ ಬಂದಂತೆ ಜಂ ಚಿತಿಯರೊಪ್ಪಿದರು ಬಿಲ್ವಿಡಿದು

ಪಟ್ಟಣದೊಳಗಿರ್ದ ವನಿತೆಯರಿಗೆ ಬೆರ್ಚಿ ಬೆಟ್ಟವ ಮಱೆಗೊಂಡೊಡಿಲ್ಲಿ
ಬಟ್ಟಬಲ್ಮೊಲೆಯ ಚೆಂಚಿತಿಯರಟ್ಟುಳಿ ಬೆನ್ನಬಿಟ್ಟುದಿಲ್ಲೆಂದಱಿದರು ||

ಆಮುನಿಗಳ ಬೀೞ್ಕೊಟ್ಟ ನೀಲೋತ್ಪಲ ಶ್ಯಾಮಲಾಂಗಿಯರ ಕಸ್ತೂರಿಸಿ
ಕಾಮನ ವರಕುಮಾರಕ ಬೇಂಟೆಯಾಡಿ ಸುಕ್ಷೇಮದೆ ಬಂದ ಪಟ್ಟಣಕೆ

ಹಿಡಿಮಿಗವಕ್ಕಿಯ ತುಂಡುತುಂಡುಗಳನು ಸಡಿಲದೆ ಸೊಪ್ಪಿನೊಳ್ಪದಿಗಿ
ದಡಿಗಿಕ್ಕಿ ಹೊತ್ತವರನಿತಿಸಿತೆಂಬುದ ಪಡಿಗಾಣ್ಬೊಡೆ[3] ಶಕ್ಯವಲ್ಲ ೩೬||

---

ಕ. ಪ. ಅ—1. ಬಿಲ್ಲು 2. ಒಂದು ಬಗಸೆಯಷ್ಟು ದೊಡ್ಡದಾದ ಕಣ್ಣು.
3. ಸರಿನೋಡಬೇಕಾದರೆ.

ನೆಲ ಬಿರಿವಂತೆ ನಾನಾವಾದ್ಯರಭಸದಿ ಕುಲಗಿರಿ ನಡನಡುಗಿದುವು ||
ಜಲನಿಧಿ ತಳಮಳಿಸಿಪ್ಪವೊಲನಿರುದ್ಧ ಬಲಗೂಡಿ ಬಂದ ಪಟ್ಟಣಕೆ ||೮೨||
ವರಮೋಹನತರಂಗಿಣಿಯೆಂಬ ಕಾವ್ಯವ ಬರೆದೋದಿ ಕೇಳದ ಜನರ ||
ತರಣಿ ಚಂದ್ರಮರುಳ್ಳನಕ ಸತ್ಕಲ್ಪವೆಯಿತ್ತು ಪೊರೆವ ಲಕ್ಷ್ಮೀಕಾಂತ ಬಿಡದೆ ||

— ಅಂತು ಅಧ್ಯಾಯ ಹತ್ತೊಂಬತ್ತಕ್ಕಂ ಪದ ೧೪೦೩ಕ್ಕಂ ಮಂಗಳಂ —

## ಇಪ್ಪತ್ತನೆಯ ಅಧ್ಯಾಯ

**ಬಾಣಾಸುರನ ಶೋಣಿತಪುರದ ವರ್ಣನೆ.—**

ಬಳಿಕ ತನದೊಳ್ ಗಿರ್ದಂದಾಮ್ನಾಯ[1] ವರಚೋರಕನಮರ್ದಿಸಿ ವೇದಗಳನು
ಮುಖಚತುಷ್ಟಯ[2]ಗಿತ್ತ ದೇವನ ಕೃಪೆವೆತ್ತು ಪ್ರಕಟಿಸು ತನಗೆ ಮೋಲ್ಗ
[ತೆಯ ||೧||
ವಿಸುಜನ್ಮದ ತಪಸಿನ ಫಲವಿರ್ದುದೊ ವಾಸುದೇವನ ಪುಣ್ಯಕಥೆಯ ||
ಲೇಸು ಬರ್ಪಂತೆ ನಾನಿನಗುಸಿರುವೆ ಹೆಂಗೂಸುಗಳಧಿದೇವಿ ಕೇಳು ||೨||
ಪರಮೋತ್ಸವದೊಳೂರನು ಪೊಕ್ಕು ಪಿತನೊಡ ನಿರಲನಿರುದ್ಧ ಮೋಣಿತ್ತ ||
ಹರಪಾದಪಂಕೇರುಹಭೃಂಗ ಬಾಣಾಸುರನಿದ್ದ ಶೋಣಿತಪುರದಿ ||೩||
ಸ್ಮರಹರಭಕ್ತನಾಳುವ ದುರ್ಗ ಶೋಣಿತಪುರವೆಂಬುದೇಕಾದ ದೆಱೆಯ||
ಸರಸಿಜದಳಲೋಚನೆ ಕೇಳು ನಿನಗೆ ವಿಸ್ತರಿಸುವೆನದಱವತೆಯನು ||೪||
ಕಾಣಿಸಿಕೊಂಬ ಕಂಡವರ ಕಾಣದ ರಿಪು ಶ್ರೇಣಿಯ ತಱಿವ ರೋಹಿತದಿ[3] ||
ಹೂಣಿಸಿ ಕೆಸಗರ್ಗೊಡಿ ಕೋಟೆಯ ರಚಿಸಲ್ಕೆ ಶೋಣಿತಪುರವೆಂಬುದಾಯ್ತು ||
ಸಂತತ ಪ್ರಥಮಕುಮಾರ್ಗದ ಬೆನ್ನ ಬಳಸಿದ ನಂತ[4]ನಂತಿರ್ದುದಾಕೋಂಟೆ||
ಪಂತದಿಂದವನಿಯ ಹೊತ್ತ ದಿಗ್ಗಜದಂತೆ ನಿಂತ ಕೊತ್ತಲಗಳೊಪ್ಪಿದುವು||೬||
ಸಕಲಲೋಕವ ನಿರ್ಮಿಸಿ ವಿಧಿ ಕುಳಿತಿರ್ದ ವಿಕಸಿತಾಂಬುಜದೆಸಳಂತೆ ||
ಅಕಳಂಕ ಶೋಣಿತಪುರದ ಕೋಟೆಯ ತೆನೆ ನಿಕರವೊಪ್ಪಿತು ನೀಲವೇಣಿ ||
ಬೆಟ್ಟವ ಕಿತ್ತು ತಂದಿರಿಸಿದಂದದಿ ಮುಗಿಲಟ್ಟಣೆ ತೆನೆಗಳಗ್ರದಲಿ ||

---

ಕ ಪ. ಅ—1. ವೇದ. 2. ಬ್ರಹ್ಮ. 3. ರಕ್ತದಿಂದ.
4. ಆದಿಶೇಷ.

ಬಟ್ಟರನ್ನಗಳ ತೆತ್ತಿಸಿದ ಹೊಂಗಲಸಂಗ|ಳಟ್ಟಿರ್ದುವೇನ ಬಣ್ಣಿಸುವೆ ||೮||
ಅಂಕಕ್ಕೆ[1] ಬರ್ಪ ರಾಯರ ಗಂಡನೆಂದೆಂಬ|ಡೆಂಕಣಿ ಮರುಳ್ಗಯ್ಗಳೊಡನೆ||
ಭೋಂಕನೆ ಮಿಡಿವ ಲಾಳಿಯ ಬಿಲ್ಲುಪಟಲ್ಗಳ್ ಸಂಕುಲವಿರ್ದುದಲ್ಲಲ್ಲಿ ||೯||
†ಗುಟ್ಟಿಟಿದುದು ಮುನಿವರನಿಂದೆ ಕ್ಷೇತ್ರವ|ಬಿಟ್ಟುದು ಭಾರ್ಗವ ಶರಕೆ||
ಕಟ್ಟುಗೊಂಡುದು ಮೂಱು ಭಂಗವೆಂದಬುಧಿಯು|ಬಿಟ್ಟೋಡಿತಾಪುರದಗೞು||
ನೆಗೞು[2] ನೀರಾನೆ ಪಾಠೀನ ಕಚ್ಛಪ ಕರ|ಯುಗಳ[3] ಕರ್ಕಾಟಕನಿಚಯ||
ಜಗಳಕ್ಕೆ ಬಪ್ಪ ಶತ್ರುಗಳ ಖಂಡಿಪೆವೆಂ ದಗೞೊಳು ಘುಳುಘುಳಿಸಿದುವು ||
ತಿಕಪುತ್ರ[4] ಪಾದಚತುಷ್ಟಯ ಗೂಢತಾ|ನಕವಡೆದುಭಯವ್ಯಾಘ್ರಗಳು||
ಪ್ರಕಟಿಸಿ ನಿಂದಂತೆ ದ್ವಿತಿಯಕೂತ್ತಳ ಹುಲಿ|ಮುಖವಿರ್ದುದೇನ ಬಣ್ಣಿಸುವೆ||
ಮದಹಸ್ತಿಗಳ ಕೈಯ[5] ನೂಕಿ ಬಂಧಿಸುವ ಪೆ ರ್ಗದವಜ್ರಲಾಳವಿಂಡಿಗೆಯ
ಅದಟಿನ ದ್ವಾರಾಷ್ಟಕವ ವರ್ಣಿಸುವೊಡೆ ಪದಕವಿ[6]ಗಳಗಗೋಚರವು ||೧೩||
ಪದಿನಾಱು ದಿಡ್ಡಿ ಬತ್ತೀಸ ಬಿಲದ್ವಾರ|ವಿಧುಮಿತ್ರದುಪಲದಿಂ[7] ಬಿಗಿದ ||
ರುಧಿರಾಪುರ[8]ದಾಳುವೇರಿಯ ಸೌಭಾಗ್ಯ ದುದಯವನೇನ ಬಣ್ಣಿಸುವೆ ||೧೪||
ಏನ ಹೇೞುವೆ ವೀಧಿವೀಧಿಗಳೊಳು ಶಿವ|ಸ್ಥಾನದ ಕಡೆಯ ಕೌಶಲೆಯ ||
ನಾನಾವಾದ್ಯ ಗೀಳಿಡುತಿರ್ದುದಂಬುಧಿ ಧ್ವಾನಘೋಷಣೆಯೆಂಬ ತೆಱದಿ ||೧೫||
ವಿಲಸಿತಸೋಮಸೂರಿಯ ವೀಧಿ ವೀಧಿಯೊ|ಳಳವಟ್ಟ ನಿಖಿಲಗೋಪುರದಿ||
ತೊಳಗುವ ನವರತ್ನಗಳು ತೆತ್ತಿಸಿದ ಹೊಂ ಗಳಸಂಗಳೆಸೆದುವಗ್ರದಲಿ ||೧೬||
ಬೆಲೆಯಿಲ್ಲದ ಮುತ್ತು ರನ್ನಂಗಳಡಸಿದ|ಮೊಲೆಗಟ್ಟು ಕಾಸೆ ಕಾಲ್ಗೆಸೆವ ||
ಸಲೆ ಶುದ್ಧಗೀತಚಾರಿಗೆ ಬಲು ಬಿರುದಾಂತ|ಕಲೆಯ ನರ್ತಕಿಯರೊಪ್ಪಿದರು||
ಇಂತೆಸೆದಿರ್ದ ವೈಭೋಗಸಮೇತ ಕಾ ಲಾಂತಕಾಲಯ ಕೋಟಿ ಕೋಟಿ||
ಜಂತದುಪ್ಪರಿಗೆಯ ವೈಶ್ವರ್ಯ ಭವನವ|ನಂತವೊಪ್ಪಿದುವಿಕ್ಕೆಲದಿ ||೧೮||
ನುಡಿಗೆ ಗೋಚರಿಸದೆ ನಾನಾವಸ್ತುಗ ಳಡಿಗಿಱಿದೈಶ್ವರ್ಯವಡೆದ ||
ಪಡಿಗಟ್ಟು ಬಾರದ ರತ್ನಂಗಳಡಸಿದಂ|ಗಡಿಗಳೊಪ್ಪಿರ್ದುವಿಕ್ಕೆಲದಿ ||೧೯||

---

ಕ. ಪ. ಅ—1. ಯುದ್ಧಕ್ಕೆ.

† ಇದರಲ್ಲಿ ಸೂಚಿತವಾದ ಪೂರ್ವಕಥೆಗಳನ್ನು ಹೇಳಿ. 2. ಮೊಸಳೆ. 3, 4 = (?) 5. ಸೊಂಡಿಲನ್ನು. 6. ಪದಗಳನ್ನು ಪದ್ಯವಾಗಿ ಜೋಡಿಸುವಷ್ಟು ಮಾತ್ರ ಸಾಮರ್ಥ್ಯವುಳ್ಳ ನಾಡಾಡಿಕವಿಗಳು. 7. ಸೂರ್ಯಕಾಂತಚಂದ್ರಕಾಂತ ಶಿಲೆಗಳಿಂದ. 8. ಶೋಣಿತಪುರ.

ಕುಂದಣನವರತ್ನಖಚಿತ ಚೌಭಾರಿಯ|ವುಂದಣ ನಾಲ್ದೆಸೆಗಳಲಿ ॥
ಸಂದಣಿಸಿದರು ಛಪ್ಪನ್ನದೇಶದ ಜನ ವೃಂದ ಜೂದಿನ ವಿಷಯದಲಿ ॥೨೦॥

ಭಂಗ ಬಾಣನ ಕೂಡೆ ಸೆಣಸಿದರ್ಗಲ್ಲದೆ ಭಂಗ ಬಾಣನ ಪುರಕಹುದೆ ॥
ಭಂಗ ಬಾಚಿಯ ಹಣ್ಣ ತೆಗೆಯೆಂದು ಸುಭಟರೋ ತ್ತುಂಗ ಭೇದಿಸಿದ ಜೂದಿ
[ನಲಿ ॥೨೧॥

ಭಾಳಾಕ್ಷನ ರೂಹು ನಿನಗೇಕೆನುತ ನಾರಿ ಕೇಳಫಲವ ಕಟ್ಟಿ ತೂಗಿ ॥
ಬೀಳಲಿರಿದು ಕೊಲುವಂತೆ ತೆಂಗಿನಕಾಯ ಹೋಳು ಮಾಡಿದರು ಜೂದಿನಲಿ

ನಳನನೇತ್ರೆಯರೊಳು ನೇಹಗಲಹವಾಂತು|ಮುಳಿದರೆ ಸ್ಮರ ತಮ್ಮದಿಸಲು॥
ಬಳಿಯ ಕಬ್ಬುಗಳು ಬಿಲ್ಲಹವೆಂದು ಮಸೆದ ಕಂ ದುಳಿಯಿಂದ[1] ಕಡಿದ
[ಜೂದಿನಲಿ ॥೨೩॥

ಬೆಲ್ಲವೆ ನೀ ಮುದ್ದುವೆಂಗಳ ಮೃದುವಾಯ ಬೆಲ್ಲವಾದಿರವೆ ಬಂದಲ್ಲಿ ॥
ಹೊಲ್ಲಹ ನೊಣನ ಮುತ್ತಿಸಿಕೊಳ ಬೇಡೆಂದು ಬೆಲ್ಲವನೊಡೆಯೆ ಗುದ್ದಿದನು॥

ಲೆತ್ತ ಪಗಡೆ ರಾಯ ಬೊಗರಿ ಸೊಲ್ಲಹ ಬಾರು ಗುತ್ತದೊಪ್ಪಿಯ ಸರಿ
[ಬೆಸದಿ ॥
ವಿತ್ತನಾಶವ ಮಾಡುವ ಜೂದುಗಾರರ ಮೊತ್ತವಿರ್ದುದು ಮನೆಮನೆಗೆ ೨೫

ಜೂಜಾಟಕೆ ಸೂಳೆಬಂಟಕೆ ರುಣದ ಸಂ ವಾದ ಪೆರ್ಗುಡಿಗಳ ಚರ್ಚೆ ॥
ರಾಜವೀಥಿಯೊಳಱಿದಾಡುವ ಸಂದಣಿ ಮಾಜದು ನಿತ್ಯಕೃತ್ಯದಲಿ ೨೬

ಸಂಭ್ರಮವಡೆದಿರ್ದ ರಥಹಸ್ತಿಹಯನಿಕು ರುಂಬ ಪದಾತಿ ಸಂದೋಹ ॥
ಕುಂಭಾಂಡಮಂತ್ರಿಶೇಖರನ ಸದ್ಭವನವ ಲಂಬವ ಮಾಡಿಕೊಂಡಿಹವು॥೨೭

ವರಮದಧಾರೆಸೋರುವ ಗಜರಥಗಳ ತುರಗತತಿಯನಿನಿತೆಂದು ॥
ಬರೆದು ಲೆಕ್ಕಿಪೊಡೆ ಬೊಮ್ಮಾಂಡವಾಬಾಣನ ಪುರವನೆಕಾಯ್ದುಕೊಂಡಿಹವು

ಮಂಡಳಿಸಿದ ಹೊನ್ನಮುಗಿಲ[2]ಮಧ್ಯದಲಿ ತ್ರಿಖಂಡ ಹರ್ಮ್ಯಗಳ ಹೊಂಗಳಸ
ಚಂಡವೃತ್ತರದಕ್ಷಿಣವೀಧಿಗೊಟ್ಟು ಬ್ರಹ್ಮಾಂಡವ ತುಡುಕಿ ನಾಟಿದುವು ೨೯

ಒಪ್ಪವಡೆದ ಯಾಗಶಾಲೆ ಸದ್ಗಳಹಾರ ದುಪ್ಪರಿಕೆಯೊಳು ಜೋಯಿಸರು॥
ತಪ್ಪದೆ ಗಳಿಗೆಗೊಮ್ಮೊಮ್ಮೆ ಭೇರಿಯ ಹೊಯ್ಯುತಿಪ್ಪುದದೊಂದು ಬಾಗಿ
[ಲೊಳು ॥೩೦॥

ಕ. ಪ. ಅ—1. ಮಚ್ಚುಕತ್ತಿಯಿಂದ. 2. ಕೋಟೆ.

ಕಂಗೊಳಿಸುವ ರಮ್ಯರತ್ನಕೀಲಿತನವ|ರಂಗಕಹಟಸ್ಥಬಾವಡಿಯ ||
ಸಿಂಗವಿಟ್ಟರ[1]ದೊಳಹೊಡ್ಡೋಲಗಗೊಟ್ಟಿರ್ದ|ಲಿಂಗಾರ್ಚಕಬಾಣಬಾಣ||೩೧||

ಬಾಣನ ಮಹದಾಸ್ಥಾನದುಗ್ಧಾಬ್ಧಿಯ|ಕೇಣವಿಲ್ಲದೆ ಪೆರ್ಚಿಸುವ ||
ಏಣಾಂಕ[2]ತಾನೆಂಬಂತೆ ಕುಂಭಾಂಡಸು|ಜಾಣ ಮಂತ್ರೀಶನೊಪ್ಪಿದನು ||೩೨||

ರಜನೀಚರಮಂತ್ರಿಗಳೊಂದು ಕೆಲರು ಸ|ದ್ವಿಜಮಂತ್ರಿಗಳೊಂದುಕೆಲರು||
ನಿಜಮಾಗಣಿಕಮನ್ನೆಯರೊಂದು ಕೆಲರು ಭೂ|ಭುಜರಿರ್ದರೊಡ್ಡೋಲಗದಿ||

ಪೊಸಬಗೆವೇಟ್ವ ಕಬ್ಬಿಗರು ವಾಗ್ಮಿಕ ಜೋ|ಯಿಸರಾಮ್ನಾಯಶಾಸ್ತ್ರಗಳ
ವಿಷಮತಾರ್ಕಿಕರು ವಿನೋದಾರ್ಥಿಗಳು ಕ|ಣ್ಗೆಸೆದಿರ್ದರೊಡ್ಡೋಲಗದಿ||೩೪

ಸಗುಣಗುಣಾಢ್ಯ ಭೂಪತಿಗಳೇಕಾಂತದಿ|ಮಗುಟಗಳೊಂದೊಂದೊರಸಿ ||
ಉಗುವ ಮಾಣಿಕಹೇಮರಜ ನೂಱುಕೋಟಿಗೆ|ಮುಗಿದು ಕೊಟ್ಟಹರು
[ವೈಶ್ಯರಿಗೆ ||೩೫||

ಮಲ್ಲರು ಮಾರಾವುತ ರಮ್ಯರಸಿಕರು|ಬಲ್ಲಿದ ಗಜವಾಹಕರು ||
ಬಿಲ್ಲಿನಡ್ಡಣದ[3]ದಟರು ಮುಂತಾದವ|ರೆಲ್ಲರೊಪ್ಪಿದರೊಡ್ಡೋಲಗದಿ ||೩೬||

ಕಡೆಯ ಪೆಂಡೆಯದ ನಟ್ಟುವರು ಮದ್ದಳೆಗರು|ಗಡಣೆಯ ತಾಳಧಾರಿಗಳು||
ಬಿಡಯವಿಲ್ಲದ ಗೀತವಾದ್ಯವಿದ್ಯಾಧಿಕ|ಪಡೆಯಿರ್ದುದೊಡ್ಡೋಲಗದಿ ||೩೭||

ಮನುಮಥನರ್ಧಾಂಗಿಯರೂಪಿಗಿಮ್ಮಡಿ|ತನುರುಚಿತೋರನುಣ್ಮಲೆಯ||
ಮಿನುಗುವ ದಾಳಂಬದಂತಪಙ್ತಿಯ ವಾರ ವನಿತೆಯರಿರ್ದರಿಕ್ಕೆಲದಿ ||೩೮||

ಸಿವುಡೆಯರೆನಿಸಿದ[4] ವೀರರ ಮೂಗಿಗೆ|ಕವಡೆಯ ಕಟ್ಟಿ ನೀರ್ತರಿಸಿ ||
ಡವುಡೆ ಜೀಗಟೆ ಮಲಹರಿಯ ಜಾಡಿಸಿಕೊಂಬ|ಪ್ರವುಡೆ[5]ಯರಿರ್ದರಿಕ್ಕೆಲದಿ||

ನಾಟಕ ನವವೃತ್ತ ಕಂದವಚನ ಪೂರ್ವ|ಚಾಟನದಲಿ ಕೇಳದರೆ ||
ಕೋಟಲೆಗೊಳ್ಳದುಚ್ಚರಿಸುವ ಸರ್ವಜ್ಞ|ಪಾಠಕರಿರ್ದರಿಕ್ಕೆಲದಿ ||೪೦||

ಬಲಿಚಕ್ರವರ್ತಿಕುಮಾರ ಹಮ್ಮೀರ ನಿ|ರ್ಮಲಿನತರಂಗ ಸತ್ಸಂಗ ||
ಕಲಿಗಳ ಕರ್ತ[6] ಸಮರ್ಥ ಎಂದಾಶ್ರಿತ|ರೊಲಿದು ಪೊಗಟಿದರು ಖಳನ ೪೧||

ರುದ್ರಾಶ್ರಿತಪಾದಾಂಬುಜಮಧುಪ ಸ|ಮುದ್ರಾಂತಧರಣೀಶನಾಶ ||

---

ಕ. ಪ. ಅ —1. ಸಿಂಹಾಸನ. 2. ಚಂದ್ರ. 3. ಗುರಾಣಿಯ.
4. ಸಿವುಡೆ = ಸಿಂಬಿ; ಹುಲ್ಲಿನ ಸಿವುಡು ಮೊದಲಾದ ಬಿರುದಿನ ಬಳೆಗಳನ್ನು ಹೊಂದಿದ್ದ. 5. ಪ್ರೌಢೆ. 6. ಅಧಿಕಾರಿ, ಮುಖಂಡ.

ಭದ್ರಸಿಂಹಾಸನಾರೂಢ ಸತ್ಕ್ರೀಡ ದಾ|ರಿದ್ರವಿದ್ರಾವಣ ಜಯತು ||೪೨||

ಬಾಣ ಸುಮೇರುಬಾಣಾಸನಧರ[1]ಭಕ್ತ|ಬಾಣಪಂಚಕವಿಶ್ವರೂಪ ||
ಬಾಣ ಗೀರ್ವಾಣಸೇವಿತಪಾದಪಂಕಜ| ಬಾಣಭಾಸ್ಕರ ಜಯಜಯತು||೪೩||

ಕಕ್ಕಸವೆತ್ತು ಕಾದುವ ನೃಪೋತ್ತಮರೆಲ್ಲ|ರೊಕ್ಕವ ಸಲೆ ತೆತ್ತು ತೆತ್ತು ||
ಬಕ್ಕಲ ನಿನ್ನಾರೊಳು ಕಟ್ಟಿ ತೊತ್ತಿನ| ಮಕ್ಕಳಂತೋಲಗಿಸುವರು ||೪೪||
ಶಿವ ನಿನ್ನ ಬಾಗಿಲ ಕಾದಿಹ ಕಮಲಸಂಭವ ನಿನ್ನಮನೆಯ ಬ್ರಾಹ್ಮಣನು ||
ಜವನಿಂದ್ರೋಪೇಂದ್ರಾದಿಗಳು ನಿನ್ನಾಳಿಗ|ದವರಂತೆ ಕಟ್ಟಿ ಕಾದಿಹರು||೪೫

ಭಾಳಾಕ್ಷನ ಭಜನೆಯ ಮಾಡಿ ಸಾಸಿರ ತೋಳ ಪಡೆದೊಡದಕೇನು ||
ಕಾಳಗದೊಳಗೆ ನಿಸ್ನಿದಿರಾಗಿ ನಿಲುವ ಕಟ್ಟಾಳೊರ್ವನಿಲ್ಲೆಂದು ನುಡಿದ ||೪೬

ಭಟ್ಟನ ಮಾತು ಬಾಣನ ಕರ್ಣದೊಳು ಬಿದ್ದು ನಟ್ಟುದು ನಾಗೇಶಾಭರಣ
ಕಟ್ಟಳವಿಯಲಿ ನಿಂದಿದಿರಾಡುವಹಿತನ ಕೊಟ್ಟುದಿಲ್ಲೆಂದು ಚಿಂತಿಸಿದ ||೪೭||

ಮಥನವ ಪಡೆವೆ ಮತ್ತವನಲ್ಲದೆನುತೆ ಮಾಗತಲಿಂಗ ಪೊಂಬಟ್ಟಲೊಳಗೆ
ಸಿತಪರ್ಣ ಪೂಗಭಾಗವನಿತ್ತ ದ್ವಯ[2]ಪಂಚ ಶತಬಾಹು ಬಲವಂತ ನಗುತ||

ಉಭಯಪಕ್ಷದೊಳೋರಣಿಸಿದ ವಿದ್ವತ್ಸಭೆಗೆ ಸಪ್ತಾಂಗವ ಕೊಟ್ಟು ||
ಅಭಯವನಹಿತರ್ಗೆ ಕುಡಲಾಗಿ ಗಳಹಾರ ರಭಗಂಟೆಯೊಲಿದು ಚೀರಿದುದು ||

ಷೋಡಶಘುಟಿಕೆ ಸಂದುದು ಮಹದಾಸ್ಥಾನ ವೇಥ್ಯೈಸಿದೆ ಶಿವಾರ್ಚನೆಯ ||
ಮಾಡಬೇಕೆಂದು ಕಟ್ಟಿಗೆಕಾಱರು ಕೊಂಡಾಡಲ್ಕೆ ಕ್ಷಣದೆ ಚೇಷ್ಟಿಸಿದ ||

ನಿಗಳದ ಕೆಯ್ಯ ಕಟ್ಟಿಗೆಕಾಱರೊಡೆಯನ|ಮೊಗನೋಡಿ ಸನ್ನೆಯನಱಿದು ||
ಸುಗುಣಶೇಖರ ಚಿತ್ತೈಸೆನುತೊಡ್ಡೋ|ಲಗವ ಬೀೞ್ಕೊಳಿಸಿದರೊಲಿದು ||

ಜಿನ ವೈಷ್ಣವಗಾಣಾಪತ್ಯ ಮೊದಲಾದ ದಿನಕರಾರ್ಚಿತರ ಚಿತ್ತೈಸು ||
ಮನಗೊಂಬ ನಿಖಿಳಹೊನ್ನಂದಣದಣಿಸಿನ ಘನಮಾನ್ಯರುಗಳ ಚಿತ್ತೈಸು ||

ಮಕರಧ್ವಜಮಾನಮರ್ದನವಿಷಯದೆ|ಸುಖರಹಿತಾತ್ಮವಿಚಾರ ||
ಪ್ರಕರವನಾವಗ ಹಸುಗೆಗೆಯ್ಯುವ ಶಿವಾರ್ಚಕರ ಚಿತ್ತೈಸೆಲೆ ಜೀಯ||೫೩

ಜೋಡುಸೀಸಕವಾಂತ ಸಬಳಗರೊತ್ತಂಡ ಚೂಡಾಯ್ತ[3]ಹರಿಗೆ[4]ಬಿಲ್ಲವರ||
ಖೇಡೆಯವಡೆದ ರಾವುತ ಜೋದ ರಥಿಕರ ನೋಡ ಚಿತ್ತೈಸೆಲೆ ದೇವ ||೫೪

---

ಕ. ಪ. ಅ—ಶ್ರೇಷ್ಠವಾದ ಮೇರುಪರ್ವತವನ್ನು ಬಿಲ್ಲಾಗಿ ಮಾಡಿಕೊಂಡವನು; ಯಾರು? 2. ಎರಡು. 3. ಕಿರೀಟಧಾರಿ. 4. ಗುರಾಣಿ.

ವಾರನಾರಿಯರ ಚಿತ್ತೈಸು ಸತ್ಕುಮರಕಂ|ಠೀರವರುಗಳ ಚಿತ್ತವಿಸು ॥
ತೋರ ಧನಾಢ್ಯಶ್ರೇಷ್ಠಿಗಳ ಚಿತ್ತೈಸು ಮ|ಯೂರಧ್ವಜಾಂಕ ಚಿತ್ತೈಸು॥
ಜಂಭಾರಿ ಮುಖ್ಯನಿರ್ಜರದೈತ್ಯನರ ನಿಕು|ರುಂಬ ಭೂಭುಜರ ಚಿತ್ತೈಸು॥
ಕುಂಭಾಂಡಮಂತ್ರೀಶ್ವರನ ಚಿತ್ತೈಸೆಂದು|ಪೊಂಬಾರಿಕರು ಪೊಗೞ್ದರು ॥
ಕನಕರತ್ನಾಂಚಿತದುಪಕರಣಗಳ ಸ|ದ್ವಿನಿಯೋಗದವರ ಚಿತ್ತೈಸು ॥
ಧನದತ್ತಮಾಗಣಿಕಾಱು ನಿಯೋಗಸ|ಜ್ಜನರ ಚಿತ್ತೈಸೆಲೆ ದೇವ ॥೫೭॥

ಗಟ್ಟಿ ಚಿನ್ನದ ಬೆಳ್ಳಿಯ ಗುದಿಗೆಯ ಕೆಯ್ಯ|ಜಟ್ಟಿಗಳ್ ನಿಖಿಳಬೋಳಕರ॥
ಕಟ್ಟಗೆಗಾಱರನೇಕವುಗ್ಗಡೆ ಬೊಬ್ಬಿಟ್ಟುದು ರಾಯನೇೞ್ಗೆಯಲಿ ॥೫೮॥
ಕೋಣಪಸುರಮಾನವ ಕುಂಭಾಂಡರು|ಮಾಣದೆ ಮನೆಗೆ ಸಾರಿದರು ॥
ಬಾಣಾಸುರ ಪೊಂಬಾವುಗೆವೆರಸಿ ದಿ|ವಾಣವ ಪುಗಲೊಡರ್ಚಿದನು ॥೫೯॥

ಸ್ಥೂಲದೇಹವ ತಾಳ್ದ ಕೊಜ್ಜೆಯರ್ ಬಹಳವ|ಕೋಲಗೋಲ್ಲಾಳ [ಚಿತ್ತೈಸು ॥
ಶೂಲಮುದ್ಗರಪಟ್ಟಿಮುಸಲಾಂಚಿತ ದ್ವಾರ|ಪಾಲಕರನು ಚಿತ್ತಯಿಸು ॥೬೦॥
ಜೋಳಜೋಳಿಯೊಳೞುಗುವ ಸಕಲರ ಮಕು|ಟಾಳಮಾಣಿಕ್ಯದೀಪ್ತಿಗಳ ॥
ಏೞ್ಪ ರನ್ನಮಾವುಗೆವಜ್ಜಜತನ ಸಂ ಭಾಳಕೆ ಬಹು ಪರಾಕಯ್ಯ ॥೬೧॥

ನಿಟ್ಟುಸಿರಿಂದೆ ಕೀರ್ತಿಪ ಹೊನ್ನ ಸೆಳಗೆಯ್ಯ|ಗಟ್ಟಿವರುಗಳ ಸನ್ನೆಯಲಿ ॥
ಮುಟ್ಟೋೞ್ಗದ ಬೋಳುಕರನೆಲ್ಲರ ಬೀಱು|ಕೊಟ್ಟೊಳಪೊಕ್ಕನುತ್ಸವದಿ ॥
ವರಮೋಹನತರಂಗಿಣಿಯೆಂಬ ಕಾವ್ಯವ|ಬರೆದೋದಿ ಕೇಳದ ಜನರ ॥
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು ಪೊರೆವ ಲಕ್ಷ್ಮೀಕಾಂತ ಬಿಡದೆ॥

— ಅಂತು ಸಂಧಿ ೧೯ ಕ್ಕಂ ಪದ ೧೪೬೬ ಕ್ಕಂ ಮಂಗಳಂ —

## ಇಪ್ಪತ್ತೊಂದನೆಯ ಸಂಧಿ

**ಬಾಣಾಸುರನ ಶಿವಪೂಜೆ:—**

ಹೊಂದಾವರೆಗೊಳ ಹೊದರೆದ್ದ ತುಲಸಿಯ|ನಂದನ ನಾಟ್ಯಕೀರ್ತನದಿ ॥
ಸಂದರ್ಶನದೊಳುಬ್ಬುವ ಸ್ವಾಮಿಯ ಕೂರ್ತು|ಮುಂದಣ ಕೃತಿವೇೞು [ಮುದದಿ ॥೧॥

ಲೀಲೆಗಾತಿಯರ ಮಸ್ತಕದಲಿ ಮೆಱೆವ ಪೂ|ಮಾಲೆ ಮದ್ವಲ್ಲಭೆ ಕೇಳು||
ಬಾಲೆಯು ಕೈಲಾಗೊಳು ಬಾಣ ಮಜ್ಜನ|ಶಾಲೆಯು ಸಾರ್ದನಱ್ತಿಯಲಿ ||೨||

ಹೊಂಗೆಲಸದ ಪೊಚ್ಚ ಪದುಮವಿಟ್ಟರದೊಳು|ಮಂಗಲಮಜ್ಜನಗೆಯ್ದು ||
ಅಂಗಸುವಸ್ತ್ರಭೂಷಿತನಾಗಿ ಶಿವಪೂಜಾ|ರಂಗಸ್ಥಳವ ಸಾರಿದನು ||೩||

ಮೀಟಾದ ರಮ್ಯರತ್ನಗಳಡಸಿದ ಕೂರ್ಮ|ಪೀಠದೆ ಕುಳಿತು ನಿಟ್ಟಿಸಲು||
ನೋಟಕಚ್ಚರಿವೆತ್ತ ಸೊಡರ್ಗಂಬದಲ್ಲಿ ವಿ|ರಾಟದೀಪ್ತಿಗಳೊಪ್ಪಿದುವು ||೪||

ಕತ್ತುರಿಯಿಂದೆ ಸಮ್ಮಾರ್ಜನೆಗೆಯ್ದು ಪೆ|ರ್ಮುತ್ತುಗಳೊಡನೆಮಾಣಿಕವ||
ಪತ್ತುಗೆಗೊಳಿಸಿರ್ದ ದಯುರಂಗವಾಲಿಯ|ಚಿತ್ತರಿಸಿದರು ತೀಕ್ಷ್ಣದಿ ||೫||

ಗಾಡಿಕಾರ್ತಿಯರೀಶ್ವರಪೂಜೆಗೆಲಸವ| ಮಾಡೆ ನಿಂದಿರಲೆಡಬಲದಿ ||
ನೋಡಿದ ಮಾತ್ರದೊಳುಪಕರಣಂಗಳ|ನೀಡಿ ಕುಡುವುದೇನು ಸಂಜ್ಞೆ ||೬||

ಜಲರುಹದಳಲೋಚನೆಯು ನೋಡಲು ಸ್ವೇದ|ಜಲಬಿಂದು ನಿಟಿಲದೆಪೊಳೆಯೆ||
ಜಲಧಿಯಭಿಮಾನದೇವಿಯಂದದಿ ಸ್ವರ್ಣ|ಜಲಪಾತ್ರೆಯ ನಿಲಿಸಿದಳು ||೭||

ಕುಂಭಸ್ತನೆಯ ದಿಟ್ಟಿಸಲು ತನ್ನಯ ಕುಂಭ|ಕುಂಭಸಮಾನವೆಂದೆನಿಪ ||
ಕುಂಭೋದಕವ ತುಂಬಿಸಿ ದ್ವಯವರಹೇಮ|ಕುಂಭವ ತಂದಿರಿಸಿದಳು ||೮||

ಗಂಧಸುಗಂಧಗಂಧಿಯ ಮೊಗ ನೋಡಲು|ಗಂಧಕುಂಕುಮರಸಭರಿತ ||
ಗಂಧವ ಗಂಧೋದಕದಿಂದೆ ಹದಮಾಡಿ|ಗಂಧವಟ್ಟಲನಿರಿಸಿದಳು ||೯||

ಅಕ್ಷಯರೂಪವತಿಯ ನಿಟ್ಟಿಸಲು ತ್ರಿ|ಯಕ್ಷನ[1] ದೇಹದ ದ್ವಿತಯ ||
ಅಕ್ಷತೆಯೊಳುಕುಂಕುಮದಲರ್ಗಡಿ ಶೋ|ಭಾಕ್ಷತೆವಟ್ಟಲಿಟ್ಟಿಹಳು ||

ಬಟ್ಟ ಚಂದಿರಮುಖದವಳ ನಿಟ್ಟಿಸಲಾಗಿ|ಬಟ್ಟಜವ್ವನ[2]ದೊಲಪಿಂದೆ ||
ಬಟ್ಟ ಘೋಟಕಚೂರ್ಣಕೃತ ವಿಭೂತಿಯ ಪೊಂ|ಬಟ್ಟಲ ತಂದಿರಿಸಿದಳು ||

ಮಂದಸ್ಮಿತಮುಖದವಳ ನಿಟ್ಟಿಸಲಾಗಿ ಮಂದಾರಜಾಜಿಮಲ್ಲಿಗೆಯ ||
ಮಂದಸೌರಭ್ಯಸಂಪಗೆ ಕುಸುಮದ ಸಂ|ಬಂಧಪಾತ್ರೆಯನಿರಿಸಿದಳು ||೧೦||

ಏಕಾದಶವಶದಕ್ಷರಪ್ರಾಯದಿಂ ದಲ|ನೇಕ ಹೆಂಗಳ ತಿರಸ್ಕರಿಸಿ ||
ಏಕಸ್ವರೂಪಿ ತಾನಲ್ಲದಿನ್ನಿಲ್ಲೆಂದು|ಏಕಾರತಿಯನಿಕ್ಕಿದಳು ||೧೩||

ಪಂಚಾಶತ್ಕೋಟಿ ವಿಸ್ತೀರ್ಣ ಭೂಮಿಪ್ರ|ಪಂಚದ ನಾರಿಗಳರಲಿ ||
ಪಂಚಬಾಣನ ರಾಣಿ ತನಗೆಣೆಯಿಲ್ಲೆಂದು|ಪಂಚಾರತಿಯನಿಕ್ಕಿದಳು ||೧೪||

---

ಕ. ಪ. ಅ—1. ಮೂರು ಕಣ್ಣುಗಳುಳ್ಳ ಶಿವನ. 2. ಸ್ತನ.

ಮೃಗಧರತರಣಿಕಿರಣವ್ಯಾಪ್ತಿ ಭೂಮಿಯ|ಮೃಗಮದಗಂಧಿಯರೊಳಗೆ ||
ಮೃಗನೇತ್ರೆ ತನಗೆಣೆಯಿಲ್ಲೆಂದು ಪುರುಷಾ|ಮೃಗದಾರತಿಯನಿಕ್ಕಿದಳು ||೧೫||

ನೀಲಾಳಕ ಬದ್ಧಧಮ್ಮಿಲ್ಲಶೋಭಿತೆ| ನೀಲೋತ್ಪಲದಳನೇತ್ರೆ ||
ನೀಲಮೌಕ್ತಿಕಹಾರಮಾಲಾಲಂಕೃತೆ| ನೀಲಾಂಜಲಿಯನಿಕ್ಕಿದಳು ||೧೬||

ರೂಪಾರತಿ ಕಪ್ಪುರದಾರತಿ ರತ್ನ|ದೀಪಾರತಿ ಕಡ್ಡಿ ಬತ್ತಿ ||
ಆಪಾರಮಹದಾರತಿ ದಿವ್ಯಶಿವಪೂಜೆ|ಸೋಪಸ್ಕರವನಿಕ್ಕಿದಳು ||೧೭||

ಚರಣಮಸ್ತಕದಿವ್ಯದೇಹದಿ ರತ್ನಾ|ಭರಣದೀಪ್ತಿಗಳುಜ್ವಲಿಸೆ ||
ಶರಣೋತ್ತಮ..ಣಗುಭಯಪಕ್ಷದೊಳುಪ|ಕರಣಾಂಗನೆಯರೊಪ್ಪಿದರು ||

ಪಂಕಜಮುಖಿಯರು ಗಾಡಿಸುತಿಹ ಗಂಟೆ ಸಂಕವನಾರಾಧ್ಯನಿಚಯ ||
ಹೂಂಕಾರ ಶೋಣಿತಪುರವರದುರಿತಭ ಯಂಕರವಾಗಿ ಕೇಳಿಸಿತು ||೧೯||

ಮಣಿಭೂಷಣಂಗಳ ಕಳೆದು ರುದ್ರಾಕ್ಷಿಯ ಮಣಿಭೂಷಣಂಗಳ ತಳೆದು||
ಮಣಿಮಾಲಿಕೆಗಳ ಬಿಟ್ಟನೀಶ್ವರಚಕ್ಷು|ರ್ಮಣಿಮಾಲಿಕೆಗಳ[1] ತೊಟ್ಟ ||೨೦||

ದಾನವಪ್ರಭು ವಿಭೂತಿಯನಾದಿಮಂತ್ರವಿ|ಧಾನವಿನ್ಯಾಸಪೂರ್ವಕದಿ ||
ಧ್ಯಾನವಮಾಡಿ ಲಲಾಟನೇತ್ರವಯುವ ಸ್ಥಾನದಿ ಭಸಿತವಿಕ್ಕಿದನು ||೨೧||

ಶಿರದೆಡೆಯೊಳಗಿರ್ದ ಶಿವಲಿಂಗದೇವರ|ಪರಮವಸ್ತ್ರವ ಬಿಚ್ಚಿ ತೆಗೆದು ||
ವರರತ್ನಾಂಚಿತವೃಷಭಮುದ್ರೆಯನಿಟ್ಟ|ಕರಕಂಜದೊಳಗೆ ಸ್ವೀಕರಿಸಿದನು ||

ಸೂಡಿರ್ದ ಕುಸುಮಸೌರಭವನಾಘ್ರಾಣಿಸಿ ಮಾಡಿ ಮುದದಿ ತಿರಸ್ಕರಿಸಿ||
ಊಡಿರ್ದ ಗಂಧ ಕಸ್ತೂರಿಯ ನಿವಾರಿಸಿ ನೋಡಿದ ಪರಮಾತ್ಮಕನ ||೨೩||

ವಿಸ್ತರಗೆಯ್ದು ನೋಡಿದಡೆ ಬ್ರಹ್ಮಾಂಡಸ|ಮಸ್ತ ನಿನ್ನೊಳಗಡಗಿಹುದು||
ಪ್ರಸ್ತವಿದೇನು ಕಾರಣ ಸ್ವಾಮಿ ನೀನೆನ್ನ|ಹಸ್ತಾಬ್ಜದೊಳಗೆ ಮಂಡಿಸಿದೆ ||

ಹಡೆದ ತಾಯಿಲ್ಲ ತಾಯುಳ್ಳೊಡೆ ತಲೆ ಹೀಗೆ| ಜಡೆಗಟ್ಟಕೊಂಡು ಮಾ [ಸಿಹುದೇ ||
ಮಡದಿಯರಿಲ್ಲ ಮಂಡೆಯ ಸಿಕ್ಕನೊಡವರೆ|ನ್ನೊಡೆಯ ಕೋ ಎನುತೆ [ನೀರೆಱೆದ ||೨೫||

ಸಾಸಿರ ಕಮಲದೊಳೊಂದನು ಶಿವಗಿತ್ತು|ಸಾಸಿರಕಮಲದಂದದಲಿ ||
ಸಾಸಿರಮೊಗಪೂರ್ಣಕಲಶಾಭಿಷೇಕವ|ಸಾಸಿರ ಬಾಱಿ ಮಾಡಿದನು ||೨೬||

---

ಕ. ಪ. ಅ—1. ರುದ್ರಾಕ್ಷಿಗಳಿಂದ ಮಾಡಿದ ಮಾಲಿಕೆಗಳನ್ನು.

ಗಂಗಾಧರ ನಾಗಹರ ದೇವ ದೇವೋ|ತ್ತುಂಗಭುಜಂಗಭೂಷಣಗೆ ‖
ಅಂಗಜಭಸ್ಮವಿಲೇಪ ನಿರ್ಲೇಪಂಗೆ| ಮಂಗಳಗಂಧಕವನರ್ಪಿಸಿದ ‖೨೭‖
ಕಂದರ್ಪನ ಸುಟ್ಟ ಪಣೆಗಣ್ಣುವಚ್ಚ ದೊ|ಡೆಂದಾದೊಡೆ ಮತ್ತೆ ತೆರೆಸಿದು ‖
ಬೆಂದ ಪಾಪಿಯು ಬೇಯಿಸಬೇಡವೆಂದು ಸು|ಗಂಧಾಕ್ಷತೆಯ ಮೆತ್ತಿದನು‖೨೮
ಕಿಡಿಗಣ್ಣ ತೆರೆಯುದಂದದೊಳುಱೆ ಮುದ್ರಿಸಿ|ಜಡೆಯಿಾಡಿನೊಳದ್ದ [ಹೆಱೆಯ ‖
ಬಿಡಿಸುವಂದದಿ ದಿವ್ಯಾಮೋದಪುಷ್ಪಂಗಳ|ಮುಡಿಸಿದ ಶಿವನ ಮಸ್ತಕದಿ ‖೨೯
ವ್ಯೋಮಕೇಶಗೆ ಭವಭೀಮ ಸುರೇಶಂಗೆ|ಸಾಮಜ[1]ಚರ್ಮಾಂಬರಗೆ ‖
ರಾಮಣೀಯಕಬಾಲಸೋಮಜೂಟಗೆ ಧೂಪ|ಧೂಮವನೊಲಿದರ್ಪಿಸಿದ ‖
ಸ್ಮರಭಸ್ಮೀಕೃತ ಜಯತು ಜಯತು ತ್ರೈ|ಪುರಭಸ್ಮೀಕೃತ ಜಯಜಯತು‖
ಶರಣದುಷ್ಕೃತಭಸ್ಮೀಕೃತ ಜಯವೆಂದು|ಕರದೊಳಾರತಿಯನೆತ್ತಿದನು ‖೩೧‖
ನುತಸಾಸಿರಕಿರಣದಿ ಸೂರ್ಯ ಮೇರುಪ|ರ್ವತವ ಬಳಸಿ ಬರ್ಪಂತೆ ‖
ಹುತವಹನೇತ್ರಮಂಡಿತ ಹಸ್ತವೇಷ್ಟಿತ ಕರದಾರತಿಗಳೊಪ್ಪಿದುವು ‖೩೨‖
ಪರಮಭಕ್ತನ ಸಾಸಿರಕೆಯ್ಯ ಸೊಡರೀಶ್ವರನ ಮಂಡೆಯ ಸುತ್ತಿ ಬರಲು‖
ಹರ ನೋಡಿ ಸ್ವಪ್ನದೊಳರಲಂಜಿ ಭಸ್ಮಾಸುರನ ಹಸ್ತಾಗ್ನಿಯ ನೆನೆದ‖೩೩
ವಿಭುವೆ ನೀ ಬೆದರಬೇಡೆನುತ ಮಂಡೆಯ ಮೇಲೆ|ಯಭಯಹಸ್ತವ[2] [ನಿಕ್ಕುವಂತೆ ‖
ಸೊಬಗಿಡಿದಬ್ಜಪುಷ್ಪಂಗಳ ನಿಗಮವಲ್ಲಭನ ಮಸ್ತಕದೊಳೇಱಿಸಿದ‖೩೪‖
ಆಲಿಗಳೆವೆಯಲುಗದೆ ಬಕುತಿಯಲಿ ತ್ರಿ|ಶೂಲಿಯ ಮೇಲೆ ಕಣ್ಮನವ ‖
ಕೀಲಿಸಿದನು ಕೀಲಿದಂತೆ ಹಸ್ತದಿ ಜಪ|ಮಾಲಿಕೆಯನು ತುಡುಕಿದನು ‖೩೫‖
ಗಣಿಸಲನಂತವೇದಗಳಂಗೆ ನಿಲುಕದ ಫಣಿಭೂಷಣದಿವ್ಯನಾಮ ‖
ಎಣಿಸಲ್ಕೆ ಪರಮಭಕ್ತನಿಗೆ ಸಿದ್ಧಿಸಿದಂತೆ|ಮಣಿಮಾಲೆ ಕರದೊಳೊಪ್ಪಿದುವು‖
ವದನದೆ ಕುಣಿವ ನಾಲಗೆ ನಟಿಸುವ ತುಟಿ|ಸದಮಳಮಂತ್ರಕೀರ್ತನದಿ ‖
ಹೃದಯದೊಳೊಡೆದು ಮೂಡಿದ ಜ್ಞಾನದೃಷ್ಟಿಗ|ಳೊದಗಿತು ಪರಶಿವನಾಮ‖
ಈತನೆ ಪರಮೇಶ್ವರನೆಂದು ತಿಳದು ತಾ|ನಾತನೊಳಾತ ತನ್ನೊಳಗೆ ‖

---

ಕ. ಪ. ಅ—1. ಗಜ. 2. ಅಭಯವನ್ನು ಕೊಡುವ ಹಸ್ತ; ಹೆದರಬೇಡ, ಕಾಪಾಡುತ್ತೇನೆ ಎಂಬುದನ್ನು ಸೂಚಿಸುವ ಹಸ್ತ.

ಏತರೊಳೆರವಿಲ್ಲದಿರ್ದರು ಬೀಜವ್ಯ|ಕ್ತಾತವ ಪರಿಹರಿಸಿದುವು ||೩೮||
ಧ್ಯಾನದೊಳಿರ್ದ ಲೋಚನಯುಗಳವ ಬಿರ್ಚಿ|ಯಾನಂದ ಮನದೊಳು [ಪೆರ್ಚೆ ||
ದಾನವಪ್ರಭುಶಂಭುವಿಭುವಿಂಗೆ ನಿಖಿಳನ|ವೀನಪುಷ್ಪವ ಮುಡಿಸಿದನು ||೩೯||
ದರ್ಪಕಹರನಿಂಗೆ ನಿಖಿಳಾರತಿಯ ಸ|ಮರ್ಪಣೆಗೆಯ್ದನೆಟ್ಟಿಯಲಿ ||
ಪುಷ್ಪವ ಮುಡಿಸುವ ಮುಡಿಸಿ ನಿವಾರಿಪ|ತಪ್ಪದೆ ಮಗುಳೆ ಪೂಜಿಸುವ ||೪೦||
ಕಳವೆಯೋದನಸೂಪ ಘೃತ ಪೆರ್ದಡಿ ಪತ್ರ|ಫಲಶಾಕ ಸಿಕರಣೆಸಾಖು ||
ಪಲವಿಧಪರವಾನ್ನ ಬಹುಭಕ್ಷ್ಯ ಭೋಜ್ಯವ|ಸಲೆ ಸಮರ್ಪಿಸಿದನೀಶ್ವರಗೆ ||
ತಲೆವೆಲೆ ಪೂರ್ಣಭಾಗದ ಕಪ್ಪುರದ ಬೆ|ಳ್ಳೆಲೆಗೆ ಚೂರ್ಣಾಂಕಿತಗೆಯ್ದು[1] ||
ಲಲನೆಯರೊಬ್ಬುಳಗೆಯ್ದಿತ್ತ ವೀಳ್ಯವ|ಸಲೆ ಸಮರ್ಪಿಸಿದನೀಶ್ವರಗೆ ||೪೨||
ಪುಲಿದೊವಲುಡೆಯಂಗೆ ಪುಸರಪಿ ರತ್ನಪ್ರ|ಜ್ವಲದಾರತಿಗಳ ಬೆಳಗಿ ||
ಸಲಿಲಜಮಂದಾರಮಲ್ಲಿಗೆ ಪುಷ್ಪಾಂ|ಜಲಿಯ ಮಾಡಿದ ಮಹೋತ್ಸವದಿ||೪೩||
ಆಸಮಾಕ್ಷಗಷ್ಟವಿಧಾರ್ಚನೆಸಹಿತ ಷೋ|ಡಶಮಹದುಪಚರಗೆಯ್ದು ||
ಬಸೆದೊಡರ್ಚಿದನೊಂದು ಮೇಲೆ ಮೇಲೆ ರಾ|ಜಸತಾಮಸಂಗಳನುೞಿದು ||
ಛತ್ರಚಾಮರಗಿಂಡಿ ಹಡಪ ಬಿಜ್ಜಣವ ಪ|ವಿತ್ರಕಾಳಾಂಜಿಕಜ್ಜಲವ ||
ಚಿತ್ರಪಾವುಗೆ ವಾದ್ಯಗೀತನೃತ್ಯಾದಿ ಬಾ|ಹತ್ತಸದ್ವಿನಿಯೋಗಗೆಯ್ದು ||೪೫||
ಮೃಡನಂಘ್ರಿಯುಗಳವ ಮುಟ್ಟಿ ಪೂಜೆಯಮಾಡಿ|ಪೊಡೆಮಟ್ಟು ಪುಣ್ಯ [ಕೀರ್ತನೆಯ ||
ಜಡವಿರಹಿತಜಾಣ ಬಾಣ ಕೈವಾರಿಸ|ತೊಡಗಿದ ಕೇಳಾಯತಾಕ್ಷಿ ||೪೬||
ಅಮರೇಶ್ವರ ನಿನ್ನ ಪಾದಪೂಜೆಗೆ ಕರ|ಕಮಲ ಸಾಸಿರವ ಪಾಲಿಸಿದೆ ||
ಯಮಳಸಾಸಿರ ಚಕ್ಷು ಜಿಹ್ವೆಯಿದ್ದಡೆ|ದೇವೋತ್ತಮ ನಿನ್ನನೋಡಿ ಕೀರ್ತಿ [ಪೆನು ||೪೭||
ಏತರ ಪೆಂಪು ಬ್ರಹ್ಮಾದಿದೇವರು ವಿಷ|ಭೀತಸ್ಥರಾಗಿ ಕಂಗೆಡಲು ||
ನಾಥ ನೀಧರಿಸಿ ಸರ್ವರ ಕಾದೆ ಸದ್ಯೋ ಜಾತಮುಖಾನ್ವಿತ ಶರಣು ||೪೮||
ದೇವದೇವೋತ್ತಮ ದೇವಶಿಖಾಮಣಿ| ದೇವರೆಲ್ಲರ ಕಾವ ದೇವ ||
ದೇವ ನಿನಗೆ ಪ್ರತಿದೇವ ರಹಿತ ವಾಮ|ದೇವಮುಖಾನ್ವಿತ ಶರಣು ||೪೯||

---

ಕ. ಪ. ಅ—1. ಸುಣ್ಣವನ್ನು ತೊಡೆದು.

ಘೋರಸಂಸಾರವಿದೂರೀಕೃತಭಕ್ತ | ಘೋರದುರಿತಸಂಹಾರ ||
ಘೋರಪಾತಕ ಪ್ರಾಯಶ್ಚಿತ್ತನಾಮಾಂಕಿತಾ | ಘೋರಮುಖಾನ್ವಿತ ಶರಣು ||
ಮಾನ್ಯನಹುದು ಮಹದೇವಾದಿಗಳೊಳು | ಶೂನ್ಯನಹುದು ಶ್ರುತಿಗಳಗೆ ||
ಧಾನ್ಯಮಾಲಿನಿಪ್ರೀಣಿತತಾತ್ಪರ್ಯಯೀ ಶಾನ್ಯಮುಖಾನ್ವಿತ ಶರಣು ||೫೧||

ನಾಟಕಧರ ಹರ ಪರಮೇಶ್ವರ ಚಂದ್ರ | ಜೂಟ ಲಲಾಟಲೋಚನನೆ ||
ಜೇಟದಿ ಬೆಂದು ಬೆಂಡಾದ ಮಾಯಾವಿಯ | ಕೂಟಕೊಳದ ಸ್ವಾಮಿ ಶರಣು ||
ಮುಖಚತುಷ್ಟಯ ಸ್ತೋತ್ರ ಪಾತ್ರ ತ್ರಿಣೇತ್ರಷ | ಣ್ಮುಖಜನನೀ
[ಕಾಂತ ಶಾಂತ ||
ಮುಖಹಸ್ತಿ ನರದೇಹಿಕನ[1] ಪಡೆದ ಪಂಚ | ಮುಖ ಪರಮೇಶ್ವರ ಶರಣು ||೫೩

ಈಶ ಸೂರಿಯಕೋಟಿತೇಜಃಪುಂಜ ಬಿ | ಲೇಶಭೂಷಣ[2] ದೋಷನಾಶ ||
ವಾಸವ ವಿಧಿಮುಖ್ಯತ್ರಿದಶಾಧೀಶ ಮ | ಹೇಶ ಸರ್ವೇಶ್ವರ ಶರಣು ||೫೪||

†ಆವಂಗೆ ಮೇರು ಕಾರ್ಮುಕ ಶೇಷ ಸಿಂಜಿನಿ | ಯಾವಂಗೆ ನಾರಾಯಣಾಸ್ತ್ರ
ಆವಂಗೆ ವಿಧು ಮಿತ್ರ ಭೂರಥ ವಾಜಿ ಮ | ತ್ತಾವಂಗೆ ಶ್ರುತಿ ಕರ್ತ ಸೂತ ||
ಯೋಚನೆಗರಿದು ತನ್ಮಹಿಮಾಂಭೋನಿಧಿ | ಯಾಚೆಯೊಳಜಸುರಾದಿಗಳು ||
ಆಚೆಯು ತಡಿಯು ಸ್ವಪ್ನದಿ ಕಂಡಱಿಯರು | ಲೋಚನತ್ರಯ ಮೆಯ್ದೋಱು ||
ತಾಮಸಗುಣ ರಾಜಸಗುಣ ಸಾತ್ವಿಕ | ಸ್ತೋಮಸದ್ಗುಣ ನಿರ್ಗುಣನೆ ||
ಶ್ರೀಮಹಾದೇವ ದೇವೇಶ ಸರ್ವಜ್ಞಶಿರೋಮಣಿ ಮೆಯ್ದೋಱಿಸೆನಗೆ ||೫೭

ತತ್ವವ ನುಡಿವ ಬ್ರಹ್ಮಾದಿಗಳೊಳಗೆ ಮ | ಹತ್ವವ ಮೆಱೆಯಬೇಕೈಸೆ ||
ತತ್ವವನಱಿಯದ ಮೂಢನೊಳನಿತು ಮ | ಹತ್ವವ ಮೆಯ್ದೋಱಿಸೆನಗೆ ||೫೮

ಒಂದೆರಡಲ್ಲದ ಕಲ್ಯಾಣಗುಣಗಳ | ಚೆಂದವನಱಿದು ಕೀರ್ತಿಪೊಡೆ ||
ವೃಂದಾರಕರಿಗಚ್ಚರಿ ನಿನ್ನ ಕರುಣದ | ಕಂದನೆಂದೆನಗೆ ಮೆಯ್ದೋಱು |೫೯||

ಏಣಾಂಕಧರ ತನ್ನ ಭಕ್ತ ಕೀರ್ತಿಸುವ ಸು | ಜಾಣವಾಕ್ಯಂಗಳ ಕೇಳ್ದು ||
ಪ್ರಾಣಲಿಂಗದೊಳು ತಾನಾಗ ಮೆಯ್ದೋಱಿದ | ಬಾಣಾಸುರನ ಕಣ್ಮನಕೆ ||೬೦||

ರದನಚ್ಛವಿ ಮಿನುಗುವ ಚಕ್ಷು ದಶಪಂಚ | ವದನಚ್ಛವಿ ಜಟಾಗ್ರದೊಳು ||
ವಿಧು ನವ್ಯಮೂರ್ತಿಮಂದಾಕಿನಿಯು ಷ | ಟ್ಕದ ನವಿಲ್ಮಡಿಯು ತೋಱಿಸಿದ ||

---

ಕ. ಪ. ಅ—1. ಗಜಾನನ, ವಿನಾಯಕ. 2. ಸರ್ಪ ಭೂಷಣ, ಶಿವ.

† ತ್ರಿಪುರ ಸಂಹಾರಕಾಲದಲ್ಲಿ ಮೇಲೆ ಹೇಳಿದುವುಗಳು ಆದುವು.

ಕಂಧರದೊಳಗೆ ಕಾಣಿಸುತಿರ್ಪ ವಿಷನಾಗ|ಬಂಧ ಭೂಷಣಕಳೇವರದಿ ||
ಕಂದರ್ಪಕೋಟಿಲಾವಣ್ಯಶ್ರೀಪದನಖ|ಚೆಂದವ ತೋಱಲೀಕ್ಷಿಸಿದ ||೬೫||
ಇಂದೀವರಮಿತ್ರಮಯೂಖವಾಹ ಸಂ|ಮಂಧಿರದಹ ಪಾದಾಂಬುಜದಿ ||
ಸಂಧಿಸಿ ನೇತ್ರಯುಗ್ಮದಿ ನೋಡಿ ನೊಸಲಿಟ್ಟು|ವಂದಿಸಿದನು ಮಹೋತ್ಸವದಿ |
ನಿಗಮಾತೀತ ನಿರ್ಜರವ್ರಾತನಾಥ ಪ|ನ್ನಗಭೂಷ ದೋಷವಿನಾಶ ||
ನೆಗೞ್ದು ಖಳನ ನಿರ್ಮಲಬಾಹು ಬಲನನು|ಮೊಗನೋಡಿಶಿವಮುದ್ದಿಸಿದನು
ಮಗನೆ ಮೆಚ್ಚಿದೆ ಬೇಡುವುದು ಬೇಕಾದುದ|ನಗಣಿತವೀವೆನೆಂದೆನಲು ||
ಮೃಗಧರ ನನಗೆ ನೀಕೊಟ್ಟ ಸೌಭಾಗ್ಯ ಮೂ ಜಗದೊಳೊರ್ವರಿಗಳವಲ್ಲ ||
ವಿಲಸಿತವಾಗಿ ಕಣ್ಗೆಸೆದಿರ್ದ ರೌಪ್ಯಾ|ಚಲವಾಸನ ತಿರಸ್ಕರಿಸಿ ||
ಅಲಸದೆ ಬಂದು ತಾತ್ಪರ್ಯದೊಳೆನ್ನ ಬಾ|ಗಿಲ ಕಾಯುತಿರುವುದು ದೇವ ||
ಭುಜಗಾಭರಣ ತಚ್ಛರಣಂಗೆ ಸಾಸಿರ|ಭುಜಬಲವ್ರಜವ ಪಾಲಿಸಿದೆ ||
ಭುಜಬಲದಿಂದಲೆನ್ನೊಡನೆ ಕಾದುವನೊಬ್ಬ|ಭುಜಬಲಾಧಿಪನ ಪಾಲಿಪುದು ||
ಸೊಲ್ಲಿದು ಹಸನಾದುದೆಲೆ ಕಂದ ಕೇಳ್ ನಿನ್ನ|ಗೆಲ್ಲುವರುಂಟು ನೀನೇನು ||
ನಿಲ್ಲು ಕಾತರಿಸದಿರಾಹವದೊಳು ನಿನ್ನ|ಕೊಲ್ಲುವ ಕ್ರೂರಿ ಬಂದಪನು||೬೮
ಆದೊಡಿಂದಾನು ಸಂತಸವಾಂತೆ ಶಿವ ನಿನ್ನ|ಪಾದಸಂಕಜದ ಸಮ್ಮುಖದಿ ||
ಕಾದಲುಜ್ಜುಗವೆತ್ತು ಕಡಿದಾಡುವೆ ಕೃಷ್ಣ|ಯಾದವಬಲಗೂಡಿ ಬರಲಿ ||೬೯||
ಮಾರಧ್ವಂಸಿ ಮದೀಯ ಕಾಳಗವೆಷ್ಟು|ದೂರವೆಂದೆಂದಿಂಗೆನಲು ||
ಘೋರನೆ ಬಹುದು ನಿನ್ನಯ ಚಿತ್ರರಥದ ಮ|ಯೂರಕೇತನ ಮುರಿದೊಡನೆ ||
ಭೂಪ ನಿಮ್ಮಭಿಮತವಹುದೆ ಬಿಡಾರಕ್ಕ ಪೋಪೆವೆ ನಾವು ಪೇೞೆನಲು ||
ಚಾಪಳತ್ವದೊಳುಪಚರಿಸಿ ಪಾರ್ವತಿಯ ಪ್ರಾ|ಣೇಶನ ಬೀೞ್ಕೊಟ್ಟ
[ವನಕೆ ||೭೧||

ವರಮೋಹನತರಂಗಿಣಿಯೆಂಬ ಕಾವ್ಯವ|ಬರೆದೋದಿ ಕೇಳ್ದ ಜನರ ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವ ಲಕ್ಷ್ಮೀಕಾಂತಬಿಡದೆ ||

— ಅಂತು ಸಂಧಿ ೨೧ ಕ್ಕಂ ಪದ ೧೫೩೮ ಕ್ಕಂ ಮಂಗಳಂ —

# ಇಪ್ಪತ್ತೆರಡನೆಯ ಸಂಧಿ

**ಬಾಣಾಸುರನ ಭೋಗಲೀಲೆ:—**

ಪಠಿಸಿದ ಕೃತಿಯಲ್ಲ ಕೃತಿವೇಟಿಲವೃತದ ಘುಟಿಕೆಯಂತಿದೆ ನಿನ್ನ ಕವಿತೆ॥
ಘುಟಿಸಿತು ನರಕಂಠೀರವ[1] ಕರುಣದಿ। ತುಟಿಬಿಚ್ಚಿ ಪೇಳು ಪುಲ್ಗತೆಯ ॥೧॥

ಸುಮನಸದಿಂದೆ ಕೇಳ್ವಡಡೆ ಸುಜ್ಞಾನಪ್ರಮುದೆ ನಿನ್ನಯ ಕರ್ಣ ಸ್ವರ್ಣ॥
ಯುಮಳತಾಟಂಕಮಾಣಿಕವೆನೆ ಪೇಳುವೆ। ರಮಣೀಯವಾದ ಸತ್ಕೃತಿಯ॥೨

ವಸ್ತ್ರದೊಳವ ಧರಿಸಿದ ಬಾಣಲಿಂಗವ । ಮಸ್ತಕದಲಿ ತಾವುಗೊಳಿಸಿ ॥
ಸೊಸ್ತದೊಳಗಟವ ಮಾಡಿ ಕೈದೊಳೆವನ್ನ। ಕಸ್ತಮಿಸಿದ[2] ಕರ್ಮಸಾಕ್ಷಿ[3] ॥೩

ಕಾಲವನರಿದು ಕರ್ಮವ ತಿದ್ದಿ ಪುನರಪಿ[4]। ಶೀಲದಿ ಶಿವಪೂಜೆಗೆಯ್ದು ॥
ಚೇಲಾ[5]ಭರಣಮಾಲ್ಯಾನುಲೇಪನತಾಂಬೂಲವ ಕೈಕೊಂಡನೊಲಿದು ॥೪॥

ರಾಜಾಕೃತಿಮುಖಿಯರು[6] ರಮ್ಯವಡೆದ ಸ। ರೋಜಸುಗಂಧಿಯರೊಡನೆ ॥
ಭೋಜನಶಾಲೆಯ ಪೊನ್ನಮಟ್ಟ ಭಾಸ್ಕರ। ತೇಜದೆ ಪಂಜು ರಂಜಿಸಲು ॥೫॥

ಪಚ್ಚೆಯ ಪಾವುಗೆಯವಧಾರು ಜೀಯಯೆಂ। ದೆಚ್ಚರು ಪೇಳ್ದ ಪೇಳ್ದನಿಗೆ ॥
ಉಚ್ಚವವಡೆದು ಬಾಣಾಸುರ ಹೊಕ್ಕನು। ಸ್ವಚ್ಛದಿ ಮಣಿಸಜ್ಜೆವನೆಯ ॥೬॥

ಭಿತ್ತಿಯೊಳ್ ಪೊನ್ನಮಟ್ಟಚಾವಡಿ ಮದನಕೈ। ಯೆತ್ತಿದ ಪದೆಪುದಂಡೆಗಳು॥
ಕೆತ್ತಿದ ನಿಖಿಳಮಾಣಿಕವಟ್ಟೆ ಮೇಲ್ಕಟ್ಟು ಮುತ್ತಿನ ಕುಚ್ಚು ರಂಜಿಸಿತು॥೭॥

ಕುಂದ ಮಲ್ಲಿಗೆ ಜಾಜಿ ಸಂಪಗೆ ಸುರಹೊನ್ನೆ। ನಂದ ಪಾದರಿ ಪಾರಿಜಾತ॥
ಗಂಧಸಂಯುಕ್ತ ನಾನಾಪುಷ್ಪಮಾಲೆಗಳಂದೆ ಚೆನ್ನಾದುದಾನಿಳಯ ॥೮॥

ಇತ್ತರದೊಳು ಸಿಂದಿಹ ಜೀವರಸ್ನದ। ಪುತ್ತಳಿಗಳು ಸೊಡರ್ವಿಡಿದು ॥
ಮುತ್ತಡಿಸಿದ ಮಹದುಪಕರಣಗಳಂದೆ। ಚಿತ್ತಯಿಸಿದುವಲ್ಲಲ್ಲಿ ॥೯॥

ರುದ್ರಪಾರ್ವತಿ ವಿಘ್ನರಾಜ ಷಣ್ಮುಖ ವೀರ ಭದ್ರನಂದೀಶ ಮುಂತಾದ ॥
ಚಿದ್ರೂಪಪ್ರಮಥಾದಿಪರಮವಿಗ್ರಹದ ಸ। ಮುದ್ರವ ನೋಡಿ ಹಿಗ್ಗಿದನು॥೧೦॥

ಕೆಲಸಿತನದ ವಿದ್ಯವ ವಿಶ್ವಕರ್ಮಗೆ ಕಲಿಸಿದಾಚಾರ್ಯ ತಾನೆನಿಸಿ ॥
ವಿಲಸಿತರತ್ನನಿರ್ಮಿತ ದಿವ್ಯಪ್ರತಿಮೆಯ। ಸಿಲಿಸಿದ ಮಯನ ಕೀರ್ತಿಸಿದ ॥೧೧॥

---

ಕ. ಪ. ಅ—1. ನರಸಿಂಹ. 2. ಕೈದೊಳೆವಷ್ಟರೊಳಗೆ ಅಸ್ತನಾದ. 3. ಸೂರ್ಯ. 4 ತಿರಿಗಿ. 5. ವಸ್ತ್ರ. 6. ಚಂದ್ರಮುಖಿಯರು.

ದಪ್ಪಕ ರತಿಯು ವಸಂತಕೇಳಿಯು ಚಿತ್ರ|ವಿಪ್ಪುದ ನೋಡಿ ಸಂತಸದಿ ||
ಚಪ್ಪರಮಂಚದ ಮೇಲೆ ಕುಂಕುಮದಲ|ರ್ಪುಪ್ಪತ್ತಿಗೆಯಲಿ ಮಂಡಿಸಿದ||೧೨

ಕರಿಗಮನೆಯರುತಂದರು ರತ್ನಮಯ ಹೊನ್ನ|ಹರಿವಾಣದುಂಬಿದಾರತಿಯ||
ತಿರುಹಿ ನಿವಾಳಿಸಿ ಜಾಂಗುಬೊಲ್ಲೆಂದೆಂದು|ಸಿರಿವೆತ್ತು ನಿಂದರಿಕ್ಕೆಲದಿ |೧೩||

ನೋಡಿದ ವರವಧೂಟಿಯರ ನುಣ್ಮೊಗವಮಾ|ತಾಡಿದವಿನಯೋಪಚರದಿ||
ಬೇಡಿದ ವಸ್ತ್ರಭೂಷಣಪರಿಮಳವಿತ್ತು|ಮಾಡಿದ ಮನಕೆ ಸಂತಸವ |೧೪||

ಇಳೆಯಾಣ್ಮನ ಮನದಿಂಗಿತವರಿತು ಹೊಂ|ಜೆಳೆವಿಡಿದಬ್ಜನೇತ್ರೆಯರು ||
ಎಳವೆಣ್ಣಗಳ ಚಿತ್ತೈಸೆಂದು ಸತಿಯರ ನಿಳಯಕೆ ಬೀಳ್ಕೊಡಿಸಿದರು||೧೫||

ರಾಣಿಯರೋಲಗ ಹರೆದುದು ಪೆಣ್ಮಂಡೆ|ಮಾಣಿಕವಹ ಪಟ್ಟದರಸಿ ||
ಚೂಣಿನೋಟದ ಸೊಬಗಿಂದೆ ಪೂಗೋಲನ|ಕಾಣಿಸಿದಳು ಕಾಂತನೆಡೆಗೆ ||೧೬

* * * * * *

* * * * * *

* * * * * *

ಸುಖವೇನು ಲಕ್ಷ್ಮಿಸುರಾರ್ಚಿತಪದರುದ್ರ|ಬಕುತಿಯ ಮಾಟ್ಕೆನೇಟನುತ||
ಅಕಳಂಕಜಾಣ ಬಾಣಾಸುರ ತನ್ವಿಯ|ಮುಖವನಜವನಲರಿಸಿದ ||೭೯||

ದಪ್ಪಗನರ್ಧಾಂಗಿಯ ರೂಪಿಗಿಮ್ಮಡಿ|ಸುಪ್ರಭಾನ್ವಿತೆ ಕೇಳು ||
ಪುಷ್ಪಸುಗಂಧಗಂಧಿಯರು ಬಂದರು ಬಾಣ|ನುಪ್ಪವಡವನು[1] ಪಾಡುವೊಡೆ ||

ಮೇಳವ ಮಾಡಿ ದಂಡಿಗೆವಿಡಿವರು ಶುದ್ಧ|ಸಾಳಗ ಸಂಕೀರ್ಣವಿಧದಿ ||
ಆಳಾಪ ರಾಯೆ ನೇಮುಗಳಿಂದೆ ನೂರೆಂಟು|ತಾಳಗೀತಗಳ ಪಾಡಿದರು||೨೧||

ನಾರಾಣಿ ದೇಶಾಕ್ಷಿ ಗುರ್ಜರಿ ದೇವಗಾಂ|ಧಾರಿ ಗುಂಡಕ್ರಿಯೆಗಳಲಿ ||
ಆರಭಿ ಸಾಮಂತ ಮಲಹರಿಯಿಂದೆ ಕೈ|ವಾರಿಸಿ ಖಳನ ಪಾಡಿದರು ||೨೨||

ಬಲಿಗರ್ಭಸಂಪೂರ್ಣಚಂದ್ರ ದೈತ್ಯೇಂದ್ರ ಪೆ|ರ್ಬುಲಿಸಮ್ಮ[2]ವಸನತದ್ವಶನ||
ಲಲಿತಾಂಗಿಯ ತೋಳ ತೆಕ್ಕೆಸದ್ರತ್ನಕ್ಕೆಂ|ದೊಲಿದೇಟಪೇಟ ಪಾಡಿದರು |೨೩||

ಅಷ್ಟದಿಗ್ವರಮನೋಭಂಗ ನಿಶಾಚರ|ಭೀಷ್ಟ ಸಾಸಿರ ಭುಜೋತ್ತುಂಗ ||
ಷಷ್ಠಾಸ್ಯಪಿತ[3] ಪಾದಭೃಂಗ ಶ್ರೀ ಶಿವಲಿಂಗ|ನಿಷ್ಟ ಏಟೆಂದು ಪಾಡಿದರು ||೨೪||

---

ಕ. ಪ. ಅ—1. ಸುಪ್ರಭಾತದ ಹಾಡುಗಳನ್ನು.  2. ಚರ್ಮ.
3. ಕುಮಾರಸ್ವಾಮಿಯ ತಂದೆಯಾದ ಶಿವನ.

ತುಱುಗಿತು ತುಂಬಿ ಕತ್ತಲೆ ಭಾಸ್ಕರಗಂಜಿ ಮುಱಿದೋಡಿ ಬನವ ಹೊಕ್ಕಂತೆ ||
ಮುಱುಗಿದುವೆಳಜೊನ್ನವಕ್ಕಿ ಕಾಸಾರದೆ | ಮುಱಿಗಣ್ಣ ವಿಹಗ ಕೂಡಿದುವು ||
ಮೃದುನುಡಿಗಳ ರಾಜಕೀರ ಕೋಕಿಲಸ್ವರ ಪುದುಗೂಡಿದಂತೆ ಗಾನೆಯರ ||
ಮಧುರಾಳಾಪಗೀತವ ಕೇಳ್ದು ಖಳರಾಯ | ಚದುರ ಮೈಯ್ಮುಱಿದೆದ್ದನೊಲಿದು ||
ಗಂಗಾಜೂಟ ಲಲಾಟಾಕ್ಷ ಜಯಯೆನು | ತಂಗೆಯ್ಯ ಸಿಖಿಲಾಂಗುಲಿಯ ||
ಮಂಗಳವೃಷಭಮುದ್ರೆಯ ನಮಿಸಿದ ಮೇಲೆ | ಭೃಂಗಕುಂತಲೆಯನೀಕ್ಷಿಸಿದ ||
ಅಚ್ಚಕಪಿಲವರ್ಣದ ಪಶು ಖುರಶೃಂಗ ಬೆಚ್ಚಂತೆ ಸ್ವರ್ಣಕೋಹಳಕೆ ||
ವಚ್ಚ[1] ಸಹಿತ ಬಂದಿರೆ ಪುಚ್ಛವನೋಡಿ | ಯುಚ್ಚವಿಸಿದ ಬಾಣಾಸುರನು || ೩೯ ||
ಜಲಮಲಗಳೆದು ಶೌಚವ ಮಾಡಿ ರನ್ನಬ | ಚ್ಚಲವೇಱಿ ಮಿಂದು ಸೌಖ್ಯದಲಿ ||
ವಿಲಸಿತದೇವಾಂಗವಸ್ತ್ರವನುಟ್ಟು ಹೊಂ | ಗೆಲಸವಾವುಗೆಯ ಮೆಟ್ಟಿದನು ||
ರಾಜಾರ್ಕಶಿಖಿನೇತ್ರನ[2] ಭಕ್ತವರದೇವ | ಪೂಜೆಯ ನಿಳಯವ ಹೊಕ್ಕು ||
ಓಜೆಯೊಳೆಡೆಮಾಡಿದ ಗದ್ದುಗೆಯಲ್ಲಿ | ತೇಜೋಮಯದ ಮಂಡಿಸಿದ || ೪೦ ||
ಜಾತಿರುತ್ರಾಕ್ಷಿಯ ಮಣಿಮಾಲೆದಳೆದು ವಿಭೂತಿಯ ಧರಿಸಿ ಹಸ್ತದಲಿ ||
ಜ್ಯೋತಿರ್ಲಿಂಗವ ಪಿಡಿದಭಿಷೇಕವ ಮಾಡಿ ಚಾ | ಚಿದ ಗಂಧಾಕ್ಷತೆಯ || ೪೧ ||
ಚೆಂಗಣಿಗಿಲೆ ಸೇವಂತಿಗೆ ಕತ್ತುರಿ ಸಿಂಗದ ಮುಡಿವಾಳ ದವನ ||
ಮಂಗಳತುಳಸಿ ಬಿಲ್ವದಪತ್ರಗಳ ಶಿವ ಲಿಂಗಾರ್ಪಿತವ ಮಾಡಿದನು || ೪೨ ||
ಹೊತ್ತಿದೇಕಾರತಿ ಪಂಚಾರತಿ ಕಡ್ಡಿ | ಬತ್ತಿ ನೀಲಾಂಜನವಲಗೆ ||
ಮತ್ತೆ ನಾನಾವಾದ್ಯರಭಸದಿಂ ಮೊಱಗಲು | ಯೆತ್ತಿದ ಮಹದಾರತಿಯ || ೪೩ ||
ಧೂಪದೀಪಾರತಿ ನೈವೇದ್ಯ ತಾಂಬೂಲ | ಶ್ರೀಪರಮೇಶಗರ್ಪಿಸಿದ ||
ಆಪಾರಮಹಿಮನ ವಸ್ತ್ರದೊಳಡಗಿಸಿ | ಸ್ಥಾಪನೆಗೆಯ್ದು ಮಸ್ತಕದೆ || ೪೪ ||
ಕಾವನೆಂದರೆ ಕೊಲ್ವ ಕೊಲ್ವನೆಂದರೆ ಮತ್ತೆ | ಕಾವನಂಘ್ರಿಯ ಪೂಜೆಗೆಯ್ದು ||
ದೇವಪೂಜೆಯ ಸದನವ ಪೊಱಮಟ್ಟನು | ಚಾವಡಿಗೈತಂದ ಮುದದಿ || ೪೫ ||
ಅದೆ ಬಂದ ರಾಯನೆಂದೆನೆ ಕೇಳ್ದು ಮನ್ನೆಯ | ರೆದೆಗೆಟ್ಟು ಚಾವಡಿಯೊಳಗೆ ||
ಮದಗಜಯೂಥ ಕಂಠೀರವ ಬರೆ ಕಂಡು | ಗದಗದಿಸಂತೆ ಬೆಚ್ಚಿದರು || ೪೬ ||
ದಾಸಮಂಟಪ ಸಿಂಹಾಸನದಲಿ ಬಂದು | ದಾನವಾಧೀಶ ಮಂಡಿಸಿದ ||
ದಾನಸತ್ಪಾತ್ರರ ಬರಹೇಳು ವಿಬುಧಪ್ರಧಾನ | ಸಂದೋಹವೈತರಲಿ || ೪೭ ||

---

ಕ. ಪ. ಅ—1. ಕರು. 2. ಚಂದ್ರ, ಸೂರ್ಯ, ಅಗ್ನಿ ಎಂಬ ನೇತ್ರಗಳುಳ್ಳವನ.

ಯಾಗಪೂರ್ಣಾಹುತಿಯನುಮಾಡಿ ವರಹವಿ|ರ್ಭಾಗದಂಗಾರಕಜ್ಜಳವ ||
ರಾಗದೆ ಪೌರೋಹಿತರ್ತಂದು ತನ್ಮಿತ್ರ|ಯೋಗದೆ ನೊಸಲಿಗಿಕ್ಕಿದರು ||೪೮||
ವೇದಶಾಸ್ತ್ರಾಗಮಸಂಪನ್ನರಾಶೀ|ರ್ವಾದದೆ ಮಂತ್ರಾಕ್ಷತೆಯ ||
ಭೂಧವಗಿತ್ತು ಮಂಡೆಯಮೇಲೆ ಚೆಲ್ಲಿದೊ|ಡಾದುದನೇಕರಾಶಿಗಳು ||೪೯||
ಚೆಂದಿರು ತೆಗೆದು ಕಾಂಕುಳೊಳಿಟ್ಟು ನಿಟಿಲದೊ|ಳೊಂದಿದ ತ್ರ್ಯಪುಂಡ್ರ
[ದ್ವಿಜರು ||
ಬಂದಿದೆ ತಾಕುತಾಕಲಿ ತಿದ್ದಿಕಳುಹುವ್ರೊ|ಡೆಂದಿಗುಂ ತೀರದೆಂಬಂತೆ ||೫೦||
ಜಿತಪಾರದಿಂದೋದುವ ಕರಣಿಕಪುರೋ|ಹಿತವಾಕ್ಯದಿಂದೆ ಯೋಗ್ಯರಿಗೆ||
ಶತಸಾಸಿರಲಕ್ಷಕೋಟಿ ಗೋದಾನವ|ಮಿತಿಮಾಡಿ ಧಾರೆಯನೆಱೆದ ||೫೧||
ನೋಡಲು ವೇದಾಗಮಶಾಸ್ತ್ರನಿಪುಣರ್ಗೆ|ಷೋಡಶದಾನವನಿತ್ತು ||
ನಾಡಾಡಿ ದ್ವಿಜರಿಂಗೆ ವಿತ್ತವ ಮತ್ತವರ್|ಬೇಡಿದಂತಿತ್ತು ಬೀಳ್ಕೊಟ್ಟ||೫೨||
ಹೊನ್ನಮೊಟ್ಟೆಯಹೊತ್ತು ವಿಪ್ರದಾರಿದ್ರ್ಯವಿ|ಚ್ಛಿನ್ನವಾಯಾ ಸಮಯದಲಿ||
ಸನ್ನದ್ಧರಾಗಿ ಕುಂಭಾಂಡದೊಳ್ ಬಂದು|ಛಪ್ಪನ್ನದೇಶದ ರಾಯರುಗಳು ||
ಹೆದ್ದೊರೆಗಳು ಕೈಗಾಣಿಕೆಯಿತ್ತಡ್ಡ| ಬಿದ್ದರು ಬಿಂಕವ ಬಿಸುಟು ||
ಇದ್ದರು ಬಿನ್ನಹಗೆಯ್ದೊಡಬಲದ ನಿಂ| ದಿರ್ದರು ಕುಂಭಾಂಡ ಸಹಿತ ||೫೪||
ವರಮೋಹನತರಂಗಿಣಿಯೆಂಬ ಕಾವ್ಯವ| ಬರೆದೋದಿ ಕೇಳದ ಜನರ ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವ ಲಕ್ಷ್ಮೀಕಾಂತ ಬಿಡದೆ||

—ಅಂತು ಸಂಧಿ ೨೨ ಕ್ಕಂ ಪದ ೧೪೪೩. ಕ್ಕಂ ಮಂಗಳಂ—

## ಇಪ್ಪತ್ತಮೂಱನೆಯ ಸಂಧಿ

ಉಷಾದೇವಿಯ ಶೃಂಗಾರ :—

ಗುಟ್ಟುಡರದೆ ಕಾದ ಚೆಲುಪಾಲು ಮಕ್ಷಿಕೋ|ಚ್ಛಿಷ್ಟವಿಲ್ಲದ ಜೇನುತುಪ್ಪ||
ಕಟ್ಟುಬೀಱದ ಸಕ್ಕರೆಯಿಂದೆ ಸವಿಮಾತ|ನೆಟ್ಟನೆ ಪೇಳ್ವುದೆನ್ನೊಡನೆ |೧||

ಮಡದಿಯು ಮಂಡೆಮಾಣಿಕವೆ ಕೇಳೆಸರ್ವ ಜೇ|ನ್ನೊಗ್ಗಡದಂತೆ ಮೆತ್ತಾ
[ವ್ಯರುಚಿಯು ‖
ವೃಷಭಕೇತು ಬಾಣ ಗೀರ್ವಾಣಸೇವಿತ ರಮ್ಯ|ವೆಡೆದಿರ್ದ ಸಿಂಹವಿಷ್ಟರದಿ‖೪‖
ಹೊಗಳುವರಾಳಾಪಿಸುವರೋದುವರು ವೀ|ಣೆಗಳ ಬಾಜಿಸುವ ಪೆಣ್ಜನರು‖
ಯುಗಳಪಕ್ಷ[1]ದೊಳೆಸೆದಿರಲು ಕುಂಭಾಂಡನ| ಮಗಳೈತಂದಳಾಕ್ಷಣದೆ ‖೫
ಬಲಿಕುಮಾರಕನ ಪಾದವ ಕಂಡು ಮುಕುಳಿತಾಂ|ಜಲಿವೆತ್ತು ಕಾಮ
[ರೂಪುಗಳ |
ಬಲಿದೊಂದೊಂದ ತೋಱಿಸಿ ಜನರರ್ಥಿಯ[2]|ಸಲಿಸಿದಳೇನ ಹೇಳುವೆನು ‖
ಏಕೆ ನೀ ಬಂದೆ ಭಾಮಿನಿಶಿರೋಮಣಿಚಿತ್ರ|ಲೇಖೆ ಬಿನ್ನಹವಮಾಡೆನಲು‖
ಲೋಕೇಶನ ಕಂಡು ಬಹೆನೆಂದು ತವಪುತ್ರಿ| ತಾ ಕೇಳಕಳುಹಿದಳೊಡೆಯ ‖
ಆದೊಡೊಳ್ಳಿಯದಾಯಿತು ಗಿರಿಜೇಶನೊಳ್|ಭೇದವಿಲ್ಲದೆ ಭಕುತಿಯುಳಿ ‖
ಪಾದಪದ್ಮವ ನಿರೀಕ್ಷಿಸಿ ಬೇಗ ಬಹುದೆಂದು| ಭೂಧವ ಬೀೞ್ಕೊಟ್ಟನವಳ‖೬
ಅಪ್ಪಣೆವಡೆದು ಬಂದುಸಿರ್ದಳು ಬಾಗಿಲೊ|ಳಪ್ಪಖೊಜ್ಜೆಯ[3]ದೈತ್ಯರಿಗೆ‖
ಉಪ್ಪರಿಗೆಯನೇಱಿ ಕುವರಿಯು ಮನಸಿಂಗೆ| ಬಪ್ಪಂತೆ ಸುದ್ದಿವೇೞ್ದಳು‖೭‖
ಗಂಡೇಭಗಮನೆ ಚಿತ್ತವಿಸು ನಿನ್ನಯಹೆತ್ತ|ತಂದೆ ಬೀೞ್ಕೊಟ್ಟ ಧೂರ್ಜಟಿಗೆ‖
ಸಂದೇಹವಿಲ್ಲದೆ ಶರಣೆಂದು ಬರ್ಪೆವೇ|ೞೆಂದೆನಲವಳು ಹಿಗ್ಗಿದಳು ‖೮‖
ಜಾತಿಕಪ್ಪುರವೀಳ್ಯವ ಕೊಟ್ಟು ಪ್ರಾಣಸಂ|ಗಾತಿಯು ಪಿರಿದು ಕುಸ್ತರಿಸಿ ‖
ಜ್ಯೋತಿಸ್ವರೂಪನ ತೋಱಿಸಿ ತನ್ನ ಸಂ|ಪ್ರೀತಿಯು ಸಲಿಸಹೇೞ್ದಳು ‖೯‖
ತುಂಡವ[4]ಪಿಡಿದುಮುದ್ದಿಸಲೇಕೆನೀನೊಪ್ಪು|ಗೊಂಡೊಡೆಮನ್ಮನೋವಾಂಛೆ‖
ಪುಂಡರೀಕಾಕ್ಷಿ ಸಿಂಗರವಾಗು ಮೇರುಕೋ|ದಂಡಗೆ[5]ಪೊಡೆಮಟ್ಟು ಬಹೆವು|
ಎನಲುಷಾದೇವಿ ಸಂತಸಗೊಂಡುಮಿಸಾಟುಜ|ವ್ವನೆಯರಿಗಂದು ಸೂಚಿಸಲು |
ಮನಗೊಂಬ ವಸ್ತ್ರಭೂಷಣಮಾಲ್ಯಾನುಲೇ|ಪನವತಂದರು ಕುಮಾರಿತಿಗೆ ‖
ಅಗುರುಕುಂಕುಮ ಪಚ್ಚೆಗಪ್ಪುರ ಪನ್ನೀರು|ಮೃಗನಾಭಿ[6]ಮುಖ್ಯಲೇಪನದಿ‖
ತಿಗುರನಿಕ್ಕಿದರಾಳಿಯರು ಸತ್ಕುಮರಿಯು|ಹೊಗರೇಱ್ವ ಹೊಂಬಣ್ಣಮೆಯ್ಗೆ ‖

---

ಕ. ಪ. ಅ—1. ಎರಡುಕಡೆ. 2. ಇಷ್ಟಾರ್ಥವನ್ನು.
3. ಅಂತಃಪುರದ ಕಾವಲುಗಾರರಾದ ನಪುಂಸಕರು. 4. ಮುಖವನ್ನು
5. ಈಶ್ವರನಿಗೆ. 6. ಕಸ್ತೂರಿ.

ವರಚಂದ್ರಿಕೆಯು ಪಾವುಡಕೆಶೋಭಿಸುವ ಪೊಂ|ಬರಹದ ಶುಭ್ರದೂವಟುವ|
ಸ್ಮರಬಾಣಗಱಿಯಂತೆ ನಿಱಿವಿಡಿದುಡಿಸಿದರ್ ದರಹಾಸಮುಖಿಗೆಸಂಭ್ರಮದೆ ||
ಮಕರಾಂಕ ಮಂಡಿತ ಪೊಂಗಣೆಗಳ್ಗೆ ಮೌ|ಕ್ತಿಕಮಿಾಂಟೆಯು ಸಾರ್ಚಿದಂತೆ||
ನಖಚಕ್ರದಶಕದಿಂ ಬೆರಲ್ಗಳೊಪ್ಪಿರ್ದುವಾ|ಯುಕ[1]ನಂಘ್ರಿಯುಗಳಪಲ್ಲವದಿ||
ಪಡೆದೊಡನೆಸೆವ ಹೊಮ್ಮಿಗಮಱಿಮುಸುಡಿನೊಳ್| ಮಡ ಶೃಂಗದೇಱ್ಗೆ
[ತತ್ಪರಡು[2]||
ಜಡಗಂಧರಹಿತಕೆವಿಮ್ಮಾನ್ಗಳಂದದಿ ಕಿಱು|ದೊಡೆ ಮೆಱೆದುವು ಕುಮಾರತಿಯ||
ಶಂಬರಜಿತು[3]ಗೇಹದ್ವಾರತೋರಣಹೇಮ|ಗಂಭಂಗಳ್ ಚೈತನ್ಯವಡೆದು ||
ಮುಂಬರಿದೆಡೆಯಾಡುವಂತೆ ತತ್ಕುವರಿಯ|ಹೊಂಬಾೞೆದೊಡೆಗಳೊಪ್ಪಿದುವು||
ನಗಜಾವರಶತ್ರು[3]ಗರುಡಿಯೊಳ್ ಬಾಹುಮೂ|ಲಗಳಸತ್ರಾಣಿಸಲೆನುತೆ||
ನೆಗಹುವ ಹೊಸಹೊನ್ನ ವಜ್ರಮುಷ್ಟಿಗಳಂತೆ|ಜಘನದ ತಳಗಳೊಪ್ಪಿದುವು||
ಕಡುಜಾಣೆರತಿಯ ನರ್ತಿಸಿಲಾಗತಿವಟ್ಟ|ಗುಡುವ ಕಾಮನಕೆಯ್ಯಹೊನ್ನ||
ಉಡುಕಿನ[1]ಮಧ್ಯಕಿಂದತಿಶಯಮಹ ಸಣ್ಣ|ನಡು ವಿರಾಜಿಸುತಿರ್ದುದವಳ||೧೮
ನಳಿನಪತ್ರಾಯತೇಕ್ಷಣೆಯಂಗದೇಶದೊಳ್| ಪುಳಿಸಿದ[5]ಲಾವಣ್ಯವನದಿ||
ಲುಳಿವೆತ್ತು ರತಿಕಾಮದೇವರಾಡುವ ಕಾಸುಗುೞಿ[6]ಯೆನೆ ಹೊಕ್ಕುೞೊಪ್ಪಿ
[ದುದು ||೧೯||
ಸುರನರನಾಗಲೋಕದಿ ನರ್ತಿಸುವ ಸೌಂ|ದರವೆಣ್ಣು ಬಾಣನಂದನೆಯ ||
ಸರಿಯಿಲ್ಲವೆಂದು ಮೂವೆರಲಿಂದೆ ರತಿರಾಜ| ಬರೆದಂತೆ ತಿವಳಿ ರಾಜಿಸಿತು ||
ರಾಮಣೀಯತೆವೆತ್ತ ಸುೞಿನಾಭಿಕುಚಮಧ್ಯ|ಸೀಮೆಯನೊಲಿದೀಕ್ಷಿಸಲು ||
ಕಾಮೋಜ[7]ಪಿಡಿದಸೂತ್ರದ ಕರ್ಗಱೆಯೆನೆ|ರೋಮಾಳಿನಸುಪರ್ಬಿತೊಡಲ||
ಕಲೆವಂತ[8]ವಿಧಿ ಜಗತ್ರಯವ ಸೌಂದರದೆ ಕೋ|ಮಲೆಯ ನಿರ್ಮಿಸಿ ಮಿಕ್ಕ
[ಸೊಬಗ||
ಸಲೆ ರಾಸಿಯೆರಡನೆ ನೆರಹಿದಂದದೆ ಬಟ್ಟ|ಮೊಲೆಮೆಱೆದುವು ಕುಮಾರತಿಯ||

---

ಕ. ಪ. ಅ—1. ಆ ಅಕ್ಕನ. 2. ಅವಳ ಹರಡು, ಗುಲ್ಫ. 3. ಮನ್ಮಥ.
4. ಕೃಶವಾದ. 5. ಶುಭ್ರವಾಗಿ ಮಾಡಿದ(?) 6. = (?)
7. ಕಾಮನೆಂಬ ಓಜ. 8. ಕಾರ್ಯವನ್ನು ಮಾಡುವುದರಲ್ಲಿ ಚತುರನಾದ.

ಹೊರಡಾಗದಂತೆ[1] ನಾಲ್ಕ್ರಗ ಜಂತದಲಿ ಹೊಂ|ಗರಡಿಗೆಗಡೆದು ಕರ್ಮಣಿಯು||
ಬಿರುಡೆಯು ಬಿಗಿದಿಟ್ಟನೆಂಬಂತೆ ಬಲ್ಕ್ರಲೆ|ಯೆರಡರಮೊಗಪು ತೋಱದುವು||
ಈಷಣತ್ರಿತಯಾ[2]ದಿಗಳ ನೆಗ್ಗಿಸುವ ಮು|ನೀಶಮುಂತಾದ ಗ್ರಾಹಕರ||
ಘಾಸರೆಂದೆನಿಸಿ[3] ಬಂಧಸವ ಮಾಡುವ ಕಾಮ|ಪಾಶವೊ ಉಷೆಯು ತೋಳೆ
[ರಡೊಂ||೨೪||

ಪರವಶದಿಂದೆ ಮಾತಾಡುವ ಸಿತಶಂಖ|ವರನಾದ ಪೂತವಲ್ಲೆಂದು||
ಸ್ವರತ್ರಿಸಪ್ತಕರಾಗರಸವೆಂದು ಕಂಬುಕಂ|ಧರ ಮೆಱೆದುವು ಕುಮಾರತಿಯ||
ಕೆಂದಳಿರ್ ಕುಂದ ಸಂಪಗೆ ನೈದಿಲು ಪಿಚು|ಮಂದಪತ್ರಿಕೆ ಚಂದ್ರಭಾಗ||
ಗಂಧಪೋಷಕ ಶಶ ಮಿಶ್ರಿತ ಮದನಾರ|ವಿಂದ ಕಣ್ಗೊಳಿಸಿರ್ದುದವಳ|೨೬||
ಪೂರ್ಣಾಬ್ಜವದನೆಯು ತನುಲಾವಣ್ಯವು ಹಾರ್ಣವದೊಳಗೆ ಶೋಭಿಸುವ||
ಸ್ವರ್ಣಮೌಕ್ತಿಕದ ಚಿಪ್ಪುಗಳೆಂದೆಂಬಂತೆ|ಕರ್ಣಗಳ್ ಕಂಗೊಳಿಸಿದುವು||೨೭||
ವಿಕಸಿತವದನಾಂಭೋರುಹ ಭರಿತಸ|ನ್ಮಕರಂದ ಜಲವ ಚೀತ್ಕರಿಸಿ||
ಸೊಕವಡೆದಲರ್ವಕ್ಕಿಗಳಂತೆ ನೀಲಾ|ಳಕವಿರ್ದುದವಳ ಮಸ್ತಕದಿ||೨೮||
ಕಿಱುವೆರಲುಗುರಿಂದೆ ಬೈತಲೆದೆಗೆದಾಗ|ಮಱಿದುಂಬಿಗುರುಳ ಮಾಸಿಸಿಗೆ||
ತುಱುಬನಿಕ್ಕಿದರು ನೋಟ್ಪರ ದೃಷ್ಟಿಕಣ್ಣಿಗೆ|ಕಱುಬನಿಕ್ಕಿದರೆಂಬಂತೆ|೨೯||
ಜಾತಿಮುತ್ತುಗಳು ಕೇವಣಿಸಿರ್ದ ವರ ರತ್ನ|ಕೇತಕಿಯೆಸಳ ಕಟ್ಟಿದರು||
ಜಾತಿವಡೆದ ಪೆರ್ದುಱುಬಿನ ಮೇಲೆ ತಜ್ಜಾತಿಮಾಣಿಕವ ಕಟ್ಟಿದರು|೩೦||
ಕೇಳಾಕುವರಿಯು ನೊಸಲಿನರ್ಧೇಂದು ಸಂ|ಮೇಳಕ್ಕೆ ಬರುವ ತಾರಕೆಯು||
ಜಾಳವೆಂಬಂತೆ ಮುತ್ತಿನ ಬೈತಲೆಯ ಸು|ಡಾಳಮಾಲಿಕೆಯ ಕಟ್ಟಿದರು||೩೧
ಅಂಗಜದೇವನ ವಾಮಹಸ್ತದೊಳಪ್ಪ|ಸಿಂಗಾಡಿ[4]ಸೆಡೆವಿಡಲೊಡನೆ||
ತುಂಗಕಜ್ಜಲವ ಲೇಪಿಸಿದಂತೆ ಕಾಶ್ಮೀರ[5]|ಮಂಗಳ ತಿಲಕವಿಕ್ಕಿದರು||೩೨||
ನೋಡಿದೊಡುಭಯ ಲೋಚನ ನೀಳ್ದು ಕರ್ಣವ|ಕೂಡುವುವೆಂದು
[ಭಿನ್ನತೆಯು||

---

ಕ. ಪ. ಅ—1. ಹೊರಳದೆ ಇರುವಂತೆ. 2. ಮನುಷ್ಯನಲ್ಲಿರುವ ಪ್ರಬಲವಾದ ಮೂರು ಆಸೆಗಳು: ಅವು ಯಾವುವೆಂದರೆ—ಹೊನ್ನಿನ ಆಸೆ, ಹೆಣ್ಣಿನ ಆಸೆ, ಮಕ್ಕಳ ಆಸೆ. 3. ನೋಟಕ್ಕೆ ಮಾತ್ರ ಅಂಧವರೆಂದು ಮಾಡಿ.
4. ಬಿಲ್ಲು. 5. ಕುಂಕುಮಕೇಸರಿ.

ಮಾಡಿ ಮಂಡಲವಲರ್ಚಿಸುವಂತೆ ಕಣ್ಗಳ್ಗೆ|ಕಾಡಿಗೆ ವಿಡಿದೆಚ್ಚಿದರು||೩೩||
ಚಂದಿರ ಸ್ವರವಾಗಿ ಪೊಱವಟ್ಟು ಬಹ ಮಾರ್ಗ|ವೆಂದು ನಾಸಾಪುಟಗೆಲದಿ||
ನಿಂದಿಹ ರೋಹಿಣಿನಕ್ಷತ್ರವೆಂಬಂತೆ|ಯೊಂದಿಸಿದರು ಮೂಕುತಿಯ ||೩೪||
ಜಿತಕಾಮರುಗಳ[1] ಜಯಿಸುವ ಮನ್ಮಥ|ರಥ ಚಕ್ರಯುಗಳವೆಂಬಂತೆ ||
ಶತಕೋಟಿ ನೀಲಮಾಣಿಕ್ಯದೋಲೆಯ ಬಾಣ|ಸುತೆಯ ಕರ್ಣದೊಳು
[ಸಾರ್ಚಿದರು||೩೫||
ಅತ್ರಿಮುನೀಶನಂದನಜೂಟಭಕ್ತನ[2]|ಪುತ್ರಿಯ ಗಂಡಯುಗಳದೆ||
ಚಿತ್ರಿಸಿದಂತೆ ನಾನಾವರ್ಣದಲಿ ಕರ್ಣ|ಪತ್ರಿಕೆ ಪ್ರತಿಬಿಂಬಿಸಿದುವು||೩೬||
ದರ್ಪಕಶಾಸ್ತ್ರವಲ್ಲದೆ ಧರಿತ್ರಿಯೊಳಡಿ|ದಿರ್ಪ ನಾನಾಶಾಸ್ತ್ರಗಳನು||
ತಪ್ಪಿಸೆ ಶ್ರವಣನಾಳವ ಮುಚ್ಚುವಂದದೆ ಕೊಪ್ಪನಿಕ್ಕಿದರು ಕರ್ಣದಲಿ ||೩೭||
ಕಾಂತಾಕಚಭಾರದಿಂದೆ ನುಣ್ಗೊರಲು ಮುಂ|ದೆಂತಹುದೆಂದು ಸಂದೆಗದೆ||
ಸಂತತ ಬಣ್ಣಗಲ್ಲಗಳ ಕೇವಣಿಸಿರ್ದ|ಚಿಂತಾಕ[3] ಬಲುಹನಿಕ್ಕಿದರು||೩೮||
ಕಾಯುವ ನೋಡಿ ಶಸ್ತ್ರದೊಳರಿದೇಱಿಂದೆ|ಸಾಯದೆ ಶ್ರೀಯ ಲೋಭದಲಿ||
ತೋಯಜಾಕ್ಷಿಯ ಕಂಠಮಾಲೆಯ ಕುಚಮಧ್ಯ|ನಾಯಕರತ್ನ ರಂಜಿಸಿತು||
ರಜನೀಚರಹರ[4]ನಾತ್ಮಸಂಭವ ತನ್ನ|ಗಜಮಸ್ತಕದರಳೆಲೆಯ||
ನಿಜಲೀಲೆಯೊಳಮರಿಸಿದಂತೆ ಕುಮರಿಗೆ | ಭುಜಪತ್ರಿಕೆಯ ಸಾರ್ಚಿದರು||೪೦||
ಕಡುಗಲಿ ಕಾಮ ತನ್ನುಭಯಹಸ್ತದ ಗದೆ|ಗಡರ್ಚಿದ ಮಣಿಗಟ್ಟನಂತೆ||
ಬಿಡಯವಿಲ್ಲದೆ ಕುಮರಿಯ ತೋಳ ಭಾಪುರಿ|ಕಡಗ ಕಂಕಣವನಿಕ್ಕಿದರು ||
ಅಂಗಜಾತನ[5] ಪುಷ್ಪಶರ ಬಿರಿದಪುವೆಂದು|ಹೊಂಗಟ್ಟುಗಳ ಬಿಗಿದಂತೆ ||
ತೊಂಗಲು ಸೆಳ್ಳಗುರ್ವೆರಲಿಂಗೆ ಮಾಣಿಕ|ದುಂಗುರಗಳನಿಕ್ಕಿದರು ||೪೨||
ಹೆಂಗಳ ರನ್ನೆಯ ಹೇಮವಕ್ಷವನಾಂತ|ಕಂಗೊಳಸುವ ಬಟ್ಟಮೊಲೆಯ ||
ಅಂಗನೆಯುಡಿಯಿಡಲಲುಗಿ ಜಗ್ಗುವುದೆಂದು|ಮಂಗಳ ರವಕೆಯಿಕ್ಕಿದರು ||೪೩||
ಏಣಲೋಚನೆಯ ಬಲ್ಮೊಲೆಯಭಾರಕೆ ನಿ|ತ್ರಾಣಿಸಿ ನಡು ನಿಲ್ಲದೆಸುತೆ||
ಕೇಣವಿಲ್ಲದೆ ರತ್ನಕೀಲಿತ ಸ್ವರ್ಣದೊ|ಡ್ಯಾಣವ ತಂದಿಕ್ಕಿದರು ||೪೪||

---

ಕ. ಪ. ಅ—1. ಕಾಮುಗಳನ್ನು ಜಯಿಸಿದವರನ್ನು. 2. ಚಂದ್ರಚೂಡನಾದ ಶಿವನ ಭಕ್ತನಾದ ಬಾಣಾಸುರನ. 3. ಅಡ್ಡಿಗೆ. 4. ವಿಷ್ಣು. 5. ಮನ್ಮಥ.

ಸಾಮಜಕಂಠೀರವ[1]ಮಸ್ತಕಮಧ್ಯ|ಸೀಮೆಯ ರೇಖೆಯೆಂಬಂತೆ ||
ಕೋಮಲ ಬಿರುದಿನೊಳ್ಕಟಿಸೂತ್ರಕಾಂಚೀ|ದಾಮವ ತಂದಿಕ್ಕಿದರು ||೪೫||
ಆಯತಿ ಹೆಣ್ಣುಗಳೇನು ಗಹನವೆಂಬ | ಬಾಯಿಬಡಿಕ ತವಸಿಗಳ ||
ತಾಯೆ ನೀ ಕೆಡೆಮೆಟ್ಟೆನುತೆ ಕಾಲಂದುಗೆ| ಪಾಯವಟ್ಟವ ತಂದಿಕ್ಕಿದರು||೪೬||
ಸೆಕೆಯಿಲ್ಲದಾವಗಮುರಿವ ಕೆಂಗಿಡಿಯ ಮಾ|ಲಿಕೆಯಂತೆ ಮಂಗಳವಡೆದ||
ನಿಖಿಳರತ್ನಂಗಳಡಸಿದ ಮುದ್ರಿಕೆ ಮಂ|ಟಿಕೆಯನಿಟ್ಟರು ಬೆರಲ್ಗಳಗೆ.||೪೭||
ಕಟ್ಟಾಳುಕಾಮದೇವನ ತಾತ್ಪರಿಯದ|ಪಟ್ಟದಾನೆಯನು ಬಂಧಿಸದೆ ||
ಬಿಟ್ಟುದುಂಟಾದೊಡೆಲ್ಲರ ಜಗುಳ್ದಱಿವುದೆಂ|ದಿಟ್ಟರು ಕಾಲ್ಸಿಗಳವನು ||೪೮||
ಆಪಾದಮಸ್ತಕ ದಿವ್ಯವಿಗ್ರಹದ ಸ್ವ|ರೂಪವೊಂದೊಂದ ನೋಡಿದೊಡೆ |
ಶ್ರೀಪತಿಯಾತ್ಮಸಂಭವನ ಪೂಗೋಲ ಸಂ|ತಾಪಕ್ಕೆ ಬೀಱದರಾರು ||೪೯||
ಮೊಗ ಬಾಹುಮೂಲ ನಿರ್ಮಲಕಕ್ಷ ಗುರುಕುಚ|ಯುಗಳದೆ ನಟ್ಟ ದಿಟ್ಟಿ [ಯನು ||
ತೆಗೆವನದಾವ ವೀರಾದಿವೀರನು ಪ|ನ್ನಗನರಸುರಲೋಕದೊಳಗೆ ||೫೦||
ಭುಜಗಾಭರಣನ ಮರಳ ಜೈಸುವೆನೆಂದು ಅಜಸಹೋದರ ಕೂರ್ತು ತನ್ನ ||
ವಿಜಯಲಕ್ಷ್ಮಿಯ ಪೂಜೆಗೆಯ್ವೆನೆಂಬಂತೆ ಬಾ|ಣಜೆಯಿರ್ದಳತಿರೂಪವಡೆದು ||
ಆಕೆಯ ರೂಪಿಂಗೆ ಪ್ರತಿಬಿಂಬವೆನೆ ಚಿತ್ರ|ಲೇಖೆಯ ಸಿಂಗರಿಸಿದರು ||
ಈಕೆಯ ಕೊಂಡಾಡುವೊಡೊಂದು ನಾಲಗೆ | ಸಾಕೆನಿಸದು ಸತ್ಕವಿಗೆ ||೫೧||
ಚೆಲುವೆಗೆ ತಕ್ಕ ಸಿಂಗರವ ನಿರ್ಮಿಸಿ ಮನ|ದೊಲವಿಂದೆ ನೋಡಿ ದಾದಿಯರು||
ಉಲುಹಿಂಗೆ ಹರಳುದುಂಬಿದ ರತ್ನಮಯ ಹೊನ್ನ| ನಿಲವುಗನ್ನಡಿಯ [ತೋಱಿದರು ||೫೨||
ಪುರ್ಬುಗಳಂತೆ ಲೋಚನದಂತೆ ಕುಚದಂತೆ|ಪರ್ಬಿದ ನಳತೋಳ್ಗಳಂತೆ||
ಇರ್ಬರ ರೂಪು ತಾತ್ಪರಿಯಾಗಿರೆ ಕಂ|ಡುರ್ಬಿದರತಿಹರ್ಷದಲಿ ||೫೪||
ಗಾಡಿಕಾತಿಯರಿರ್ವರ ಲಾವಣ್ಯವ | ನೋಡಿ ರಕ್ಷೆಯ ಬೊಟ್ಟನಿಟ್ಟು ||
ಜೋಡಿಸಿ ಸಕಲ ಸನ್ನಣದಿಂದೆ ಪಯಣವ| ಮಾಡಿ ಹರ್ಮ್ಯವನಿೞಿಸಿದರು||
ಮೇಲೇೞುಲೋಕವ ಜಯಿಸಿಮಾಯಾಂಗನೆ|ಲೀಲೆಯಿಂದಿಳೆಗೆಯ್ದುವಂತೆ||
ಬಾಲೆ ಹರ್ಮ್ಯವನಿೞಿದೈತಂದಳಾಚಂದ್ರ|ಶಾಲೆಯ ರಂಗಸ್ಥಳಕೆ ||೫೬||

ಕ. ಪ. ಅ—1. ಗಜಶ್ರೇಷ್ಠ.

ಬಿಸರುಹಗಂಧಗಂಧಿನಿ ಕರೆಸಿದಳು ಜೋ|ಯಿಸರ ಪಂಚಾಂಗಪ್ರಶ್ನೆಯನು‖
ಅಸಮಾಕ್ಷ[1] ಪದದರ್ಶನಕೆ ಪೋದಪೆವೆಂದು ಬೆಸಗೊಳಲೊಳತೆಂದು ನುಡಿದ ‖
ವರಮೋಹನತರಂಗಿಣಿಯೆಂಬ ಕಾವ್ಯವ | ಬರೆದೋದಿ ಕೇಳದ ಜನರ ‖
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವಲಕ್ಷ್ಮೀಕಾಂತ ಬಿಡದೆ ‖

ಅಂತು ಸಂಧಿ ೨೩ ಕ್ಕಂ ಪದ ೧೬೫೧ ಕ್ಕಂ ಮಂಗಳಂ—

## ಇಪ್ಪತ್ತನಾಲ್ಕನೆಯ ಸಂಧಿ

ನಳಿನಪತ್ರಾಯತೇಕ್ಷನ ಭೃತ್ಯ ನಿನ್ನಯ| ಹುಟಿ'ಹೊದ್ದದಿನಿಮಾತುಗಳ ‖
ಗಳಲನೆ ಬಂದು ಕರ್ಣವ ಹೊಕ್ಕು ಮನಮನಿ ಕರ್ಗಳಗೊಳ್ಳ[2]ಲುಸಿರು
[ಮೋಲ್ಗತೆಯ ‖೧‖

ಚೆನ್ನಾಗಿ ಲಾಲಿಸು ಚೆಲ್ವಡರಿದ ನಿನ್ನ| ಕರ್ಣಾಂತರದಲಿ ಮೆಱೆವ ‖
ಹೊನ್ನಹೂವಿಗೆ ಪರಿಮಳ ಬರೆ ಪೇಳುವೆ| ಬನ್ನಣೆಗಾರ್ತಿ ಚಿತ್ತೈಸು ‖೨‖

ಸಾಸಿರಗೆಯ್ಯ[3]ನಂದನೆಯುಲಾವಣ್ಯಾಂಬು|ರಾಶಿಯನೊಡಗೂಡಿ ಮೆಱೆವ‖
ಭೂಷಿತವಾಹಿನೀನಿಚಯಮೆಂಬಂತೆ ಸುವಾಸಿನಿಯರು ಕೂಡಿದರು ‖೩‖

ಚೆಲ್ಲಣ ಕಾಸೆ ಕುಪ್ಪಸ ಮೊಲೆಕಟ್ಟುಗಳ್|ಸಲ್ಲಲಿತಾಂಗಭೂಷಣದೆ ‖
ನಿಲ್ಲದೆ ಜಗವ ಮೋಹಿಪ ಮಿಂಡಿವೆಂಗಳು|ಪಲ್ಲಕ್ಕಿಯ ಸಾರ್ಚಿದರು ‖೪‖

ಹತ್ತಿದರೊರ್ವರೊಂದೊಂದು ಪಲ್ಲಕ್ಕಿಯ|ಮುತ್ತಿನ ಕುಚ್ಚುಗಳ್
[ಮೆಱೆಯೆ‖
ಸತ್ತಿಗೆ ಶತಸಾವಿರ ಲಕ್ಷಕೋಟಿಗ|ಳೆತ್ತಿದುವಿನನ ಮಂಡಲಕೆ ‖೫‖

ಭೇದಿಸಲರಿದೆನೆ ಪರಮಸಿಂಗರವ ಸಂಪಾದಿಸಿಕೊಂಡು ಸೌಖ್ಯದಲಿ ‖
ಸಾಧಿಸಿ ಕಲಿತ ನಾನಾವಿದ್ಯಾನಿಚಯವ | ನಾದಿಸಿದರು ನಾರಿಯರು ‖೬‖

ಬಿಡದೊದರುವ ವಾದ್ಯರಭಸ ಪಾತಕಿಯರು|ಗ್ಗಡಣೆಯ ಶಬ್ದಗೀಳಡಲು‖
ಮಡದಿರನ್ನೆಯರುಡಿದಾರ ಕಿಂಕಿಣಿಯಿಂದೆ | ನಡೆದರು ರಾಜವೀಧಿಯಲಿ ‖೭‖

---

ಕ. ಪ. ಅ—1. ಈಶ್ವರ. 2. ಅತ್ತಿತ್ತ ಹೋಗದಂತೆ ಹಿಡಿದುಕೊಳ್ಳಲು.
3. ಬಾಣಾಸುರ.

ಸಂಬಳಗೆಯ ಸಂಚಿ ಮೊಗವಾಪುಡ ರನ್ನ|ಗಂಬಳ ಹೊನ್ನಹಾವುಗೆಯ||
ಹೊಂಬಣ್ಣ ಮೆಯ್ಯ ಮಾನಿನಿಯರಾ ಕುವರಿಯ|ಬೆಂಬೞಿವಿಡಿದೆಯ್ದಿದರು||೮||

ಕುಂಚ ಸತ್ಕನಕದಂಡಿಗೆ ಚಮರಗಳು ಲಾ|ಮಂಚ ಬಿಜ್ಜಣದಾಲವಟ್ಟ ||
ಕಾಂಚನ ಸೌಖ್ಯ ಸಗ್ಗಳ[1] ಗಿಂಡಿವೆಣ್ಗಳು | ಚಂಚಲಾಕ್ಷಿಯೊಳೈದಿದರು ||೯||

ರಂಜಿಪ ರನ್ನಗನ್ನಡಿ ರನ್ನವೆಸದ ಕಾ|ಳಾಂಜಿ ಕರ್ಪೂರಕರಂಡ ||
ಮಂಜುಳಗಂಧೋದಕವಿಡಿದವರ್ಗಳು|ಕಂಜಾಕ್ಷಿಯರೊಡನೆಯ್ದಿದರು ||೧೦||

ಸುೞಿಗುರುಳವರುಂಗುರಗುರುಳವರುಬಾ|ಲಳ[2]ಗುರುಳವರುನುಣ್ಗುರುಳ||
ತಳತ ನೀಲದ ಕುರುಳವರಾಕುವರಿಯ|ಬೞಿದಿಡಿದೈವಿತೊಗ್ಗಿನಲಿ||೧೧||

ಚೆಲ್ಲಗಣ್ಣವರರಳ್ಗಣ್ಣವರ್ ಸಿಡಿಗಣ್ಣ|ಹುಲ್ಲಗಣ್ಣವರೆಸಳ್ಗಣ್ಣ ||
ಲಲ್ಲಗಣ್ಣವರ್ ನಗೆನೋಟದ ತೋರಧ|ಮ್ಮಿಲ್ಲೆಯರೆಯ್ದಿತೊಗ್ಗಿನಲಿ ||೧೨||

ನಗೆಮೊಗದವರಾಸಿರಿಮೊಗದವರು ತಾ|ವರೆ ಮೊಗದವರ್ಮುದ್ದುಮೊಗದ||
ಮಿಗೆ ಚೆಲುವಿನ ಬಟ್ಟಮೊಗದವರು ನಲ್ವಗೆ ಮೆತ್ತು ನಡೆದರೊಗ್ಗಿನಲಿ||೧೩||

ಉಂಗುರವಿಡಿನಡುವಿನ ಮುದ್ದುಲಾವಣ್ಯ|ದಂಗ ತಿವಳ ಪೊಱಮಾಱು ||
ಹೊಂಗದಳದಳನೇೞಿಸುವ ಪೆರ್ದೊಡೆಯೊಳ|ವೆಂಗಳೈದಿದರೆಡಬಲದಿ||೧೪||

ಗಂಧೇಭಗಮನೆಯರುಗಳಂಚೆನಡೆಯರು|ಮಂದಗಮನೆಯರು ಮುದದಿ ||
ಅಂದವಡೆದ ಚರಣಾಭರಣಗಳುಲಿ|ಹಿಂದಲೈದಿದರಿಕ್ಕೆಲದಿ ||೧೫||

ಸೊಕ್ಕಾನೆನಡೆವೆತ್ತ ಸೊಬಗಿಯರ್ ವಿಟರೆರ್ದೆ|ಬಿಕ್ಕನೆ ಬಿರಿಯುವಂದದಲಿ||
ಅಕ್ಕಱಿಂದಾಲೋಕನಗೆಯ್ದು ಮದನನ|ಮೊಕ್ಕಳ[3]ಕೊಳಗುಮಾಡಿದರು ||

ಇಕ್ಕಿದಾಭರಣಭೂಷಿತ ಸಖಿಯರು ನಾಲ್ಕು|ದಿಕ್ಕಿನೊಳತಿರೂಪುವಡೆದು||
ಲೆಕ್ಕಿಸಲರಿದೆಂಬವೊಲು ತೆರಳದರು ಪ|ಲ್ಲಕಿಯ ಸುತ್ತ ಸಂದಣಿಸಿ ||೧೭||

ಓಣಿಯಿಕ್ಕೆಲದಲಿ ದೊರೆವೆಣ್ಣುಗಳು ಮುತ್ತು|ಮಾಣಿಕದಾರತಿ ಬೆಳಗಿ ||
ಕಾಣಿಕೆಯಿತ್ತು ಕೆಯ್ಮುಗಿದರು ಹರಿನೀಲ|ವೇಣಿಯ ನೋಡಿ ಸಂತಸದಿ ||೧೮||

ಪುಣ್ಯಾಂಗನೆಯರಿಕ್ಕೆಲದಲಿ ನಿಂದಿಹ|ಪುಣ್ಯಾಂಗನೆಯರನೇಕ ||
ಪುಣ್ಯವ ಮಾಡಿರ್ದೆವಿಂದೀಯಾಯಕನ ಲಾ|ವಣ್ಯವ ಕಂಡೆವೆಂದೆನುತೆ ||೧೯||

ಎಡಬಲದುಪ್ಪರಿಗೆಯ ಸಾಲುಸಾಲಲಿ|ಯಡರಿ ನೋಡುವ ಹೆಣ್ಣುಗಂಡು||
ಜಡಜಕುಟ್ಮಲಯೌವನೆಯರನೀಕ್ಷಿಸಿ|ಪಡೆದರು ತನುತಾಪಗಳನು ||೨೦||

---

ಕ. ಪ. ಅ—1. ನೀರುತುಂಬಿದ ತೊಗಲಿನಚೀಲ. 2. ಎಳದುಂಬಿ. 3. ಸಮೂಹಕ್ಕೆ.

ಬಾಣಪುತ್ರಿಯು ಕೆಳದಿಯರ ನೋಡಿದರು ಪೂ| ಬಾಣಗೆಣೆಯು ಸದ್ಭಟರು‖
ಬಾಣ ತಾಗಿದ ಹರಿಣಗಳೆಂಬವೊಲು ಪಂಚ| ಬಾಣ ಘಟ್ಟಿಗಿದು ಬಿದ್ದಹರು ‖
ಮಂಡಳಿಸಿರ್ದ ಮಾನಿನಿರನ್ನೆಯರ ನೋಡಿ| ಕಂಡ ಸಿಪಾಯಿ ಮಾತುರರು‖
ದುಂಡುಮಲ್ಲಿಗೆಗೋಲು ತಾಗಲು ತಪಗೆಟ್ಟು|ಬೆಂಡಾದರತಿವಿರಹದಲಿ ‖೨೨‖
ಮುಂದೆ ಬಾರಿಸುವ ನಾನಾವಾದ್ಯರಭಸದಿ | ನಿಂದುಗ್ಗಡಿಪ ಮಾಗಧರು[1]‖
ಸಂದಣಿಸಿದರಣ್ಣಗಳು[2]ದಾದಿಯರು ಹೊ|ನ್ನಂದಣದೆಡದ ಭಾಗದಲಿ ‖೨೩‖
ತೋರಣಗುಡಿ ಗೋಪುರಕೆ ಕೆಯ್ಯಿಕ್ಕುವ | ವಾರಣನಿಚಯವೆಸೆದುಸೆಯ‖
ಸಾರಣವೆಗ್ಗಳ ನುಡಿನಡೆಗಲಿವ ವಿ|ಚಾರಣದಿಂದಲೆಯ್ದಿದರು ‖೨೪‖
ಸಡಗರದಿಂದೆ ನೋಡುವರ ಕಣ್ಣಗ|ಳೊಡತಿಯ ಮೇಲೆ ಸಂಧಿಸಲು ‖
ಅಡಹಾಯಿದವಕೆ ತವ್ಮಯ ಪೇಱುರವಾಂತು | ನಡೆದರು ಬಲಕ್ಕೆಲೆಗಳಲಿ ‖
ಅವರ ಲಾವಣ್ಯಾಬ್ಧಿ ವಿಟರ ಕಣ್ಮೀಂಗಳ|ಜವಗಿಡಿಸಿದುವು ಗೋಪ್ಯದಲಿ‖
ಕುವರಿಯು ಪರಮಸೌಂದರಸಿಂಧುವಾಬರೆ[3]| ಹವಣಿಲ್ಲ ನರಗಿರರಿಂಗೆ ‖೨೬‖
ಕೊತ್ತಳ ಜಘನ ಬಲಕ್ಕೆಲೆ ಮುಗಿಲಟ್ಟಳೆ|ವೃತ್ತ ಪೆರ್ದುಱುಬಿನ ತೆನೆಯ‖
ಚಿತ್ತಜನಡೆಗೋಂಟೆಯಂತೆ ಪಲ್ಲಕ್ಕಿಯ | ಸುತ್ತಲೆಯ್ದಿತು ಕೆಳದಿಯರು ‖
ಇಚ್ಚಾರಿ[4] ಮಕರತೋರಣರತ್ನಕೀಲಿತ ನಿಚ್ಚಳ[5]ಹೊನ್ನ ತೋರಣದಿ ‖
ಸ್ವಚ್ಛದಿ ಪೊಱಮಟ್ಟಳು ಪುರಲಕ್ಷ್ಮಿಯ | ಉಚ್ಚವ ಮೂರುತಿಯಂತೆ[6]‖೨೭
ಹುಲಿನೊಗವಂಕವಾಗಿಲು ಕೋಟೆ ಕೊತ್ತಳ|ಸಲಿಲಪೂರಿತದ ಪೇರಗಟು[7]
ಸಲಿಸಾಯತಾಕ್ಷಿ ನೋಡುತೆ ಬಂದಳು ಶಿವ ನೊಲಿದಿರ್ದ ನಂದನದೆಡೆಗೆ‖೨೮‖
ಉನ್ನತವನಲಕ್ಷ್ಮಿ ಧರಿಸಿದ ಲಲಿತಸು|ವರ್ಣಮೇಖಲೆಗಳೆಂಬಂತೆ ‖
ಸೊನ್ನಾರಗೆಲಸ ಶೋಭಿಸುತಿಪ್ಪ ಕಡೆಯಾಣಿ | ಚೆನ್ನದ ಕೋಟೆ ರಂಜಿಸಿತು‖
ತಿಂಗಳ ಜೂಟಗೆ[8] ಸುರಸತಿಯರು ತಂದ | ಮಂಗಳ ಜಲಕುಂಭದಂತೆ ‖
ಕಂಗೊಳಿಸುವ ಕೋಟೆಯು ತೆನೆಗೊಂದೊಂದು | ಪೊಂಗಳಸಂಗಳೊಪ್ಪಿದುವು‖
ಸಿಂಗರದೋಂಟದ ಬಾಗಿಲುಪ್ಪರಿಗೆಯ|ಹೊಂಗಳಸವ ನೋಡಿ ನಮಿಸಿ ‖
ಹೆಂಗಳ ರನ್ನೆ ಪಲ್ಲಕ್ಕಿಯನಿೞಿದಳು|ತುಂಗಯೌವನೆ ಸಖಿಯೊಡನೆ ‖೩೦‖

---

ಕ.ಪ.ಅ—1. ಹೊಗಳು ಭಟ್ಟರು. 2. ಅಂತಃಪುರರಕ್ಷಕರು. 3. ಒರೆಯುವಿಕೆ, ವರ್ಣನೆ. 4. ಎರಡುಕಡೆಯಲ್ಲಿ ನಡೆಯುವ. 5. ನಿಶ್ಚಲನಾಗಿರುವ. 6. ಉತ್ಸವದೇವರಂತೆ. 7. ದೊಡ್ಡ ಕಂದಕ. 8. ಚಂದ್ರಶೇಖರನಾದ ಶಿವನಿಗೆ.

ಬಾರಿಸುತಿರ್ದ ನಾನಾವಾದ್ಯ ಸಾಕೆಂದು | ಸಾರಿಸಿ ಗಜವಿಂಡ ನಿಲಿಸಿ ||
ತೋಱಿಸಿದರು ಕುವರಿಗೆ ಹೊನ್ನ ತೋರಣ| ವೇಱಿಸಿದವುಲಗೋಪುರವ ||

ಏನ ಬಣ್ಣಿಸುವೆ ಬಾಗಿಲಮುಂದೆ ದಿವ್ಯವಿ| ಮಾನ ಮೂವತ್ತುಮುಕ್ಕೋಟಿ
ದಾನವ ದಿಗ್ದಂತಿ ಹಯವುಚ್ಚೈಶ್ರವ | ನಾನಾಪರಿಯ ನರ್ತಿಪುದು |೩೪||

ಸಡಗರದಿಂದೆ ನೋಡಿದರೆ ಕಣ್ಗೆಸೆದರು | ಮೃಡಗೇಹದ್ವಾರಪಾಲಕರು ||
ಜಡವಲ್ಲದ ದಿವ್ಯದೇಹ ವೃಂದಾರಕ[1] ಗಡಣವೊಪ್ಪಿರ್ದುದಿಕ್ಕೆಲದಿ ||೩೫||

ಬಾಣನಂದನೆ ಬಂದಳೆನೆ ಕೇಳ್ದು ಕರೆಸಿದ ನೇಣಾಂಕಧರ[2]ಮಮತೆಯಲಿ||
ಕಾಣಲುದ್ಯೋಗಿಸಿ ನಡೆದಳು ಕುಮರಿ ಗೀ|ರ್ವಾಣರ ಮೊಗವ ನಿಟ್ಟಿಸದೆ ||

ಸೊಗಯಿಪ ಪಚ್ಚೆಯ ಪಾಸಾರಿಗ ಪಾದ ಯುಗ ಹೊನ್ನ ಹಾವುಗೆವೆರಸಿ||
ಜಗದೇಕ ಪರಮಸೌಂದರಿ ಹಜ್ಜೆಯಿಡಲು ಹೊಮ್ಮಿಗ ಹೋದ ಬಟ್ಟೆ [ಯಂತಾಯ್ತು ||೩೬||

ಸ್ಮರಭದ್ರಗಜಯೂಥದಂತೆ ವಿಳಾಸಿಸೀ|ಚರಣದ ನಿಗಳವೇಱ್ತಿರಲು ||
ವರನೀಲಮಣಿಗಟ್ಟಿನ ಮೇಲೆ ಹೊಂಬಳ್ಳಿ| ಬರೆದಂತೆ ಕಣ್ಗೆ ರಂಜಿಸಿತು||೩೭||

ಇಕ್ಕೆಲದೊಳು ಬರ್ಪ ವಿಂಡಿಯರೊಳು ತನ್ನ | ಕಕ್ಕಸವೊಲೆಯ [ಭಾರದಲಿ ||
ಚಕ್ಕನೆ ನಡೆಯಲಾಱದೆ ಮೆಲ್ಲನಡಿಯಿಟ್ಟು| ಹೊಕ್ಕಳು ಶಿವನಿದ್ದ ವನವ|೩೮||

ದೊರೆವೆಣ್ಣ ಹೊಂಬಾಱ[3]ದೊಡೆ ಸೊಂಪು ನುಣ್ಪುವೆ|ತ್ತಿರೆ ಕಂಡು [ಕದಳಿ ಕಂಗಱಬಿ[3]||
ಬರೆಗೆ[4]ತಾ ಸಲಬಂದುದಿಲ್ಲವೆಂಬೊಂದೊಂದು | ಹೊರೆ[5]ಗಳೆದುವು ಬಾಱ[3] [ಬನದಿ ||೩೯||

ಒಂಬತ್ತುತಿಂಗಳು ಹೊತ್ತ ಮಾತೃಕೆಯ ಪಾದಾಂಭೋರುಹಕಲರ್ಗರೆದು||
ಮುಂಬಾಗಿ ಕೈನೀಡಿ ಶರಣೆಂಬ ರೀತಿಯೊಳ್ | ಪೊಂಬಾಱ[3] ಬನದೊ [ಳೊಪ್ಪಿದುವು ||೪೦||

ಅಂಗಜಾತನ ಮಡುಹಿದನೆಂದು ಪಾರ್ವತಿ | ಸಂಗಕೇಱದಿರಲು ತಿಳುಪಿ ||

---

ಕ.ಪ ಅ—1. ದೇವತೆಗಳ 2. ಚಂದ್ರಧರನಾದ ಶಿವ. 3. ಕಣ್ಣಿನಿಂದ ಕರುಬಿ, ಎಂದರೆ ನೋಡಿ ಹೊಟ್ಟೆಯುಕಿಚ್ಚಿನ್ನು ಪಡು. 4 ಸಮಕ್ಕೆ. 5. ಸಿಪ್ಪೆ, ಚರ್ಮ.

ಹೊಂಗೊಡದೊಳು ನೀರ ಹೊತ್ತ ಧೂರ್ಜಟಿಯಂತೆ । ತೆಂಗಾಯ ಮರಗ
[ಳೊಪ್ಪಿದುವು ॥೪೬॥

ನಸಿದ ಕಾಮನ ಪೆರ್ಚಿಸುವ ದಿವ್ಯಘುಟಿಕೆಯ । ಹಸುರ್ಗರಡಿಗೆಯೊಳು
[ತುಂಬಿ ॥
ರಸೆಯೊಳು ಮೊಱೆಸಲು ಕಟ್ಟಿದಂದದಲಿ ಕ|ಣ್ಗೆಸೆದುವು ಪೂಗವೃಕ್ಷಗಳು ॥
ಕಾಮಾಸ್ತ್ರನಿಳಯದೆ ಬಹಳ ಪಚ್ಚೆಯಮೀಂಟೆ । ಧಾಮದ ಮೋ
[ಲ್ಗಟ್ಟಿನಂತೆ ॥
ರಾಮಣೀಯತೆವೆತ್ತ ಚೆಂದಳಿರ್ ಮಿಡಿ[1]ಯಿಂದೆ|ಮಾಮರ ಮನಗೊಳಿಸಿದುವು
ಮೀಱಿದ ಕಮ್ಮಲರ್ಗಳ ದೇವಾರ್ಚನೆ|ಗೇಱಿಸಗೊಡದೆಯೆಂಜಲಿಸಿ ॥
ಹೇಱಿದ ಪಱಮೆವಿಂಡುಗಳ[2]ಬಂಧಿಸಿದಂತೆ । ನೇಱಿಲ ಪಣ್ಗಳೊಪ್ಪಿದುವು ॥
ಕೆಲರಿಂಗೆ ಬಾಹ್ಯಕರ್ಮದೊಳತ್ತು ಯೋಗ್ಯರಿಂ|ಗಲಸದೆ ಗುಪಿತದಿಂ
[ಕುಡುವ ॥
ಸುಲಭದಾನಿಯ ಪೋಲ್ತು ಪೆರ್ಗೊನೆಯೊಳು ಕಾತ[3]|ಹಲಸಿನ ಮರಗ
[ಳೊಪ್ಪಿದುವು ॥೪೭॥

ಅಂಭೋರುಹಭವಾಂಡವ ರೋಮರೋಮದೊ ಳಂಬಿಟ್ಟ ವಿಷ್ಣುವಿನಂತೆ॥
ಕೊಂಬೊಳಾಱದೆ ಕಾಯಿಪಣ್ಗಳ ತಾಳ್ದು|ದುಂಬರ[4]ದ್ರುಮಗಳೊಪ್ಪಿದುವು॥
ಭಜನೆಯ ಮಾಡಿ ಬಾಗಿಲ ಬಂದು ಕಾದಿಹ । ದ್ವಿಜರನುಮತವ ತೀರಿಸದ॥
ನಿಜಲೋಭಿಶತವೆಂಬಂದದಿ ಸಾಲ್ಗಟ್ಟ । ಕುಜವಿರ್ದುದಾಬನಬನದಿ ॥೪೮॥

ಲಂಪಟ[5]ಕೊಳಗಾಗದ ಹದಿಬದೆಯಂತೆ । ಗಂಪ ಷಟ್ಪದ ಜಾರರಿಗೆ ॥
ಇಂಪಾದ ಸೌಗಂಧರುಚಿದೋಱದಂತೆ ಪೆ|ರ್ಗಂಪಗೆ ಮರಗಳೊಪ್ಪಿದುವು ॥
ಶಿವನಂತೆ ಭುಜಗಾಭರಣದಿ ಲಕ್ಷ್ಮೀ|ಧವನಂತೆ ವಿಹಗಧ್ವಜದಿ ॥
ಅವಯವದೊಳು ಗಂಧವಡೆದ ಚಂದನವೃಕ್ಷ ನಿವಹವೊಪ್ಪಿರ್ದುದಾವನದಿ ॥
ಹೊಂಬೆಸನೊಳು[6]ಹೊಕ್ಕಲ್ಗಿ ತಾ ಪಾಷಾಣ|ವೆಂಬ ಮರ್ತ್ಯರ ನುಡಿಗಟಿಲ್ದ
ಜಂಭಾರಿಪುರ[7]ಕಡರುವ ರತ್ನದಂತೆ ದಾ|ಳಂಬದ ಕೊನೆವಣ್ಗಳಹುವು ॥೫೧॥

---

ಕ.ಪ.ಅ.—1. ಹೀಚುಕಾಯಿ. 2. ಭ್ರಮರಗಳ ಸಾಲು. 3. ಕಾಯಿಬಿಟ್ಟ.
4. ಅತ್ತಿಮರ. 5. ಕೆಟ್ಟ ಆಸೆಗೆ 6. ಚಿನ್ನದ ಕೆಲಸದಲ್ಲಿ.
7. ಅಮರಾವತಿಗೆ.

ಮಾದಲ ನಿಂಬೆ ದೊಡ್ಡಿಲೆ ಕಂಚಿ ಕಿತ್ತೀಚಿ|ಸ್ವಾದು ಖರ್ಜೂರ [ದ್ರಾಕ್ಷೆಗಳು ॥
ಪಾದಪನಿಚಯ ಸತ್ಫಲಪೂಜೆಗೆಟ್ಟದಂ|ತಾದುದು ಬಹಳ ಪಣ್ಪಸರ ॥೫೨॥

ದಂಡಿಯೊಳೇಗಳುಂ ಪ್ರಾಣಕಾಂತನಪ್ಪಿ|ಕೊಂಡಿರಿ ತೊಲಗಬೇಡೆನುತೆ ॥
ಮಿಂಡಿಯರಿಗೆ ಬುದ್ಧಿಗಲಿಸುವಂತೆಲೆವಳ್ಳಿ|ಮುಂಡಿಗೆಗಳನಡರಿದುವು॥೫೩॥

ದಾನವ ದಶಕಂಠಕಂಠವಿಚ್ಛೇದವಿ|ಮಾನ ಶ್ರೀರಾಮಲಕ್ಷ್ಮಣರ ॥
ಸೇನೆಯ ಗಡಣವೆಂಬಂದದೆ ಬಹುವಿಧ|ವಾನರ ಕೊನೆಯೊಳೊಪ್ಪಿದುವು॥೫೪॥

ತಿಣ್ಣವಾದರೆ ತನ್ನ ತಲೆದೊರೆಯುನು ಮು|ಕ್ಕಣ್ಣನೀ ಬನದೊಳಟ್ಟಂತೆ ॥
ತಣ್ಣೊರೆಗಲ್ಲ[1]ಸೋಪಾನದ ಕೊಳ ಜಳ ವರ್ಣ್ಣನ ಬಿರುತೋಡಿದುವು॥೫೫

ನಳನಾಸ್ಯ ಕುಚಕೋಕ ಕುಮುದಿನಿ ಚಕ್ಷುಗಳ್|ಸುಳಿನಾಭಿ ತ್ರಿವಳಿ [ತರಂಗ ॥
ಬಳ ತಾಳೆ ಪಲ್ಲವ ಪ್ರತಿಬಿಂಬ ತೊಡೆ ಪಾದ| ಕೊಳವೆಣ್ಗೆ ಬಿಡದೆ ಶೋ[ಭಿಸಿತು ॥೫೬॥

ಮಂದಾಕಿನಿ ಮಾದೇವನ ಜಡೆಗಳ | ಬಂಧದಿಂ ಬಿಡುಗಡೆಯೊಂದಿ ॥
ನಂದನದೊಳು ಬಂದು ಪರಿದಾಡುವ ಚೆಲು|ವಿಂದೆ ಕಾಲುವೆಗಳೊಪ್ಪಿದುವು ॥

ಕೊಳಗಳೊಳಗೆ ಕೊಳರ್ವಕ್ಕಿ ಪಕ್ಕಿಗಳು ನಿ|ರ್ಮಳನ ಹಂಸಗಳು [ಕ್ರೌಂಚಗಳು ॥
ಮುಗಿಲೊಟ್ಟಲನೇಱಿ ನರ್ತಿಪ ನವಿಲ್ಗಳ | ಬಳಗವ ನೋಡುತ್ತೈದಿದರು॥೫೮॥

ಭೋಗಿಭೂಷನ ಜಯಿಸುವೊಡುಷಾದೇವಿಯೊಳ್ | ಪೋಗಿ ತಾ [ಕೈಮಾಡಲೆನುತೆ ॥
ವಾಗೀಶನೊಡಹುಟ್ಟಿದಂಗೆ[2]ಸೂಚಿಸುವಂತೆ | ಕೂಗಿತು ಕಲಕಂಠನಿಚಯ ॥

ಎತ್ತ ನೋಡಿದೊಡಾಕೃತಸತ್ಕುಸುಮಿತ|ವೆತ್ತ ನೋಡಿದೊಡೆ ಸತ್ಫಲಿತ ॥
ಎತ್ತ ನೋಡಲು ಕಱಿವಣ್ಣುಗಳ್ ತರುಲತೆ|ಕತ್ತಲೆಗೆಯ್ವುದಾಬನದಿ ॥೬೦॥

ಶಿವನ ಪಟ್ಟದ ಹೆಂಡತಿಯೊಡಹುಟ್ಟಿದ | ನಿವಹ[3] ನೆಟ್ಟನೆ ಬಂದುವೆನಿಸೆ ॥
ನವರತ್ನಗಳಿಂದೆ ರಚಿಸಿದ ಕೃತಕಾದ್ರಿ| ಕುವರಿಯ ಕಣ್ಗೆ ರಂಜಿಸಿತು॥೬೧॥

---

ಕ. ಪ. ಅ—1. ಚಂದ್ರಕಾಂತ ಶಿಲೆಯ. 2. ಮನ್ಮಥನಿಗೆ: ಹೇಗೆ?
3. ಬೆಟ್ಟಗಳು: ಹೇಗೆ?

ಜತನದಪ್ಪದೆ ಕೊನೆವಿಡಿದು ನೇಲುವ ಚರ್ಮ|ಯತನವಕ್ಕಿಯು[1] ಕಂಡು [ನಗುತೆ ||
ಮಿತಿಯಿಲ್ಲದಲರ್ದೋಟವ ಪೊಕ್ಕು ಕೊಯ್ದರಾ|ಯತನೇತ್ರೆಯರು [ಪುಷ್ಪಚಯವ ||೬೩||
ಮಾಂದಳಿರಸುಗೆ ಮಲ್ಲಿಗೆ ಪದ್ಮಿನಿಯರ|ವಿಂದ ತಳಿರ್ವಧೂಟಿಯರು ||
ಕಂದರ್ಪದೇವನ ಕಮ್ಮಲರ್ಗೋಲುಗ|ಳೆಂದವ ತಿಱಿದಿಕ್ಕಿದರು |೬೪||
ಮಿಗೆ ಶೋಭಿಸುವ ಷಟ್ಪದ ವೇಣಿ ತಳತ ಸಂ|ಪಗೆಯಲರ್ದಿಱಿಯೆ [ಮತ್ತೊರ್ವ ||
ನಗೆಮೊಗದವಳು ಕೇತಕಿಯು ಗಂಡಿಸಿನಲರ್ | ಪಗೆಯೆಂದು ತಿಱಿದಿಕ್ಕಿದಳು||
ವರಸೌಂದರ್ಯದ ಚೆಲುವ ಮಚ್ಚರದಿಂದೆ | ಸುರಹೊನ್ನೆದೊಂಗಲ [ಮುರಿದು ||
ಪರಸುವ್ರತಸ್ಥ ಮತ್ತೊರ್ವಳು ಪಾದರಿ|ಯರಲ್ಗಳ ತಿಱಿದಿಕ್ಕಿದಳು ||೬೫||
ಇರವಱಿದಾತನ[2] ಹೆಸರಾಂತು ವನದೊಳ|ಗಿರಲಿರವಂತಿಗೆ ತರಿದು ||
ಹರತಪಧ್ವಂಸಿಯು ಮಟ್ಟಾಯುಧವೆಂದು | ಸುರಗಿಯ ಮುರಿಕ್ಕಿದಳು ||೬೬||
ಕಯ್ಯೊಳಗರ್ಧರೇಖೆಯನಾಂತು ಮೊಲ್ಲೆಯ|ಕೊಯ್ಯಲಂಗನೆಯರ [ಪಱಿದು ||
ಗಯ್ಯಾಳಿವೆಂಗಳು ನಿಖಿಲಪುಷ್ಪಗಳ ಪೆ|ಣ್ಮೆಯ್ಯಿಗೋಸುಗ ಕಳಚಿದರು ||೬೭||
ಬಣ್ಣಬಣ್ಣದ ಪೂಗೊಯ್ದು ಹೊಂಬಾಱಿಯು|ಪರ್ಣದೆ ಪೊಟ್ಟಣಗಟ್ಟಿ ||
ಕನ್ನೆಯಿದ್ದಲಗಣ್ಣ ಕಾಂತೆಯರೊಡತಿಗೆ | ಬಿನ್ನಣಗೆಯ್ದು ತೋಱಿದರು ||೬೮||
ಚಂದನ ಮೊದಲಾದ ನಿಖಿಲಪೂಗಳಿಗೆ ಮೆ|ಯ್ಗಂಧವ ಕಡಗುಡುವಂತೆ ||
ನಂದನವನಲಕ್ಷ್ಮಿಯು ಪೋಲ್ದು ಬಾಣಜೆ | ಬಂದಳೀಶ್ವರನ ಚಾವಡಿಗೆ||೬೯||
ಉಪಮಾತೀತ ಸೌಂದರವೆತ್ತ ಮೋಕ್ಷಮಂ|ಟಪದೊಳು ಸಿಂಹವಿಷ್ಟರದೆ||
ಲಪನಪಂಚಕ[3]ನೊಡ್ಡೋಲಗೊಟ್ಟಿರೆ | ಚಪಲಾಕ್ಷಿಯರು ನೋಡಿದರು ||
ಎಡದೊಳಿಂದ್ರಾದಿದೇವತೆಗಳು ಬಲದಲ್ಲಿ | ಯೊಡೆವರೆ ಬ್ರಹ್ಮತಾಪಸರು||
ಮೃಡಗಣವರ[4] ಪಿಂದೆ ನಂದೀಶ್ವರ ಭೃಂಗಿ|ಯೊಡೆಯನ ಮುಂದೆ ನಿಂದಿಹರು ||

---

ಕ. ಪ. ಅ—1. ಕಣ್ಣುಕಪಟದ ಹಕ್ಕಿ; ಬಾವಲಿ. 2. ಮನ್ಮಥನ. 3. ಐದು ಮುಖಗಳುಳ್ಳವನ; ಈಶ್ವರನ. 4 ಈಶ್ವರನ ಗುಣಗಳ ಮುಖ್ಯ.

ಚಂದಿರಮುಖಿ ಪಾರ್ವತಿ ಪರಮೇಶಂಗೆ | ವಂದಿಸಿ ಪಿಡಿರನ್ನವಿಕ್ಕಿ ||
ತಂದಿರ್ದ ನಿಖಿಳಪುಷ್ಪದಿ ಪೂಜೆಮಾಡಿದ | ಇಂದೀವರಮಿತ್ರಸಹಿತ |೭೦||

ವರಮೋಹನತರಂಗಿಣಿಯೆಂಬ ಕಾವ್ಯವ | ಬರೆದೋದಿ ಕೇಳದ ಜನರ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು | ಪೊರೆವ ಲಕ್ಷ್ಮೀಕಾಂತಬಿಡದೆ||

— ಅಂತು ಸಂಧಿ ೨೪ ಕ್ಕಂ ಪದ ೧೭೨೪ ಕ್ಕಂ ಮಂಗಳಂ —

## ಇಪ್ಪತ್ತೈದನೆಯ ಸಂಧಿ

---

ಉಷೆಗೆ ಶಿವನು ವರವ ಕೊಟ್ಟುದು .—

ಪ್ರಾಸಿಂದೆ ನಿಖಿಳ ಚಿತ್ರಾರ್ಥಗರ್ಭಿತ | ಭಾವ | ಲೇಸೆನೆ ಹರಿಕೊಟ್ಟ ವರದಿ||
ತ್ರಾಸಿಂದೆ ತೂಗಿದ ಮಣಿಯೆನೆ ಮಜ್ಜೀವಿ | ತೇಶ ವಿಸ್ತರಿಸು ಮೇಲ್ಗತೆಯ||೧

ಏತಕೆನ್ನನು ಕೀರ್ತಿಸಬೇಕುನನಗೊಂದು ಸ್ವಾತಂತ್ರ್ಯಬುದ್ಧಿ ಬೇಕಿಹುದೆ||
ಪೀತಾಂಬರನೋಡಿಸಿದ ಸಾರಣನಂತೆ ಮಾತ ವಿಸ್ತರಿಪೆ ಕೇಳ್ ಕೆಳದಿ |೨||

ನೋಡಿದಸೀಶ ಬಾಣಜೆಯ ವಕ್ತ್ರವನು ಮಾತಾಡಿಸಿಬಂದಿರೇಕೆನಲು||
ಗಾಡಿಯಿಂದವಳು ನಾಣ್ಚಿರಲು ಬಿನ್ನಹವನು | ಮಾಡಿದಳಾಚಿತ್ರಲೇಖೆ |೩||

ದೇವಾಧೀಶ ನಿಮ್ಮಯ ಸಂದರ್ಶನ | ಜೀವರೆಲ್ಲರಿಗೆ ಸಿದ್ಧಿಪುದೇ ||
ಆವ ಜನ್ಮದ ಪುಣ್ಯವಿದ್ದುದೊ ಮೂಲೋಕ | ಜೀವ ನೀ ಮೈದೋರಿದೆನಗೆ||

ಎನಲೀಶ್ವರ ಚಿತ್ರಲೇಖೆಯ ಮೊಗನೋಡಿ | ವಿನಯದೆ ಬಾಣನಂದನೆಗೆ||
ನಿನಗೇಕೆ ಲಜ್ಜೆ ಬಿನ್ನಹವ ಮಾಡೆಂದೆಂ | ದೆನಲವಳುಸಿರ್ದಳಾಯುಕಗೆ |೫||

ತಲೆಗುತ್ತಲೇತಕೆ ತರಳಾಕ್ಷಿ ದುಃಖದಂ | ಡಲೆಯ ನಿವಾರಿಪ ಶಿವನ ||
ಸಲೆ ನೋಡಿ ಕೃತಪುಣ್ಯೆಯಾಗಬೇಕೆಂದು ಕೋಮಲೆ ಪೇಳ್ದಳೊಡತಿಯ
[ಕೂಡೆ ||೬||

ಯಕ್ಷ ಗುಹ್ಯಕ ಸಿದ್ಧ ಸಾಧ್ಯಗಂಧರ್ವ ನಿ ಲಕ್ಷ್ಯ ನಿಜಾಂಬರ ಮಧ್ಯದಲಿ|
ದಕ್ಷನ ತನುಜೆಗರ್ಧಾಂಗವನಿತ್ತ ಫಾಲಾಕ್ಷನ ಮೊಗ ನೋಡು ತಾಯೆ||೭|
ಜಡೆಯೊಳು ಸೂಡಿದ ಗಂಗೆ ಚಂದ್ರರು ಕಂಠ| ದೆಡೆಗೊಂಡ ವಿಷಫಣಿ [ದೊಡವು ||
ತೊಡೆಯೊಳೊಪ್ಪುವ ಪಾರ್ವತಿ ಚತುರ್ದಶ ಜಗ|ದೊಡೆಯನ ಮೊಗ [ನೋಡು ತಾಯೆ||೮|
ಸಖಿ ಪೇಳ್ದ ಪರಮತತ್ವವ ತಿಳಿದಂಬುಜ|ಮುಖಿ ನಿರೀಕ್ಷಣೆಯ [ಮಾಡಿದಳು ||
ನಿಖಿಳದೇವತೆಗಳೊಡೆತ್ರೈಜಗದೊಳು ನಿತ್ಯ|ಸುಖಿ ಪರಮೇಶ್ವರನಿರವ ||೯||
ಈಶ ನಿಮ್ಮನು ನುತಿಸುವೆನೆಂದೆನಲುರಗೇಶನಾನೆನು ನನ್ನ ಹವಣೇ ||
ದೋಷರಹಿತ ಪರಮಾರ್ಣವದೊಳಗೊಂದು ಲೇಶಮಾತ್ರವ ಬಲ್ಲರಾರು ||
ಮಾಣಿಮೆಗ್ಗಳ ಶಿರೋಮಣಿಯು ಸ್ತೋತ್ರಕೆ ಮೆಚ್ಚಿ|ದಾನಿಗಳರಸ [ಕುಸ್ತರಿಸಿ ||
ಏನು ನೀವಿಲ್ಲಿಗೆಯ್ತಂದಿರಿಯೆನಲು ಭವಾನಿಯು ಹೊಱಗೆ ಹೇಳಿದಳು ||೧೧|
ನಾಗಭೂಷಣ ನಿಮ್ಮ ದಿವ್ಯದೇಹದೊಳೊಂದು | ಭಾಗದೇಹವನೊತ್ತೆ [ಗೊಂಡ ||
ಶ್ರೀಗೌರಿದೇವಿಯು ಪದಯುಗಳವ ಕಂಡು ಪೋಗಲ್ಕೆ ಒಂದೆವು ಚೇಯು||೧೨||
ಅಪಾರಮಹಿಮಾರ್ಣವ ಕೋಟಿಕಂದರ್ಪ|ರೂಪ ಕೇಳ್ ಜನ್ಮಾಂತರದ|
ಪಾಪ ವಿಚ್ಛಿನ್ನವಾದುದು ಪಾರ್ವತಿಯು ಪ್ರಾಣೇಶ ಕೇಳೆಂದು ಪೇಳಿದಳು||
ಮಾತನಾಡಿದ ಬಾಯ್ತೆಱೆಯು ಚೆಲ್ವನೆ ಕಂಡು|ಸೋತನೀಶ್ವರ ಮನ [ದೊಳಗೆ ||
ಕಾತರಿಸದೆ ತನ್ನ ಮಗಳೆಂದು ನೋಡಿದ|ಭೂತೇಶ ಕರುಣಿ ನಿರ್ಮಲನು ||
ಕಂದರ್ಪಹರನೊರ್ವನಲ್ಲದೆ ಕುವರಿಯು|ಹೊಂದಾವರೆ ಮೊಗ್ಗ ಮೊಲೆಯ
ಚೆಂದವ ನೋಡಿದ ಸುರನರೋರಗವ್ರಾತ ಬೆಂದುದು ವಿರಹತಾಪದಲಿ ||೧೪||
ಬಾಣನಂದನೆಯೆಂಬ ತಡಿಕೆಯು ಮುಱಿಯೆ ಸು|ಜಾಣಮನ್ಮಥನುರು [ಳ್ಗಣೆಯು ||
ಕೇಣವಿಲ್ಲದೆ ನೀಡಿ ಸುರರೆದೆಯೊಳಗಿರ್ದ|ಪ್ರಾಣಹರಿಸಗಳಬಂಧಿಸಿದ|೧೬||

ಓಲಗದೊಳಗಿರ್ದ ತ್ರಿದಶರು ಕಮ್ಮಲ|ಗೋರ್ಲನಂಡಲೆಗೆ ಬಿದ್ದಿರಲು ||
ನೀಲಕಂಧರ ನೋಡಿ ನಸುನಗುತದಱ ಸ|ಕೀಲವನುಮೆಗೆ[1] ತೋಱಿಸಿದ||೧೯
ಪೊಡೆಯ ಕಿಲ್ಬಿಷವ[2] ಪ್ರಕ್ಷಾಲಿಸಿ ವರವ ತಾಯ್|ಪಡೆಯ ಬೇಕಿಂತಪ್ಪ [ಸುತೆಯ ||
ಕೆಡೆಮೆಟ್ಟಿದಳೆಲ್ಲರನೆಂದು ಮೂಜಗ|ದೊಡೆಯ ಪಾರ್ವತಿಗೆ ತೋಱಿಸಿದ ||
ಮಂದಸ್ಮಿತಮುಖಿಯರು ನಿನ್ನ ಪ್ರಾರ್ಥಿಸಿ| ಬಂದವರುಗಳ ಕುಸ್ತರಿಸಿ ||
ಚೆಂದವಮಾಡಿ ಬಿಟುಕ್ಕೊಡವೇಳ್ದು ಪೆದ್ದೊಡೆ|ಯಿಂದಲೆಬ್ಬಿಸಿದ ಪಾರ್ವತಿಯು||
ಭೋಗಿಭೂಷಣನ ತೊಡೆಯೊಳಂದುಚೌಷಷ್ಟಿ|ಯೋಗಿಣಿಸುರವನಿತೆಯರ ||
ಬಾಗಿಲೊಳ್ ನಿಲಿಸಿ ಬಾಣಜೆ ಸಹಿತೊಳಪೊಕ್ಕು|ಹೋಗಿ ಗದ್ದುಗೆಯ [ನೇಱಿದಳು ||೨೦||
ಹಿಂಡಿದೊಡೊಂಬತ್ತು ಬಣ್ಣ ಸೋರುವ ರತ್ನ|ಖಂಡಿತ ರತ್ನಭೂಷಣದ||
ಮಂಡಿತ ಮೆಯ್ಯೊಳಗಿನ ಪಾರ್ವತಿ ಕುಂ|ಭಾಂಡಿಯ[3] ನುಡಿಸಿದಳೊಲಿದು||೨೧||
ಪ್ರೇಮವೆ ವರಚಿತ್ರಲೇಖೆ ಬಾಣಜೆ ಪರಿ|ಣಾಮವೆ ನಿಮ್ಮಭಿಮತವ ||
ಪ್ರೇಮವೇನೆಂದು ಬಿನ್ನಹ ಮಾಡವೇಳ್ದಳು|ಕಾಮಾಕ್ಷಿ[4] ಕಾರುಣ್ಯದಲಿ||೨೨||
ಸ್ಥಿತಿಯುತ್ಪತ್ತಿವಿದೂರೀಕೃತೆ ನಿನ್ನ|ನುತಿಗೆಯ್ದಪೆವೆಂದು ನೆಗಳ್ದ ||
ಶ್ರುತಿಶಾಸ್ತ್ರಕೋಟಿಗಳಱಿಸಿ ಕಾಣವು ಪಾರ್ವತಿ ನಿನ್ನ ಕಂಡುದೆ ಕ್ಷೇಮ||
ಬಂದ ಕಾರಿಯವಾವುದೆನುತೆ ನೀ ಬೆಸಗೊಳ|ಲಂದವಾಯಿತು ಕೇಳುತಾಯೇ||
ವೃಂದಾರಕನಾಗನರ ಸದುಹೃದಯಾರ|ವಿಂದನಿವಾಸಿನಿ[5] ಯಱಿಯಾ ||೨೪||
ಆಡಿದಾಯಕನ[6] ಮಾತಿಗೆ ದಿವ್ಯದೃಷ್ಟಿಯೊಳ್|ನೋಡಿ ತನ್ನೊಳು ತಾ [ತಿಳಿದು ||
ಗಾಡಿಕಾತಿಗೆ ಪುರುಷಾಪೇಕ್ಷೆಯಹುದೆಂದು|ಮಾಡಿದಳ್ ಗಿರಿಜೆ ಸಂತಸವ ||
ನಾಳಿನ ವೈಶಾಖಶುದ್ಧದ್ವಾದಶಿಯ ಛ ಡಾಳಸಿದಿರುಳಿನ ಕಡೆಯ ||
ತೋಳನಪ್ಪುವ ನಂಟ ಕನಸಿನೊಳ್ ಬಹ ರಸದಾಳವಿಲ್ಲನ ಸಮರೂಪ ||

---

ಕ. ಪ. ಅ—1. ಪಾರ್ವತಿಗೆ. 2. ಹೊಟ್ಟೆಯಲ್ಲಿರುವ ಪಾಪವನ್ನು. 3. ಕುಂಭಾಂಡನ ಮಗಳಾದ ಚಿತ್ರಲೇಖೆಯ 4. ಕಾಶಿಯಲ್ಲಿರುವ ಕಾಮಾಕ್ಷಿದೇವಿ. 5. ದೇವತೆಗಳು, ಸರ್ಪಗಳು, ಮನುಷ್ಯರು ಇವರುಗಳ ಶ್ರೇಷ್ಠವಾದ ಹೃದಯ ಕಮಲದಲ್ಲಿ ವಾಸಮಾಡುವವಳೆ. 6. ಅಯಕ್ಕನ.

ಸ್ವಪನದಿ ಬಂದು ಕ್ರೀಡಿಸಿದಾತ ಪ್ರಿಯನಾ|ದಪ ಕೆಲ ದಿವಸಂಗಳಗೆ ॥
ಉಪಮಿಸಬಾರದ ಪರಮಸೌಂದರಚಂದ್ರ'ಲಪನಂಗೆ[1] ವೈವಾಹವಹುದು ॥
ಜಾಣೆಮಾಜಗದಹೆಂಗಳಮುದ್ದು ಮೂಲಗೀ|ರ್ವಾಣೇಶ್ವರಿ ನಿನ್ನ ನುಡಿಗೆ॥
ಉಣೆಯ[2]ಹೊದ್ದದು ಕುವರಿಗೆ ಕಾಂತ ಸುಜಾಣನೆಂಬುದು ಯತ್ನಸಿದ್ಧ॥೨೮

ಗಡಿಯಾಗಲಬುಧಿ ನೀರಸವೆತ್ತು ಚಂದ್ರಕೆಂ|ಗಿಡಿಯಾಗಲಗ್ನಿಮೆಯ್ಯಾಱತು॥
ನಿಡಿಯಾದರಾಗಬೇಕಲ್ಲದೆ ನೀ ಪೇಳ್ದು|ನುಡಿಯೊಳು ಪುಸಿಯಿಲ್ಲ ತಾಯೆ ॥
ಪಾಱಲು ಮೇರುಪರ್ವತ ಗಗನದಲಿ ಕಾಲೂಱಲಾಕಾಶ ಭೂಮಿಯಲಿ ॥
ತೋಱಲು ಬೆಳಗುಪಶ್ಚಿಮದೆ ನಿನ್ನಾಜ್ಞೆಯು ಮಿಱಲೋರ್ವರಿಗೆ ಸಾಧನವೆ॥
ಬೇಸಱದಖಿಳವೇದಂಗಳುಚ್ಚರಿಪ ವಿಘ್ನೇಶನ ಪಡೆದ ಮಾತೃಕೆಯ ॥
ಭಾಸುರಜಿಹ್ವೆಯೊಳ್ ಪೊಱಮಟ್ಟ ವಚನಕೆ ಬೇಸಱವಿಲ್ಲೆಂದಳವಳು ।
ನೆಱೆವೆಱೆ ಮೊಗದ[3]ಬಾಲೆಯ ಕೀರ್ತನೆಗೆಯ್ದು । ಕಱೆಗೊರಲನ
[ರಾಣಿ ಮೆಚ್ಚಿ ॥
ಮಱೆಯಗೆ ವಸ್ತ್ರಭೂಷಣ'ಪರಿಮಳದುಡುಗೊಱೆಯಿತ್ತು ಕುಸ್ತರಿಸಿದಳು॥
ಮಗಳೆ ನಿನ್ನಯರೂಪ ಗುಣಶೀಲವ ನೋಡಿ ದಗಣಿತಸುರನರೋರಗರು ॥
ಮುಗುಳಂಬಿಗೊಳಗಾದರೆಂದು ಪಾರ್ವತಿ ಕರ,ಯುಗಳದೆ ಮುದ್ದಾಡಿದಳು॥
ಆಕೆಯ ಸನ್ಮಾನಿಸಿ ಕೇಳ್ದಳು ಚಿತ್ರಲೇಖೆಯ ಮನದಭಿಮತವ ॥
ನೀ ಕೇಳದಿರ್ಪುದೆ ಪೇೞೆಂದೆನಲಾಗಿ| ಸಾಕೆಂದು ಪೇೞ್ದಳುತ್ಸವದಿ ॥೩೦॥

ಹಿಮಗಿರಿರಾಜನಂದನೆ ಬಂದು ವಿಬುಧೋ| ತ್ತಮರ ಹೆದ್ದೊಡೆಯೊಳು
[ಕುಳಿತು ॥
ಕಮಲೇಕ್ಷಣೆಯರ ಕಳುಹ ಚಿತ್ತೈಸೆಂದು| ರಮಣಂಗೆ ಬಿನ್ನವಿಸಿದಳು ॥
ತನ್ನಾತ್ಮೇಶ್ವರಿ ತರಹರದಲಿ ಪೇೞ್ದ| ಬಿನ್ನಹವನು ಶಿವ ಕೇಳ್ದು ॥
ಹೊನ್ನಪುತ್ತಳಿಯಂತೆ ನಿಂದಿರ್ದ ಕುವರಿಯ| ಚೆನ್ನಾಗಿ ಮೊಗವ ನಿಟ್ಟಿಸಿದ ॥
ಪಟ್ಟದರಾಣಿ ಪಾರ್ವತಿನಿಮಗೊಲಿದೇನ|ಕೊಟ್ಟಳುತೋಱತೋಱೆನುತ॥
ನೆಟ್ಟನೆ ನೋಡಿ ತಾನುಡುಗೊಱೆಯಿತ್ತು ಬೀೞ್ಕೊಟ್ಟನು ಶಿವಕುಮರಿಯರ॥
ಶುದ್ಧಸ್ಫಟಿಕಸಂಕಾಶನಂಘ್ರಿಯೊಳಡ್ಡ| ಬಿದ್ದರೀಶ್ವರಿಯ ಪಾದದಲಿ ॥
ಇದ್ದ ಮಹೇಶ್ವರರುಗಳ ಬೀೞ್ಕೊಂಡು ಮ|ರಳ್ದಳು ಪರಮೋತ್ಸವದೆ ॥

---

ಕ. ಪ. ಅ—1 ಚಂದ್ರನಹಾಗೆ ಮುಖವುಳ್ಳವನಿಗೆ. 2. ಕೊರತೆ.
3. ಪೂರ್ಣಚಂದ್ರಮುಖದ.

ಇದೆ ನಿಂದಳದೆ ಪೋದಳು ಕಾಣಬಾರದೆಂ। ದೆದೆ ಹಲುಬಲಾಂತ ನಿರ್ಜರರ ॥
ಹೊದೆಗೋಲಿನಿಂದೆ ಮನ್ಮಥನೆಚ್ಚ ಮಾತ್ರದೆ ಸೊದೆಗೂಟು[1] ಶೋಧಿಸಿತವಗೆ॥
ಅಂತರಿಸದೆ ತತ್‌ಕ್ಷಣಪೋಪ ಕುವರಿಯು। ಮುಂತಡಗಟ್ಟಿ ನೋಟ್ಪವರು॥
ಭ್ರಾಂತರಾದರು ದೇವವಿಟರ್ಗಳ ಕುವರಜ। ಯಂತಾದಿಗಳು ಮೌನದಲಿ ॥
ಇತ್ತಲೀಹವಣಾದುದು ರಾಜವದನೆ ಪೆ। ಣ್ಸ್ಮೃತ್ತದೆ ವನವನುತ್ತರಿಸಿ ॥
ಚಿತ್ರೈಸಿದ ಗೀತವಾದ್ಯ ಗಳಿಡಲು ಪು ರೋತ್ತರವನು ಪೊಕ್ಕಳೊಲಿದು ॥
ಅನಲಾಕ್ಷನ ಮುದವಳಗೆಯು[2] ಕೃಪೆವೆತ್ತು। ವನರುಹಗಂಧಿ ಬರ್ಪುದನು॥
ದಿನನಾಥವೀಧಿಯಿಕ್ಕೆಲದಲ್ಲಿ ನೋಡುವ। ಜನಪದ ಸಂದಣಿಸಿದುದು ॥೪೨॥
ಎತ್ತುವಾರತಿ ನಿವಳಿಪ ಜನಳಿಯು ದಿಂಡು ಮುತ್ತುರತ್ನಗಳ ಕಾಣಿಕೆಯು ॥
ಇತ್ತೆಱಗುವ ಸೆಟ್ಟಿ ಸಮುಯಭೂಸುರರ ಸಂ ಪತ್ತನದೇನ ಬಣ್ಣಿಪೆನು ॥
ಇಸಿತು ಸೌಭಾಗ್ಯಮತ್ತಿಸಿತುಸಂಭ್ರಮಮು। ತ್ತಿಸಿತುಪಂಚಮುವಾದ್ಯರಭಸ॥
ಇಸಿತಿವ ನೋಡಿ ಸಂತಸವೆತ್ತು ಕನ್ನಿಕೆ। ವಸಿತೆ ಹೊಕ್ಕಳು ಮಂದಿರವ॥೪೪॥
ಇಳಿದಳು ಮಾಣಿಕ್ಯರಚಿತದಂದಣದಿಂದೆ। ಕಳುಹಿದಳೊಡನೆ ಬಂದವರ ॥
ತಳತಮುತ್ತಿನ ಚಾವಡಿಯು ಗದ್ದುಗೆಯುಲ್ಲಿ। ಕುಳಿತಳು ವರಮಿತ್ರೆಯೊಡನೆ॥
ವರಮೋಹನತರಂಗಿಣಿಯೆಂಬ ಕಾವ್ಯವ। ಬರೆದೋದಿ ಕೇಳಿದ ಜನರ ॥
ತರಣಿಚಂದ್ರಮುರುಳ್ಳನಕ ಸತ್ಕೃಪೆಯಿತ್ತು ಪೊರೆವ ಲಕ್ಷ್ಮೀಕಾಂತಬಿಡದೆ॥

— ಅಂತು ಸಂಧಿ ೨೫ಕ್ಕಂ ಪದ ೧೩೩೦ಕ್ಕಂ ಮಂಗಳಂ —

## ಇಪ್ಪತ್ತಾಱನೆಯ ಸಂಧಿ

ಉಷೆ ಚಿತ್ರಲೇಖೆಯರ ಸರಸ —

ನಕ್ರಕಂಟಕವನುತ್ತರಿಸಿ ಗಜೇಂದ್ರನ। ವಕ್ತ್ರವ ತಿರ್ಕಣೆಗೆಯ್ದ ॥
ಚಕ್ರಪಾಣಿಯು ಕೊರ್ತು ಕೃತಿವೇಟು ತನಗೆ ತ್ರಿ। ವಿಕ್ರಮದಾಸಸ್ಯದಾಸ ॥
ಹರಿಶರಣರ ಪಾದರಜವ ಮಸ್ತಕದಲ್ಲಿ। ಧರಿಸಿ ರಾಮಾನುಜಾಗಮವ[3]॥
ಸ್ಮರಿಸಿ ಮನೋನುರಾಗವನಾಂತು ಕೃತಿಯ ಬಿ ತ್ತರಿಸುವೆ ಕೇಳಾಯತಾಕ್ಷಿ ॥

---

ಕ ಪ. ಅ—1. ಅಮೃತವೆಂಬ ಅನ್ನ. 2 ಈಶ್ವರನ ಪತ್ನಿಯು. 3. ಶ್ರೀರಾಮಾನುಜಾಚಾರ್ಯರಿಂದ ಪ್ರಚಾರಿತವಾದ ವಿಶಿಷ್ಟಾದ್ವೈತ ಮತತತ್ವವನ್ನು.

ಹೊಂದಂಬಿಗೆಯುದಕವ ತಂದು ಚರಣಾರ| ವಿಂದವ ಪಡಿಗದೆ ತೊಳೆದು||
ಗಂಧಕಸ್ತೂರಿಯಿಂದೆ ತಿಗುರಿಕ್ಕಿ ಪಾವುಡೆ | ಯಿಂದೊರಸಿದರು ಸೌಖ್ಯದಲಿ ||
ಬಾಲೆ ತನ್ನಯ ಮಿತ್ರೆಯೊಡನೆ ಕಾಲ್ದೊಳೆದು ಸು|ಶೀಲೆಯುರ್ ನೂಱಾ
[ಱು ಹೆಣ್ಣು||
ಲೀಲೆಯಿನೊಡಗೊಂಡು ಹೊಕ್ಕಳು ಭೋಜನ|ಶಾಲೆಯ ನೋಡಿ ಸಂತಸದಿ||
ಸಿತವಟ್ಟೆವಿಡಿಗದ್ದುಗೆಯುಲ್ಲಿ ಮಂದ | ಸ್ಮಿತಮುಖಿಯುರ ಸಾಲುಗೊಳಿಸಿ||
ಸತಿಯುರ ತಲೆವಣಿ ಸಖಿಯೊಡನಿರ್ದಳು | ರತಿಸರಸತಿಯ ರೀವಿಯುಲಿ ||೫||
ಕಿರಣಶೋಭಿತರತ್ನಾಂಚಿತಸಿಖಿಳೋಪ | ಕರಣದೆ ಶಿವಪೂಜೆಗೆಯ್ದು ||
ಸ್ಮರಣೆಯುಮಾಡಿ ಮಸ್ತದೊಳಾಂತುಕೊಂಡರು | ಶರಣೇಶನನೀಕ್ಷಿಸುತ್ತೆ||೬||
ಜಲಜಾಕ್ಷಿಯರುಪಕರಣೆಯ ತೆಗೆದತ | ನಲವಿಂದೆ ತಂದಿರಿಸಿದರು ||
ವಿಲಸಿತಮಾಣಿಕ್ಯಮಯ ಹೊನ್ನ ಹರಿವಾಣ ಕೆಲ ವಟ್ಟ[1]ಲಟ್ಟಣಿಗೆಗಳ ||೭||
ಕುಡಿನೀರ ಹೊನ್ನ ಹೂಜೆಯ ಸಾಲ್ಗೊಳಿಸಿದ | ರಡಿಗೆಗಾರ್ತಿಯರು
[ಸೌಖ್ಯದಲಿ ||
ಪಿಡಿದರು ಸ್ವರ್ಣಭಾಂಡದಿ ಶಿಖರಿಣಿಗಳ | ಬಡಿಸಿದರತಿ ಚಮತ್ಕರದಿ ||೮||
ಸಣ್ಣಕ್ಕಿಯುಶನ ಸದ್ಘೃತದೊಳೆ...ಕ್ಕೈ | ದಣ್ಣಲರ್ ದಧಿಪತ್ರಮಾಲೆ ||
ತಣ್ಣೈಸದೆ[2] ಪದಾರ್ಥಂಗಳ ರುಚಿಯ ಮು|ಕ್ಕಣ್ಣಗರ್ಪಿತವ ಮಾಡಿದರು ||
ರಂಜಿಗ ಪರಡಿ ಗೌವಲೆ ಸಣ್ಣಸಜ್ಜಿಗೆ | ಸಂಜೀವಘುಟಿಕೆ ದುಗ್ಧಾನ್ನ ||
ಭುಂಜಿಸುವಸಿತು ಸದ್ಘೃತಭಕ್ಷ್ಯಗಳ ಮೃ|ತ್ಯುಂಜಯಗರ್ಪಿತವ ಮಾಡಿದರು||
ರಸರಸಾಯನಪರಿಮಳ ಮಿಶ್ರಿತ ಕೆನೆ ಮೊಸಱುಪ್ಪುಗಾಯ ಸಂದೋಹ ||
ಹಸನಾದ ತಕ್ರವ[3] ಕುಡಿನೀರ ರುಚಿಯ ದಿ|ಗ್ವಸನ[4]ಗರ್ಪಿತವ ಮಾಡಿದರು||
ಅವಧರಿಸಿದಳು ಲಿಂಗವನುರಸ್ಥಳದಲ್ಲಿ | ಕುವರಿ ತನ್ನಯ ಮಿತ್ರೆಸಹಿತ||
ಧವಳಸರೋಜಾಕ್ಷಿಯರ ಸಂದೋಹದಿ | ಭುವನೇಶ್ವರಿಯ ಸಾರಿದಳು ||
ಸ್ವಚ್ಛದಿಂದಾರೋಗಿಸಿ ರತ್ನಮಯಪೊನ್ನ|ತಚ್ಛಂಗದೊಳುಕ್ಕೈಯತೊಳೆದು||
ವಿಸ್ತರದಿಂದೆ ಸುಗಂಧವೀಳೆಯವ ಪಂ | ಚಾಸ್ಯಗರ್ಪಿತವ ಮಾಡಿದರು ||೧೦||
ಪಟ್ಟೆ ಪಟ್ಟಾವಳಿ ಮೃಗಝಲ್ಲಿ ಸೌರಭ್ಯ ವಟ್ಟೆರ್ದ ಪೂಮಾಲೆಗಳನು ||
ಬಟ್ಟವಡೆದ ರತ್ನ ಪವಳ ಮುತ್ತುಗಳ ಮೋ|ಲ್ಕಟ್ಟು ಕಣ್ಮನಕೆ ರಂಜಿಸಿತು||

---

ಕ. ಪ. ಅ—1. ಗುಂಡಿಗಿರುವ.　　2. ಅರಿಹೋಗುವಹಾಗೆ ಮಾಡದೆ.
3. ಮೊಸರನ್ನು.　　4 ಈಶ್ವರ.

ಮಿಗೆ ರಮ್ಯವಡೆದ ನಾನಾರತ್ನಖಚಿತ ಗ|ದ್ದುಗೆಯಲ್ಲಿ ಕುಳಿತಳಾಕುವರಿ||
ನಗೆಮೊಗದಬಲೆಯರಂದೆತ್ತಿದರು ಸ|ದ್ಬಗೆವೆತ್ತ ಮುತ್ತಿನಾರತಿಯ ||೧೫||
ಆಲತಾಂಗಿಯರ [1]ಬಂದುಗೆವಾಯ ರದನಾ[2]ನುಕೂಲಚೆಂದುಟಿ ರಮ್ಯ[3] [ವೆನಲು ||
ಶೀಲವಂತೆಯರು ಕಪ್ಪುರಮಿಶ್ರಿತ ತಾಂ|ಬೂಲವನಿತ್ತರೆಲ್ಲರಿಗೆ ||೧೬||
ಆಳಿಯರುಗಳೆಲ್ಲರಿಗೆ ಸುಕಪ್ಪುರ | ವೀಳೆಯವಿತ್ತು ಮಂತ್ರಿಜೆಯ |
ಕೇಳಿದಳೀಶನೋಡ್ಡೋಲಗವೆಂತೆನೆ | ಪೇಳಿದಳ್ ಮನಃ ಪೂರ್ವಕದಿ||೧೭||
ಕಿಡಿಗಣ್ಣನೊಡ್ಡೋಲಗದಲ್ಲಿ ಸುರಪೆಣ್ಗ|ಳಡಿಕಿಱಿದಿಹುದು ನಿನ್ನೊರೆಗೆ||
ಪಡಿಗಾಣೆವೆಂದು ಬಿನ್ನೈಸಲ್ಕ ಸಖಿಯೊಳು ನುಡಿದಳಂಬುಜನೇತ್ರೆ ನಗುತೆ||
ಏಕೆನ್ನ ಪಿರಿದು ಕೀರ್ತಿಯ ಮಾಡುವೆ ಚಿತ್ರ|ಲೇಖೆ ಮಹೇಶನೋಲಗದಿ||
ನೀಕಂಡ ಸುರವೆಣ್ಣುಗಳಿಂಗೆ ಪ್ರತಿಯೆಂದು|ನಾಕೇಳಲಿಂ ಹಿತವಹುದೆ ||೧೯||
ತನ್ನ ಮಾತಿನಮೇಲೆ ಕರೆಯಾದೊಡೀರನ್ನಗನ್ನಡಿಯಿದೆಮುಖವಿದೆಕೋ
ಚೆನ್ನಾಗಿ ಭಾವಿಸಿ ನೋಡಿ ಸಾದೃಶ್ಯವ | ನಿನ್ನ ನೀ ತಿಳಿದುಕೊಳವ್ವಾ ||೨೦||
ನೋಡಿದಳಬಲೆದರ್ಪಣವೆಂಬ ನಭದಲ್ಲಿ ಮೂಡಿರ್ದಮುಖಚಂದ್ರಮನ
ಕೂಡಿರ್ದ ನಕ್ಷತ್ರವೆಂಬಂತೆ ತುಱುಬೊಳು| ಸೂಡಿರ್ದ ಮುತ್ತಿನಮಣಿಯ||
ಘನರೂಪಯೌವನವಡೆದ ಸೌಭಾಗ್ಯವ|ಮನದೊಳಗಿಂಬಿಟ್ಟುಕೊಂಡು||
ವನಜಾಕ್ಷಿ ಮಾತನಾಡಿದಳು ನಿರ್ಜರವಧೂ|ಜನವೆತ್ತ ತಾನೆತ್ತಲೆನುತೆ ||
ಕೊಂಡಾಡಿದಡೆ ಹಿಱಿನೆ ಹಿಗ್ಗುವರು ಭೂ|ಮಂಡಲದಧಮಯೋಷೆಯರು ||
ಪುಂಡರೀಕಾಕ್ಷಿ ನೀನಂತವಳಲ್ಲ ನಾ|ಕಂಡುದ ಪೇಳ್ದ ತಪ್ಪೇನು ||೨೩||
ಮಂಗಳನಂಗೀಕರಿಸಿದ ದೋಷವೊಂದು ನಾ|ಲ್ಮೊಗನಿಂಗೆ ಬಂದುದಕಂಡು
ಮೃಗಧರ ನಿನ್ನ ಯೌವಸದಲ್ಲಿ ಕಣ್ಣಿಟ್ಟು| ತೆಗೆದನು ಬಲವಂತನಾಗಿ ||೨೪||
ಆತಗಾಹವಣಾದ ಬಳಿಕ ಮಿಕ್ಕಿನ ಪುರು|ಹೂತಾದಿ ನಿಖಿಳನಿರ್ಜರರು ||
ಕಾತರಿಸಿದರು ನಿನ್ನಿರವ ಕಾಣುತೆ ಮಾನ| ಕೇತನಗೊಳಗಾದರಬಲೆ ||೨೫||
†ಗಂಡು ಮೆಚ್ಚುವುದಂಗನೆಯರ್ಗೆ ಪರವಧು|ಮಿಂಡೊಲಿವುದು ಪುರುಷರಿಗೆ||
ಕಂಡುದಿಲ್ಲವು ಪೆಣ್ಣಿಗೆ ಪೆಣ್ಣು ಮನ ಮರು|ಳ್ಗೊಂಡಿದೆ ಕೇಳಾಯತಾಕ್ಷಿ||೨೬

ಕ.'ಪ. ಅ—1. ಬಂಧೂಕಪುಷ್ಪದಂತೆ ಕೆಂಪಗಿರುವ ಬಾಯಿ. 2. ರಮ್ಯ. 3. ಹಲ್ಲು.
† ಈ ಪದ್ಯದ ತಾತ್ಪರ್ಯವೇನು ?

ನೆಱೆಜಾಣೆ ನಿನ್ನ ಕೀರ್ತನೆಗೆಯ್ವಡಹಿಲೋಕ|ದೆಱೆಯಂಗೆ ಮತಿಮಂದ
[ವಹುದು ||
ಕಱೆಕಂಠ[1] ಮೇನಕಾತ್ಮಜೆ[2] ಪಾಲಿಸಿದುದು|ಗೋಱೆಯ ನೋಡೆಂದು
[ತೋಱಿದಳು||೨೭||

ಈಷಣತ್ರಯವಿವರ್ಜಿತ ಗರಳಾಭೂಷಣ ಗಿರಿಜೆ ಪಾಲಿಸಿದ ||
ಭೂಷಣವಸ್ತ್ರಾದಿಗಳ ಸಿಟ್ಟಿಸಿ ಪರಿ|ತೋಷವ ಪಡೆದಳಾಕುವರಿ ||೨೮||
ಪೇಳಲದಾರ ಜಿಹ್ವೆಗೆ ಸಾಧ್ಯರತ್ನದ ಮೇಳವಿದೆಲ್ಲಿ ಸಿದ್ಧಿಸಿತೋ ||
ಚಾಳೈಸದೆ ಕೆತ್ತಿದನಾರೊ ಕೆಲಸಿ[3]ಯೆಂದಾಳೋಚಿಸಿದಳು ಕುವರಿ ||೨೯||
ನೂತಳದಾವ ಸುಜಾಣೆಯೊಳ್ಳೈದೆ ಪು|ರಾತನದಾವ ಕೋವಿದನೊ ||
ಶ್ವೇತವಸ್ತ್ರವ ತೊಳೆದಸಗ[4]ನದಾರೆಂದು ಭೂತೇಶ ಬಲ್ಲ ನಾನರಿಯೆ||೩೦||
ಉಟ್ಟುದುಹಱೆಯಾನೆದೊವಲ ಕಂಧರದೊಳ್|ಗಿಟ್ಟುದು ಜೀರ್ಣಾಸ್ಥಿಮಾಲೆ ||
ತೊಟ್ಟುದು ಫಣಿಭೂಷಣ ತಮಗಿವಗಾರು|ಕೊಟ್ಟರೊ ನಮಗೀವುದಕೆ||೩೧||
ಹವಣಿಲ್ಲದ ಮಾತನಾಡಿದೆ ವೃದ್ಧಶ್ರವ[5]ಮುಖ್ಯ ನಿಖಿಲನಿರ್ಜರರು ||
ಶಿವನ ಪೂಜೆಯ ಮಾಡಿ ಪಡೆದರೈಶ್ವರ್ಯವ|ಧವಳಾಕ್ಷಿ ಕೇಳ ಚಿತ್ತೈಸು ||
ಆತನ ಗುಣಶೀಲವ ಪೊಗಳುವೊಡಸಂಖ್ಯಾತ ಮಾಯಾಸುವಿದೂರ ||
ಚೇತನಾತ್ಮಕನ ಬಣ್ಣಿಪರಾರು ಕೇಳ್ ಏನಾನ|ಕೇತನ ಮದಸೊಕ್ಕಿದಾನೆ ||
ಕೈಸೆರೆದೊಡವೆಯೆನುತೆ ಕೊಡಬೇಕೆಂದು|ಪೈಸರಗೊಳಬೇಡ[6]ಮನದಿ||
ವೈಶಾಖಶುದ್ಧ ದ್ವಾದಶಿ ಮುಟ್ಟ ತಾಳ ಬೇ|ಕೈಸೆನ್ನ ಮಾತ ಮನ್ನಿಪೊಡೆ ||
ಹುಟ್ಟಿ ನಾ ಬುದ್ಧಿಗಲಿತು ನಿನ್ನಾಜ್ಞೆಯ ಕಟ್ಟನೊಳಹೆನೆಂದು ನಗುತೆ ||
ಸಿಟ್ಟಿಸಿ ವರರತ್ನಭೂಷಣಂಗಳ ಹೊನ್ನ|ಪೆಟ್ಟಿಗೆಯೊಳಗಿರಿಸಿದಳು ||೩೫||
ಮದಸೊಕ್ಕಿದಾನೆ ಮಾವುತನಿಚ್ಛೆಯಿದ್ದಂತೆ|ಸುದತಿ ನೀನೆನ್ನಾಜ್ಞೆಯೊಳು ||
ಪದತಪ್ಪದಿರ್ದ ಕಾರಣ ನಿನ್ನ ಸೇವೆಗಾ ನೊದಗಿದೆ ಕೇಳಾಯತಾಕ್ಷಿ ||೩೬||
ಮೃತ್ಯುಂಜಯ ಕೀರ್ತನೆಯಿಂದ ಪರಿತೋಷ|ವೆತ್ತಿರ್ದರಾಪೆಣ್ಗಳೊಡನೆ ||
ಹೊತ್ತುಗಳೆಯಲೋಸುಗ ಕೇಳಿದಳಱು|ವತ್ತುನಾಲುಕು ವಿದ್ಯೆಗಳ ||೩೭||
ವೃಂದಾರಕರಾಕ್ಷಸಯುದ್ಧಕಥೆ ಹರಿ|ಶ್ಚಂದ್ರಾದಿಚಕ್ರವರ್ತಿಗಳ ||
ಹಿಂದಣ ಷೋಡಶಮಹಸೀಯರಾಜರ|ಬಂದ ಕಾರಿಯವ ಕೇಳಿದರು ||೩೮||

---

ಕ. ಪ. ಅ—1. ಈಶ್ವರ. 2. ಪಾರ್ವತಿ. 3. ಕೆಲಸಗಾರ. 4. ಅಗಸ, ಮಡಿವಳ. 5. ಇಂದ್ರ. 6. ಏನೂ ಇಲ್ಲವೆಂದು ತವಕ ಹೊಂದಬೇಡ (?)

ಗೀತನಾನಾವಾದ್ಯನೃತ್ಯಖೇಲನ ವಿಪ|ರೀತವಮಾಯಾವಿದ್ಯೆಗಳ ||
ವ್ರಾತವನೊಂದೊಂದ ನೋಡಿ ಸಂತಸಗೊಂಡ|ರಾತರಳಾಯತಾಕ್ಷಿಯರು ||
ಮತವಱಿದವರವರುಗಳಿಂಗೆ ದಾರಿದ್ರ್ಯ|ಹತಭಾಗ್ಯವಿತ್ತು ಕುಸ್ತರಿಸಿ ||
ಶತಪತ್ರನೇತ್ರೆಯರಿರಲಿತ್ತಲಸ್ತಂ ಗತನಾದ ಸೂರ್ಯ ಪಶ್ಚಿಮದೆ ||೪೦||

ವರಮೋಹನತರಂಗಿಣಿಯೆಂಬ ಕಾವ್ಯವ|ಬರೆದೋದಿ ಕೇಳದ ಜನರ ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವ ಲಕ್ಷ್ಮೀಕಾಂತ ಬಿಡದೆ||

— ಅಂತು ಸಂಧಿ ೨೬ ಕ್ಕಂ ಪದ ೧೮೧೧ ಕ್ಕಂ ಮಂಗಳಂ —

## ಇಪ್ಪತ್ತೇಳನೆಯ ಸಂಧಿ

ಉಷೆಯ ಸ್ವಪ್ನ —

ನಿಗ್ರಹ ಬಿಡಿಸಿ ಮಾವನ ಕೊಂದು ಮಧುರೆಯ|ನಿಗ್ರಹಿಸೆನಗೆ ಪಾಲಿಸಿದ||
ನ್ಯಗ್ರೋಧದಳ[1]ವಾಸ ದೇವನ ಕರುಣಾನುಗ್ರಹ ಕೃತಿಯ ವಿಸ್ತರಿಸು ||೧||

ಕಾಕೇಂದ್ರಿಯಶಬ್ದಗಳಲ್ಲ ಗರುಡಪ|ತಾಕೇಶ್ವರನ ಸತ್ಕೃತಿಯ ||
ನೀಕೇಳಲುಸಿರುವೆ ಸ್ವರ್ಣಕಂಬಿಯೊಳು ಸ|ಲಾಕೆಯ ತೆಗೆದಂತೆ ಕೆಳದಿ |೨

ಗಂಡು ಹೆಣ್ವಾಗಲ್ವಕ್ಕಿ[2] ಸ್ವಸ್ಥಾನದೊಳೆಂಬು|ಗೊಂಡಿದರ್ ತನುವಲ್ಲರಿಯ||
ಕಂಡುದಾದಿತ್ಯಮಾರ್ಬಲಬಂದುದೆನೆಸೊಡ|ರ್ವಿಂಡು ತತ್ಪುರದೊಳೊಪ್ಪಿದುವು||

ಆದುದು ಕುಮರಿಗೀಶ್ವರಪೂಜೆ ಭೋಜನ|ವಾದುದು ಸಖಿವೆಣ್ಗಳೊಡನೆ ||
ಆದುದಿರುಳು ನಿದ್ದೆ ಮಣಿಮಂಚದೊಳು ಬೆಳ|ಗಾದುದು ನವಿಲ್ಗಳುತ್ಸವಿಸೆ||

ಜೋಡಿಸಿದುವು ರಕ್ಷಸಮೃಗಪಕ್ಷಿಗ|ಳೋಡಿದುವಳಿ ಚೂತವನಕೆ ||
ಮಾಡಿದ ಚಂದ್ರ ಪಲಾಯನೋಕ್ತಿಯ ಸೂರ್ಯ|ಮೂಡಿದನುದಯಶೈಲದಲಿ||

ಬುಧರಾಮ್ನಾಯಘೋಷಣದಂತೆ ಗಾಣೆಯರ್|ವಿಧವಱಿದಾಳಾಪಿಸುವ ||
ಸದಮಲಶೈವಸಂಕೀರ್ತನೆಗಳ ಕೇಳ್ದು|ಸುದತಿ ಮೆಯ್ಮುರಿದೆದ್ದಳೊಲಿದು ||

ನೋಡಿದಳುಭಯಸುಹಸ್ತರೇಖೆಯನೆದ್ದು|ಮೂಡಿದಳಳಕದೆ ಹರಿವ ||
ಪೋಡಿಭಾಗದ ಬೆಳ್ಳೆಲೆಯ ಮೆಲ್ಲುತೆ ಸಖಿ ಗೂಡಿ ಬಂದಳು ದಿವಾಣಕ್ಕೆ ||೩||

---

ಕ. ಪ. ಅ—1. ಆಲದ ಎಲೆ. 2. ಗಂಡು ಹೆಣ್ಣು ಚಕ್ರವಾಕಗಳು.

ಮುತ್ತಿನ ಗದ್ದುಗೆ ಮಲಗುಮಣೆಯೊಳು[1] ಚೆನ್ನೊತ್ತಿ ಮಂಡಿಸಿದಳಾ
[ಕುವರಿ ||
ಹತ್ತಿರೆ ಕರೆದು ಕುಳ್ಳಿರಿಸಿಕೊಂಡಳು ಪ್ರಾಣ|ಪತ್ತುಗೆಗಾತಿಯ ಮುದದಿ ||೮
ಕುಡಿನೀರುವೀಳ್ಯಕಾಳಾಂಜಿಗೆ ಚಮರ ಕನ್ನಡಿ ಮುಖವಸ್ತ್ರಬಿಜ್ಜಣವ ||
ಪಿಡಿದೆಡಬಲದೆ ನಿಂದಿರೆ ಮಿಂಡಿವೆಂಗಳು ಮುಡಿ ಮೊಲೆ ಭರದಿ ಕಂಪಿಸುತೆ ||೯
ಅತ್ಯಂತಜಾಣೆಗಾತಿಯರು ಸೊಲ್ಲಿಸುವ ಸಾಹಿತ್ಯಪಾಠಕಪ್ರಮದೆಯರು|
ನೃತ್ಯದವರು ತಾಳಮೇಳಸಹಿತ ಬಂತು ಮತ್ತೇಭಗಮನೆಯಿರ್ದೆಡೆಗೆ ||೧೦||
ವರರುದ್ರವೀಣೆ ಧನುರ್ವೀಣೆ ಜಂತ್ರ ತುಂಬುರುವೀಣೆ ಕೂರ್ಮವೀ
[ಣೆಗಳ ||
ಸ್ವರಮಂಡಲಮುಖ್ಯತಂತ್ರೀವಾದ್ಯದ ಹೆಣ್ಣು ನೆರೆದುದು ಕುವರಿಯೋಲಗದಿ||
ಮೀಱುವ ಯೌವನ ಸಿರಿಮೊಗಗೊಳು ಹೊಗರೇಱುವ ಕಾಂತಿ ಮೆ
[ಯ್ಯೊಳಗೆ ||
ಬೀಱುವ ಗಂಧಗಂಧಿನಿಗೆ ಸುವಿದ್ಯವ ತೋಱುವರಾಯತಾಕ್ಷಿಯರು ||೧೧||
ಕಾಮಕೇಳಿಯಲಿ ಕಾಂತರ ಹೃದಯದೊಳಿರ್ದ ನೇಮವ ತುಡುಕು
[ವಂದದಲಿ ||
ಕೋಮಲ ಕೈವೆರಲಿಂದೆ ತಂತ್ರಿಯ ಮುಟ್ಟಿ ರಾಮಕ್ರಿಯೆಯ ಬಾಜಿಸಿದಳು||
ಆಗಳಾವೀಣೆ ತೌರ್ಯತ್ರಯಾದಿಗಳಿದ ನಾಗವಾಸವ ನೆರೆ ನೋಡಿ ||
ಚಾಗವ[2] ಕೊಟ್ಟಳು ಕಲ್ಪಭೂರುಹವೆಳೆ ಬಾಗಕ್ಕೆ[3] ಸಮನಾಗಲೆನುತೆ ||೧೨||
ನೆತ್ತಪಗಡೆ ಚತುರಂಗವ ಗೆಲುವಳು ಮತ್ತೇಭಗಮನೆ ಮಂತ್ರಿಜೆಯ ||
ಚಿತ್ತವೈಕಲ್ಯವಾಗಲು ಸೋಲ್ವಳು ಸೋತು ಹೊತ್ತ ನಿವಾರಿಸುವುದಕೆ ||
ಮತಿವಂತೆ ಕಾವ್ಯವಾದವ ಬಿಟ್ಟು ಕೇಳಿದಳಿತಿಹಾಸ ಪೌರಾಣಗಳನು||
ಕತಿಪಯದಿನವನೂಕಿದಳು ಪಾರ್ವತಿ ಕೊಟ್ಟ ತಿಥಿ ಬಂದು ಕೂಡಲೆಂದೆನುತೆ||
ಬಿಸಿಲ ಝಡಾಳದಿ ಬೆಂದರ್ಗೆ ಮಡುನೀರು ಸಸಿನೆಟಿಲಿದಿರ್ಪಂದದಂತೆ ||
ಅಸಿಯಳ ಮದನನುತಾಪಕೆ ಬಂದು ಸಂಧಿಸಿತೀಶ್ವರಿಯ ನಿರೂಪ ||೧೩||
ಗಳಿಗೆಯನೊಂದೊಂದು ಕಲ್ಪಕೋಟಿಯ ಮಾಡಿ ಕಳವ ಮಾನಿನಿಯ
[ಚಿತ್ತವನು ||

ಕ. ಪ. ಅ—1. ದಿಂಬಿನ ಮೇಲೆ. 2. ದಾನವ. 3. ಭೂಭಾಗಕ್ಕೆ.

ತಿಳಿದಳು ಸಖಿಶಿರೋಮಣಿ ಸೂರ್ಯನ ಮೇಲೆ | ಮುಳಿದು ನಿಷ್ಠುರವ [ಮಾಡಿದಳು ||೧೯||

ಅಸಗೆಟ್ಟುವೊ ಪುರಿ ಹೆರೆಯೆಣ್ಣೆ ತೀರಿದುದೊ | ಅಸಮಾಶ್ವಗಳು ಬಾಂ [ದೊರೆಯ ||
ಕೆಸಱೊಳು ಬಿದ್ದೇಱಲಾಱದಾದುವೊ ಎಂದು ಬಿಸಜಾಕ್ಷಿ ರವಿಯನೋಡಿದಳು
ಚಿತ್ರಲೇಖೆಯು ಮಾತ ಮನ್ನಿಸುವೊಡೆ ಕಂಜ| ಮಿತ್ರ ತನ್ನಯ ವರರಥವ||
ಸತ್ರಾಣಿಸಿಕೊಂಡು ತೆರಳದ ವಿಘಳಿಗೆ| ಮಾತ್ರದಿ ಪಡುವೆಟ್ಟದೆಡೆಗೆ ||೨೦||

ಶುದ್ಧಾತ್ಮಕಬಾಣನಾತ್ಮಸಂಭವೆಗನಿ| ರುದ್ಧನೆ ಕೈಸಾರಲೆನುತೆ ||
ನಿರ್ಧರ ಹರಕೆಯ ಕೊಟ್ಟು ಭಾಸ್ಕರದೇವ| ಸಾರ್ದನು ಪಶ್ಚಿಮಾಂಬುಧಿಯ||
ಬಿಸುಗದಿರನ ನುಂಗಿ ನೀರ್ಗುಡಿದಖಿಳರಾ| ಕ್ಷಸಿಯ ಮಸ್ತದ ಬೈತಲೆಯು||
ಅಸಿಯಚಂದ್ರಾಂಕಿತವೆಂಬಂತೆ ಸಂಜೆಗೆಂ| ಪೆಸೆದುದು ಕೇಳಾಯತಾಕ್ಷಿ ||೨೨

ವಾರಿಜ ವೃತ್ತ ಪಕ್ಷಿಗಳು ಕುಗ್ಗಿದುವು ಚ| ಕೋರ ನೀಲಾಬ್ಜ ಹಿಗ್ಗಿದುವು||
ಸೋರಿದುವಮೃತಪಾಷಾಣ[1] ಪಾಲ್ಗಡಲಂತೆ| ಪೂರೈಸಿತು ಚಂದ್ರಕಿರಣ||೨೩

ಮೇಳೈಸಿದುವು ಶೋಣಿತಪುರದೊಳು ಬೊಂ| ಬಾಳದೀವಿಗೆ ವಾದ್ಯರವದಿ||
ಗೀಳಡಲೆಡೆಯಾಡುವ ದೊರೆಗಳ ಪೆಂಪ| ಪೇೞಲಸಾಧ್ಯ ನಾಲಗೆಗೆ ||೨೪||

ಊರೊಳಗಿಸಿತು ಸಂಭ್ರಮವಡೆದಿರಲು ಕು| ಮಾರತಿಯರು ಶಿವಾರ್ಚನೆಯ||
ಪೂರಾಯುಗೆಯ್ದು ಸದ್ಭಕುತಿಯನಾಂತು ಕೈ ವಾರಿಸುತಿರ್ದರರ್ಥಿಯಲಿ ||೨೫||

ಸಡಗರದಿಂದೆ ನೋಡುವರ ಕಣ್ಣಾಲಿಗ| ಳೊಡತಿಯಮೇಲೆ ಸಂಧಿಸಲು ||
ಅಡಹಾಯಿದಾಕೆ ತನ್ನಯ ಪೇರುರದೊಳು| ತಡೆಗಳು ಬಲ್ಮೊಲೆಗಳಲಿ ||
ಅವರ ಲಾವಣ್ಯಾಬ್ಧಿ ವಿಟರ ಕಣ್ಮನಗಳ| ಜವಗಿಡಿಸಿದುವು ಗೋಪ್ಯದಲಿ||
................ ........ ........ .............. ||೨೬||

ಸತಿಶಿರೋಮಣಿಯರಿರ್ವರು ಕರ್ಣ ಶಿವಪಾ| ರ್ವತಿ ಕೊಟ್ಟ ವಸ್ತ್ರ [ಭೂಷಣವ ||
ಅತಿಹರುಷದೊಳುಟ್ಟು ತೊಟ್ಟು ಭುಕ್ತವನಾಡಿ | ನುತಿಸಿದರ್ ಗೌರೀ [ವಲ್ಲಭನ ||೨೭||

ಕೆತ್ತಿದ ನಿಖಿಳರತ್ನಗಳ ಮೊಯ್ವೊಳಗು ಕೈ| ವರ್ತಿಯ ಸೊಡರ ಕೀಲ್ಪಿಡಿಸಿ||

---

ಕ. ಪ. ಅ—1. ಚಂದ್ರಕಾಂತಶಿಲೆ.

ಅತ್ಯಂತರಮ್ಯವಡೆದ ಹರ್ಮ್ಯವ ನೋಡಿ । ಹತ್ತಿದಳಧರಸಂಚಿಗಮುಖಿ ‖೧೯‖
ತಲೆವಣಿಗಳ ತಾಳ್ದು ನಿಲೆ ಚವಿ ನಿಖಿಳಭೂ ವಲೆಯು ಸಗ್ಗಿಗರ ಮುಂ
[ಕೊಂಡು ‖
ಕಳೆಗಧಿನಾಥ ಚಂದ್ರನ ನೋಡಪೋಪಂತೆ । ನೆಲೆನೆಲೆಗಡರ್ದಳಾಕುವರಿ ‖೨೦‖
ಭೋಗಿಭೂಷನ ಗಿರಿಶಿಖರವ ಚೌಷಷ್ಟಿ । ಯೋಗಿಣಿಯರು ಪತ್ತುವಂತೆ ‖
ವಾಗಿನೊಳ್[1] ಜಾಣವೆಣ್ಣುಗಳು ಮಂತ್ರಿಜೆ ಸಮ ವಾಗಿ ಹರ್ಮ್ಯದೊಳಿದ್ದ
[ರೊಲಿದು ‖೨೧‖
ಇನಕಿರಣಂಗಳ ಮಸುಳಿಪ ರತ್ನಕಾಂ । ಚನಮಂಚ ಮೃದುತಲ್ಪದಲಿ ‖
ವನಜದಳಾಯತೇಕ್ಷಣೆ ಮಂಡಿಸಿದಳು । ಘನಪರಿತೋಷದುಬ್ಬಿನಲಿ ‖೨೨‖
ಹೇಟಿಕೆಯಲಿ ಮಿತ್ರ ಕುಳತಳು ಕಾಂತಿ ಛ । ಡಾಳಪ ಮಣಿಮಂಚದೆಡೆಯ
ಆಳಿಯರ್ ಗಂಧೋದಕಪೂಜೆಯಿಂದೆ ಪ್ರ । ಕ್ಷಾಲಿಸಿದರು ಪದಯುಗವ ‖೨೩‖
ಮಂಡೆಯ ಕುರುಳ ಹಿಕ್ಕುವರೊಂದು ಕೆಲರು ಪೂ । ದಂಡೆಯ ಮುಡಿ
[ಸುವರ್ ಕೆಲರು ‖
ಅಂಡೆಯೊಳಡಿದ ಜವಾಜಿಯ ಪೂಸಿದರ್ । ಖಂಡೇಂದುಭಾಳಕಾಮಿನಿಗೆ ‖
ಅಂಬುಜವದನೆಯ ಶೌಚಕ್ಕೆ ಪನ್ನೀರ । ಚೆಂಬು ಗಂಧೋದಕಪೂಜೆ ‖
ತುಂಬುದಟ್ಟೆಯಲಿ ನಾನಾವಸ್ತುಗಳ ತಲೆ । ಗಿಂಬಿನೊಳ್ ತಂದಿರಿಸಿದರು ‖೨೪‖
ಹಾಡಿಸಬೇಡ ನಾನಾವಾದ್ಯವ ದನಿ । ಮಾಡಿಸಬೇಡೊರ್ವರೊಡನೆ ‖
ಆಡಿಸಬೇಡ ಸ್ವಸ್ಥದಿ ನಿದ್ದೆಗೆಯ್ವೆನೆಂ । ದಾಡಿದಳಾಚಿತ್ರಲೇಖೆ ‖೨೫‖
ಯೋಗನಿದ್ರೆಯೊಳೊಱಗಿರಲು ಪಾರ್ವತಿ ಪೇಟ್ದ । ಪೂಗೋಲನ ಸಮ
[ರೂಪ ‖
ಈಗ ನಿನ್ನೊಡನೆ ಸ್ವಪ್ನದಿ ಬಂದು ಪರಮಸಂ । ಭೋಗವ ಮಾಳ್ಪ ನಿಶ್ಚಯದಿ ‖
ಎಂದೊಡಾಮಾತಿಂಗೆ ನಸುನಾಣ್ಚಿ ಹೃದಯಾರ । ವಿಂದದುಲ್ಲಾಸ ಪೂರಯಿಸಿ
ಚಂದನಸೌರಭ್ಯವಡೆದ ವಿಗ್ರಹಜಾತ[2] । ಸಂದೋಹ ಗುಡಿಗಟ್ಟಿತವಳ ‖೨೬‖
ಜನನಸ್ಥಾನದಿಂದಗಲದ ಬಿರುದುಳ್ಳ । ಘನಕುಚತಾರಹಾರಗಳು ‖
ತೊನೆದಾಡೆ ಜಟ್ಟಿಯರ್ ತೊಡೆಯುತಟ್ಟಿದರು ಜೀ । ವನಗಾತಿ ಕಣ್ಮುಚ್ಚುವಂತೆ ‖

---

ಕ. ಪ. ಅ—1 = (?)	2. ರೋಮಾಂಚಗಳು; ವಿಗ್ರಹ = ಶರೀರ.

ಎಡದೆಳವೆರಳ ಸೆಳ್ಳುಗುರ್ಗೆಯ್ಯ ಸೌಖ್ಯವ| ಪಡೆದು ಪೆರ್ಮೊಲೆಯು [ಮೇಲಿರಲು ||
ಮಡದಿಮಾಣಿಕ್ಯ, ದಕ್ಷಿಣಬಾಹು ತಲೆಗಿಂಬಿ|ಗಡರ್ದಿರೆ, ಮುಱಿದೊಱಗಿದಳು||
ನಿದ್ರಾನ್ವಿತೆಯಾಗಿ ಕಣ್ದಿಟ್ಟಿಯೊಳಗನಿ| ರುದ್ಧನ ಕಂಡಮರ್ದಪ್ಪಿ ||
ಮುದ್ದಾಡಿ ಮುದ್ದ ಬಾಯೊಳಗಿಟ್ಟು ಚುಂಬಿಸು|ತಿದ್ದಳು ರತಿಶಾಸ್ತ್ರದಲಿ||
ನಿಜವಾಗಿ ತನ್ನ ತೋಳವನ ತೋಳುಗಳಿಂದು|ದ್ವಿಜಮುದ್ರಾಂಕಿತಗೆಯ್ದು||
ಕುಚಕುಂಭನಿಭವೃತ್ತಸ್ತನಪ್ರಾಣಕಾಂತನ|ಭುಜವೆಂದುನಖದೊಳೊತ್ತಿದಳು
ತಳುಕಿನ ಕನಕಲತೆಗಳಂತೆ ತೋಳ್ಗೊತ್ತಡೆ|ಬಱಿಕೊಂದಱೊಂದಱೊಳ್ [ತಳೆದು ||
ಪುಳಕಿತವಪ್ಪಂತೆ ..........................................
ಕೇಲಿಸಿದೊಡಲ್ಗಳ ರತಿಯಾದಿಮಧ್ಯಾಂತ|ಲಾಲಿತ ಕೈಮಾಟದಿಂದೆ ||
ಸೋಲಿಸಿದನು ಕಾಂತ ಕಾಂತೆಯ ದ್ವಿತಯ ಕ|ಣ್ಣಾಲಿಗಳ್ ಕೋರೈಸುವಂತೆ||
ಚಾಪಲಾಕ್ಷಿಯು ಪರವಶ ಬೀತು ಕಾಮೋ|ದ್ದೀಪನ ತಲೆದೋಱಿ [ಮಗುಳೆ ||
ರೂಪಕಂದರ್ಪನೆಂದೆನಿಸುವ ತನ್ನ ಪ್ರಾಣೇಶನ ತಡವಿ ನೋಡಿದಳು||೪೫||
ಕಾಣದೆ ಕಂಗೆಟ್ಟಳು ಭ್ರಾಂತಿಗೊಂಡಳು| ಮಾಣದೆ ಮಗುಳಱಸಿದಳು ||
ಏಣನಿಭಾಯತೇಕ್ಷಣೆ ಕಾಮದೇವನ | ಬಾಣಕೆ ಗುಱಿಯಾದಳಾಗ||೪೬||
ಆತಂಕದಿಂದಲಾಳ್ದನ ಪೆಸರ್ಗೊಂಡಳು | ನೂತನಕಂದರ್ಪರೂಪ ||
ಸೋತವಳೊಡನೆ ವಂಚನೆ ಬೇಡ ಮತ್ಪ್ರಾಣ|ನಾಥ ಮೆಯ್ದೋಱೆಂದಳಬಲೆ
ಕದ್ದಡಗಿರ ಬೇಡ ಕಮನೀಯ ರೂಪ ನೀ|ನಿದ್ದೆಡೆ ನುಡಿದೊಡಾಬಂದು ||
ಮುದ್ದಿಸಿ ಮುನಿಸ ನಿವಾರಿಸಿ ಪಾದಕೆ | ಬಿದ್ದಮರ್ದಪ್ಪಿ ಚುಂಬಿಸುವೆ ||೪೭||
ಬಱಿಸೊಲ್ಲುಗಾತಿಯೆಂದೆನ್ನ ಮಾತಿಗೆ ಚಿತ್ತ|ಕಱಗದೆ ಬಾರದಿರ್ದಪೆಯೋ|
ಅಱಿಸಿ ಕಾಲ್ಗಱಗುವೆನೆನುತೆದ್ದು ತನು ತರ|ಹರಿಸುತೆ ತೊೞಲ್ದಳಾಲಯವ ||
ನಿಖಿಳಜ್ಯೋತಿರ್ಮಯಮಣಿವೆಳಗಲಿ ಮೃಗಾಂ|ಬಕಿ ನಲ್ಲನ ನಱಸುತಲಿ ||
ಸಖಿಶಿರೋಮಣಿ ಮಲಗಿರ್ದ ಮಂಚಕೆ ಚಂದ್ರ|ಮುಖಿ ಬಂದಳುದುಃಖವೆರಸಿ
ವಂಚನೆಗೆಯ್ದು ಮತ್ಪ್ರಾಣಮಿತ್ರೆಯು ಹೊನ್ನ|ಮಂಚದೊಳೊಱಗಿರ [ಬಹುದೇ ||

ಪಂಚಬಾಣನ ರೂಪ ಬಾರೆಂದು ಮರುಳ್ಗೊಂಡು। ಚಂಚಲಾಕ್ಷಿಯು ತುಡು
[ಕಿದಳು ॥೫೧॥

ಹುಟ್ಟಿದ ವಿರಹಾಗ್ನಿಯಿಂದಲಿ ಸಖಿಯುಳ। ಮುಟ್ಟಿದೊಡವಳೊಡಲ್ ಬೆಂದು॥
ಪಿಟ್ಟಬಿದ್ದಿ[1]ದ್ದು ನೋಡಿದಳು ತನ್ನೊಡನಲ್ಲಿ। ಪಟ್ಟದರ್ಪ್ರಮದಾರತ್ನವನು॥
ತಾಕಟ್ಟಿ ತನ್ನೊಡಲುರಿವುದು ನೀನಿಲ್ಲಿ। ಗೇಕೆದ್ದು ಬಂದೆನ್ನ ಕಂದ ॥
ಈಕಡುಬರ[2]ವೇನು ಕಾರಣ ಹೇಳಿ[3]ಂದು। ಶೋಕಾಶ್ರುಗಳಿ[3]ದಳಕ್ಷಿಯಲಿ ॥
ಸ್ವರ್ಗಪಾತಾಳಮರ್ತ್ಯಾನ್ವಿತ ಪುರುಷರ್ಗೆ । ವೆಗ್ಗಳ ರೂಪಸ್ಥ ತನ್ನ ॥
ಮುಗ್ಗಲೊಳ್ ಬಂದು ಮೆಚ್ಚಿಸಿ ಪೋದ ಬೆದಕಲಾ ನೆಗ್ಗಳಿಯುದೆ[3] ಬಂದೆ
[ತಾಯೆ ॥೫೪॥

ಕನಸಿನ ಭರ್ತ್ತಕೆ ಗೋಣಿಯನಾಂತರೆಂ। ದೆನಿಸಿದೆ ನೀ ಮೂಢವೆಣ್ಣೇ ॥
ನೆನಸಿಕೋ ನೀಲಕಂಠನ ವಧೂಟಿಯು ಮಾತ ಮನಸಿಗೆ ತಾರ್ಕಣೆಯಾಯ್ತು॥
ಖೋಡಿಯು[4] ಹೊಱಿಸಬೇಡೆನಗೆ ಸಂಭೋಗವ ಮಾಡಿದ ಕಳೆ ಮೆಯ್ಯೊ
[ಳದೆ ಕೋ॥
ನೋಡಿ ವನಾಂತರದೊಳಗಡಗಿದ್ದರು । ಗಾಡಿಕಾಱನ ತೋಱಿಸವ್ವ ॥೫೬॥

ಸುಮ್ಮಿರು ಧೃತಿಗೆಟ್ಟು ಮಾತಾಡಬೇಡವೆ। ನ್ನಮ್ಮ ನಿನ್ನಯ ಸುದ್ದಿಹೊಱಗೆ॥
ಹೊಮ್ಮಿದೊಡಿತರಾದಿಗಳೇಳಿಪ[5]ರೆಂದು। ನೆಮ್ಮಿಸಿ[6] ಕೊಂಡಳಂಗದಲಿ॥೫೭॥

ಕುಂದಣವನು ರಸಗೆಯ್ದಡಾಕ್ಷಣ ಕರು। ವಿಂದೆ[7] ಬೇರ್ಪಡಿಸಿ ಪುತ್ತಳಿಯ॥
ತಂದಡರ್ಚಿದರೆನೆ ಬಿಸಿವೆತ್ತು ಪ್ರಾಣಸಂ ಬಂಧಿಯ[8] ಬಿಗಿಯಪ್ಪಿದಳು ॥೫೮॥

ತಕ್ಕೆಗೊಂಡೆನ್ನ ಪೀಡಿಸಬೇಡ ಕಡುಶೈತ್ಯ ವಕ್ಕೆ[9]ಯೊಳಿರಿಸು ಮೆಯ್ಯೊಳಗೆ॥
ಉಕ್ಕೆಸಱಾಡುವ[10] ಮಹದಾದಿ[11] ಜ್ವರ ಮರ। ಣಕ್ಕೆ ಕಾರಣವೆಂದಳಳುತೆ॥

---

ಕ. ಪ ಅ—1. ಸುಟ್ಟು ಕರಿಕಾದ ಮಣ್ಣಿನ ಹಂಟೆಯಹಾಗೆ ಆಗಲು.
2. ಹೀಗೆ ಕಡಿದಾದ, ಅಲೆದಾಟದಿಂದ ಕಠಿನವಾದ ಬರುವಿಕೆಯು.
3. ನಾಚಿಗೆಗೆಟ್ಟು. 4. ತಪ್ಪನ್ನು. 5. ಹಾಸ್ಯಮಾಡುವರು.
6 ಒರಗಿಸಿ. 7. ಅಚ್ಚಿನಿಂದ. 8 ಪ್ರಾಣಪ್ರಿಯಳಾದ ಸಖಿಯನ್ನು.
9. ಅತ್ಯಂತ ಶೀತಳವಾದ ಪಟ್ಟೆಹಾಸಿಗೆಯಲ್ಲಿ ಅಥವಾ ಹೆಚ್ಚಾಗಿ ತಣ್ಣಗಿರುವ ತಾಪನಿವಾರಕವಾದ ಶೀತಳಪದಾರ್ಥವನ್ನು ಪಕ್ಕೆಯೊಳ್—ಸಮೀಪದಲ್ಲಿ. 10. ಉಕ್ಕಿ ಎಸರಿಟ್ಟಂತೆ ಕುದಿಯುತ್ತಿರುವ. 11. ಅತ್ಯಧಿಕವಾದ.

ಸೊಲ್ಲಿಪ ದೈನ್ಯವೃತ್ತಿಯ ಕೇಳ್ದು ಪನ್ನೀರ|ಚೆಲ್ಲಿದಳವಳುರಸ್ಥಳದಿ||
ಅಲ್ಲಿಯುದಲ್ಲಿ ಭೋರ್ಗರೆಯುತಿರ್ದುವು ಸುಣ್ಣ|ಕಲ್ಲಿಗೆ ನೀರೆಱೆದಂತೆ||೬೦||
ಕಾಮಾಗ್ನಿಯಲಿ ಕಾದ ಹೃದಯಸ್ಥಗಳ ಜ್ವಾಲೆ|ರೋಮಕೂಪದೆ ಹೊಱ [ಹೊಮ್ಮೆ ||
ಧೂಮತೆಱ್ತುದು ಚಿತ್ರಲೇಖೆಯು ವರಮುಖ|ಸೋಮಂಗೆ ಸ್ವರ್ಭಾನು[1]ವೆನಿಸಿ
ಆಳಿಯರ್ ಬೀಸುವ ಚಮರಾಲವಟ್ಟ[2]ತ|ಣ್ಣಾಗಳಿಯಿಂದವಳೊಡಲ್ಗಿಚ್ಚು ||
ತಾಳಯು[3] ಹಾಕಿ ಪೆರ್ಮೊಱಗೊಂಡ[4]ತೆಱದಿ ಛ|ಡಾಳಿಸಿತುಷ್ಣ ಸಂಘುಟಿಸಿ||
ಅಸಿಯಳ ಮನದನುತಾಪವ ಸಖಿ ನಿವಾ|ರಿಸಿ ನೊಂದಳರುಳ್ಗೞ್ವುದಕೆ||
ಬಿಸುಗದಿರನ ಹುಟ್ಟುಗೆಟ್ಟುದೊ ರೋಮಶ|ಋಷಿಕಲ್ಪಕೋಟಿ ತೀರ್ವನಕ||
ನಂದಿತು ಬೆಳದಿಂಗಳ ಕಿಚ್ಚು ಪಾಳಿಪ್ಪ| ಚಂದ್ರಮನಸ್ತಮಿಸಿದನು ||
ಕುಂದಿತು ನಕ್ಷತ್ರಮುಖಕಾಂತಿ ಬೆಳಗಾಗ|ಬಂದಿತು ಬೆದಱದಿರವ್ವ ||೬೪||
ಬೇಸಱುಗೊಂಬ ತತ್ಕುವರಿಯು ಮನದೊಳ|ಗಾಸಱು[5]ಬಹಳ ವೆಗ್ಗಳಿಸಿ||
ಈಸಱಿಂ[6]ದಿನ್ನು ಕಾಡುವುದೊಳ್ಳಿತಲ್ಲೆಂದು|ನೇಸಱು ತಲೆಯ ತೋಱಿಸಿತು||
ಪರಮೋಹನತರಂಗಿಣಿಯೆಂಬ ಕಾವ್ಯವ| ಬರೆದೋದಿ ಕೇಳದ ಜನರ ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವ ಲಕ್ಷ್ಮೀಕಾಂತ ಬಿಡದೆ||

— ಅಂತು ಸಂಧಿ ೨೭ ಕ್ಕಂ ಪದ ೧೯೩೩ಕ್ಕಂ ಮಂಗಳಂ —

## ಇಪ್ಪತ್ತೆಂಟನೆಯ ಸಂಧಿ

ಉಷೆಯ ವಿರಹ-- ಚಿತ್ರಲೇಖೆಯು ಉಷೆಗೆ ಭಾಷೆಯ ಕೊಟ್ಟುದು :—

ಅಜಮಿಳ ತನ್ನ ಪುತ್ರನ ಪೆಸರ್ಗೊಂಡೊಡೆ| ನಿಜಭಕ್ತನೆಂದು ಮನ್ನಿಸಿದ||
ಭುಜಚತುಷ್ಟಯನ ಪಾದವ ಕೂರ್ತು ಕೃತಿವೇಳ್ಬ| ಸುಜನಾನಂದನೆಂದೆನಿಸಿ||

---

ಕ. ಪ. ಅ—1. ಕೇತು. 2. ಬೀಸಣಿಕೆ. 3. ಬೆರಣಿಯ ಬಟ್ಟಲು.
4. ದೊಡ್ಡಮೊರದಿಂದ ಬೀಸಿದಹಾಗೆ.
5. ಬಳಲಿಕೆ. 6. ಈರೀತಿಯಲ್ಲಿ ಇಷ್ಟು.

ಇಸಿಮಾತುಗಳ ಸತ್ಪದಬಂಧ ವ್ಯಂಗ್ಯೋಕ್ತಿ। ಧ್ವನಿಯರ್ಥಗೌರವದಿಂದೆ ||
ತನಿರಸವಡೆದ ಮತ್ಕೃತಿಯು ಚಿತ್ತೈಸಲೆ। ವನಿತೆಯು ಮಂಡೆಮಾಣಿಕವೆ ||
ಜಾಱಿತು ಕಮಳಕಂಟಕ ಚಕ್ರಯುಗಳಕೆ। ತೀಱಿತು ಹೃದಯದ ತಾಪ||
ತೋರದಾಸೆ[1]ಯನಿಕ್ಕಿ ಚೈತನ್ಯವಡೆಸಿದ|ಳಾರಾಜಮುಖಿ ತನ್ನ ಸಖಿಯು ||೩||
ನಂಬಿಯುವಳ ವಾಕ್ಯವ ಕೇಳ್ದು ಕಮ್ರಲ| ರಂಬಿನ[2] ಗಾಯವ ಮಱೆದು||
ಬೆಂಬಿಡದಾರಯ್ವ ಹೆಂಗಳ ಮೊಗವ ನಿ| ತಂಬಿನಿಯಾಗ ನೋಡಿದಳು ||೪||
ತೆಗೆದರು ವಸ್ತ್ರಭೂಷಣವ ಸೋರ್ಮುಡಿಯಲಿ| ಬಿಗಿದರು ಬಟ್ಟಪಾವುಡೆಯು ||
ಮೃಗನಾಭಿಯ ನಾದಿ ಪೂಸಿದು ಪಣೆಯಲಿ | ದುಗುಡಸಿಂಗರ ಮೆಱೆವಂತೆ ||
ಲಾಲಿತ ಚೆಂಬಾವುಗೆ ಮೆಟ್ಟಿ ಮೃದುಮೆತ್ತ| ಸಾಲಿಯು ದುಪ್ಪಟದಾಳ್ದು ||
ಸೋಲಿಸಿ ತೊಲಗಿ ಪೋದವನ ನಿಟ್ಟಿಸುವ ಸ| ಲೀಲೆಯಿಂದೆದ್ದಳಾಕುವರಿ ||೬||
ಸುೞಿಗುರುಳಬಲೆಯ ಕೈಲಾಗುವಿಡಿದು ಮಾಂ|ದಳರಡಿಯಿಟ್ಟು ಕಂಪಿಸುತೆ||
ಗಳಲಾಂತು ನೆಲನೆಲೆಗುರುಜುಗಳೊಳು ನೋಡು|ತಿೞಿದಳುಪ್ಪರಿಗೆಯನವಳು||
ಸಿಡಿಯು ಕಣ್ಣಿಂದೆ ನಿಟ್ಟಿಸಿ ಕಮ್ರಂಗೋಲಗಿ| ಮ್ರಡಿರೂಪದಾಳ್ದವಲ್ಲಭನ||
ಅಡಿದಾವರೆಗಳ ಕಾಣದೆ ನಯನದಿಂ| ಮಿಡಿದಳು ಬಾಷ್ಪಾಂಬುವನು ||೮||
ಅೞಬೇಡ ಬಾರೆನ್ನಕಂದಯೆಂದಮರ್ದಪ್ಪಿ| ಕೆಳದಿ ಮಾಣಿಕದ ಮಂಚದಲಿ||
ಕಳಹಂಸತೂಲದಮೃದುವಾಸೊಳೊಱಗಿಸಿ ಹೊಳೆವ ವಿಗ್ರಹವನೋಡಿದಳು||
ಧರೆಗತಿಚೆಲ್ವ ತತ್ಕಚಹೇಮಶೈಲೇಂದು|ಗೆಱೆ ಬಾಹುಲತೆಯೊಳು ರತುನ||
ಬರೆಯುವಾಗಿದೆ ಕನಸಿನ ವಾಕ್ಯವಿದ ನೋಡು|ವರೆ ನಿನ್ನ ದೃಷ್ಟಿಗಾಶ್ಚರ್ಯ||
ನೋಡಿದಳ್ ಕುವರಿ ತನ್ನಯ ಮೊಲಗೆಲದಲ್ಲಿ | ಮೂಡಿರ್ದ ಮೋಹನ [ಗೆಱೆಯ ||
ಸೂಡಿರ್ದ ನುಣ್ಗೊರಳ ಮಣಿಗಂಡ ಮಾತ್ರದಿ|ಕೋಡಿದುವೆದೆಯ ಪೂಸರಳು||
ಉಂಟಾದಧೈರ್ಯ ತೀರ್ಕಣಿಸಿತು ಹೃದಯದೊಳೆಂಟೆರಡವತೆ[4] ಸಂಭ್ರಮಿಸೆ||
ಕಂಠಗತಪ್ರಾಣದ ಕುವರಿಯು ತಳ|ಮಂಟಪದೆಡೆಗೆ ಸಾರ್ಚಿದರು ||೧೦||

---

ಕ. ಪ. ಅ—1. ಹೆಚ್ಚಾದ ಆಸೆ. 2. ಮನ್ಮಥಬಾಣದ. 3. ನಿಶ್ಚಯ.
4. ದಶಾವಸ್ಥೆಗಳು — " ದೃಙ್ಮನಸ್ಸಂಗ ಸಂಕಲ್ಪೋ ಜಾಗರಃ ಕೃಶತಾಽರತಿಃ । ಹ್ರೀತ್ಯಾಗೋನ್ಮಾದ ಮೂರ್ಛಾಂತಾ ಇತ್ಯನಂಗದಶಾ ದಶ ||

ನೀಲದ ನೆಲಗಟ್ಟು ಪರಿವೇಷ್ಟಿಸಿರ್ದ ತಗ್ಗಾಲುವೆ ತಳವಾರ್ಸಿನಲಿ ‖
ಮೂಲೋಕಮೋಹನರನ್ನೆಯು ಸೈಪಿಡೆ| ಕೋಲಾಹಲವಾದುದೊಡನೆ ‖
ಅಬ್ಬರದಿಂದೆ ಕೂಗುವ ಕೇಕಿ ಕೋಕಿಲೆ ಸದಾಬ್ರಹ್ಮಣಪಕ್ಷಿನಿಚಯ ‖
ಬೊಬ್ಬೆಯೊಳಂಗಜಾತಗೆ ವೀರರಸವುಕ್ಕಿ ನಿಬ್ಬರದಲಿ ಕೋಲ ಕಱೆದ‖೧೪‖

ನೆಟ್ಟುದು ಕೂರ್ಗಣೆ ಕುವರಿಯು ಹರಣ| ಕಂಗೆಟ್ಟುದು ಸಂತಾಪವೆರಸಿ ‖
ಬಿಟ್ಟುದು ದೇಹಾಭಿಮಾನ ವಿಗ್ರಹ ಮರ | ವಟ್ಟುದು ಜ್ವರವು ಪೂರಯಿಸಿ ‖
ತುಱುಗಿದ ತನುತಾಪದಿಂದೆ ಪಕ್ಕಯು[1] ತಳರ್| ತಱಗೆಲೆಯಾಗಿ ತೋಱಿಸಲು‖
ಬಱಗಿದ್ದ ಕುವರಿಯು ಕಂಡು ಕುಂಭಾಂಡಜೆ| ಮಱುಗಿದಳಧಿಕದುಃಖದಲಿ ‖
ನಾಸಿಕದುಸಿರ ದಳ್ಳುರಿ ಮೂಕುತಿಗಂಧ ಗ್ರಾಸಸಂತಾಗಿ ಮೆಯ್ಯೊಳಗೆ ‖
ಪೂಸಿದ ಸಿರಿಗಂಧ ಕರಿಕಾದುದು ಪದ್ವಿಳಾಸಿನಿಯುರು ಭೀತಿವಡಲು ‖೧೫‖

ಮುಟ್ಟಲಮ್ಮದೆ ಕುಂಕುಮರಸ ಪನಿನೀರ| ಬಟ್ಟಬಲ್ಮೊಲೆಗೆ ಸಿಂಪಿಸಲು‖
ಇಟ್ಟ ಮಂಡಿಗೆಯು ಪೊಂಬುಜ್ಜಣಿ ತೈಲಸಂಘಟ್ಟದಿಂ ಪೊಂಗಿದಂತಾಯ್ತು ‖
ಮುದ್ದಿಸಿ ಚುಬುಕಾಗ್ರವಿಡಿದಡೆ ಬೆರಲ್ಗಳ| ಹೊದ್ದಿದುವುರಿ ಬೊಕ್ಕೆಗೆಯ್ಯ‖
ಬದ್ದಿಸಿ ಬಿಡದೆ ಕಾಲುವೆಯು ತಣ್ಣೀರೊಳ| ಗದ್ದಿದರವಳ ಹಸ್ತವನು ‖೧೬‖

ಸೋಂಕಿ ತಜ್ಜಲವಱತುದು ಸುಯ್ಯನಲುಮುಂ| ಕೊಂಡುಪರಿದು ಕಿಗ್ಗಡೆಯು‖
ಅಂಕುರವಡೆದ ಪೂಗಿಡುವೃಕ್ಷಲತೆವೇರ್ಗೆ| ಬೆಂಕಿಯು ಹರಹಿದಂತಾಯ್ತು ‖
ವರವೊ ಪಾರ್ವತಿ ತಾನು ಕೊಟ್ಟುದು ಪ್ರಾಣಸಂ| ಹರಣವೊ ನಿನಗಲ [ಗೋಲ ‖
ಗರವೊ[2] ನನ್ನೊಳು ದೇವಿ ಮುಳಿದು ಮಾತಾಡದ| ಇರವ ಪೇೞೆಂದೞಲಿದಳು
ಏತೆಱದಲಿ ಮಾಣ್ದಪುದು ನಿನ್ನಾಯಾಸ| ನಾತಂದುಕೊಡುವೆ ನಿನ್ನವನ ‖
ಭೂತಳವ್ಯವಹಾರ ತೃಣವಾದುದೆನಗೆ ನೀ| ಮಾತಾಡು ಮಾನಿನಿರನ್ನೇ ‖೧೭‖

ಉತ್ತರಗಳ ಕೇಳ್ದಾಕ್ಷಣ ಹೃದಯಾಬ್ಜ| ಪತ್ರ ಪ್ರಕಾಶವನೆಯ್ದೆ ‖
ಚಿತ್ರಮುಖದೆ ಕಣ್ದೆಱೆದಳು ಸೌಗಂಧ| ಗಾತ್ರಿಯುನಿಟ್ಟುಸಿಯಾಗ ‖೧೮‖
ಮುಚ್ಚಿದ ನೇತ್ರಯುಗ್ಮವನೆನ್ನ ಪುಣ್ಯಾದಿ| ಬಿಚ್ಚಿದೆ ಸಖಿ ನಿನ್ನ ನೆರೆದು ‖
ಮುಚ್ಚಿಸಿ ಪೋದಾತನಾರೆಂದು ಪೇೞ್ದಡ| ಚೊಚ್ಚತ್ತಲಿ ನಾ ತಂದು ಕೊಡುವೆ‖

---

ಕ. ಪ. ಆ—1. ಹಾಸಿಗೆಯು. 2. ಗ್ರಹವೊ.

ಮಕರಧ್ವಜರೂಪನಾವ ರಾಯನ ಕುಮಾ|ರಕನೆಂದು ಹೆಸರ್ಗೊಂಡುದಿಲ್ಲ ॥
ಮುಖಪರೀಕ್ಷೆಯ ಬಲ್ಲೆ ನಾತನ ತಂದೆನ್ನ|ಸುಖಬಡಿಸುವುದೆಂದಳೊಲಿದು ॥
ಮಂಡಲದೊಳಗೆ ಮಾನಿಸಿಯರಾತನ ರೂಪ|ಕಂಡುದುಂಟಾದಡೆ ತಮ್ಮ ॥
ಗಂಡರ ಮಱೆದು ಹುಚ್ಚ ಹರು ಕುಸುಮಕೋ|ದಂಡನ ಸರಲ್ಗೀವರೆದೆಯ ॥
ಮುಂಚೆ ಬಂದಾವನಾನೊಂದು ವಸ್ತುವ ನಿನ್ನ|ವಂಚಿಸಿ ಕೈಕೊಂಬುದಿಲ್ಲ
ಪಂಚೀಕರಣದೃಷ್ಟನ ನಿನ್ನ ಪಾಲಿಗೆ|ಹಂಚಿಕೊಂಡೆನ್ನ ಪಾಲಿಪುದು ॥೧೭॥
ಕಂಗೆಡವೇಡೆಲೆ ಸಖಿ ನಿನಗವನೊಳು| ಸಂಗವಪ್ಪಂತೆ ಮಾಡುವೆನು ॥
ಹೊಂಗೋಪುರ ಶಿಖರಕೆ ಪೋಪ ನಡೆ ನಿನ್ನ|ಮುಂಗಜ್ಜವ ನೆಗೞ್ದಪೆನು ॥೧೮॥
ಉಭಯಕುಲಾನ್ವಿತೆ ಭಾಷೆಯ ತಪ್ಪೆನೆಂ|ದಭಯವನೆವಗೀವುದೆನಲು ॥
ನಭಕೇಶ[1] ನಾಣೆ ತಪ್ಪಿದರೆಂದು ಹಸ್ತವ| ಕಬರಿಮಸ್ತಕದೊಳಕ್ಕಿದಳು ॥೧೯॥
ಬದ್ಧವಿದಹುದೆಂದು ಭ್ರಮರಕುಂತಲೆ ನಲಿ|ದೆದ್ದಳಾಕ್ಷಣದಲಿ ಸಖಿಯ ॥
ಮುದ್ದಾಡಿ ಬಿಗಿಯಪ್ಪಿ ಹೃದಯದೊಳುಗಿದು ನೆ|ಟ್ಟೆರ್ದ ಪೂಗೋಲ್ಗಿತ್ತಳಾಗ ॥
ಮೀನಕೇತನನುಪಟಳವಾಕುಮರಿಗೆ|ನಾನಾದುಃಖ ಮಂತ್ರಿಜೆಗೆ ॥
ಗೋನಾಳಗತಪ್ರಾಣವ್ಯಾಧಿಮದ್ದಾರೋಗ್ಯ|ಸ್ನಾನವ ಮಾಡಿದಳೊಲಿದು ॥
ಲಿಂಗಾರ್ಚನೆಯ ಮಾಡಿದಳು ತನ್ನಯ ಸಖಿ|ವೆಂಗಳು ಸಹಿತಾಗಮದಿ ॥
ಮಂಗಳವಿಭವಕೆ ನಿಖಿಳದೇವಸಾಧ|ನಂಗಳಗಿತ್ತಳರ್ಘವನು ॥೨೦॥
ಮಾಡಿದಳೀಶಪ್ರಸಾದಭುಕ್ತವ ಸಖಿ|ಗೂಡಿ ಹರ್ಮ್ಯಾಗ್ರವನಡರ್ದು ॥
ಪೋಡಿಯ[2] ಭಾಗ ಬೆಳ್ಳಲೆಯಸ್ವೀಕರಿಸಿ ಮಾ ತಾಡಿದಳ್‌ಮಂತ್ರಿಜೆಯೊಡನೆ ॥
ಅಕ್ಕ ನೀನೆನಗೋಸುಗ ಮೂಜಗವನು| ತುಕ್ಕಬೇಹುದು[3] ರಾತ್ರಿಯಲಿ ॥
ರಕ್ಕಸ ಭೇತಾಳಭೂತಶಂಕೆಯ ಜಯಿ|ಸಲ್ಕೇನ ನೆಗೞ್ದೆ ಪೇೞು ॥೨೧॥
ಅಧ್ಯಾಪಕ ಶುಕ್ರದೇವರು ಕಲಿಸಿದ|ವಿದ್ಯಾಚಮತ್ಕೃತಿಯಿಂದೆ ॥
ಉದ್ಯೋಗಿಸುವೆ ನಾನಾರೂಪಬ್ರಹ್ಮಾಂಡ|ಮಧ್ಯದೊಳೆನಗೋರ್ವರಿದಿರೆ ॥
ಆವಾವ ಲೋಕಾದಿಲೋಕಂಗಳೊಳು ಹೊಕ್ಕು|ದೇವಾಸುರನರೋರಗರ ॥
ಭಾವಚಿತ್ರವನುಱೆ ತಂದಪೆ ನೋಡವ್ವ|ಪೀವರಕುಚೆಯೆ ನಿನ್ನವನ ॥೨೨॥

---

ಕ. ಪ ಅ—1. ವ್ಯೋಮಕೇಶ, ಶಿವ. 2. ಸ್ವಲ್ಪ. 3, ಸಂಪೂರ್ಣವಾಗಿ ಸುತ್ತಬೇಕು.

ಇದು ನಿನ್ನ ಪ್ರಾಣಕಾಂತನ ಚಿತ್ರವೆಂಬುದ| ವಿಧುಮುಖಿಯೆನಗೆ [ತೋರಿದಡೆ ||
ಸದುಹೃದಯನ ತಂದು ನಿನ್ನವಯುವದಲ್ಲಿ|ಹುದುವಮಾಡಿದಪೆನೆಂದಳೊಲಿದು ||
ಆಗಳಾಬಾಣಪುತ್ರಿಗೆ ಮುನ್ನಿನಂತೆ ವೈ|ಭೋಗವ ಕಟ್ಟುಮಾಡಿದಳು ||
ಕಾಗದವೆಲ್ಲವ ಕೈಕೊಂಡು ಪಯಣಶೋ|ದ್ಯೋಗವ ನೆನೆದಳರ್ತಿಯಲಿ||೩೮||
ವಿಗಡವಾಗಿದೆ ನಿನ್ನ ಪಯಣಕ್ಕೆಯೆನ್ನದೆ ದಿಗಿಲಾಂತುದೀಗಳಗೆಯೊಳು ||
ಅಗಲಿದೊಡೆಂತು ಜೀವಿಪೆನೆಂದು ಬಿಸುಸುಯ್ಯು|ನುಗಿದಳು ದಳ್ಳುರಿವೆರಸಿ ||
ಮಾರಾಧ್ವರಪಾವಕಜ್ವಾಲೆಯೆನಲು ಕು|ಮಾರತಿಯುಸಿರೊಳು ಪೊಯ್ಯೆ ||
ನೀರಡಿಸಿದ ಕುದುರೆಗೆ ನೀರ್ಗುಡಿಸಲು| ಸೂರಿಯನಂಬುಧಿಗಿಳಿದ ||೪೦||
ವರಮೋಹನತರಂಗಿಣಿಯೆಂಬ ಕಾವ್ಯವ| ಬರೆದೋದಿ ಕೇಳದ ಜನರ ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವ ಲಕ್ಷ್ಮೀಕಾಂತ ಬಿಡದೆ||

— ಅಂತು ಸಂಧಿ ೨೮ ಕ್ಕಂ ಪದ ೯೧೪ ಕ್ಕಂ ಮಂಗಳಂ —

## ಇಪ್ಪತ್ತೊಂಭತ್ತನೆಯ ಸಂಧಿ

ಚಿತ್ರಪಟದ ಸಂಧಿ :—
ನಿಖಿಲಲೋಕವನೆಮೆಯಾಟದೆ ಸೃಜಿಸುವ|ಮುಖಚತುಷ್ಟಯನ ಕಲ್ಪಿಸಿದ||
ಅಕಳಂಕಮೂರ್ತಿಯ ಮನದೊಳಗಿಂಬಿಟ್ಟು|ಪ್ರಕಟಿಸು ತನಗೆಮೇಲ್ಗತೆಯ||
ಬಲ್ಲಹ ವೇದಶಾಸ್ತ್ರಾಗಮಪೌರಾಣ|ದುರ್ಲಭ ಶ್ರೀಹರಿಕಥೆಯ ||
ಉಲ್ಲಾಸದಿಂದೆ ಪೇಳುವೆ ಕೇಳು ಗಡ ವ್ಯರ್ಥ| ವಿಲ್ಲದ ಪರಮಮುತ್ತೈದೆ||
ಮುದ್ದುವೆಣ್ಣಿಗೆ ಪೇಳಿದಳು ನಿನ್ನಬಿಟ್ಟು ಕಾ|ಲೆದ್ದು ಪೋಪೆನೆ ಪೋಪುದಿಲ್ಲ||
ಗೆದ್ದು ನಿನ್ನಸುಗೊಂಡು ಪೋದಾಳ್ದನ ತರ|ದಿದ್ದು ಮಾಡುವುದೇನು ಮಗಳೆ||
ಅಲಬೇಡವೊಡತಿ ಕೇಳೀಗಳು ಬ್ರಹ್ಮಾಂಡ|ದೊಳಗಿರ್ದ ಸಕಲಸುಂದರರ||
ತೊಳಗುವ ಭಾವಚಿತ್ರಂಗಳ ಬರಕೊಂಡು|ಬೆಳಗಹ ಮುನ್ನ ಬಂದಪೆನು||೪||
ಬಪ್ಪನ್ನದಾಪೋಹಮಡಬೇಡ ಕುವರಿ ನೀ|ನುಪ್ಪರಿಗೆಯೊಳಹುದೆನುತ ||
ದರ್ಪಕಾದ್ಯಖಿಳಗ್ರಹಗಳಿಗೆ ಮಂತ್ರಿಸಿ| ಕಪ್ಪನಿಕ್ಕಿದಳು ಭಾಳದಲಿ ||೫||

ನಿಟ್ಟಿಸಿದಡೆ[1] ಭೂತಭೇತಾಳಕೋಟಿಯು|ಮೆಟ್ಟಿ ನೆಗ್ಗಿಸುವ ಯಂತ್ರಗಳ ||
ಕಟ್ಟಿದಳ್ ತನಗೆ ತತ್ಸಖಿಗೆ ಸಂದೇಹವ|ನಟ್ಟಿಡಳನಿತಿಲ್ಲದಂತೆ ||೬||

ಹಳವು ದಾಯದಲಿ ಬುದ್ಧಿಯ ಪೇಟಿ ಮದನವ್ಯಾ|ಕುಲವ ತೀರ್ಕಾಣಿಸಿ [ಬೀಟಿ[3]ಕೊಂಡು ||
ಗೆಲವಾಂತು ಗುರುಪಾದವ ಕೂರ್ತು ನಡೆದಳು|ಜಲಜಾಕ್ಷಿ ಗಗನವಟ್ಟೆಯಲಿ||
ಎವೆಯಿಟ್ಟು ಕಣ್ಮುಚ್ಚಿದಂತೆ ಮೂಲೋಕಕೆ|ಜವೆಯ ಮೋಹವ ಕಲ್ಪಿ [ಸಿದಳು ||
ಸವೆಯದ ಕರ್ಗತ್ತಲೆಯ ತುಂಬಿದಳು ಹು|ಣ್ಣಿಮೆಯ ಬೆಳ್ದಿಂಗಳ ಕೆಡಿಸಿ||೮||

ನಗರೂಪನುಟಿದು ನೀಲಾಚಲ ನಿಖಿಳ ಸಾ|ಗರರೂರ ಕಡಲನೆ ನುಂಗಿ||
ಹೊಗೆ ಸುತ್ತುವಂತೆ ಕರ್ಗತ್ತಲೆ ಬ್ರಹ್ಮಾಂಡ|ದಗಲದೊಳು[3] ತುಂಬಿತಾಗ||
ಕಾಳೆಗದೊಳು ಬೊಮ್ಮಟ್ಟಿಗಬೀರ ಭೇತಾಳ ಶಾಕಿನಿ ಡಾಕಿನಿಯರ||
ತೂಳದೆ ಹೊಯ್ದಾಡಿ ಜೃಂಭಿಸಿ ಗಗನಾಂತ|ರಾಳದಿ ಬೊಬ್ಬಿಕ್ಕುತಿಹರು||೧೦||

ಜುಂಜುರುದಲೆ[2]ಯೂರ್ಧ್ವರೋಮ ಕೆಮ್ಮೀಸೆ ಕೈ|ಪಂಜು[3]ಗಳೆನೆ [ಬೆಂಕಿಗಣ್ಣು ||
ನಂಜೊರೆವಾಯ[4]ಗೋದಣೆವಲ್ಲ[5] ಭೂತಗಳ್|ಮಂಜುಳವೆನೆ ನೆಗಹಿದುವು ||
ಪರಿದ ಮಸ್ತಕವೂಡಿದ ಬಾಹು ಹಸ್ತದಿ|ಮುರಿದ ಕಾಲ್ಗಳನೆಟ್ಟಿಕೊಳುತೆ||
ಇರಿದಾಡುವಾಕಾಶವೀರರ ಕಂಡಳು | ಹರಿಣಾಂಬಕಿ ನಸುನಗುತೆ ||೧೨||

ನಡುವಿರುಳಾಕಾಶಮಾರ್ಗದಿ ದೈತ್ಯರು|ಮುಡುಮುಡುಹಳಚಿ[6] ಮತ್ಸರಿಸಿ||
ಕಡಿದಾಡುವ ಖಡ್ಗಧಾರೆಯಿಂದುದಿರ್ವ ಕಿಡಿಗಳ ನೋಡುತೆಯಿದ್ದಳು ||
ಪಾತಕರುಗಳ ಕಂಧರ ಚರ್ಮಪಾಶದಿ|ನೇತಾಡೆ ಮುಂಬಿಗರಲೆದು ||
ಚೇತನಗಿಡಿಸಿ ಕೊಲ್ಲುತೆ ಕೊಂಡುಪೋಪೆಮ|ದೂತರ ನೋಡುತ್ತೈದಿದಳು ||
ಸನುಮತದಿಂದವರನು ಕಾಣ್ಬಳು ತನ್ನ|ತನುವವರಿಂಗೆ ಕಾಣಿಸದು ||
ಅನುಪಮಮಾಯಾರಣ್ಯಾನ್ವಿತ ಮಿಕ್ಕಿನ|ಬಿನುಗರ[7]ಭಯವ ಲೆಕ್ಕಿಪಳೆ ||
ಭೂತಕೆ ಭೂತಾಕೃತಿವೆತ್ತು ಮಂತ್ರಿಸಿ|ಕೋತಿಪ್ರೊಲ್ ಕುಣಿಸಿನಿಟ್ಟಿಸುತೆ||

---

ಕ. ವ. ಅ—1. ನೋಡಿದರೆ. 2. ಕೆದರುದಲೆ. 3. ದೀವಟಿಗೆ. 4. ನಂಜನ್ನು ಸ್ರವಿಸುತ್ತಿರುವ ಬಾಯುಳ್ಳ. 5. ? 6. ತಲೆಯಮೇಲೆ ಹೊಡೆದು. 7. ಶಕ್ತಿಯಿಲ್ಲದವರ.

ಧೀಂತಿಯೊಳ್ಳನಿತಿಲ್ಲದೆ ಪೊಕ್ಕಳು ಬಲಾ|ರಾತಿಯ ಪಟ್ಟಣದೊಳಗೆ ||೧೬||
ಪಾಕಶಾಸನಚತುರ್ದಶದಿಕ್ಪಾಲರ|ನೇಕದೇವರ್ಕಳಾಲಯವ ||
ತಾ ಕಾಣಿಸಿಕೊಳದೊಳಪೊಕ್ಕು ಚಿತ್ರಪಟ|ಲೇಖನಗೆಯ್ದಳೆಲ್ಲರನು ||೧೭||
ಬರೆದು ನೋಡಿದುನಿರ್ಜರರಲಾವಣ್ಯವ ಬರೆದುನೋಡಿದೆನು ಮತ್ಸಖಿಯ
ನೆರೆಪುಪೋಡಾತ ಸಂಧಿಸನೆಂದು ಚಿಂತಾ|ತುರದಲಿ ಮರಳ್ದಳಾಕಾಂತೆ ||೧೮||
ಇಳಿದಳು ಸಪ್ತಪಾತಾಳಲೋಕವ ಪೊಕ್ಕು|ಸುಳಿವಳನೇಕರೂಪಿನಲಿ||
ತಿಳಿದಳು ಫಣಿರಾಜಮುಖ್ಯನಾಗರ ರೂಪ|ಬಳೆದಳು ಪಟದ ಚಿತ್ರದಲಿ ||೧೯||
ತೆತ್ತಿಸಿ ನೋಡಲು ಕುವರಿಯ ರೂಹಿಂಗೆ|ಪತ್ತುಗೆಗಾಣರಿಲ್ಲೆನುತೆ ||
ಬತ್ತಿದ ಹರ್ಷಾಶ್ರುಗಳಿಂದೆ ಧರಣಿಗೆ | ಹತ್ತಿದಳಾಕೆ ಬೇಗದಲಿ ||೨೦||
ಪುಟನೆಗೆದಖಿಳದ್ವೀಪಂಗಳೊಳಗೆ ಜಂ|ತಟದೊಳಗಾದ ಮೇದಿನಿಯ ||
ಸಟುನೆಯಿಂದಲಿ ಭೂಭುಜಕುಮಾರರ ಚಿತ್ರ|ಪಟಗಳ ಬರೆದಳಾಕ್ಷಣದಿ ||
ಆರಾರ ಭಾವಚಿತ್ರಂಗಳ ಬರೆದು ಕು|ಮಾರತಿಗೆಣೆಗಾಣೆನೆನುತೆ ||
ನೀರಜದಳನೇತ್ರ ಪುರುಷೋತ್ತಮನಿರ್ದ|ದ್ವಾರಾವತಿಯನೆಯ್ದಿದಳು ||೨೧
ಆಗಮನಿಗಮಗಳಿತಿಹಾಸವುಪನಿಷ|ದ್ಭಾಗವತಾದಿಪುರಾಣ ||
ಯೋಗಶಾಸ್ತ್ರಗಳು ದ್ವಾರಕಿಯ ಸುತ್ತಿರ್ದುದು|ಸಾಗರದಂತೆ ಕಣ್ಗೊಳಿಸಿ||
ಕೇಶವಸರ್ವೋತ್ತಮಯೆಂದು ತತ್ವವಿಲಾಸದಿ ನುಡಿದಾಮ್ನಾಯ ||
ಘೋಷಣೆಯೊಂಬಂತೆ ಲವಣಾಬ್ಧಿ ಪರಮಸಂ|ತೋಷದೆ ದನಿದೋರಿಸಿತು||
ಕೊತ್ತಳ ಮುಗಿಲಟ್ಟಳೆ ಕೋಂಟೆಯ ತೆನೆ|ಹೊತ್ತ ಹೊಂಗಳಸಂಗಳಿಂದೆ||
ಸುತ್ತನೋಡಿದಡೆ ಜ್ಯೋತಿಶ್ಚಕ್ರದಂತೆ ದೇ|ವೋತ್ತಮನೂರು ರಂಜಿಸಿತು ||
ಬಿಸಜಭವಾಂಡಮಂಡಲಮಧ್ಯದಲಿ ಕ|ಣ್ಗೆಸೆವ ಪಟ್ಟಣವ ನೋಡಿದಳು ||
ದಶರತ್ನಖಚಿತಕವಾಟಬಂಧಗಳಿಂದೆ | ಹಸನಾಯಿತು ಕೃಷ್ಣನಗರ ||೨೨||
ವ್ಯರ್ಥವಾದುದು ಮಧ್ವಜನ ಸೃಷ್ಟಿಸುವಸ|ಮರ್ಥ ಪೆಂಗಾರ್ವನೈಶ್ವರ್ಯ||
ಕರ್ತಳೀತನ ರಾಣಿ ನಿಖಿಳವೈಭೋಗವು|ವ್ಯರ್ಥ ದ್ವಾರಕಿ ದೊಡ್ಡಿತಹುದೆ ||
ಪಗಲಾಣ್ಮರ[1] ಕೋಟಿತೇಜೋಮಯಚಕ್ರ ಜಗಜಗಿಸುವ ಜ್ವಾಲೆವೆರಸಿ ||
ನಗರವ ರಕ್ಷಿಸುತಿರೆ ಕಂಡು ತೀವ್ರದಿ|ಹುಗಗುಡದೆಂದಲಿರಿದಳು ||೨೩||
ಮಿಸುಕಿದೊಡೆಣುಪರಮಾಣುಮಾತ್ರವ ತುಂಡಿಸುತಿದೆ ದೃಷ್ಟಿಗಭೇದ್ಯ ||

---

ಕ, ಪ. ಅ—1. ಸೂರ್ಯರ.

ನುಡಿದು ಪೋಪೋಹೆ ಕಠ್ಯವಲ್ಲೆಂದು ತನ್ನೊಳು|ಬಿಸುಸುಯ್ದಳು ಚಿತ್ರಲೇಖೆ ॥
ಗಟ್ಟ್ಯವತನದಿ ಮಂತ್ರಿಸಿ ಮಹಾಜ್ವಾಲೆಯ|ಕಟ್ಟ್ಯವಳ್ ಕಡುಭೀತಿಯಿಂದೆ॥
ಅಟ್ಟ್ಯವಳಾಚಕ್ರಕಾಳಕವನು ಮುಱ್|ಪಟ್ಟ್ಯವುದುಮಿಸಗುಡದೆ ॥೨೦॥
ಈಪಾಟಿಯ ಚಕ್ರಶಕ್ತಿಯಿಂದಸುರಜ|ಮೂಪರ ಶಿರವ ಸೆಂಡಾಡಿ ॥
ಜೋಪಾನಗೆಯ್ದು ಜಗವ ರಕ್ಷಿಸುವ ಮ|ಹೀಪತಿ ಶರಣೆಂದಳವಳು ॥೨೧॥
ಹೇರಾನೆಯ ಗಂಧಲೇಪದ ಮದ ಕಂ|ಠೀರವ ಬಾಯ ಕಟ್ಟ್ಯವುದೆ ॥
ಘೋರಾಕೃತಿಯಸುರಕರ್ಮ ದುರಿತವಿ|ದೂರಿಯ ಪುರಕೆ ಸಿದ್ಧವುದೆ॥೨೨॥
ಮಾರಿಯು ಜಠರದಿ ಹೊಕ್ಕು ಕನ್ನವನಿಕ್ಕಿ|ಕಾರಿಯುವನು ಕಂಡುದುಂಟೆ|.
ತೋಱ್‌ದಖಿಳಮಂತ್ರನಾಯದ ತಾಣದೈ|ತ್ಯಾರಿಯ ಪುರಕೆ ಸಿದ್ಧವುದೆ ೨೩॥
ಮಂದರಗಿರಿಯನೆತ್ತವಡೆ ನುಗ್ಗಿಯು ದೊಣ್ಣೆ|ಯಿಂದೆ ಮೀಂಟಿದರೇಱುವುದೆ
ಎಂದಟಿಲ್ದಳು ಮನ್ಮಾಯ ಕೊಳ್ಳದು ಗೋ|ವಿಂದನ ಪುರವ ನಿಟ್ಟಿಸುತೆ॥೨೪
ಬಿಟ್ಟಳಾಸುರಕರ್ಮವ ಶುಕ್ರದೇವರು ಕೊಟ್ಟ ವೈಷ್ಣವ ಮಂತ್ರದಿಂದೆ|
ಬಟ್ಟಚಕ್ರವ ಬಲಗೊಂಡು ಪ್ರಾರ್ಥಿಸಲಾಗಿ|ತಟ್ಟನೆ ಪಥವ ಪಾಲಿಸಿತು ॥
ಹರಿನುತಿಯಿಂದೆ ಹೊಕ್ಕಳು ನೀಱ್ ದ್ವಾರಕಾ|ಪುರದಸದ್ವೀಧಿವೀಧಿಯೊಳು॥
ಸಿರಿವೆತ್ತನಿಖಿಳಹರ್ಮ್ಯದಹೊನ್ನಕಳಸಂಗ|ಳುರಿಯುತಿರ್ದ್ದುರುಜ್ಯೋತಿಯಂತೆ
ಕೇಣವಿಲ್ಲದೆ ರತ್ನದೀಪ್ತಿಗಳಾಮಾನ|ತಾಣದೊಳ್ ಮೆಱೆಯೆತನ್ನೊಡಲ॥
ಕಾಣಲೀಯದೆ ಹೊಕ್ಕಳು ಕೃಷ್ಣರಾಯನ|ವಾಣದ್ವಾರಂಗಳನುಟಿದು ॥೨೬॥
ಬಾಗಿಲೊಳ್ ಬ್ರಹ್ಮಾದಿ ಸುರಮನುಮುನಿಗಳು|ಯೋಗಿಗಳ್ ಪುಗ
[ಬಾರದಲ್ಲಿ ॥
ಪೋಗಿ ನೈಶಾಚರಿ[1] ಪೊಕ್ಕ ಭಾಗವ ಕಿವಿ|ದಾಗಿಸು ಮತ್ಪ್ರಾಣನಾಥ ॥೨೯॥
ಪರಿಪೂರ್ಣಭಾವಶುದ್ಧಿಯನುಳ್ಳ ಜಗದಂ|ತರಿಯಾಮಿ ಮುಂಗೆಲಸಕ್ಕೆ |
ತುರಿಪದಿಂದವಳ ಪ್ರೇರಕನಾಗಿ ಪರಮಾತ್ಮ | ತ್ವರಿಯದಿಂದೊಳವುಗಿಸಿದನು॥
ಓರಣಿಸಿದ ಗೋಪುರಮಧ್ಯದ ಚಂದ್ರ | ಪಾರಾವತಶಯ್ಯೆಯೊಳಗೆ ॥
ತೋರಮಾಣಿಕಮಂಚಮೃದುಹಾಸೊಳೊಱಗಿದ ನಾರಾಯಣನನೋಡಿದಳು॥
ರತಿಗಿಂತ ಚೆಲ್ವು ಪಾರ್ವತಿಗಿಂತ ಸೊಬಗು ಭಾ|ರತಿಗಿಂತಲಾವಣ್ಯವಡೆದ॥
ಸತಿಶಿರೋಮಣಿ ರುಕ್ಮಿಣಿಯು ಯೋಗದಿ ಜಗ|ತ್ಪತಿಕೃಷ್ಣನಿರೆ ಕಂಡಳಬಲೆ ॥

ಕ. ಪ. ಅ—1. ರಾಕ್ಷಸಿ.

ನೀಲಮೇಘಂಗಳ ನಡುವೆ ಕಂಗೊಳಿಸುವ|ಬಾಲಭಾಸ್ಕರನ ಕೀೞ್ಪಡಿಸಿ||
ಮಾಲಾಮಧ್ಯದ ಕೌಸ್ತುಭವೆಸೆವ ವಿ | ಶಾಲವಕ್ಷವ ನಿಟ್ಟಿಸಿದಳು ||೪೩||

ಪಾದದೊಳಮೃತತರಂಗಿಣಿ[1] ಪೊರ್ಕುಟಿರ್ಪಳ್|ವೇದಾಗಮಸೃಷ್ಟಿಕರ್ತೃ||
ಮಾದೇವರೂಪ[2]ಚಂದ್ರನ ಕಣ್ಮಿಳಗಾಂತ| ಮಾಧವನಿರವ ನೋಡಿದಳು||
ಕ್ರಮವಱಿದೀತನ ನುತಿಸಲ್ಕೆ ನಿಗಮಾ|ಗಮಶಾಸ್ತ್ರ ಕಡೆಗಂಡುದಿಲ್ಲ ||
ಮಮಜಿಹ್ವೆ ಪೊಗೞಲ್ಕೆ ಹವಣಲ್ಲವೆಂದು ಶ್ರೀ|ರಮಣನ ನೋಡಿ ಹಿಗ್ಗಿದಳು||
ಒಪ್ಪದೆ ನೋಡಲ್ಕೆ ದೃಗುಪುಣ್ಯ ನುತಿಸಲ್ಕೆ|ಒಪ್ಪುದು ಜಿಹ್ವೆಗಾಮ್ನಾಯ||
ಸುಪ್ರೌಢಾನ್ವಿತೆ ಬರೆದಳು ಕೋಟಿಕಂ | ದರ್ಪರೂಪನ ಚಿತ್ರಪಟವ ||೪೬

ಶ್ರೀಮನ್ನಾರಾಯಣಗೆ ವಂದಿಸಿ ಬಲ | ರಾಮಾದಿ ನಿಖಿಳಯಾದವರ ||
ಕೋಮಲಭಾವಚಿತ್ರಂಗಳ ಬರೆಕೊಂಡು |ಕಾಮನಾಲಯವ ಸಾರಿದಳು ||
ಲೋಲೇಕ್ಷಣೆ ಕಂಡಳು ಕಾಮರತಿ ಚಂದ್ರ|ಶಾಲೆಯ ಮಣಿಮಂಚದೆಡೆಯ||
ಲೀಲೆಯಿಂದೊಱಗಿರ್ದಾರು ಮೇಲೆ ಮಂದಾರ|ಮಾಲೆಯಮಕರಂದಸುರಿಯೆ ||
ಬೆಂಡಾದಳಂಗಜಾತನ ನೋಡಲವನಸ್ತ್ರ|ಕೊಂಡವುಕುಚದಮಧ್ಯದಲಿ ||
ದುಂಡುರುವೆಯ[3]ಮಾಡುತಿರಲುಚ್ಚರಿಸಿದಳು|ಕೆಂಡಗಣ್ಣನಮಂತ್ರಮಯವ||
ಗರುಡನ ಭೂಮಿಯೆಂದಱಿಯದೆ ಫಣಿಹೊಕ್ಕು| ಹೊರಡುವಂತವಳಿರ್ದೆ
[ಯಿಂದೆ ||
ಬರಡಾಗಿ[4]ಮರಳ್ದತಾವರೆಗೋಲುಕಂತುವಿ| ನೆರಡಕ್ಷಿಯೊಳು ನೆಲಸಿದುವು||
ಮುನ್ನ ಮತ್ಸ್ಯಖಿಯನೀನೆಚ್ಚರಳಂಬುಗಳ್|ಬೆನ್ನೊಳುತಟ್ಟುರ್ಚಿಬಂದು ||
ಎನ್ನದೇಹದೊಳು ಮೂಡಿತು ಪಾಪಿ ಮದನ ಮು| ತ್ತಿನ್ನಿಸಬೇಡೆಂದಳವಳು||
ಈತನ ಗರ್ವವ ನೆಗ್ಗೊತ್ತಿ ಭಸ್ಮೀ | ಭೂತನ ಶಿವನೆಸಗಿದನು ||
ಪಿತಕ್ಕೆ ಮಗುಳೆ ನಿರ್ಮಿತವ ಮಾಡಿದನೆಂದು|ಪೀತಾಂಬರಗೞಲಿದಳು |೫೨||
ಸೊನೆವೆಮರಾಂತು ಕತ್ತುರಿಗಂಧಿ ಬರೆದಳು|ನನೆಯಂಬನ ಚಿತ್ರಪಟವ ||
ವಿನಯದಿ ಕೈಕೊಂಡು ಬಂದಳು ಸ್ಮರವರ|ತನಯನ ಶಯನಸ್ಥಳಕೆ |೫೩||
ಸಂಧಿಸಿನೋಡಿದಳ್‌ಮಣಿಮಂಚಮೃದುವಾಸೊ|ಳೊಂದಿದನವಮನ್ಮಥನ||
ಇಂದೀವರದಳಲೋಚನೆ ವಿಗಹದೆ | ಕುಂದಿದಳ್ ಮುಖಪದ್ಮವನು ||೫೪||
ನೆಱರೂಪುವಡೆದಮನ್ಮಥನೆಂಬರತ್ನಹೊ ನ್ನೊರೆಯಿಂದಲುಗಿದಕೂರಸಿಯ

---

ಕ. ಪ. ಅ—1. ಗಂಗೆ. 2. ತ್ರಿಮೂರ್ತಿರೂಪನು. 3. ತೊಂದರೆಯನ್ನು.
4. ವ್ಯರ್ಥವಾಗಿ.

ಮುಱಿಯಬಾರದು ಮಹಾದೇವ ಸತ್ಕವರನ ಹೆಱಿಂಗಬಹುದೆ ಬಲ್ಲವರು||
ಇವನಾಗಬೇಕು ಸಕ್ಕವರಿಗೆ ಸ್ವಪ್ನಭೋ|ಗವನಿತ್ತ ಬಲುಜಾಣನೆನುತೆ ||
ಅವಯವರೂಪ ಚಿತ್ರಿಸಿಕೊಂಡು ಬಂದಳು | ಜವದಿಂದೆ ಶೋಣಿತಪುರಕೆ ||
ವಿಕಸಿತಪದ್ಮದಳಾಯತೇಕ್ಷಣೆಹರ್ಮ್ಯ| ಶಿಖರದೊಳಹ ಕುಮಾರತಿಯ||
ಮುಖದರ್ಶನವನು ಮಾಡಿದ ಮಾತ್ರದಿ ದುಃಖ |ನಿಕರ ನಿವಾರಣವಾಯ್ತು||
ಅಂಡಲೆವಡೆದು ಬಂದಬಲೆ ತಾ ಕಣ್ಣಾಱಿ[3] | ಕಂಡಾಕ್ಷಣವೆ ತಕ್ಕೈಸಿ ||
ಮುಂಡಾಡಲಿರ್ವರ ಪರಿತೋಷ ಪೂರ್ವದಿ|ಙ್ಮಂಡಲವನು ರಾಗಿಸಿತು[1]||೫೮ ||
ಆಡಿದೆ ಬೆಳಗಾಗದ ಮುನ್ನ ಬಹೆನೆಂದು | ಮಾಡಿದ ಭಾಷೆ ಸಿದ್ಧಿಸಿತು ||
ಜೋಡಿಸಿ ನೀ ಬರ್ಪ ವೇಳೆಗೆ ಭಾಸ್ಕರ | ಮೂಡಿದನೆಂದಳಾಕುವರಿ||೫೯||
ವರಮೋಹನತರಂಗಿಣಿಯೆಂಬ ಕಾವ್ಯವ | ಒರೆದೋದಿ ಕೇಳದ ಜನರ||
ತರಣಿಚಂದ್ರಮರುಳ್ಳನಕ ಸತ್ಕೃಪೆವೆತ್ತು|ಪೊರೆವ ಲಕ್ಷ್ಮೀಕಾಂತ ಬಿಡದೆ||೬೦

ಅಂತು ಸಂಧಿ ೨೯ಕ್ಕಂ ಪದ ೧೯೭೫ಕ್ಕಂ ಮಂಗಳಂ

## ಮೂವತ್ತನೆಯ ಸಂಧಿ

ಚಿತ್ರಪಟದ ದರ್ಶನ —

†ಪಿಡಿಯುವಲಕ್ಕಿಗೋಸುಗ ಕುಚೇಲನಿಗೆ ನಾ|ಲ್ಮಡಿಭಾಗ್ಯವಿತ್ತ ಮಾಧವನ||
ಅಡಿದಾವರೆಯ ಪ್ರಾರ್ಥಿಸಿ ಪೇಳುಕತೆಯ ಮೆ|ಲ್ನುಡಿಗಳ ಮಣಿಮಾಲೆಯೆನಿಸಿ
ಆದೊಡೆ ಕೇಳಾಯತನೇತ್ರೆ ನಿಬಿಡಪ ಯೋಧರೆ ಮತ್ಕಾವ್ಯರಚನೆ ||
ಸ್ವಾದುರಸಾಯನ ತವಕರ್ಣಯುಗಳಕ್ಕೆ| ತೀದರೆ[2] ಮಗುಳೆ ತುಂಬಿಸುವೆ ||
ಜಗದೊಳು ತುಱುಗಿರ್ದ ಮಾಯಾರಜನಿಯ | ತೆಗೆದಳು ತತ್ಕ್ಷಣದಲ್ಲಿ||
ಪಗಲಾಣ್ಮನ ಕಾಂತಿ ಪಸರಿಸಲಿರ್ವರು | ಮೊಗಮಜ್ಜನವ ಮಾಡಿದರು||೩||
ತೊಡಿಗೆಯಿಂದಿರ್ವರು ದೇವಪೂಜೆಯ ಮಾಡಿ| ನಡೆಸಿದರಾಗಮೋಕ್ತಿಯಲಿ||
ಊಡಿದರಮೃತತಾಂಬೂಲವ ಮುದದಿ ಕೊಂಡಾಡಿದರೀಶನಂಘ್ರಿಗಳ ||೪||

---

ಕ. ಪ. ಅ—1, ಕೆಂಪಾಗುವಂತೆ ಮಾಡಿತು.

† ಈ ಪದ್ಯದಲ್ಲಿ ಸೂಚಿತವಾದ ಕಥೆಯಾವುದು ?

2. ಹಿಡಿದರೆ; ಮುಗಿದರೆ.

ನಾದತಾತ್ಪರ್ಯಜ್ಞನ[1]ವಕ್ಷದೊಳರಿಸಿ[2] ಪ್ರ|ಸಾದತಾಂಬೂಲವ ಸವಿದು |
ಭೋದ ಕಾರಿಯುವಾದುದೇನೆಂದು ಸಖಿಯು ವಿ|ನೋದದದೆ ಕುವರಿ ಕೇಳದಳು||
ಎರ್ದೆಗಿಡಬೇಡಕೇಳ್ಕುವರಿ ನಿನ್ನಿಂದೆ ನೋ|ಡಿದೆ ಮಹದಾದಿಲೋಕಗಳ||
ಹೃದಯು ಭೀತಿಸದೆ ಹೊಕ್ಕೆಲ್ಲರ ರೂಹ ತಂ|ದಿದೆ ನೋಡೆಂದು ತೋಱಿದಳು||
ಅಮರೇಶ್ವರನ ರೂಹಿದೆನೋಡುವಿಬುಧೋ|ತ್ತಮಯಜ್ಞಪುರುಷನನೋಡು||
ಸಮವರ್ತಿ[3] ನೈಋತ್ಯನ ಚಿತ್ರಪಠಗಳ|ಕಮಲೇಕ್ಷಣೆಗೆ ತೋಱಿದಳು||೭||
ವಾರಾಸಿಯಾಳ್ದನ ನೋಡು ವಾಯುವ್ಯಕು|ಬೇರರ ರೂಹಿದೆ ನೋಡು|
ರಾರಾಜಿಸುವೀಶಾನ್ಯನ ನೋಡೆಂದು | ನೀರಜಗಂಧಿ ತೋಱಿದಳು ||೮||
ಪರಮಶೃಂಗಾರದೆ ರಂಜಿಸುವೀರೇಟು|ವರಮನುಗಳ ರೂಹ ನೋಡು|
ಸುರಮುಖ್ಯರ ಚಿತ್ರಪಠವಿದೆ ನಳಕೂ|ಬರಜಯಂತರ ನೋಡು ತಾಯೇ ||
ಗೀರ್ವಾಣಯಕ್ಷ ಗುಹ್ಯಕ ಸಿದ್ಧಸಾಧ್ಯಗಂ|ಧರ್ವಕಿಂಪುರುಷ ಕಿನ್ನರರ ||
ತರ್ವಾಯಗೊಂಡುಮೇಲೇಟುಲೋಕದೊಳಪ್ಪ|ಸರ್ವರ ರೂಹ ತೋಱಿದಳು
ಸಾವಿರಪೆಡೆವಣೆಗಳ ಕಾಂತಿ ಮೆಯ್ಯೊಳು ತೀವಿರ್ದ ತೇಜೋಮಯದಿ ||
ಕೋವಿದಧರಣೀಧರನ[4] ಚಿತ್ರವನುಷಾ|ದೇವಿ ಚಿತ್ತೈಸೆಂದಳೊಲಿದು ||೧೧||
ಗೂಢಪದಾನ್ವಿತೆ ನಿಖಿಳಚಿತ್ರಗಳ ಕೈ|ವಾಡವ ತೋಱಿ ಪಾತಾಳ ||
ನಾಡೊಳು ಬಲಿಮುಖ್ಯ ಖಳರ ಚಿತ್ರಂಗಳ|ನೋಡೆಂದು ತೋಱಿದಳೊಲಿದು||
ಆತಾತ ನಿನ್ನಯ ಪಿತಸಿಂಗೆ ತಾತ ತ|ತ್ತಾತ ಬಲೀಂದ್ರ ಬಲ್ಲಿದನು ||
ಪಾತಾಳಲೋಕದ ಪರಿಣಾಮವೆಂತೆಂಬ|ಮಾತ ಕೇಳ್ ಮದಗಜಗಮನೆ ||
ಶುಕ್ರದೇವರ ಶಿಷ್ಯಸಂಪತ್ತಿಯೊಳು ಬಲಿ|ಚಕ್ರವರ್ತಿಯಭಾಗ್ಯಮಿಗಿಲು||
ಶುಕ್ರಮುಂತಾದ ನಿರ್ಜರರೈಶ್ವರ್ಯವ|ವಿಕ್ರಮಗೊಂಡ ಪೌರುಷದಿ ||೧೪||
ಪಜ್ಜಳಿಸಿತು ಪಾತಾಳಲೋಕದೆ ನಿ|ಮ್ಮಜ್ಜನೈಸಿರಿಯು ಕೇವಲವೇ ||
ನಿರ್ಜರಪತಿ ವಿಷ್ಣು ಬಾಗಿಲ ಕಾದಿರ್ಪ|ಸಜ್ಜನ ಸಂಪತ್ತು ಬಡವೆ ||೧೫||
ಬಗೆವೆತ್ತು ಅಭವಾದಿಗಳತ್ತ ಪದವಿಗೆ| ಹಗೆಗೊಂಡು ಹರಿ ಕೆಡಿಸುವನು||
ಮಿಗೆ ಕರುಣದೊಳಾತ ಕೊಟ್ಟ ಸೌಭಾಗ್ಯವ|ತೆಗೆಯಲೊರ್ವರಿಗಳವಲ್ಲ ||
ಶ್ರೀವರನಿಂದೆ ನಿತ್ಯವ ಪಡೆದರು ಧ್ರುವ|ದೇವ ವಿಭೀಷಣಾದಿಗಳು ||

---

ಕ. ಪ. ಅ—1. ಶಿವನ. 2. ಹೃದಯದಲ್ಲಿಟ್ಟು. 3. ಯಮ. 4. ಪಂಡಿತನಾದ ಆದಿಶೇಷನ.

ಕೇವಲಸುಜ್ಞಾನಿ ಬಲಿಚಕ್ರವರ್ತಿಗಿನ್ನಾವ ಕಾಲಕೆ ಕೇಡಿಲ್ಲ ||೧೭||

ಸಾಕದಂತಿರಲಾತನ ಪೆಂಪು ಕೇಳಗೇಳು|ಲೋಕದವರ ರೂಹ ನಿನಗೆ |
ಬೇಕಾದುದಲ್ಲೆಂದು ತೋಱಿದಳು ನಿಖಿಳಶೋ|ಭಾಕರನೃಪಚಿತ್ರತತಿಯ ||೧೮||

ಬೇಸಱದೊಂದೊಂದ ತೋಱಿದು ಚಪ್ಪನ್ನ| ದೇಶಾಧಿಪರ ಚಿತ್ರಗಳ ||
ದೂಷಣೆಗೆಯ್ದು ನಿಟ್ಟಿಸಲೊಲ್ಲದವಳಾ|ಯಾಸವ ಕಂಡಳು ಕುವರಿ ||೧೯||

ತಂಗಿ ನೀಕೇಳು ಸಮಸ್ತಚಿತ್ರಂಗಳ| ಭಂಗಿಸಿ ಬಿಟ್ಟೆ ನಿನ್ನೆರ್ದೆಗೆ ||
ಅಂಗೀಕೃತ ಪ್ರಾಣಕಾಂತನಾರೆಂದು ಪ್ರ|ಸಂಗಿಸಿದಳು ನಸುನಗುತ ||೨೦||

ಸೊದೆಯನೀಂಟುವ ರಾಜಹಂಸನ ಮಱಿಗೆ ಮೇ|ವಿದೆಯ ತೋಱಿದಡೆ [ಪೇರ್ವುದೆ ||
ಎರ್ದೆಗಿಚ್ಚನಿಕ್ಕಿ ಪೋದಾತನಲ್ಲದೆ ಮಿಕ್ಕ|ಸದೆಗರ[1] ತಂದಡೊಪ್ಪುವೆನೆ|೨೧||

ತರಳಭಾಸ್ಕರನಂತೆ ಮೆಱೆವ ಮಾಣಿಕವೆನ್ನ|ಕೊರಲೊಳಗಿರ್ದು ಪೋ [ದುದಕೆ ||
ಇರುಳೆರಡೇಳುಲೋಕವ ಸುತ್ತಿಟಕ್ಕೆಯ|ಹರಳ[2]ತಂದೆನಗೆ ತೋಱಿಸಿದೆ ||

ನಕ್ಕಳಾಕೆಯು ಜಾಣ್ಮೆಯ ಮಾತ ಕೇಳಿದು|ಹೆಕ್ಕಳನಾಂತು ಶೋಭಿಸುತ ||
ಹೊಕ್ಕುಳ ಹೂವನ[3] ರೂಹ ತೋಱಿದಳು ಪೆ|ಣ್ಮಕ್ಕಳ ಮಂಡೆಮಾಣಿಕಕೆ||

ಇದು ಚಿತ್ರವಾದುದುಬೆಸವೇಳ್ವುದೆನಲಾಗಿ|ಯದುಕುಲದುಗ್ಧಾಬ್ಧಿಚಂದ್ರ|
ಮಧುಸೂದನನೆಂದು ಬೆಸಸಲ್ಕೆ ಹರಿಯ ಶ್ರೀ|ಪದಕೆಱಗಿ ಹಣೆಯಚಾಚಿದಳು||

ಭೂಮಿಯೊಳೀಚಿತ್ರಕೆಣೆಗಾಣೆ ಮನ್ಮನ|ಕಾಮಿಸಿ ಪರಮಭಕ್ತಿಯಲಿ ||
ಸ್ವಾಮಿಯೆಂಗೆಂಬ ವಾತ್ಸಲ್ಯತೋಱುತಲಿದೆ|ಗೋಮಿನೀವರಮೂರ್ತಿಯಲಿ ||

ಜಲರುಹಗಂಧಿ ನೀನೋಡು ಯಾದವವಂಶ ಬಲರಾಮನೆಂದೆಂಬವನ ||
ಜಲಜಲೋಚನನಗ್ರಜನಾಗಿ ಮೆಱೆಯುವ|ಹಲಿಯ ಚಿತ್ರವತೋಱಿಸಿದಳು||

ಮರುತಭುಕ್ತಾಧಿಪನ[4] ಪರಾವತಾರನ | ಉರುತರದಿವ್ಯವಿಗ್ರಹದೆ ||
ಗುರುತಾತ್ಪರ್ಯವಾಗಿದೆ ಮಿಕ್ಕರೆಲ್ಲರ| ನಿರುತದಿಂ ತೋಱೆಂದಳವಳು ||

ಉದ್ಧವ ಕೃತವರ್ಮ ಸಾತ್ಯಕಿ ದಮಘೋಷ ಕುದ್ಧಾತ್ಮಧಾಮ ಸುದಾಮ||
ನಿರ್ಧಾರವಾಗಿ ದೊರಕೆಯಲ್ಲಿ ಮೆಱೆವ ಪ್ರ|ಸಿದ್ಧರರೂಹ ತೋಱಿದಳು ||
ತಂದು ನೀತೋಱಿದ ರೂಹುಗಳೆಲ್ಲಮು|ದ್ಬಂಧುಗಳೆನೆ ತೋಱುತಿಹುದು ||

---

ಕ. ಪ, ಅ—1. ಅಲ್ಪಮನುಷ್ಯರು, ತುಚ್ಛರು. 2. ಬೆಲೆಬಾಳದ ಕಲ್ಲನ್ನ.
3. ಪದ್ಮನಾಭನ. 4. ಸರ್ಪಾಧಿಪನ.

ಅಂದು ನನ್ನನು ಕನಸಲಿ ಕೂಡಿ ಪೊಱಸೊರ್ದು|ಕೊಂದು ಹೋದನ ರೂಹ [ನಱಿಯೆ ||೨೯||
ಕೋಮಲೆ ಪರಿತಾಪಗೊಳಬೇಡ ನಿನ್ನನು|ತಾಮರಸಾಸ್ತ್ರದೊಳಿಚ್ಚು ||
ಭ್ರಾಮಕವಡಿಸಿದನಿವನೀಗ ನೋಡೆಂದು|ಕಾಮನ ರೂಹ ತೋಱಿದಳು ||೩೦||
ಈತನ ಚಿತ್ರವ ಬೈಚಿಟ್ಟು ಮತ್ಪ್ರಾಣ|ನಾಥನ ಪಡಿಯಿಡಬಹುದು ||
ಆತನ ರೂಹ ತಂದಿದ್ದಡೆ ತೋಱೆಂದು ಕಾತರಿಸಿದಳಬುಜಾಕ್ಷಿ ||೩೧||
ಕದ್ದೈಸದೆ ನೋಡು ಸ್ಮರನ ಬಾಯೊಳಗುರ್ಚಿ|ಬಿದ್ದಂತೆ ಪಡಿಯುಚ್ಚು [ವಡೆದ ||
ಮುಗ್ಧಾಸ್ಪದೆ ಕಮನೀಯರೂಪನನನಿ|ರುದ್ಧನ ನೋಡೆಂದಳಬಲೆ ||೩೨||
ಬಿಮ್ಮಂದಲೊಮ್ಮೆ ನೋಡಲು ಮೆಯ್ಯ ರೋಮವು|ಜುಮ್ಮೆಂದು ಮನದ [ಮೂರ್ಚ್ಛೆಯಲಿ ||
ಹಮ್ಮೈಸಿದಳು ಚಿತ್ರದ ಮೇಲಣಾಸೆಯ| ಪೆರ್ಮೆಯನೇನ ಬಣ್ಣಿಸುವೆ ||
ಕಂಡೆಱೆದಳು ಪುನರಪಿ ನೋಡಿ ಚರಣಾರ|ವಿಂದದೆ ನೊಸಲ ಚಾಚಿದಳು ||
ತಂದು ಬಲ್ಮೊಲಗೊತ್ತಿಕೊಂಡು ತಟ್ಕೈಸಿ ಹಾ|ಯೆಂದು ಸಂತಸದೆ ಹಿಗ್ಗಿ [ದಳು||೩೪||
ಆಹುದಿಂದು ಪ್ರಾಣಕಾಂತನ ಚಿತ್ರವ ಕಂಡೆ|ಬಹುದುಃಖಬಿಡುಗಡೆಯಾಯ್ತು ||
ಇಹುದಾವ ಪುರ ಪೆಸರೇನಾರ ಮಗನೆಂದು| ಸಹಜದೆ ಕೇಳಿದಳವಳ ||೩೫||
ದ್ವಾರಕಾಪುರವರಾಧೀಶಕೃಷ್ಣನ ಸತ್ಕು|ಮಾರಕನಾತ್ಮಸಂಭವನ ||
ತೋರಕುಚಾನ್ವಿತೆ ಕೇಳ್ ನಿನ್ನ ದುಃಖನಿವಾರಕ ನಾಮಾನಿರುದ್ಧ ||೩೬||
ತಾಯೆಂದು ಕಳುಹಲು ತಂದೆ ನೀ ಕೇಳೆನ್ನ| ಪ್ರಿಯದ ಗುರುವಕ್ಷೋಜೆ
ಬಾಯೆನ್ನ ಬಂದುಗೆವಾಯ ಭಾಮಿನಿ ರನ್ನೆ|ಬಾಯೆಂದು ಸಖಿಯನಪ್ಪಿದಳು||
ಜಗದೊಳು ಹೊಕ್ಕು ವಿಶ್ವವನೆಲ್ಲ ತೃಣವೆಂದು ಬಗೆದು ನಾನಾಚಿತ್ರಗಳನು
ತೆಗೆದುಕೊಂಡತಿಬೇಗದಿಂ ಬಂದೆ ನಿನ್ನ ಪೆ|ಣ್ಮಗಳೆನ್ನ ಬಹುದೆ ಬಲ್ಲವರು ||
ಈಸು ದುಕ್ಕವನಾಂತು ನನಗೆ ನೀಮಾಡಿದ|ಲೇಸುಗಳಿಗೆ ಲೆಕ್ಕವಿಲ್ಲ ||
ಏಸು ಜನ್ಮದಿ ನಿನ್ನ ರಿಣವ ತಿದ್ದುವೆನೆಂ|ದಾಸುಗುಣೆಯನಪ್ಪಿದಳು ||೩೯||
ಅಂಗವ ತುಱಿಸಲ್ಕೆ ತುಱಿಸುವ ಕೈಗಳ್ಗೆ|ಹಂಗ ತಿದ್ದುವ ಶಾಸ್ತ್ರವುಂಟೆ||
ಭೃಂಗೋಪಮಾನಕುಂತಳೆ ಕೇಳು ಮರುಳುವಾಕ್ಯಂಗಳಮಾತಾಡಬಹುದೆ ||

ಮೃಡಭಕ್ತನಾತ್ಮಸಂಭವೆಕೇಳುಭಾಸ್ಕರ|ಕೆಡೆದಪಶ್ಚಿಮಸಮುದ್ರದೊಳು|
ತಡವಿಲ್ಲದೆ ಪಯಣಕೆ ನೇಮವೇಟಿನೆ ಮಡದಿ ಮನ್ನಿಸಿದಳಾಕೆಯ ||೪೧||
ಮನ ಹರುಷದೊಳೆದ್ದು ತತ್‌ಕ್ಷಣ ಮಂಡೆಮ|ಜ್ಜನವ ಮಾಡರಸಂಚೆಗಮನೆ||
ಘನಸಂಭ್ರಮದೆ ಸೆಜ್ಜೆಯನು ಸಿಂಗರಿಸು ನಿನ್ನಿನಿಯ ಬಂದಪ ನೀಲವೇಣಿ ||
ವರಮೋಹನತರಂಗಿಣಿಯೆಂಬ ಕಾವ್ಯವ|ಬರೆದೋದಿ ಕೇಳದ ಜನರ ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವಲಕ್ಷ್ಮೀಕಾಂತ ಬಿಡದೆ||

ಅಂತು ಸಂಧಿ ೩೦ ಕ್ಕಂ ಪದ ೨೨೧೮ ಕ್ಕಂ ಮಂಗಳಂ

## ಮೂವತ್ತೊಂದನೆಯ ಸಂಧಿ

ಅನಿರುದ್ಧವಂ ತಂದುದು —

ಕಂಗೊಳಿಸುವ ಕಡಹವನೇರಿ[1]ಬಿದ್ದ ಕಾಳಿಂಗನ ಹೆಡೆಯೊಳು ಕುಣಿದ||
ರಂಗನ ಪಾದಪದ್ಮವ ಕೂರ್ತು ಕೃತಿವೇಳು|ಮಂಗಳವೆನಲೆನ್ನ ಕಿವಿಗೆ ||೧||
ಕೃತಯುಗದೊಳು ವೇದ ತ್ರೇತೆಯೊಳಧ್ವರ|ವತಿದಾನ ಶೀಲ ದ್ವಾಪರದೆ ||
ಸ್ತುತಿಪುಣ್ಯ ಕಲಿಯುಗದೊಳಗೆ ಶ್ರೀಹರಿನಾಮ | ಮತಿವಂತೆ ಕೇಳು ಪೇ[ಳ್ದಪೆನು ||೨||
ತೈಲತಪ್ತೋದಕದಲಿ ಮಿಂದರಿರ್ವರು | ಶೈಲಾತ್ಮಜೆಯ ಕಾಂತನಿಗೆ ||
ಗೈಲ[2] ಪೂಜೆಯಮಾಡಿ ಮಹದುಪಚಾರವ ಕೈಲಾಗಿನಿಂದೊಡರ್ಚಿದರು||೩||
ಊಟವಮಾಡಿದು ಶಿವಗೂಡಿ ಕಪ್ಪುರ|ಕೂಟತಾಂಬೂಲವ ಸವಿದು ||
ನೀಟಾದ ಪೆಣ್ಣ ಸಿಂಗರಿಸಿಯತ್ಯಂತ ಕೈ|ಮಾಟದ ಹೆಂಗಳ ಕರೆಸಿ ||೪||
ಹೊನ್ನಬಟ್ಟಲಲಿ ಕುಂಕುಮಗಂಧಸಲಿಲ ಬಾ|ವನ್ನ[3]ಕಸ್ತೂರಿಕಪ್ಪುರವ ||
ಚೆನ್ನಾಗಿ ಹದಮಾಡಿ ಲೇಪಿಸಿ ಪೆಣ್ದಲೆ|ರನ್ನೆಗೆ ತಳಪನಿಕ್ಕಿದರು || ||೫||
ಉಡಿಸಿದರಮಳವ ನವಮಣಿದುಡಿಗೆಯ | ತೊಡಿಸಿದರವಯವದಲ್ಲಿ ||
ಮುಡಿಸಿದರಲರ ಪೆರ್ದುರುಬೊಳು ಸಿಂಗರ|ವಡಿಸಿದರ್ ಬಾಣನಂದನೆಯ||೬||
ಸಡಗರಿಸಿದರು ಬಾಣಜೆಯ ಹರ್ಮ್ಯಾದಿ ರಂಗು ವಡೆದ ಮಾಣಿಕ್ಯ ಮೆ[ಯ್ವೊಳಗು ||

ಕ. ಪ. ಅ—1. ಕಡಬದ ಮರವನ್ನು ಏರಿಕೊಂಡು. 2. (?) 3. ಗಂಧ.

ಸೊಡರಿನೇಱ್ಗಿಯ ಹೊನ್ನ ಕಳಸಂಗಳಾಕಾಶ|ದೆಡೆಯಲ್ಲಿ ಜಗಜಗಿಸಂತೆ ||
ಲೋಕೋನ್ನತ ಮೇರುಶಿಖರದಿ ವಿದಿತ ಕಾ|ರ್ತಿಕಪೌರ್ಣಮಿಯ [ರಾತ್ರಿಯಲಿ ||
ಶ್ರೀಕಾಂತಗಮಳಜ್ಯೋತಿಃಪೂಜೆಗೆಯ್ದಂತೆ| ಸಾಕಾರವಾದುದಾಸೌಧ ||೮||

ಲೇಸಾದ ಸೌಧಸಿಂಗರವನೀಕ್ಷಿಸಿ ಬರಿ|ತೋಷದಿ ಸಖಿಯ ಚಿತ್ರವನು ||
ತಾ ಸೌರಿಸಿಕೊಂಡು ಕೊಟ್ಟಳಾಕೆಯು ಜೀವಿ|ತೇಶನ ವರಚಿತ್ರಪಟವ ||೯||

ಇದನೀಕ್ಷಿಸುತಿರ್ದಡೆ ಕಾಮಶರಗಳು|ಹೃದಯದೆ ಮೊಗದೋಱವಿನ್ನು||
ಸುದತಿ ನಿನ್ನಯ ಚಿತ್ರಪಟವ ಕೊಂಡುಯ್ದುತೋ|ಱದ ಮುನ್ನ ಮರಳ್ಗೊಂ [ಬನವನು ||೧೦||

ಅರ್ಧರಾತ್ರಿಯ ಹೊತ್ತಿನೊಳಗಾಗಿ ಸುಗುಣಾನಿ|ರುದ್ಧನ ತಹೆನೆಂದು [ನಗುತ ||
ನಿರ್ಧರವಾಗಿ ನಂಬುಗೆಯಿತ್ತು ಬೀಱುಕೊಂ|ಡೆದ್ದಳು ಕೇಳಾಯತಾಕ್ಷಿ ||೧೧||

ಕರೆದಳು ಕಗ್ಗತ್ತಲೆಯ ಕೌಳಿಕವ ಕ| ಣ್ದೆಱೆದಳಜಾಂಡಮಂಡಲಕೆ ||
ಮುಱಿದಳು ಜನರ ಕಣ್ಬೆಳಗನಾಗಸದಲಿ|ಮೆಱೆದಳು ಪೆಣ್ವಕ್ಕಿಯಂತೆ||೧೨||

ದೂರೀಕೃತಮಾರ್ಗವನಂತರಿಕ್ಷದೆ | ತೀರಿಸಿಯಾಕ್ಷಣದಲ್ಲಿ ||
ದ್ವಾರಕಿ ಬಹಿರ್ಭಾಗದೊಳಱಿದಾಗ ಕೈ ವಾರಿಸಿದಳು ಪಟ್ಟಣವ ||೧೩||

ಅಂಟೊತ್ತಿಕೊಂಡಿದೆ ಸಿರಿವೆತ್ತು ಪೌರೋಪ ಕಂಠದೆ ಮೆಱೆವ ಸಾಗರವ||
ದಾಂಟಲಾಶ್ಚರ್ಯ ಶ್ರೀಕೃಷ್ಣನ ದ್ವಿತೀಯವೈ | ಕುಂಠವಿದೆಂದಾಡಿದಳು||೧೪||

ಉರಿವ ಭಾಸ್ಕರಕೋಟಿತೇಜದೆ ಪೊಱಸುತ್ತಿ|ಪರಿವ ಚಕ್ರವ ನುತಿಗೆಯ್ದು||
ತುರಿಯದಿಂದೊಳಪೊಕ್ಕು ಕಾಮದೇವನ ಮಗ| ನಿರುವ ಶಯ್ಯಾಗೃಹದೆಡೆಗೆ||

ಅಂಗಜನಾತ್ಮಸಂಭವನ ಮಂಚವ ಸುತ್ತಿ | ಹೆಂಗಳ ರನ್ನೆಯರಿರಲು ||
ಕಂಗೊಳಿಸಿದಳು ಮೂರ್ಛೆಯ ಕವಿಸಿದಳು | ತುಂಗಪಯೋಧರೆ ನಗುತೆ ||
ತೊಡೆಯ ಪೊಯ್ದೆಬ್ಬಿಸಿ ಬೆಸಗೊಂಡಳಂಗನೆ ಪೊಡೆಮಲರನ ಮೊಮ್ಮಗನ||
ಬಡೆಯ ಪೇಱ್ನಿನಗೇನು ದುಗುಡವೆಂದೆಸಲು ಪಿಂಗಡೆಯ ಸುದ್ದಿಯನು [ಸಿರಿದನು |೧೫||

ಬಂದಿಸ ಪರಮಸುಂದರಿಯೊನ್ನಕನಸಿನೊಳ್ ಸಂದಿಸಿ ರತಿಸುಖವಡೆದು ||
ಅಂದಿನಿಂದವಳ ಕಾಣದೆ ವಿರಹವನಾಂತು | ಕಂದಿದೆ ಕಮಲಾಯತಾಕ್ಷಿ ||

ಪಾಪಿ ದೊರೆಯೆ ಕೇಳ್ ನೀನೀವಿರಹಸಂ | ತಾಪದಿ ದುಃಖಿಸಲೇಕೆ ||
ಪೋಪೆವೀೞವಳಿದ್ದ ಬೞಿಗೆಂದು ಸಕಲಕ|ಲಾಪನನೊಡಬಡಿಸಿದಳು ||೧೯||

ಅವಳೆಲ್ಲಿ ನಾನೆಲ್ಲಿ ನೀನಾವ ಪುರವೆಂದು | ವಿವರದೆ ಬೆಸಗೊಳಲಾಗಿ ||
ಕುವರಗೆ ವಿಸ್ತರಿಸಿದಳು ತಾನೈತಂದ | ವ್ಯವಹಾರಸ್ಥಿತಿಯನೆಲ್ಲವನು ||೨೦||

ಬಾಣಜೆ ನಿನ್ನ ಮಚ್ಚಿದಳಾಯಕನಿಗೆ | ಪ್ರಾಪ್ತೆ ಹಿತೆ ನಾನಿನ್ನ ||
ಕಾಣಲೋಸುಗ ಚಿತ್ರಪಟವ ತಂದೆನು ಸುಪ್ರ|ವೀಣನೋಡೆಂದು ತೋಱಿದಳು

ಕಂಡನು ಕಮಲಾಕ್ಷಿಯ ರೂಹಸಿರದೆ ತೆ|ಕ್ಕೊಂಡನು ಸಿರಿಯುರಸ್ಥಳದಿ||
ತುಂಡವನಿಕ್ಕಿ ಮಣ್ದುಟಿಯ ಪಾರಿವದಂತೆ | ಮುಂಡಾಡಿದನರ್ಥಿಯಲಿ ||೨೨||

ದಿಟವಿದು ಮತ್ಪ್ರಾಣಕಾಂತೆಯ ತನು ಚಿತ್ರ|ಪಟವಿಂದು ನಿನ್ನ ನಂಬಿದೆನು||
ಘುಟ ಬೀೞಲವಳಿದ್ದ ಬೞಿಗೆ ಬಂದಪೆನೆಂದು | ಲಟಕಟಿಸಿದನು ಕುಮಾರ ||

ಹುಣ್ಣಮೆಯಾಳ್ದನ ಜಾಮಾತಸುತ[1] ಚಿತ್ರ|ಪೆಣ್ಣ ಕಂಡಿನಿತು ಭ್ರಮಿಸಿದೆ||
ತಿಣ್ಣಜವ್ವನ[2]ವೆತ್ತ ಕೆಳದಿ ಕೇಳ್ ನಿಮ್ಮನು | ಕಣ್ಣಾಱೆ[3] ಕಂಡರಿನ್ನೆಂತೋ||

ವಿಷಯಾತುರಗೆ ವಿವೇಕವಿಲ್ಲೆಂಬುದು | ಪುಸಿಯಲ್ಲ ಮಾಯಾವಿ ನುಡಿದ||
ನಸುಮಾತಿಗೆ ನಿಶ್ಚಯಿಸಿದ ಪಯಣವ|ನುಷೆಯು ತಾತ್ಪರ್ಯದುಬ್ಬಿನಲಿ ||

ಸಂತಸವಡೆದು ತತ್ಕುವರನ ಮೂರ್ತಿಯ|ನಾಂತಳು ಬೆನ್ನ ಭಾಗದಲಿ ||
ಮುಂತಣ ಕಾರ್ಯ ಸಿದ್ಧಿಸಿತೆಂದು ಮಾಯಾ|ಕಾಂತೆ ಖೇಚರಕೆ ಹಾಱಿದಳು||

ಪವನವೇಗವ ಕೀೞ್ಪಡಿಸಿ ದೂವಾಳಿಪ | ಜವಗಾತಿಯ ಬೆನ್ನೊಳಿರ್ದ ||
ಕುವರ ಕಂಗೆಟ್ಟು ಬಿದ್ದಪೆನೆಂದು ತಕ್ಕೆಗೊಂ|ಡವಳ ನುಣ್ಮೊಲೆಯ ಬಲ್ಪಿಡಿದ||

ಮುಟ್ಟಿದೊಡಾಕ್ಷಣ ತನುರೋಮಗಳು ಗುಡಿ ಗಟ್ಟಿ ಮೆಯ್ಯೊಳಗೆ [ಕಾತುರವ ||
ಮುಟ್ಟಿದರೆದೆ ಹದಿಗೊರ್ಳ್ಳದೆ ಕರಣದ | ಗಟ್ಟಿವಾಳದೆ ತೆರಳಿದಳು ||೨೮||

ನೇಸಱ ಬೊಟ್ಟಿಟ್ಟು ಕೃಷ್ಣಜೀಮೂತವಾ | ಕಾಶದೆ ತೆರಳಿ ಬರ್ಪಂತೆ ||
ಪೂಸರಳಾತ್ಮಸಂಭವನ ತಾಳ್ದೈತಂದ | ಳಾಸುರವನಿತೆ ಖೇಚರದೆ ||೨೯||

ರಕ್ಕಸ ಭೂತ ಭೇತಾಳವಡ್ಡೈಸಲು | ಸಿಕ್ಕದೆ ಶೋಣಿತಪುರಕೆ ||
ಗಕ್ಕನೆ ಬಂದು ತತ್ಕುವರಿಯ ಹರ್ಮ್ಯವ | ಹೊಕ್ಕಳೊಂದೆಸೆಯ ಬಾಗಿಲಲಿ||
ಅದೆ ಬಂದಳರ್ಧರಾತ್ರಿಯಹೊತ್ತಿನೊಳು ಕಲಾ|ವಿದೆ ಕಂತುನಂದನನೊಡನೆ||

---

ಕ. ಪ. ಅ—1. ಅನಿರುದ್ಧ : ಹೇಗೆ? 2. ಮಾಂಸಳಸ್ತನ.

ಸುದೆವೆರೆದುಟವೆಣ್ಗಳರಸಿ ಕೇಳೆಂದು ಕೋ|ವಿದೆ ಪೇೞ್ದಳೊಡತಿಯ ಕೂಡೆ||
ಎಂದರಾಯುಕಿಯು ಮಾತಿಗೆ ಮೆಚ್ಚಿ ತಾನಿಟ್ಟ|ಹೊಂದೊಡವಿತ್ತು ಕಸ್ತುರಿಸಿ ||
ಬಂದವರುಗಳೆಲ್ಲಿ ತೋಱೆಂದು ಪರಮಾ|ನಂದದೆ ಹಿಗ್ಗಿದಳವಳು ||೩೨||

ಅಕಳಂಕಜ್ಯೋತಿರ್ಮಯರತ್ನಹರ್ಮ್ಯದ|ಮುಖಶಾಲೆಯಿಲ್ಲಿ ನಿಂದಿಹರು||
ವಿಕಳತೆ ಬೇಡ ಬಂದೊಳಪೊಕ್ಕರಭಿನವ|ಮಕರಕೇತನನ ನೋಡವ್ವಾ ||

ಅಚ್ಚರಿವಡೆದ ಚೆನ್ನಿಗ ಬಂದ ಕೊಂಡಾಡ|ಲೊಚ್ಚೊಡಿ ನಾಲಗೆಗಱಿದು ||
ಸ್ವಚ್ಛದೊಳದಿರ್ಗೊಳ್ಳಬೇಕೆಂದುಪೇೞ್ದೊ|ಡುಚ್ಚವಿಸಿದಳಂಬುಜಾಕ್ಷಿ||೩೪

ತೋರಹೊಂದಂಬಿಗೆಯಲಿ ತುಂಬಿ ತರಿಸಿ ಪನ್ನೀರಿಂದ ಕಾಲ್ಗಳ ತೊಳೆದು||
ಮಾರಕುಮಾರ ಮಂತ್ರೀಶಸುತೆಗೆ ರನ್ನ|ದಾರತಿಗಳನೆತ್ತಿದಳು ||೩೫||

ಮಲ್ಲಿಗೆಯರಳಂತೆ ಬೆಳ್ಗೂಱು ಬಹುವರ್ಣ|ದಲ್ಲಿ ರಂಜಿಪ ಬಣ್ಣಗೂಱು||
ಬೆಳ್ಳಪೊಂಬರಿವಾಣಗಳ ತುಂಬಿ ಸುಱಿಹೆತ್ತಿ|ಚೆಲ್ಲಿಸಿದಳು ದೆಸೆದೆಸೆಗೆ ||೩೬||

ಮಾಣಿಕಸೊಡರ್ಮೆಳಗುಗಳಿಂದೆ ಸಾರಂಗ|ಪಾಣಿಯ ಸುತನ ಪುತ್ರಕನ ||
ಶೋಣಿತಪುರದೆಱೆಯನ ಕಣ್ಗೆ ಪೊಸತೆನೆ| ಕಾಣಿಸಿದಳು ಚಿತ್ರಲೇಖೆ||೩೭||

ನೋಡಿದಳಾತ್ಮೇಶ್ವರನವಯವದಲ್ಲಿ| ಮೂಡಿರ್ದ ವರಸೌಂದರದಿ ||
ಖೋಡಿಯೆಳ್ಳನಿತಿಲ್ಲಬರಲು ಸತ್ಕುಮರಿ ಮುಂ|ಡಾಡಿದಳ್ ಚುಬುಕಾಗ್ರ
[ವಿಡಿದು ||೩೮||

ತರಹರಿಸಿದಳು ಕಾಮಿನಿ ಕಂತುಲೀಲೆಯ|ಭರವಸೆಮಾಂತನಾಕುವರ ||
ಉರವಣಿಸಿತು ಲಜ್ಜೆ ಕೆಳದಿಯರ್ ಕಂಡು ಕಾ| ತುರ ಕಟ್ಟುಗೊಂಡು
[ದಿರ್ದರಿಗೆ ||೩೯||

ಎಱೆಯ ಕೇಳ್ ನಿನ್ನವಿಯೋಗಸಂತಾಪದ|ತೊಱೆಯೊಳುಮುೞುಗಿರ್ದನೆನ್ನ||
ಮಱೆಯದೆ ತಡಿಗೆ ಸಾರ್ಚಿದಳನೀಕ್ಷಿಪುದೆಂದು|ನೆಱೆಜಾಣೆ ಸಖಿಯು ತೋ
[ಱಿದಳು ||೪೦||

ಮಸ್ತಕಮೊದಲಾದ ದಿವ್ಯದೇಹವ ಹೊತ್ತು|ನಿಸ್ತರಿಸಿದ ಪಾದಯುಗವ ||
ಕಸ್ತುರಿಸುವರುಂಟೆ ಕುವರಿ ಕೇಳ್ ನಿನ್ನಯ|ಹಸ್ತಾಂಘ್ರಿಪದ್ಮವಾನ್ಯೆಸೆ||೪೧||

ಚಂಡವಿಕ್ರಮವಿಹಗೇಶನೆಂದೆನಿಸುವ | ಗಂಡಭೇರುಂಡನ ತೆಱದೆ ||
ತುಂಡುಗಳೆರಡಾಗಲೊಡಲೊಂದು ನಮ್ಮಿ|ತ್ತಂಡಕೆ ಭೇದವೆಲ್ಲಿಯದು ||೪೨||

ಉತ್ತಮನೀತಿಶಾಸ್ತ್ರಂಗಳ ತೊಡಗುವ|ಹೊತ್ತಲ್ಲ ಹೊಂಬಣ್ಣದೊಡಲ||

ವೃತ್ತಕುಚಾನ್ವಿತೆ ಕೇಳೆಂದು ಸುದತಿಯ । ಚಿತ್ತವನೊಡಬಡಿಸಿದಳು ॥೪೩॥
ಸಖಿಶಿರೋಮಣಿ ನೆಗಳ್ದಳು ತೀಕ್ಷ್ಣ ಶಿವ । ಲಿಖಿತಪಂಚಾಂಗಪ್ರಶ್ನೆಯಲಿ ॥
ನಿಖಿಳಮುತ್ತಿನಸೇಸೆಯ ತುಂಬಿ ವರಚಂದ್ರ । ಮುಖಿಯ ಕುಳ್ಳಿರಿಸಿದಳ್ [ಮುದದಿ ॥೪೪॥

ವಿಧ್ಯುಕ್ತವಾಗಿ ನಾನಾಸಂಭ್ರಮವ ನಿ । ಬದ್ಧಿಸಿ ತನ್ನ ಸಂಕಲ್ಪ ॥
ಸಿದ್ಧಿಸಿತೆಂದು ಗಾಂಧರ್ವವೈವಾಹವ । ತಿದ್ದಿದಳತಿಹರ್ಷದಲಿ ॥೪೫॥
ಪಂಟಿಯುಮಾಡಿ ಪರಮಸುಂದರಿ ಕಂಬು । ಕಂಠಿಯು ನವವಸ್ತ್ರಗಳ ॥
ಗಂಟಿಕ್ಕಿ ಕೆಳದಿಯ ಕರೆತಂದಳು ಕಾಲ । ಮಂಟಿಕೆ ಘಲಿರೆಂಬ ರವದಿ ॥೪೬॥
ನನೆಗೋಲನಪರಾವತಾರ ಬಾಣಾಸುರ । ತನುಜೆಯ ನಿಬ್ಬಣದವರು ॥
ವಿನಯದಿ ರತುನಾವೃತ ಮಂಟಪ ಸಜ್ಜೆ । ವನೆಯ ತುಂಬಿಸಿದರರ್ತಿಯಲಿ[1] ॥
ವಜ್ರಮಾಣಿಕಮಯ ಮೃದುತಲ್ಪದಲರ್ವಾಸು[2] । ನಿರ್ಜರಕುಸುಮ [ಝಲ್ಲರಿಯ ।
ಪಜ್ಜಳಿಸುವ ಮೌಕ್ತಿಕದ ಮೇಲ್ಗಟ್ಟಿನ ಸಜ್ಜೆಯ ನೋಡಿ ಹಿಗ್ಗಿದನು ।
ಜಾಣಮೆಲ್ನುಡಿಗೆಂವರೆ ಗಿಳಿ ಬಗದಾದಿ ಜಾಣಕ್ಕಿ ಕೋಗಿಲೆ ಕೊಳರ್ವ ॥
ಏಣ ಸಾರಗ ಹೊಮ್ಮರಿ ಮಂಚದ ಸುತ್ತ । ರಾಣಿಯುವಿರಲು ನೋಡಿದನು ॥
ಮಿಸುನಿಪಂಜರ[3]ದೊಳಗಿಹ ರಾಜಕೀರ ಕಾಮಸುತನ ಕುಳ್ಳಿರೆಂದೆನಲು ॥
ರಸಿಕರಾಜೇಂದ್ರವಲ್ಲಭೆಗೂಡಿ ಕೇಳ್ದಮಂ ಡಿಸಿದನಾಮಣಿಮಂಚದೆಡೆಯ ॥
ತಂದಿರಿಸಿದರು ಕಾಲ್ದೊಳವೊಡೆ ಪನ್ನೀರ ಬಿಂದಿಗೆ ಮಣಿಪಾತ್ರೆಯನು ।
ಚಂದಿರಮುಖಿಗೀಂಟುವರೆ ತತ್ಪರಿಮಳವೊಂದಿದ ನೀರ ಕುಪ್ಪಿಗೆಯ ॥೫೧॥
ಬಿಡಿಯಲರ್ಮಾಲಿಕೆ ಶೈತ್ಯಸೌರಭ್ಯಂಗ । ಳಡಿದ ಸುಗಂಧಾನುಲೇಪ ॥
ಪುಡಿಗಪ್ಪುರವು ಜವಾದಿಪುಣುಗು ತಂ । ದಡಕಿದರ್ ತಲೆಗಿಂಬಿಸಲಿ ॥೫೨॥
ಫಣಿವಳ್ಳಿಯ ಪರ್ಣಸ್ವರ್ಣವರ್ಣ[4]ದಿಕೆಕೇ । ವಣಿಸಿರ್ದ ಕಟ್ಟ ಕತ್ತುರಿಯ
ಮಣಿಯೆನಲುರ್ದಿದ ಪೋಳ್ವಟ್ಟೆಯುಸಿ । ಟ್ಟಣಿಸಿದರ್ ತಲೆಗಿಂಬಿನಲಿ ॥೫೩॥
ರತಿಸಮಯಕೆ ಬೇಕಾದ ವಸ್ತುಗಳನ । ತ್ಯತಿಸೌಖ್ಯವ ಮಾಡಿ ತಂದು ॥
ಸತಿಶಿರೋಮಣಿಯ ಮಂಚದ ಸುತ್ತಲಿಂಬಿಟ್ಟು । ನುತಿಸಿದರ್ ದಂಪತಿಗಳನು ॥

ಕ ಪ ಅ—1 ಆಸಕ್ತಿಯಿಂದ 2 ಹೂವುಗಳಿಂದ ಮಾಡಿದ ಹಾಸಿಗೆ
3 ಚಿನ್ನದ ಗೂಡು 4 ಚಿನ್ನದಿಂದ ಮಾಡಿದ ಚಿತ್ರಕೆಲಸದ ಒಟ್ಟೆಯಲ್ಲಿ

ಜೋಳಿ[1] ಜೋಳಿಯಲಿ ನಾನಾವಿದ್ಯೆಯೊಳೇಱ್ಗೆಯ | ಕೇಳಿಕೆಗೊಟ್ಟ [ನಿಮ್ಮವನು ||
ನಾಳಿನ ದಿನಕೆ ಮೆಚ್ಚಸುವೆವೆನುತೆ ವಾ | ಚಾಳೆಯರ್ ಬಿನ್ನವಿಸಿದರು || ೫೫ ||

ಕೆಳದಿಯರುಗಳೆಲ್ಲರಿಗೆ ವೀಳೆಯಗೊಟ್ಟು | ಕಳುಹ ಚಿತ್ರೈಸಿದ ಬಳಿಕ ||
ಮೊಳೆವ ಸತ್ಪರಿತೋಷದಿಂದೆ ಕುಮಾರನಿ | ರ್ಮ್ಮಲಿನ ಮಂತ್ರಿಜೆಯು [ಬೋಧಿಸಿದ || ೫೬ ||

ಅತ್ತಿಗೆಯುಹುದಕ್ಕನಹುದು ತಾಯುಹುದಕ್ಕ | ಗುತ್ತಿಗೆಗಾತಿ[2] ನೀನಹುದು ||
ಪತ್ತಿಗೆ[3] ಪರಮಾನುಕೂಲೆ ಕೇಳೆಂದು ಕೈ | ಯೆತ್ತಿ ಕೊಂಡಾಡಿದ ಕುಮರ ||

ಉಬ್ಬಾಳುವೆಂಗಳ[4] ಜಿಹ್ವಾಗ್ರದೆ ಸುದ್ದಿ | ಪರ್ಬದವೊಲು ನಮ್ಮವನು ||
ಇಬ್ಬರ ಲೇಸನೀಡೇರಿಸ ಬೇಕೆಂದು[5] | ಗರ್ಭದೆ[6] ತಿರವ ಚಾಚಿದನು || ೫೮ ||

ಕಂಜಾಕ್ಷನ ಮೊಮ್ಮ ಕೇಳರಗಿಣಿ ವಜ್ರ | ಪಂಜರದೊಳಗಿರ್ದ ಬಳಿಕ ||
ಅಂಜಲಿಕೇನು ಕಾರಣ ಹೊಱಬಿಗರೆಂಬ | ಮಂಜರ[7] ಕೈದುಡುಕುವುದೆ || ೫೯ ||

ಕೋಟಲೆಗೊಳಬೇಡ ಸುಖಬಾಳ್ವುದೆಂದು ಕಿ | ರೀಟವ ಪಿಡಿದೆತ್ತಿ ಹರಸಿ ||
ಕೂಟಕೆ ಕುವರಿಯ ಸಾರ್ಚೆ ಪಿಂಗಿದಳು ಕ | ವಾಟಬಂಧನರಕ್ಷೆಗೆಯ್ದು || ೬೦ ||

ವರಮೋಹನತರಂಗಿಣಿಯೆಂಬ ಕಾವ್ಯವ | ಬರೆದೋದಿ ಕೇಳಿದ ಜನರ ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು | ಪೊರೆವ ಲಕ್ಷ್ಮೀಕಾಂತ ಬಿಡದೆ ||

— ಅಂತು ಸಂಧಿ ೩೧ ಕ್ಕಂ ಪದ ೨೦೭೯ ಕ್ಕಂ ಮಂಗಳಂ —

## ಮೂವತ್ತೆರಡನೆಯ ಸಂಧಿ

ಉಷಾನಿರುದ್ಧರು ಏಕಾಂತದಲ್ಲಿ ಸುಖಪಟ್ಟ ರೀತಿ —

ಸಕಲಬ್ರಹ್ಮಾಂಡ ತನ್ನೊಳಗಿರ್ದು ತಾ ದೇ | ವಕಿಬಸಿಱೊಳು ಪುಟ್ಟಿ [ಬಂದ ||
ಚಕಿತಮಾಯಾವಿಯ ಕೂರ್ತುಸತ್ಕೃತಿವೇಱು ಲಿಖಿತವಮಾಱಿಪ್ಪಿಮನ್ಮನದಿ ||

---

ಕ ಪ ಅ— 1 ಜೋಡಿ, ಜತೆ 2 ಎಲ್ಲಾ ಹಕ್ಕನ್ನೂ ಹೊಂದಿರುವಳು 3 ಸ್ನೇಹಿತೆ 4 ಕೊಬ್ಬಿದ ಹೆಣ್ಣಾಳುಗಳ 5 ನೆರವೇರಿಸಬೇಕೆಂದು. 6. ಇಲ್ಲಿ ಮಡಿಲಲ್ಲಿ 7 ಹೊರಗಿನವರೆಂಬ ಬೆಕ್ಕುಗಳು

ಕೇಳಾಯತಾಕ್ಷಿ ಮಂತ್ರಿಜೆ ಕರೆಸಿದಳು ಕೈ | ವಾಳ[1]ಸತ್ಪರಿಘದಿಂದೆಸೆವ ||
ಕಾಳರಕ್ಕಸವಿಂಡು[2]ಬಂದುದು ವೀರ[3]ಚ | ಡಾಳಿಸಿ ಘುಡುಘುಡಿಸುತಲಿ ||೨||

ಬೆಟ್ಟಬೆಟ್ಟಂಗಳನಿಳುಹುವ ಕೂರಸಿ[4]ಬಿಸಿ | ಗುಟ್ಟಿದ ಸಿಲೆಯ ಮಂಡಿಸುವ ||
ಇಟ್ಟಿಮುದ್ಗರವಂಕುಡಿ[5]ಪಟ್ಟಿ ಕೈದಾಳ|ಗಟ್ಟವಟ್ಟೆಯರೊದಗಿದರು ||೩||

ಪಿಡಿವರು ದಿಗ್ಗಜಗಳ ಗಾವ[6]ಗುಱಿಯಾಗೆ| ಯಡಸಿದ ಕಡಲನೀಂಟುವರು
ಪಡಿತಳಿಸುವರು[7]ಮೃತ್ಯುವಿನ ಹೊಟ್ಟೆಯ ಸೀಳು | ನಿಡಿಗರುಳನು ತಿಂಬವರು

ಅಣಲೊಳು[8]ಗುಡಿಗಟ್ಟಿದ ಬೋರು ಕೊಬ್ಬಿದ | ನೆಣ ಬಾಯೊಳು ಪೋಱ
[ಮಡುವ ||
ಹೆಣದಿನಿ ದಡಿಗದೈತ್ಯರು ಹೆಗ್ಗಂಡು | ನೊಣ ಹಾಯಗುಡದೆ ನುಂಗುವರು

ಮತ್ತೊರ್ವರು ತನ್ನ ಕೆಳದಿಯ ಹರ್ಮ್ಯವ | ಹತ್ತಲು ಮುಱಿದಿೞಿಯಲ್ಕೆ ||
ಕತ್ತರಿಸುವುದೊಡಲ್ಗಳನೆಂದು ಕಾವಲ | ಚಿತ್ತಯಿಸಿದಳು ಬಾಗಿಲಲಿ ||೬||

ಮುಱಿಯದಷ್ಟಾವಧಾನದಿ ಮಂತ್ರಿನಂದನೆ | ಪೊಱಗಿರಲ್ಮಂದಿರದೊಳಗೆ ||
ಬೆಱಗ ಬಣ್ಣಿಸುತೆ ಕುಮಾರಿ ಕುಮಾರನ | ಸೆಱಗ ಬಿಡೆಂದಳರ್ಥಿಯಲಿ ||

ವಂಟಿಕಾರಿಕೆಯ[9]ತೀರ್ಕಣಿಸಿ ಮಂತ್ರಿಜೆ ತಂದು | ಗಂಟಿಕ್ಕಿದಳು ತಮ್ಮ ಸೆಱಗ
ನಂಟಿನ ಮುಡಿ ಬಿಡಗೊಡದೆಂದು ವರಕಂಬು ಕಂಠಿಯನಮರ್ದಪ್ಪಿದನು ||

ನಿಡಿಗಣ್ಣರೆಮುಗಿವಂತೆ ರೋಮಾಂಚನ | ಗುಡಿಗಟ್ಟಿ ನಿಱಿಗಳವಂತೆ ||
ಪಿಡಿಕೈಗಳಿಗೆ ಕಕ್ಕಸವೆತ್ತ ಬಲ್ಮೊಲೆ | ವಿಡಿದನಿರುದ್ಧ ಚುಂಬಿಸಿದ ||೯||

ಪಿಂತೇಱು ಜನ್ಮದ ಬಡವಂಗೆ ಕಮನೀಯ | ಚಿಂತಾಮಣಿ ದೊರೆದಂತೆ ||
ಕುಂತಳ ಚುಬುಕಾಗ್ರವಿಡಿದು ಚೆಂದುಟಿಯೀಂಟಿ | ಸಂತಸವಡೆದನಾಕುಮರ ||

ಚುಂಬಿಸಲಾಣ್ಮನ ಬಾಯೊಳು ಪೊಱಗ್ಗಳ | ತುಂಬಿದಳರೆಗಳಿಗೆಯೊಳು ||
ಚುಂಬಿಸೆ ಚುಂಬಿಪ ತವಕದಿ ||೧೧||

ಬೆಮೆಗೊಂಡು ಮುಂಚರಿವಳ ಕಂಡು ರತಿಗಿದೆ ಸಮಯವೆಂದನಿರುದ್ಧನಲ್ಲಿ
ಕ್ಷಮೆಯಿಂದೆ ಬಿಗಿಯಪ್ಪಿ ಮುಂಡಾಡಿ ಪ್ರಮದೋ | ತ್ತಮೆಯೊಳು ಕೂಟ
[ಸ್ಥನಾದ ||೧೨||

---

ಕ ಪ ಅ—1 ಕೈಗತ್ತಿ 2 ಗುಂಪು 3 ಪರಾಕ್ರಮ 4 ಹರಿತವಾದ ಕತ್ತಿ 5 ವಕ್ರವಾದ ಅಲಗುಳ್ಳ ಆಯುಧ 6 ದ್ಭ ಗ್ರಾಮ, ಸಮೂಹ 7 ಇಲ್ಲಿ ಹದರಿಸುವರು 8 ಬಾಯಲ್ಲಿ 9. ಒಂಟಿಗತನ, ಬ್ರಹ್ಮಚರ್ಯ

ನಿರ್ಧರವಾದ ಮೋಹನಶಕ್ತಿಯೊಳಗನಿ । ರುದ್ಧನೆಂದೆಂಬ ಗಾರುಡನು ॥
ಕದ್ದೈಸದೆ ಕೆಲದಾಡುವ ದ್ವಿತಿಯಗ । ಳಧ್ವನಿ ನಸುಮೊಳಗಿದುದು ॥೧೩॥

ಅಸಮಸಾಯಕಶಾಸ್ತ್ರದಿನವಳಂಗ ಷೋ । ಡಶಕಲೆಯೆಡೆಯ ಚುಂಬಿಸಲು
ಬಿಸರುಹಸೌರಭ . . . ॥೧೪॥

ಒಲಿಸುವ ಬೇಕೆನೆ ಬಂದ ಕಾತುರಿಯುವ । ನಿಲಿಸುವ ನಿಜಲೀಲೆಯಲಿ ॥
ಸಲಿಸುವಳವಳಧಿರ್ಯ ಕಾಮುಕಲೆಗಳ । ಕಲಿಸುವ ಕೈಮಾಟದಿಂದೆ ॥೧೫॥

ನುಣ್ಣೊಡೆಯೊಳಗೆ ನುಣ್ಣೊಡೆ ತೋಳ್ಗಳೊಳು ತೋಳು । ಹೊಂದಾವರೆ [ವಳ್ಳಿಯಂತೆ ॥
ಬಂದಱೊಳೊಂದೊಡೆ ಮುರಿದು ಚೌರಶೀತಿಯ । ಬಂಧವ ನೆಗಳ್ದನರ್ಥಿಯಲಿ

ರಿಂಕಿದ ಕುಚಯುಗದೊಳಗಿಟ್ಟು ನಖಚಂದ್ರ । ವಂಕಿಯ ನುಣ್ಗಲ್ಲವಿಡಿದು
ಕೊಂಕಿದ ಕುರುಳ್ದ್ದು ಬಿಂಬಾಧರವ ಕ । ದುರ್ಂಕಿದ ಸೊಗಸೊಱವಂತೆ ॥

ಪೆಱನೊಸಲೊಳು ಬೆಮರ್ವನಿ ಪುಳಕದ ನವಿರ್ ಮುಱಿಗೊಂಡ ದ್ವಿತಯ [ದಾಲಿಗಳು ॥
ಮೊಱೆವೆತ್ತ ಉಲ್ಲೆಪಾತುಗಳಪ್ಪುಗೆಯಿಂದೆ ನೆಱ ಮೂರ್ಛಿತೆಯನೆಯ್ದಿದರು

ಅಧ್ಯಕ್ಷವಾಗಿ ಸಾಧಿಸುವಜಗುರು । ವಿದ್ಯಾಸ್ವತಂತ್ರ ಕೌಶಿಕದಿ ॥
ಉದ್ಯೋಗಿಸಿ ರತಿತ್ರಯವಿಷಯದೊಳಂ ಪ್ರ । ಸಿದ್ಧನೊ ಸುಗುಣಾನಿರುದ್ಧ ॥

ಪೀನಸ್ತನೆಯು ಚಿತ್ತವನಿಕುರ್ಳಿಗೊಂಬು । ದೇನಚ್ಚರಿ ಕಾಮಸುತಗೆ ॥
ಮೀನಮಕ್ಕಳಿಗೀಸ ಕಲಿಸ ಗುರುಗಳುಂಟೆ । ನೀನು ಲಾಲಿಪುದೆನ್ನ ಹೊನ್ನೆ ॥

ಬೆಂಡೆದ್ದ ಬಟ್ಟಲ್ಗಣ್ಣು ಹೊಯ್ವಳ್ಳ ನಿಡುಸುಯ್ । ಕೊಂಡದಟುಱಿದ [ವಿಗ್ರಹದಿ ॥
ಗಂಡಹೆಂಡರು ಮೂರ್ಛೆಯನಾಂತು ತಿಳಿದೆದ್ದು । ಕಂಡರು ತಮ್ಮ ಪೌರುಷವ ॥

ಮಕರಾಂಕಸೂನು ಮಾಸಿನಿರನ್ನೆಗಂಧೋದಕದಿಂದೆ ಕೈಕಾಲ ತೊಳದು ॥
ಪ್ರಕಟಿತದಿವ್ಯತಾಂಬೂಲಚರ್ವಣದಿಂದೆ । ಸೊಗವಟ್ಟರಂಗಸಂಗದಲಿ ॥೨೨॥

ನೂತನ ಸುಗುಣಶೇಖರ ಸೌಖ್ಯನ ಪೆ । ತ್ತಾತ ಮಾವನರ ಪೆಸರು ॥
ಆತನ ಪೆತ್ತಾತನಾರೆಂದು ಕೇಳ್ದಳು । ಶ್ವೇತಾಬ್ಜದಳನೇತ್ರೆ ನಗುತೆ ॥೨೩॥

ತಾವರೆಗಣ್ಣ ಕೃಷ್ಣನ ಕುಮಾರಕ ನಿನ್ನ । ಮಾವ ಪ್ರದ್ಯುಮ್ನಾಂಕಿತನು ॥
ಭಾವಜನಾತ್ಮಸಂಭವ ತಾನನಿರುದ್ಧ । ಸಾವಂತನೆಂದಾಡಿದನು ॥೨೪॥

ಹರಿಸರ್ವೋತ್ತಮ ತಾತ ವೈಭವಕರ್ತು । ಸಿರಿರಾಣಿ ಪಿತನ ಪೆತ್ತಾಕೆ ||
ತುರಿಯದೆ ಜಗವನಾಗಿಸುವ ನಾಲ್ಮೊಗ ನಮ್ಮ । ಹಿರಿಯಯ್ಯ ಕೇಳಾಯತಾಕ್ಷಿ ||
ಮಾಣದೆ ಹೊಗಳುವ ಶ್ರುತಿಶಾಸ್ತ್ರಕೋಟಿ ಪೌ । ರಾಣಗಳೆಮ್ಮಜ್ಜನಿರವ
ಕಾಣವು ಕಮಲಾಯತಾಕ್ಷಿ ಕೇಳ್ ನಿಖಿಳಗೀ । ರ್ವಾಣರಾತನ ಸೇವಕರು ||
ನಮ್ಮವರ್ಗಳ ವೈಭವ ದೊಡ್ಡಿತೆಂಬುದ । ತಮ್ಮ ತಾವೇ ಕೀರ್ತಿಪರೆ ||
ಕಮ್ಮಲರ್ಗಂಧಗಂಧಾನ್ವಿತೆ ಪೆಸವೇಳು । ನಿಮ್ಮಯ ಪಿತ ಪಿತಾಮಹರ ||
ಪಾತಾಳಲೋಕಾಧೀಶ ಬಲೀಂದ್ರಸಂ । ಜಾತ ಸಾಸಿರಬಾಹು ನಿಮ್ಮ ||
ಮಾತುಗನಾತ್ಮ ಸಂಭವೆ ತ್ರೈಲೋಕ್ಯ ಪ್ರ । ಖ್ಯಾತೆಯುಷಾದೇವಿ ತಾನು ||
ಮುತ್ತಯ್ಯನರಮನೆವಾಗಿಲ ಕಾವ ದೇ । ವೋತ್ತಮ ನಾರಾಯಣನು ||
ಹೆತ್ತಯ್ಯನರಮನೆವಾಗಿಲೊಳ್ ಶಿವನಿಪ್ಪ । ಚಿತ್ತಯಿಸೆಂದಳು ರಮಣಿ||೨೯||
ಘೃತಸಿಂಧು ದುಗ್ಧಾಂಭೋನಿಧಿಯುಭಯಸವ । ನ್ವಿತವಾಗಿ ಮನೆಗೆ [ಬಂದಂತೆ ||
ಸ್ತುತಿಪಾತ್ರ ಹರಿಹರರ್ ಬಾಗಿಲ ಕಾದರೆ । ಮಿತವಾವುದೊ ನಿಶ್ಚಯಿಸು||೩೦||
ಅಹುದು ಸದ್ಭಕ್ತ ಬಲೀಂದ್ರದ್ವಾರದಿ ದೇವ । ನಿಹುದು ನಿಶ್ಚಯ ಮಾನವರ್ಗೆ ||
ಬಹುದೊರೆತನ ಬಾಗಿಲೊಳು ಶಿವನಿರೆ ಲೇ । ಸಹುದೆಂದು ತಲೆದೂಗಿದನು ||
ಅದು ದೊಡ್ಡಿತೆಂದು ಪೇಳಲು ಜಿಹ್ವೆಗಚ್ಚರಿ । ಯಿದು ದೊಡ್ಡಿತಾಮದುಶ್ರುತಿಗೆ ||
ವಿಧುಮುಖಿ ನಮ್ಮ ನಿಮ್ಮವರ ಸೌಭಾಗ್ಯವ । ಮದುವೆಯೊಳಣೆ ನೋಡಿ [ಕೊಂಬ ||೩೧||
ಎಂದೊಡಾಮಾತಿಂಗೆ ಪರಿತೋಷಗೊಂಡು ಮ । ತ್ತೊಂದ ಕೇಳ್ದಳು ನಸು [ನಗುತೆ ||
ಕಂದರ್ಪನಪರಾವತಾರವ ಸಖಿ ಹೇಗೆ । ತಂದಳು ನಿಮ್ಮ ವಿಗ್ರಹವ||೩೩||
ನೀಱೆ ಕೇಳ್ ನಿನ್ನ ಸ್ವಪ್ನದಿ ಕಂಡ ಮಾತ್ರದಿ । ಬೇಱಿದ್ದೆನೊಂದು [ಮಂದಿರದಿ ||
ಕಾರಿಯ ಕೊರಲ ಮಾನಿನಿ ಬಂದುತನ್ನಯ । ಮೋರೆಯ ತೋಱಿದಳೊಲಿದು
ಬೆಸಗೊಂಡಳನ್ನಂತಸ್ಥವ ತಿಳಿದು ತಾ । ನುಸಿರ್ದಳು ನಿನ್ನ ಚೆಲ್ವಿಕೆಯ ||
ಹೊಸ ಭಾವಚಿತ್ರವ ತೋಱಿಸೆ ಕಂಡು । ಸಂತಸವೆತ್ತಿನಿವಳಹುದೆಂದು|| ೩೪||
ವ್ಯಥೆಗೊಳಲೆನಗೆ ಪೇಳ್ದಳು ನಿನ್ನ ಪ್ರಾಣಸ್ನೇ । ಹಿತೆ ಬಾಣನಂದನೆಯೊಡನೆ ||

ಜತೆಗೊಳಿಸುವೆನೆಂದು ಕರೆದಳು ಕುಂಭಾಂಡ । ಸುತೆ ಮಾಧುರ್ಯವಾಕ್ಯದಲಿ
ಬಪ್ಪೆನೆಂದಾನೊಡಬಿಟ್ಟರೆ ಪ್ರಾಣಕೆ । ತಪ್ಪೆನೆಂದಭಯವ ಕೊಟ್ಟು ॥
ಇಪ್ಪೆಡೆಯೊಳಗಿರಲಮರ್ದಪ್ಪಿಕೊಂಡು ತ । ನ್ನೊರ್ಪೆಗಲೊಳುಪೊತ್ತಳಬಲೆ
ಉನ್ನತಗಗನವೀಧಿಯಲಿ ಮಾತೃಕೆ ಕೊಂಡು । ಬೆನ್ನೊಳು ಶಿಶುವ ತರ್ಪಂತೆ
ನನ್ನಯ ಭಾರಭಾರವ ಹೊತ್ತು ತಂದೀಗ । ನಿನ್ನೊಳು ಸೊಗವಡಿಸಿದಳು ॥
ಓರಂತೆ ಯಜ್ಞಾದಿ ಸತ್ಕರ್ಮಕೋಟಿಯ । ಪಾರಂಗತವನೆ ಮಾಡಿ ॥
ಧಾರಾಮುಖದೆ ಕೊಟ್ಟರೆ ನಮ್ಮರಿಣವು । ತ್ತಾರವಾಗದು ಮಾನನಿಧಿಯೆ ॥ ೩೯ ॥
ಆಕೆಯ ಧರ್ಮ ನಮ್ಮಿರ್ವರ ತನುಸುಖ । ಜೋಕೆಯೊಳೀಡೇಱಿದಡೆ ॥
ಬೇಕೆನೆ ಪೆತ್ತಮಕ್ಕಳ ಪೆಸರ್ಗುಡು ಚಿತ್ರ । ಲೇಖೆಯೆಂದನಿರುದ್ಧ ನುಡಿದ ॥
ಎಂತಾದೊಡೆನ್ನ ಬಹುದು ಕೇಳು ಮತ್ಪ್ರಾಣ । ಕಾಂತ ನಮ್ಮಿರ್ವರಿಚ್ಛೆಯನು
ಸಂತತ ಸಲಿಸಿದಳ್ ತಾಯಾಗಿ ಕೆಳದಿಯ । ಚಿಂತಾಮಣಿಯೆಂದಳವಳು ॥ ೪೧ ॥
ನೆನೆದನು ಚಿತ್ರಲೇಖೆಯ ಧೈರ್ಯವ ತಲೆ । ದೂಗಿದನು ವಿಸ್ಮಿತನಾಗಿ ॥
ನನೆದನು ಹರ್ಷಾಶ್ರುಗಳಿಂದೆ ತನ್ನಯ । ಮನದಣಿವೊಲು ಹೊಗೞಿದನು ॥
ಕುಂಭಾಂಡನಾತ್ಮಸಂಭವೆಯ ಕೀರ್ತಿಸುತಿಹ । ಶಂಬರಾರಿಯ ಕುಮಾರಕನ ॥
ಚೆಂಬಾಯ್ದೆಱೆಯ ಚೆಲುವ ಕಂಡು ಕುವರಿಗೆ । ಮುಂಬರಿದುದು ಕಾಮಲೀಲೆ ॥
ಭ್ರಮಿಸಿದ ಭಾಮಿನಿಯಧರಚುಂಬನದೊಳು । ರಮಿಸಿದನವಳಿಚ್ಛೆಯಲಿ ॥
ಕ್ರಮದೊಳು ರತಿಸುಖವಡೆದು ಮೂರ್ಛೆಯೊಳು ವಿ । ಶ್ರಮಿಸಿದರ್ ಬಾಹು
[ಬಂಧನದೆ ॥ ೪೪ ॥
ಪೂಗೋಲನಾತ್ಮಸಂಭವ ಬಾಣಜೆಯರ ಸಂ । ಭೋಗದೆ ಕಡೆಗಣ್ಣೊ
[ಳೊಗೆದ ॥
ರಾಗವಿದೆಂಬಂತೆ ರಂಜಿಸಿ ತಪನದಿ । ಗ್ಭಾಗದೆ ಮಂಜಿಷ್ಠವಾಯ್ತು ॥ ೪೫ ॥
ಕ್ರೀಡಾಪೇಕ್ಷೆಯೊಳರ್ಧರಾತ್ರಿಯೊಳಿಷ್ಟ ಮಾಡಲು ತನು ತಾಪಿಸುವುದು
ಬೇಡವೆಂದವರ್ಗೆ ಬುದ್ಧಿಯ ಪೇೞ್ವವೊಲು ತಾಮ್ರ । ಚೂಡಗಳ್ ಬೊಬ್ಬಿ
[ಕ್ಕಿದುವು ॥ ೪೬ ॥
ಸಾರ್ವಭೌಮಾಧೀಶ್ವರ ಕಂತುತನಯಂಗೆ । ಪೂರ್ವದಿಗಂಗನೆ ತಂದು ॥
ತೋರ್ಪ ಮಾಣಿಕದ ಕನ್ನಡಿಯೆನೆ ಕಾಂತಿಯ । ಬೀರ್ಪ ಭಾಸ್ಕರ ಮಾಡಿದನು ॥
ಪಾಡಿದರಿರ್ಪರುಪ್ಪವಡದಾಳಾಪವ । ಮಾಡಿದರ್ ಪುಣ್ಯರಾಗದಲಿ ॥

ಜೋಡಿಸಿ ವಚನಸಂಕೀರ್ತನಸುಧೆಯ ತಂ । ದೂಡಿದರ್ ಕರ್ಣಪೂರೈಸೆ ॥
ಎದ್ದರು ವಚನಾಮೃತಗೇಳಿ ತನುಸುಪ್ರ । ಬದ್ಧದೊಳ್ ತಕ್ಕೆಯ ಸಡಿಲಿ॥
ರುದ್ರಾಚ್ಯುತಪಾದಪದ್ಮಕೀರ್ತನೆಯನಿ । ರುದ್ಧನರ್ಧಾಂಗನೆ ಸಹಿತ ॥೪೯॥
ಆದುದುಪ್ಪವಡವೆಂದೆನೆ ಚಿತ್ರಲೇಖೆ ವಿ।ನೋದದೆ ಕೆಳದಿಯರೊಡನೆ ॥
ಮಾದಲವಣ್ಣ ಕಾಣಿಕೆಯಿತ್ತು ಕುವರನ । ಪಾದಕ್ಕೆ ಬಂದೆಱಗಿದಳು ॥೫೦॥
ಸುದತಿ ಕೇಳೆನಗೆ ನೀ ತಲೆವಾಗಿ ದೋಷವ।ನೊದವಿಸ ಬೇಡವೆಂದೆನುತೆ॥
ಮದನಕುಮಾರ ಮಂತ್ರಿಜೆಯ ಮಸ್ತಕವ ಹ । ಸ್ತದೊಳಾಂತು ನೆಗಪಿದ [ನಗುತೆ ॥೫೧॥
ಜಗದೇಕದೇವ ಶ್ರೀಕೃಷ್ಣಕುಮಾರನ । ಮಗ ಮಾರಾಯ ನಿಮ್ಮಂಘ್ರಿ॥
ಯುಗಳಕ್ಕೆ ಶರಣೆಂಬ ಮಾತ್ರದಿ ಮಜ್ಜನ್ಮ । ದಘವಿನಾಶನವೆಂದಳವಳು ॥
ಪಿರಿಯತ್ತಿಗೆ ಕೇಳೆನಗೆ ನೀ ಪೆತ್ತಳ । ಸರಿಯೆಂದು ಸರಸವಾಕ್ಯದಲಿ ॥
ಸಿರಿಗೆಯ್ಯನೆರಡ ತಾ ಹಣೆಗೊತ್ತಿಕೊಂಡು ತಾ । ತ್ವರಿಯದಿ ಕೀರ್ತನೆಗೆಯ್ದ॥
ಚಂದಿರಮುಖಿಯರು ಬಿಸಿನೀರಿನ ಹೊನ್ನ । ಬಿಂದಿಗೆ ಮಣಿಪಾತ್ರೆಯನು॥
ತಂದಿಕ್ಕಿ ಮಜ್ಜನಗೆಯ್ಸಿದರೊಡಲೊಡ।ಲೊಂದಿರ್ದ ದಂಪತಿಗಳಿಗೆ ॥೫೪॥
ರಾಜಾನುಜೆಯಣುಗನ ಪುತ್ರಂಗೆ[1] ಸ । ರೋಜದಳಾಯತೇಕ್ಷಣೆಗೆ ॥
ಓಜೆಯೊಳೆಡೆಮಾಡಿದರು ಹರೀಶ್ವರ । ಪೂಜೆಯ ಮಣಿಮಂಟಪದಿ ॥೫೫॥
ಮಿಂಡಿಯ ಕೈಲಾಗೊಳು ಬಂದು ಪೀಠದೆ।ಮಂಡಿಸಿ ಕಾಂತ ಕಾಂತೆಯರು॥
ಪುಂಡರೀಕಾಕ್ಷ ಫಾಳಾಕ್ಷಪೂಜೆಯೊಳೊಪ್ಪ।ಗೊಂಡಿರ್ದ ರಾಗವೋಕ್ತಿಯಲಿ
ಗಂಗೋದಕ ದಿವ್ಯಗಂಧಾಕ್ಷತೆ ಪುಷ್ಪ । ಮಂಗಳನಿಖಿಳಾರ್ಚನೆಯ ॥
ರಂಗಲಿಂಗಾರ್ಪಿತ ನೈವೇದ್ಯತಾಂಬೂ । ಲಂಗಳ ಕೈಕೊಂಡರೊಲಿದು॥೫೭॥
ಮಾಕಂದಕಂದ[2] ಸಾಸಿರ ತೋಳಸುತೆ ಚಿತ್ರ।ಲೇಖಾನಾರಿಯಿಚ್ಛೆಯಲಿ॥
ಏಕಾಂತನಿಳಯದೆ ಸುಖವಡುತಿರ್ದರ । ನೇಕವೈಭವದ ರೀತಿಯಲಿ ॥೫೮॥
ವರಮೋಹನ ತರಂಗಿಣಿಯೆಂಬ ಕಾವ್ಯವ । ಬರೆದೋದಿ ಕೇಳಿದ ಜನರ॥
ತರಣಿ ಚಂದ್ರಮರುಳ್ಳನಕ ಸತ್ಕ್ರುಪೆಯಿತ್ತು। ಪೊರೆವ ಲಕ್ಷ್ಮೀಕಾಂತ ಬಿಡದೆ॥

ಅಂತು ಸಂಧಿ ೩೨ ಕ್ಕಂ ಪದ ೨೧೩೮ ಕ್ಕಂ ಮಂಗಳಂ—

---

ಕ ಪ ಅ—1 ಅನಿರುದ್ಧ, ಹೇಗೆ? ಇಲ್ಲಿ ರಾಜ-ಚಂದ್ರ

2. ಮಾ-ಲಕ್ಷ್ಮಿಯ, ಕಂದ-ಪುತ್ರನಾದ ಪಸಿಗೆ, ಕಂದ-ಪುತ್ರ, ಯಾರು ?

# ಮೂವತ್ತ್ಮೂಱನೆ ೩ ಸಂಧಿ

---

ನಾರದನು ವಿವಾಹ ವೃತಾಂತವನ್ನು ಬಾಣಾಸುರನಿಗೆ ಅಱುಹುವನು —

ಕಱುಗಾಹಿಂಗಳ ನಾಲ್ಕೊಗನಯ್ಯ ಅವರಂತೆ । ತುಱುಪಟ್ಟಿಯೊಳಗೆ [ನಿರ್ಮಿಸಿದ ॥
ಸರುವೋತ್ತಮನ ಪಾದವ ಕೂರ್ತುಕೃತಿವೇೞ್ವ।ಗೀರ್ವಾಣಭಾಷೆ ಕನ್ನಡದಿ
ಸ್ವಾತಿಯ ಮೞೆಯ ಪೆರ್ವನಿ ಚಿಪ್ಪಿನೊಳು ಬಿದ್ದು।ಜಾತಿಮುತ್ತಾದಂತೆ [ಯೆನ್ನ ॥
ಮಾತಿನ ಮಾಲೆ ನಿನ್ನಯ ಕರ್ಣದೊಳು ಬಿದ್ದು । ಖ್ಯಾತಿವೆತ್ತುದು ಕೇಳು [ಕೇಳದಿ ॥೧॥

ಘನಶೀಲರುಗಳು ದೇವಾರ್ಚನೆ ಸಹಭೋ।ಜನ ತಾಂಬೂಲ ಸುಗಂಧ ॥
ಮನಗೊಂಬ ನಿಖಿಳ ವೈಭೋಗದಿಂದಿರ್ದರು । ದಿನಗಳೆದರು ಬಹುಸುಖದಿ ॥
ನೀಲಕುಂತಲೆ ಕೇಳು ಬೞಿಕೊಂದು ದಿನ ಬಾಣ।ನೋಲಗ ಸಂಭ್ರಮಿ [ಸಿರಲು ॥
ಮೂಲೋಕವ್ಯವಹಾರಿ ನಾರದನಾಗ ತ।ತ್ಕಾಲಕ್ಕೆ ಗಗನದಿಂದಿೞಿದ ॥೨॥

ಬಂದ ನಾರದ ಬಾಗಿಲ ಪರಮೇಶಗೆ । ವಂದನೆಗೆಯ್ದು ಕೇಳಿದನು ॥
ಕಂದಾಯುಪ್ರಾಪ್ತಿಗೆ ಖಳನಿತ್ತ ಜೀವಿತ।ಸಂದುದೆ ನಿಮಗೆಂದ ನಗುತ ॥೩॥

ನೆಟ್ಟನೆ ನಿಖಿಳ ನಿರ್ಜರಮನುಮುನಿಗಳೊಳ್।ಪಟ್ಟಾಭಿಷೇಕ ಕೇಳ್ ನಿನಗೆ
ದುಷ್ಟರಕ್ಕಸನ ಬಾಗಿಲ ಕಾವಲ್ಲದೆ । ಹೊಟ್ಟೆಯ ಹಸಿವು ತಂಪಿಸದೆ ॥೪॥

ಈಶ ಕೇಳ್ ನಿನ್ನೆಸ್ಥಲವುಳ್ಳೊಡೆ ಖಳನ ಕೈ ಲಾಸಕ್ಕೆ ಕೊಂಡೇೞು ಪೋಪ॥
ಬೇಸಱದಿವನ ಬಾಗಿಲ ಕಾದ್ದಿಪ್ಪುದು । ದೋಷವೆಂದಭವಂಗೆ ನುಡಿದ ॥
ಸರ್ಪಾಭರಣಭೂಷಿತ ಕೇಳು ನಿನ್ನಾತ । ನಿರ್ಪಡೆಗಾನು ಪೋಪುದಕೆ ॥
ಅಪ್ಪಣೆಗುಡು ಬಾಗಿಲವರ ಕೇಳದೆ ಪೋಗ।ಬರ್ಪುದೆ ಬಡವರು ನಾವು ॥೫॥

ನಾರದ ಮುನಿಮಹಾರಾಯ ಕೇಳ್ ಭಕ್ತರ।ದ್ವಾರಪಾಲಕನು ನಾನಹುದು
ಘೋರಹೃದಯನೆ ನೀನಱಿಯದ ಮತವಿಲ್ಲ ಭೂರಿಬಾಣವ ಕಾಣಲಾಯ್ತು॥೬॥

ಎಂದೊಡೀಶ್ವರನ ವಾಕ್ಯವ ಕೇಳುತೊಳಪೊಕ್ಕು । ಬಂದ ನಾರದ [ಮುನಿವರನ ॥
ಸಂದರುಶನಮಾತ್ರದೊಳಮ್ದು ಚರಣಾರ । ವಿಂದದೆ ಖಳನೆಱಗಿದನು ॥೧೦॥
ವೀಣಾವಾದ್ಯಪೊರ್ಕೆಯ್ಯು ಮತ್ತೊರ್ಕೆಯ್ಯಿಂ । ಬಾಣನ ಮುಡಿವಿಡಿದೆತ್ತಿ॥
ಕ್ಷೀಣಸಂತೋಷದೆ ಹರಸಲ್ಕೆ ಕಿಂಕರ । ವಾಣದೆ[1]ಮುನಿಯನೀಕ್ಷಿಸಿದ॥೧೧॥
ಭೇದ್ಯವಾಗಿದೆ ನಿಮ್ಮಯ ಚಿತ್ತಲೋಕಾ । ರಾಧ್ಯ ಬಂದುದ ಪೇೞನಲು॥
ಸದ್ಯೋಪಚಾರವ ಮಾಡಿ ಪ್ರೀತಿಯೊಳರ್ಘ್ಯ । ಪಾದ್ಯವ ಕೊಟ್ಟು ಕೀರ್ತಿ [ಸಿದ ॥೧೨॥
ಉಚಿತವ ಕೈಕೊಂಡು ನಾರದ ನವರತ್ನ । ಖಚಿತಪೀಠದಲಿ ಮಂಡಿಸಿದ॥
ಕುಚಿತ[2]ಬುದ್ಧಿಯು ತನ್ನ ಮನದೊಳು ಮಡಗದೆ । ವಚಿಸಿದ ಖಳರಾಯ [ನೊಡನೆ ॥೧೩॥
ಬಾಣ ನಿನ್ನಯ ಭಾಗ್ಯೋನ್ನತ ನಿಖಿಳಗೀ । ರ್ವಾಣರೆಲ್ಲರಿಗೆ ಸಿದ್ಧಿಪುದೇ॥
ಏಣಾಂಕಧರ ಬಂದು ಬಾಗಿಲ ಕಾದಿರ್ಪ । ಕಾಣನೆ ಮಾನಹಾನಿಗಳ ॥
ಆತ ಕಾಣದೆ ಪೋದರೆ ಪೋಗಲೆಮ್ಮಯ । ದಾತೋಳು ನೀನಱಿದಿರ್ದ॥
ಏತಱ ಮಾನಹಾನಿಯೊ ತೋಱು ತೋಱೆಂದು । ಕಾತುರದಿಂದೆ ಕೇಳಿದನು॥
ಕೇಳದೊಡಾಂ ಪೇೞ್ದಪೆ ಕೇಳು ನಿನಗೀ । ವೇಳೆಯೊಳ್ ತಲೆಗುತ್ತ[3] [ಲಹುದು ॥
ಭಾಳಾಕ್ಷನ ಸದ್ಭಕ್ತನೆಂಬವನೆಮುತ್ತ । ಸೂಳಯಾಗಿರ್ಪುದು ಸುಖವೇ ॥೧೬॥
ನಿಮಗೆ ನಾ ಪ್ರತಿಮಾತನಾಡಲಂಜುವೆ ಜೀಯ । ನಮಗೀ ಶಬ್ದ ಸಮ್ಮ [ತವೇ ॥
ಯಮುನ ದಾಡೆಯ ಕೀಱ್ವ ದಡಿಗದೈತ್ಯರ ಕಾಹು । ಮಮಕುಮಾರತಿಯ [ಗೋಪುರಕೆ ॥೧೭॥
ಆಟಾಳದಾರು[4]ಪೋಪರು ಕೇಳು ಮಿಕ್ಕಿನ। ಪೋಟಾಳು[5]ಗಳಿಗೆ ಗೋಚ [ರವೇ ॥
ಮಾಟದ ಸುರಸರೋರಗರೆಂಬ ಒಹಳ ನಿ । ಶಾಟರ ತಿಕ್ಕಿ ಮುಕ್ಕುವರು ॥

---

ಕ ಪ ಅ—1 ಸೇವಕತನದಿಂದ 2 ದ್ಭ ಕುತ್ಸಿತ 3. ತಲೆಯಮೇಲೆ ಹೊಡೆಯಬಹುದು 4 ಅಟಾಳಾದವರು, ಮುಖ್ಯರಲ್ಲ. 5. ಹೇಡಿ.

*

ಹರಮಹಾದೇವನೇ ಒಡವನೆ ನಾಬಲ್ಲೆ ನುರವಣೆಗಾಱನೆಂಬುದನು ||
ತರಹರದಿಂದೆ ಪೇೞ್ದನು ನಿನ್ನ ಮಗಳಿಗೆ ವರನಾವನೆಂದು ನಿಶ್ಚಯಿಸು || ೧೯ ||
ಎನಲಾಮಾತ ಕೇಳ್ದಸುರಾಧೀಶ್ವರ | ಕನಲುತೆ ಕಡುಗೋಪದಿಂದೆ ||
ಅನಲಾಕ್ಷನಾಣೆ ನಾರದ ಕೇಳು ರೋಹಿತ | ಹೊನಲೇಱ ಹೊಯ್ವೊ ಹೊಕ್ಕ
[ವನ || ೨೦ ||

ಹೊಕ್ಕವನಾರೆಂಬುದ ಕೇಳು ಪೇೞುವೆ | ರಕ್ಕಸವೈರಿಯು ವೊಮ್ಮ ||
ಕಕ್ಕಸ ನಿನಗಿದು ಹವಣಲ್ಲ ಭೇದಿಸೆ | ವೆಕ್ಕಸವಹುದೆಂದ ನಗುತೆ || ೨೧ ||
ಕುಡಿಮೀಸೆ ಕುಣಿದು ನಾಸಿಕದಲ್ಲಿ ಹೊಗೆಸುತ್ತಿ | ಕಿಡಿಗಳನಕ್ಷಿ ಮುಕ್ಕುಳಿಸೆ ||
ಜಡಿದು ಖಡ್ಗವ ಝಳಪಿಸುತೆ ಕೋಪವ ತಾಳ್ದು ನುಡಿದ ನಾರದಮುನಿ
[ವರಗೆ || ೨೨

ಯತಿರಾಯ ನೀನಲ್ಲದನ್ಯೋರ್ವರಾವಡಂ ಹುತಿಯನೆಯ್ದಿಸುವೆ ಖಂಡೆ
[ಯಕೆ ||
ಕ್ಷಿತಿಯೊಳಗೆನಗೋರ್ವ ಪ್ರತಿಭಟರುಂಟೆಂದು ಮಿತಿಮಾಡಲಪ್ಪುದೆ ನೀನು ||
ಮಕ್ಕಳಾಟಿಕೆಯೇಕೆ ಖಳರಾಯ ಬಾಗಿಲೊ | ಳ್ಮಿಕ್ಕಣ್ಣನಿಪ್ಪುಗರ್ದಿ
[ಕೆಯೆ ||
ಸೊಕ್ಕಾನೆ ಸಿಂಗದೊಳ್ ಕದನವ ಕಟ್ಟಿಕೊಂ | ಡೊಕ್ಕಲಾಗಿರ್ದು ಬಾೞು
[ವುದೇ || ೨೪ ||

ಹೊಗೞಲದೇಕೆ ನಿಂದಿಸಲೇಕೆ ನಿಮಗೆ ನಾ ಜಗಳವನಿಕ್ಕ ಬಂದವನೆ ||
ಮಗಳನು ಕೆಡಿಸಿದನಿಗೆ ರಹನಱಿಯದೆ | ವೃಗುಯುಗದೊಳು ಕಿಡಿಯೇಕೆ ||
ಕೋಪವೆಂಬುದು ಪರಮಾತ್ಮಂಗೆ ದುರ್ಗಂಧ | ಲೇಪವ ಮಾಡಿದಂತಿ
[ಹುದು ||
ಶ್ರೀಪರಮೇಶನ ಸೇಱಯಾಳ್ದ ಶರಣಂಗೆ | ತಾಪತ್ರಯವೇಕೆ ನಿನಗೆ || ೨೫ ||
ಕುಂಭಾಂಡ ಮಂತ್ರಿಶೇಖರ ನೋಡು ನಾರದ ನೆಂಬ ಮಾತುಗಳ ಕೇಳಿ
[ದೆಯಾ ||
ಹಂಬೇಡಿ ಕಾಮನ ಮಗನೆನ್ನ ಮಗಳಿಂಗೆ | ಸಂಭೋಗ ಕೃತಪುಣ್ಯನಂತೆ ||
ಜಗಲಿ ಜೇಯ ನಾರದಮುನಿಮಹಾರಾಯ | ಹೋಗಲಾಡುವನಲ್ಲ ಮಾತ ||
ಈಗಳಾನಿವ ಪರೀಕ್ಷಿಸಿ ನಲಿಯಿದಱ ಪ್ರ | ಯೋಗವ ನಿನಗೆ ಪೇೞ್ದಪೆನು ||

ಕ್ರೂರನೆಂದೆನ ಬೇಡ ಕುಂಭಾಂಡ ಕನ್ಯಾ । ಚೋರನ ಹಿಡಿತರದಿರಲು॥
ಬರಂತೆ ನಿನ್ನ ದೇಹವ ಸೀಳ್ದು ದ್ವಾರಕ್ಕೆ । ತೋರಣವನು ಕಟ್ಟಿಸುವೆ ॥
ಬೆಸಗುಡು ದೈತ್ಯಾಧೀಶ್ವರ ನೀ ಸಿರೂ । ಪಿಸಲಾನು ಮಿತಿಯ ಮೀಱುವೆನೆ
ಏಸಮುಪ್ರತಾಪಿಯಾದಡೆ ಕೊಂಡು ಬಂದೊ ಪ್ಪಿಸದಿರ್ದಡೆನಗಾಜ್ಞೆ ಜೀಯ॥
ಅಣ್ಣಗಳ್ ದ್ವಾರಪಾಲಕರ ಕಾಪಿಂಗೆ ಕೆಂ । ಗಣ್ಣ ದೈತ್ಯರ ತಲೆಗಡಿದು॥
ಹೆಣ್ಣಾಳ್ಗಳನ್ನದೆ ತರಿದಿಕ್ಕಿ ತೆಗೆತಂದು । ಚಿಣ್ಣನನೆಮಗೊಪ್ಪಿಸೆಂದ ॥೩೧॥
ಸಂತು ನಿನ್ನಭಿಮತ ಕೃಷ್ಣನೊಳ್ ಕಾಳಗ ಬಂತು ಬಾಣಾಖ್ಯ ಕೇಳೆನುತೆ
ಕಂತುಕುಮಾರನ ಹಿಡಿತರೆ ಖಳನೆದ್ದು ಸಿಂತು ಬೀಱುತ್ಕೊಂಡನಾಕ್ಷಣಕೆ॥
ವೃದ್ಧಶ್ರವ[1]ಮುಖ್ಯಸುರಭೂಜದ ಬೇಗೆಗೆ । ಗುದ್ದಲಿ ತಾನೆಂಬ ಖಳರು॥
ಎದ್ದರು ಮಂತ್ರಿಯೊಳ್ ನಡೆಗೊಂಡದಧಟನಿ ರುದ್ಧನ ಪಿಡಿವ ಪೆರ್ಮೆಯಲಿ
ನೋಡಲು ಬೆಟ್ಟುಗಳಿಗೆ ಕೈಕಾಲ್ಗಳು । ಮೂಡಿವಂತದಟುಳ್ಳ ಭಟರು॥
ಸೂಡುತೆ ಬಾಸಿಂಗ ಡೌಣೆ ಜೋಗಟೆ ದನಿ ಮಾಡಿಸುತ್ತೈದಿದರೊಡನೆ ॥೩೪॥
ಇಂತಪ್ಪ ಬಿರುದಿನ ಜೋಳಕೆಯ ಭಟರ್ಗಳು ಮುಂತಾರ್ಭಟಿಸುತ್ತೈ [ತರಲು ॥
ಅಂತಸ್ಥದೊಳೊರ್ವಳು ಬಂದು ಪೇಳ್ದಳ್ । ಕಾಂತದೆ ಮಂತ್ರಿನಂದನೆಗೆ ॥
ಬಂದು ನಾರದಮುನಿ ಖಳರಾಯನೊಡನೆ ಹೀಗೆಂದ ಮಾತುಗಳನೆಲ್ಲ [ವನು ॥
ಬಾವಕಿಯೊಳ್ ಕತನುಯಿಲ್ಲದೆ ಪೇಳುತ್ತಿರ್ದಡೆ ಕೇಳಿ । ನೊಂದಳು ವರಚಿ [ತ್ರಲೇಖೆ ॥೩೬॥
ಬಗೆವೆತ್ತ ಬಾಗಿಲ ಕದ ವಜ್ರಲಾಳಪಿಂ ಡಿಗೆಗಳ ಬಂಧನಗೊಳಿಸಿ ॥
ಮಿಗೆ ವಿಶ್ವಾಸಿ ಕಠೋರರಾಕ್ಷಸಿಯರ ತೆಗೆಯದೆ ಕಾಪನಿಕ್ಕಿದಳು ॥೩೭॥
ತೋಟಿಯರ್[2] ತರಿದಿಕ್ಕದರಾಂಪ ದೈತ್ಯವ ಧಾಟಿಯ ಕರೆದು ತನ್ನೊಡನೆ॥
ಸೂಟಿಯೊಳ್[3] ಸಾವಂತೆ ಕೆಯ್ಯ ಖಡ್ಗವನಿಕ್ಕಿ । ದಾಟಿಸಿಕೊಂಡಳಲ್ಲರನು ॥
ಬಲ್ಲವರ್ ಹರಿಗೆ[4] ಪಟ್ಟೆಯ ಶೂಲ ಶಲ್ಲೆಹ ಭಲ್ಲೆಯ ಬಲವಂತೆಯರ॥
ಎಲ್ಲರ ತಂಬಿ ಹರ್ಮ್ಯವ ಹತ್ತಿ ಹೇಳ್ದಳು ಫುಲ್ಲಶರಾತ್ಮಸಂಭವಗೆ॥೩೯॥

---

ಕ ಪ ಅ —1 ಇಂದ್ರ 2 ಯುದ್ಧಮಾಡುವರ 3 ಕೈಲಾದ ಯುಕ್ತಿಯನ್ನು ತೋರಿಸಿದನೋಲ. 4 ಗುರಾಣಿ.

ಖೂಳನಾರದ ಬಂದು ಬಾಣನೊಳ್ ಚಹಡಿಯ । ಹೇೞಲುಜ್ಜುಗವೆತ್ತ [ನಂತೆ ॥
ಕಾಳರಕ್ಕಸ ನಿನ್ನ ಹಿಡಿತರೆ ಬೆಸನ ಕೊ । ಟ್ಟಾಳನಟ್ಟಿದ ನೋೞು ಜೀಯ॥
ಬಂದಿದೆ ದಡಿಗರಕ್ಕಸವಡೆ ಬಾಗಿಲೊಳ್ । ನಿಂದಿದೆ ಘುಡುಘುಡಿಸುತ್ತೆ ॥
ಚಂದಿರವದನೆಗೋಸ್ಕರ ನಿನ್ನ ನಾನಿಲ್ಲಿ । ತಂದಿಕ್ಕಿ ಕೆಡಿಸಿದೆನಕಟಾ ॥೪೧॥
ದುಕ್ಕವಿದೇಕೆ ಮಾತ್ರಕೆಯ ಗರ್ಭವ ಮತ್ತೆ । ಪೊಕ್ಕಡೆ ಬಿಡುವುದೆ [ಪ್ರಾಪ್ತಿ ॥
ಅಕ್ಕರ ಹಸೆಯೊಳಿರ್ದನಿತಾದಪ್ಪುದೆಂದು । ನಕ್ಕನು ಮಂತ್ರಿಜೆಯೊಡನೆ॥೪೨॥
ನಳಿನೋದ್ಭವ ಕೋಟಿವತ್ಸರ ತನುವಿಡಿ । ದೞಿದೊಡದೇನು ವ್ಯಥಾಯು॥
ಸುೞಿಗುರುಳಬಲೆಯು ತೋಳತಕ್ಕೆಯೊಳೊಂದು । ಗಳಿಗೆ ಬಾೞಲು ಮುಕ್ತಿ [ಯಹುದು ॥೪೩॥
ಪೊಳೆವ ಕೆಂಬಲ್ಲು ಚೆಂದುಟಿ ಕಂಬುಕಂಠ ಕಾಂ । ಕುೞಕೋಮಲತ್ವ [ನುಸ್ಮೋಲೆಯ ॥
ಸ್ಥಳದಲ್ಲಿ ಮೊಗವಿಟ್ಟು ಮುಂಡಾಡಿ ಸೊಗ ಮೆಯ್ಯೊ । ಳಳವಟ್ಟು ಸಾವು [ದಚ್ಚರಿಯೆ ॥೪೪॥
ಏಸುಜನ್ಮದ ತಪಃಫಲವಿದು ಬಂದುದೊ । ಈಸೌಂದರಿಯ ಸಂಭೋಗ ॥
ಲೇಸಿನೊಳ್ ತನುವ ತೆತ್ತಡೆ ಶಕ್ರಸೌಭಾಗ್ಯ । ಭಾಸುರವಹುದೀದು ತನಗೆ॥
ಆವ ಕಾಲವ ಕಳೆದರೆ ಜೀವವುಳ್ಳನ್ನ । ಸಾವಡಸದೆ ಮಾಣ್ದಪುದೆ ॥
ಈವನಿತೆಯೊಳೊಂದಿ ಸುಖವಟ್ಟು ಮಡಿದಡೆ । ಜೀವನ್ಮುಕ್ತಿಯೆಂದವನು ॥
ಅರಲಂಬನಾತ್ಮಜ ನುಡಿದ ವಾಕ್ಯವ ಕೇಳಿ । ತರಳಾಕ್ಷಿ ದುಕ್ಕದೆ ತನ್ನ॥
ಕೊರಲನುತ್ತರಿಸೆಂದು ಪಾದಪದ್ಮಕೆ ಬಿದ್ದು । ಹೊರಟಲ್ಕೆ ನೋಡಿ ಚಿಂತಿಸಿದ॥
ನಿಱಿಗುರುಳಬಲೆ ನಿನ್ನಯ ದಿವ್ಯದೇಹವ । ಬಱಿನೆಲದೆಡೆಯಲ್ಲಿ ಹರಹಿ॥
ಬಱಿಗಲ್ಲ ಗಾಯದಿ ಮಿಡುಕುವ ನಾಗರ । ಮಱಿಯಂತೆ ಹೊರಟಬೇಡೆಂದ॥
ಕಂಬನಿದೊಡೆದು ಕಾಂತೆಯ ತಾಳ್ದ ಮುಖಚಂದ್ರ । ಬಿಂಬವ ಚುಬುಕಾ [ಗ್ರವಿಡಿದು ॥
ಚುಂಬನಗೊಟ್ಟು ಚುಂಬಿಸಿ ರಂಗುವಾಣಿಕ । ದಂಬುಲವಿತ್ತು ಮುದ್ದಿಸಿದ॥
ಎಂತು ಸೈರಿಪೆ ಕನಸಲಿ ಕಂಡ ವಿರಹದ । ಭ್ರಾಂತಿವಡೆದ ನೀಱಳ ತನ್ನ॥

ಅಂತಕಾಲವೆ ನೀ ಜೀವಿಸಲಾರೆನು | ಸಂತವಿಸಿದನು ಮಾನಿನಿಯ ||೫೦||
ಪುಂಡರೀಕಾಯತೇಕ್ಷಣೆ ದುಃಖಬೇಡ ಮುಂ | ಕೊಂಡೆನ್ನ ನೋಡಿ [ಚೆತ್ತೈಸು ||
ದಂಡನೆಲ್ಲವ ಬಿಟ್ಟೈದೆ ಮೇಲ್ವಿದರೆ | ಕಂಡ ಬುದ್ಧಿಯ ಕಾಂಬುದೆಂದ ||
ವಿಧುಮುಖಿಯೊಡನೆ ಮಂತ್ರಿಜೆ ಬುದ್ಧಿವೇಳ್ದಳು | ಯದುಕುಲೋತ್ತ [ಮನವೀವಿನಲಿ ||
ಬದುಕುವರಲ್ಲ ಮಕ್ಕವಿದೇಕೆಂದು ಕ | ಣ್ಣುದಕವ ತೊಡೆದಳಾಯುಕನ ||
ಕಟ್ಟಾಣಿನುಡಿಗೇಳಿ ಕಡುಮೆಚ್ಚಿ ಪರಿತೋಷ | ವಟ್ಟು ಬಲಾನ್ವಿತ ನಗುತೆ
ಉಟ್ಟ ದಟ್ಟಿಯು ಚಲ್ಲಣವು ಕಂಗೊಳಿಸಲ್ಕೆ ದಟ್ಟಡಿಯಿಟ್ಟನಾಕುಮರ ||
ಬಿಮ್ಮಾರು ಕೇಶಪಾಶವ ಮಾಡಿ ತ್ರಿಭಾಗೆಯ | ಘಮ್ಮನೆ ನಿಡುಜಡೆವೆಣೆದು
ಕಮ್ಮಲರ್ಗಳ ಸೂಡಿ ಸಿರಿಮುಡಿಯಲಿ ವೀರ ಚಿಮ್ಮುರಿಯನು ಹಾಯ್ಕಿದನು||
ಯಾದವರಾಯ ಕಸ್ತುರಿತಿಲಕವನಿಟ್ಟು | ದ್ವಾದಶನಾಮಾಂಕಿತದಿ ||
ಮಾಧವ ಕೃಷ್ಣ ಗೋವಿಂದ ದೈತ್ಯಾರಿಯ | ಪಾದವ ಬಲಗೊಂಡ ಮುದದಿ ||
ಪೂಸಿದ ಮೆಯ್ಗೆ ಸುಗಂಧವ ಕರ್ಣಿಕೆ | ವಾಸಿತ ದಿವ್ಯ ಜವಾದಿ ||
ಭಾಷಿತನವರತ್ನಾಭರಣಗಳಿಂದೆ | ಭೂಷಿತನಾದ ಧೈರ್ಯದಲಿ ||೫೬||
ಕೊಬ್ಬಿದ ಭುಜಯುಗಳದಿ ವೀರರಸದಿಂ | ದುಬ್ಬಿದ ನಿಡುದೋಳ್ಗಳೆಡೆಯ
ಪರ್ಬಿದ ಕಾಂತಿ ತಾಣಗಳನೆ ನೆಣ | ಗೊಬ್ಬಿಲಿ ಗರುವನೊಪ್ಪಿದನು ||೫೭||
ಕೇಶವನಾತ್ಮಸಂಭವಸೂನು ವೀರಾ | ವೇಶದಿ ಹೋಗರೇಱುತಿರಲು ||
ಆ ಸಮಯದಿ ಚಿತ್ರಲೇಖೆ ನಿರ್ಮಿಸಿದಳು | ಭಾಸುರರಣಯಂತ್ರಮಣಿಯ ||
ಅರಿಗಳ ಕೆಯ್ಯ ಕೂರಸಿಧಾರೆ ಮೊನೆಗಾಯ | ಶರೀರದೊಳಗೆ ಸಂಧಿಸಲು
ಪರಿಹರಿಸುವ ಬಾಣ ಭಯವೃತ್ತಿಯ ಭಾ | ಪುರಿಯಲ್ಲಿ ಕಟ್ಟಿದಳವಳು||೫೯||
ಮನಸಿಜನಾತ್ಮಜ ಬಿಟ್ಟಕಯ್ಯೊಳಿರ್ಪುದು | ಸನುಮತವಲ್ಲೆಂದು ತಿಳಿದು||
ಅನುಪಮಮಂತ್ರ ಶಕ್ತಿಯನಟ್ಟಿ ತರಿಸಿದಳ್ ಧನು ಶಿಲೀಮುಖ ಮಹಾಯು [ಧವ ||೬೦||
ಕೊಟ್ಟಳು ಕೋದಂಡ ಬಾಣವ ಕಪ್ಪಿನ | ಬೊಟ್ಟನಿಕ್ಕಿದಳು ಭಾಳದಲಿ||
ನೆಟ್ಟನೆ ರಣವ ಜಯಿಸು ಎಂದು ಸೇಸೆಯ | ನಿಟ್ಟಳು ಸಿರಿಮುಡಿಯಲ್ಲಿ ||
ಅವಳಿಷ್ಟ ಮಾಡಿ ಕುಸ್ತುರಿಸಲ್ಕೆ ಕಡುಮೆಚ್ಚಿ | ಧವಳಸರೋಜಾಯತಾಕ್ಷಿ

ಪನಳದಧರಾಮೃತದುಣಿಸು ತಂಬುಲದುಬ್ಬು । ಗವಳವನಿತ್ತಳಾಳ್ದನಿಗೆ ॥೬೦॥
ಕಂದರ್ಪಸೂನು ಸ್ವೈರಿಸಿಕೊಂಬನ್ನ । ಬಂದನು ಬಲವಂತ ಮಂತ್ರಿ ॥
ಮಂದಬುದ್ಧಿಯು ಬಿಟ್ಟು ಬಾಗಿಲ ತೆಗೆಸ ಹೇ । ಳೆಂದನಾಯಕಗೆ ಹೇಳಿಸಿದ ॥
ವರಮೋಹನ ತರಂಗಿಣಿಯೆಂಬ ಕಾವ್ಯವ ಒರೆದೋದಿ ಕೇಳಿದ ಜನರ ॥
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು । ಪೊರೆವ ಲಕ್ಷ್ಮೀಕಾಂತಬಿಡದೆ ॥

ಅಂತು ಸಂಧಿ ೩೩ ಕ್ಕಂ ಪದ ೨೨೦೨ ಕ್ಕಂ ಮಂಗಳಂ

## ಮೂವತ್ತುನಾಲ್ಕನೆಯ ಸಂಧಿ

ಅನಿರುದ್ಧ ಕುಂಭಾಂಡರ ಕಾಳೆಗ —

ಪೂತನಿ ವಿಷದ ಮೊಲೆಯನಿತ್ತ ಹಂಗಿಗೆ । ಮಾತಾಸ್ಪದವ ಪಾಲಿಸಿದ ॥
ಭೂತಳವಿಭು ಕೃಷ್ಣರಾಯನ ಕೂರ್ತು ಪ್ರ । ಖ್ಯಾತಸತ್ಕಥೆಯ ವಿಸ್ತರಿಸು ॥
ಲಾಲಿಸು ಲಲಿತಾಂಗೋಪಾಂಗದಿಂದೆ ಕ । ರ್ಣಾಲಿಗೆ ಸುಖವನೆಯ್ದಿಸುವೆ ॥
ಬಾಲೆಯ ಮಂಡೆಮಾಣಿಕವೆ ಕೇಳ್ ಸಮರಸ । ಲೀಲೆಯ ಕೃತಿಯ ವಿಸ್ತರಿಪೆ
ಕುಂಭಾಂಡಮಂತ್ರಿಶೇಖರ ಬಾಗಿಲ ತೆಗೆ । ಸೆಂಬ ನಿಷ್ಠುರದ ವಾಕ್ಯಗಳ ॥
ಮುಂಬರಿತಂದೊರ್ವಳುಸಿರಲ್ಕೆ ಸುಡಿದಳು । ಬಿಂಬಾಧರೆ ದೈನ್ಯದಲಿ ॥೩॥
ತೆಗೆಸುವಳಲ್ಲ ಕವಾಟವ ಬದುಕಿನೊಳ್ । ಸೊಗಸುವಳಲ್ಲಾಳ್ದನಳಿಯೆ
ಮಿಗಿಸುವಳಲ್ಲ ದೇಹವ ಪರಿಸ್ತರಣವ । ನಗಿಸ ಹೇಳೆಂದು ಪೇಳಿದಳು ॥
ನಾರದವಚ ತಪ್ಪಲೀಯದು ಕನ್ಯಾ । ಚೋರ ಸಿಕ್ಕಿದನೆಂದೆನುತೆ ॥
ದ್ವಾರಕವಾಟವ ನೂಂಕಿಸಲ್ತೆರಿಸಿದ । ಹೇರಾನೆಗಳ ಮಂಗಡವ ॥೫॥
ಮದಗಜವಿಂಡು ಬಂಮುವಕಂಡು ಸ್ಮರಸುತ । ಹದವಿಲ್ಲ ಜೇವಡೆಗೆಯ್ದು ॥
ಸುದತೀಶಿರೋಮಣಿ ನೋಡುತಿರೆಂದಲ್ಲಿ । ಗೊದಗಿದನಾರ್ಭಟಿಸುತ್ತೆ ॥೬॥
ಬಾಗಿಲ ತಿವಿದು ನೂಂಕುವ ದಂತಿಶಿರವ ವಿ । ಭಾಗಿಸಿ ಕೂರ್ಗಣೆಯಿಂದೆ ॥
ತಾಗಿಸಿ ಜೋದರ ತಲೆಯನಾಗಸಕಾಗಿ । ಸಾಗಿಸಿದನು ಕೇಳ ಕೆಳದಿ ॥೭॥
ಅವರೆಚ್ಚ ಕೂರ್ಗಣೆ ಬರಲಿದಿರೆಡೆಯಲ್ಲಿ । ಸವರಿದ ಕೂರ್ಗಣೆಯಿಂದೆ ॥
ತೆವರಿದ ಪಟುಭಟರಸುವನೆಲ್ಲವ ಕಟ್ಟಿ । ಕವರಿ ಕಾಲಗೆ ಸಮರ್ಪಿಸಿದ ॥೮॥

ಕಂಡನಾಗಜದ ಮಸ್ತಕಸಹ ಕೆಡೆದಿರ್ದ । ಮುಂಡದ ತಲೆ ಗಗನದಲಿ॥
ಚಂಡಪ್ರತಾಪಿಯು ಜಯವಧು ತಿಱಿಕಲ್ಲ ಕೊಂಡಾಡುವಂತೆ ಜೆಮ್ಮಿದನು॥
ಶಂಬರಧ್ವಂಸಿಯ ಸುತ ಮಝುಘ್ರಾತು ಘ್ರಾ ತೆಂಬ ರಕ್ಕಸರಾಯರುರುಗಳು ॥
ಕುಂಭಾಂಡನಾಜ್ಞೆಯೊಳ್ ಕವಿದೆಚ್ಚು ನೋಂಕಿತು । ಹೊಂಬಣ್ಣ ಗಱಿಗೋ
[ಲ್ಗಳಿಂದೆ॥೧೦॥

ಕಡಿದನು ಖಳರೆಚ್ಚ ಕೋಲ್ಗಳ ವಕ್ಷದೊ । ಳಡಿದನೆಲ್ಲರಿಗೆ ಕೂರ್ಗಣೆಯ
ಉಡಿದನು ಕಲಹಕಾತುರಿಯುವ ದೈತ್ಯರ । ಸಿಡಿದಲೆಗೊಟ್ಟನಾಹವದಿ ॥೧೧॥

ಭಟನಲ್ಲದಿರ್ದಡೆ ಬಾಣನಂದನೆಯು ಲಂ ಪಟಕೊರ್ವನಂಘ್ರೈಸುವರ ॥
ವಟಪತ್ರತಲ್ಪನ ಮೊಮ್ಮನೆಂದಸುರರ । ಘುಟ ಬಿದ್ದುದೆಂದರೂರುಗರು ॥
ಶಂಬರಾರಿಯ ಕುಮಾರಕ ಮಹಾವೀರನೆಂ । ದೆಂಬುದ ಕಂಡೆನಿಂದಿನಲಿ॥
ಮುಂಬರಿದೆಸೆವ ಕೈಚಳಕವ ತೋಱಿದು ಕುಂಭಾಂಡ ನಿಂದನಾಹವಕೆ॥
ನೋಡೆನ್ನ ಕೈಚಳಕವ ಬಾಯಿಪಂತವ । ನಾಡುವರಾವಲ್ಲವೆನುತೆ ॥
ಹೂಡಿದ ಕೂರ್ಗಣೆಯಿಂದೆ ದೈತ್ಯನ ಮೆಯ್ಯ । ತೋಡಿದನ್ಯದಂಬಿನಲಿ ॥
ಪಂಚಬಾಣನ ಕುಮಾರಕನಾದ ಕಾರಣ । ಪಂಚಸಾಯಕವ ತೋಱಿಸಿದೆ॥
ಪಂಚಗುಂಡಿಗೆಯಿಂದೆ ಕಾದುಕೋ ಎನುತಲಿ । ಪಂಚಸಾಯಕವೊಳಿಕ್ಕಿದನು
ದಪ್ಪುಗನಾತ್ಮಜ ದೈತ್ಯನೆಚ್ಚಂಬುಗಳ್ । ಬಪ್ಪೆಡೆಯಲ್ಲಿ ಕತ್ತರಿಸಿ ॥
ಇಪ್ಪತ್ತು ಕೂರ್ಗಣೆ ಕೆನ್ನೀರಮುಱಯಿಂದೆ । ತೊಪ್ಪನೆ ತೊಯ್ದನು ಖಳನ॥
ಅಹುದೆಲೊ ವೀರಾಧಿವೀರ ಯೆನ್ನಿದಿರಾಂತು । ಒಹುದಾಶ್ಚರ್ಯ ಸಣ್ಣವನು ॥
ಇಹುದು ಕಣ್ಗಿಡದೆ ನಿನ್ನಸುವಿಂಗೆ ಮೂರ್ಛೆಯ । ತಹುದೀಸರಳು ನೋ
[ಡೆಂದ ॥೧೨॥

ಹಿಳುಕ ಮಂತ್ರಿಸಿ ತಿರುವಿಗೆ ಹೂಡಿ ಬಹಳ ಕೈ । ಚಳಕದಿಂದೆಚ್ಚು
[ಬೊಬ್ಬಿಱಿಯೆ ॥
ಖಳಕುಲೋತ್ತಮನ ಬಾಣಾರುಣಾಂಬುವಿನಿಂದೆ । ಜಳಕವಾದುದು ಕುಮಾ
[ರನಿಗೆ ॥೧೪॥

ಆಱಿತು ಯಂತ್ರದಿಂದರುಣಾಂಬು ತನುಹೋಗರೇಱಿತು ಮಸೆಯಾದುದಾಗ॥
ಮೀಱಿತು ಭುಜಶಕ್ತಿ ಮಿತಿಯಿಲ್ಲ ತನುಕಾಂತಿ । ದೋಱಿತು ಕಂತುನಂದನಗೆ
. ಕುಂಭಾಂಡ ಕೇಳು ನಿನ್ನಾತ್ಮಜೆಯೊಳು ನಂಟು । ಸಂಭವಿಸಲ್ಕೆ ನಾಕಾದ॥

ಉಂಬಡೆ ಬಂದೆಯ ಹೋಗುಹೋಗೆಂದಲ । ರಂಬನ ಸುತನೊದರಿದನು ॥
ಹೋಗದಿರ್ದೊಡೆ ಮಾಣು ಮತ್ಕಾರ್ಮುಕಸುಪ್ರ ಯೋಗವ ನೋಡೆಂದು [ಸೇದಿ ॥
ತೊಗಲುದ್ಯೋಗಿಸಿ ಖಳನ ಪೇರುರದಲ್ಲಿ । ತಾಗಲೆಚ್ಚನು ಕೆಡೆಯೆನುತೆ ॥ ೨೧ ॥

ನಟ್ಟಗಾಯದೊಳಾತ ದೇಹಾಭಿಮಾನವ ಬಿಟ್ಟು ಮೂರ್ಛೆಯನವತರಿಸೆ ॥
ದುಟ್ಟದೈತ್ಯರು ಬಂದು ಕವಿದರು ರಣರಂಗ । ದಿಟ್ಟಕುಮಾರನ ಮೇಲೆ ॥ ೨೨ ॥

ಹೇೞುವ ಬಿಱುಗಲ್ಲು ಬಳದಡಿ ವರಶಕ್ತಿ । ಪಾಱುಂಬಳ ಶೂಲದಿಂದೆ ॥
ಏಱುಗಾಣಿಸಿ ಕುವರನ ಕೂರ್ಗಣೆಯಿಂದೆ ಗಾಱುಮಾಡಿದರು ರಕ್ಕಸರು ॥
ಎಳವಾೞಿ ಬಲ್ಪಿಗೆ ಬಂದರೆ ಸೀಗೆಯು । ಮೆಳೆಯೊಳು ಮಥನವೆ ಮಗನೆ ॥
ಇಳೆಯೊಳಗೞಿದರಿನ್ನೆಂದಿಗೆ ನೀ ಹುಟ್ಟು । ಬೆಳವೆ ಹೋಗೆಂದು ಸಾರಿದರು ॥

ಬಾೞಿ ನಾನಹುದು ನಿಮ್ಮುವ ಕೊಲ್ಲದನ್ನಕ । ಬಾೞ್ ಬಲಾನ್ವಿತನಾಗಿ ॥
ಬಾೞ ಬಾಣಾತ್ಮಸಂಭವೆಯಿಲ್ಲದಾನೊರ್ವ ಬಾೞೆನೆಂದನಿರುದ್ಧ ನುಡಿದ ॥

ಕಟಕಿಯ ಮಾತುಗಳೇಕೆ ಕನ್ಯಾಚೋರ । ದಿಟ ನೋಡು ನೋಡು [ನಿನ್ನೆರ್ದೆಯ ॥
ತಟಹಾಯಬೇಕೆಂದು ಮಸೆದ ಕೂರ್ಗಣೆಯನಾ । ರ್ಭಟದಿಂದಲಿಕ್ಕಿದರ್ [ಖಳರು ॥ ೨೭ ॥

ವೀರಾದಿ ವೀರರಕ್ಕಸರೆಚ್ಚ ಕೋಲ್ಗಳ । ಸೇರಲೀಸದೆ ಕಡಿದೊಡನೆ ॥
ಪೂರಾಯಗಾಯದಿಂದನಿಬರ ತಲೆಯ ಕೈ । ಹಾರದಿ ಹಾಱಲಿಕ್ಕಿದನು ॥ ೨೮ ॥

ತುಂಡುಗಳ್ ತುಟಿ ಬಿಚ್ಚೆ ಗಗನದೊಳ್ ಮಾತಾಡೆ । ಮುಂಡಗಳ್ ನೇ [ದೊಳು ಕುಣಿಯೆ ॥
ಕೊಂಡಾಡುತಿರ್ದುವು ಕುಶಲದಿ ಕುಸುಮಕೋ । ದಂಡಾತ್ಮಜನ ಪೌರುಷವ ॥

ಹೆಣಗಳುಕೊಂಡಾಡಿದಡೆಹಿಗ್ಗುವದೈಯರ್ । ಬಣಗನೋಡೆಂದಾಗ ದೈತ್ಯ ।
ಘನಮಂತ್ರಿ ಕುಂಭಾಂಡ ಬಿರುದಿನ ಬಿಲ್ಗಂಟೆ । ಘಣಿರೆನೆ ಕೊಂಡ ಕಾರ್ಮು [ಕವ ॥ ೨೯ ॥

ನೊಂದು ಮಂತ್ರೀಶನೆಂದಾಡುವ ಬಾಯಿಗು । ಕ್ಕಂದ ಬೀಯಗಪಿಕ್ಕಿದಂತ
ಬಂದು ಬಲಾಢ್ಯ ಕುಮಾರ ನಟ್ಟದಿರೊಳು । ನಿಂದ ನಿಶಾಚರ ನಗುತೆ ॥ ೩೦ ॥

ತರಳನೆಂದಾನು ಕೈಗಾದು ಬಿಟ್ಟಡೆ ರಣ । ದುರುಳತ್ವ ನಿನಗೆ ಸಿದ್ಧಿಪ್ರದೇ ॥

ಸರಳಗಳುಮನವರಾಂತು ಕೋಪದಿಂದು ಹೊಡೆವ ಕೆಂ । ಬೆರಲ ಕಂಧರವಾಲೆ
[ಜರಿಯೆ ॥ ೩೧॥

ಗಾಯವಡೆದ ಕುಮಾರನ ಕೋಮಲವೆತ್ತ । ಕಾಯದೊಳರುಣಾಂಬು
[ಸುರಿಯೆ ।
ಆಯತಾಕ್ಷಿಯರಿರ್ವರು ನೋಡಿದರು ತಮ್ಮ । ಬಾಯ ತಾಂಬೂಲವನುಗುಳ್ದು

ಸತ್ತನೆ ಶಿವಶಿವ ದೇಶಿಗನಾದನೆಂ । ದತ್ತರಿರ್ವರು ದುಗುಡದಲಿ ॥
ಚಿತ್ತಜನಾತ್ಮಸಂಭವ ಮೂರ್ಛೆದಿಳಿದೆ ಚ್ಛತ್ತನೊಂದರೆಗಳಿಗೆಯಲಿ ॥ ೩೩॥
ಆರೊಡನಾಡರಾಡುವ ಬಾಯಿಬಡಿಕ ಕು । ಮಾರನನ್ನೊಳು ಕೊಳ್ಳದೆನುತೆ ॥
ವೀರಾರ್ಭಟೆಯೊಳಬ್ಬರಿಸುತೆ ನಿಶಿತ ಕ । ಠೋರಬಾಣದೊಳಿಕ್ಕಿದನು ॥ ೩೪॥
ಹೂಡಿದ ಮೇಲೆ ಮೇಲೆಚ್ಚ ಕೂರ್ಗಣೆಯಿಂದೆ । ಸೀಳಿದ ದೈತ್ಯೇಶನೊಡಲ ॥
ಕಾಳಿಜ ಹಾಯ್ದೊಡೆ ಬರಿಯಲ್ಲಿ ಗಿಂಡಿಯ । ಜೂಳಿಯೊಳುಗಿದಂತೆ ರಕುತ ॥

ಆದುದು ಮರಣ ಮತ್ಪಿತನಿಂಗೆ ಹರಹರ । ಹೋದ ಜೀವವನಿಂದೊಮ್ಮೆ ॥
ಕಾದಡ ಕರುಣಾಕರ ಶಿವನೆಂದು ತ । ಳೋದರಿಯರು ಹೊಗಳಿದರು ॥ ೩೬॥

ಮಂತ್ರೀಶ ಗೇಡಿ ಮನ್ಮಥಕುಮಾರಕ ತನ್ನ । ತೊಂತಿದ ಖಳರನುತ್ತರಿಸಿ ॥
ಪಂತಿಯೊಳ್ ಕೆಡಹಲ್ಕೆ ಕುಂಭಾಂಡನ ಕೊಂಡು । ದಂತಿಗರಡ್ಡಯಿಸಿದರು ॥

ಇಕ್ಕೆಯ್ಯ ಮುಗಿದು ಕಾಳಗ ಬೇಡ ಹೋಗೆನು । ತೊಕ್ಕಣಿಸಿದರೊಪ್ಪ
[ಗೊಳದೆ ॥
ಕಕ್ಕಸದಿಂ ಕಾದಿ ಹಿಮ್ಮೆಟ್ಟ ಗಜಮುಖ । ವೊಕ್ಕಡೆ ಬಿಡೆನೆಂದ ನಗುತೆ ॥ ೩೮॥

ಸುಂಡಿಲವಾಳ ಸೂಸಿಗೆವೆತ್ತ ಶೃಂಗವೇ । ತಂಡಗಳುರವಣಿಸಲ್ಕೆ ॥
ಖಂಡಚಂದಿರಬಾಣದಿಂದೆಚ್ಚು ಕಡಿದ ಕೋ । ದಂಡಶಿಕ್ಷಾದೀಕ್ಷಿತನು ॥ ೩೯॥

ಬಿಡೆಯವಿಲ್ಲದೆ ವಜ್ರದಂಡೆಯೊಳ್ ಸೆಣಸಿದ । ರೊಡೆಯದಿರ್ದಪುದೆ ಕುಂ
[ಭಾಂಡ ॥
ಪಡೆ ಮುರಿದೋಡಿತೆನುತ ಹೆಕ್ಕಳಿಸಲು । ನಡೆಗೊಂಡುದಾನೆಯ ಪೌಜು ॥ ೪೦॥

ಪಿತಜವೆರ್ಮೆ ಮಧ್ಯಾಹ್ನಸೂರ್ಯನ ಜೇ ಮೂತವೆ ಮುತ್ತಿಕೊಂಡಂತೆ ॥
ಆತನ ಶರಕಿರಣಗಳಿಂದೆ ಮದಗಜ । ವ್ರಾತ ನುಗ್ಗಾದುದಾಕ್ಷಣದಿ ॥ ೪೧॥

ರಣಭೀತಿಯಾದುದೂರೊಳಗೆ ಹೊತ್ತಡಕುವ । ಹೆಣ ಲೆಕ್ಕವಿಲ್ಲಗಾಯದಲಿ
ನೆಣನೆತ್ತರೊಳು ಬಿದ್ದು ಮಿಡುಕುವ ಮತ್ತವಾ । ರಣತುಂಡ ಮುಂಡಗಳಿಂದೆ ॥

ಅೞಿದ ರಕ್ಕಸರುಗಳೊಳಗುೞಿದೊರ್ವನು ಒಲಿಜನ ಬೞಿಗೆ ಭೀತಿಯಲಿ
ಚಳಿವೆತ್ತು ನಡುಗುವಂದದಿ ಪೇೞ್ದ ರಣದು|ಮ್ಮಳಿಕೆಯ ಒಹಳನಿಪ್ಪುರವ ||
ವರಮೋಹನತರಂಗಿಣಿಯೆಂಬ ಕಾವ್ಯವ|ಬರೆದೋದಿ ಕೇಳಿದ ಜನರ ||
ತರಣಿಚಂದ್ರಮರುಳ್ಳನ ಕ ಸತ್ಕೃಪೆಯಿತ್ತು|ಪೊರೆವ ಲಕ್ಷ್ಮೀಕಾಂತಬಿಡದೆ||

ಅಂತು ಸಂಧಿ ೩೪ ಕ್ಕಂ ಪದ ೨೨೪೯ ಕ್ಕಂ ಮಂಗಳಂ

## ಮೂವತ್ತೈದನೆಯ ಸಂಧಿ

ಬಾಣಾಸುರಾನಿರುದ್ಧರ ಜಗಳ ---

ಭೂನಾಥ ಸಭೆಯಲಿ[1] ದ್ರುಪದನಂದನೆಯಭಿ|ಮಾನವ ಕಾದ ಶ್ರೀಹರಿಯ||
ಧ್ಯಾನವ ಮಾಡಿ ಸತ್ಕೃತಿವೇೞ್ವ ಪರಮಾಭಿ|ಮಾನವ ಕೇಳಿ ಹಿಗ್ಗುವೆನು||೧||
ನೋಡಲು ರೂಪ್ರಜವ್ವನವೆತ್ತ ಹೆಂಗಳ|ಚೂಡಾಮಣಿ ನಿನ್ನ ಕಿವಿಗೆ ||
ಪೀಡಾಪರಿಹಾರವೆನಲುಸಿರುವೆ ಜಡ|ಮಾಡದೆ ಕೇಳು ಮತ್ಕೃತಿಯ ||೨||
ಮೀನಾಂಕನಾತ್ಮಸಂಭವ ಬೀೞುಕೊಟ್ಟನು ಸೇನೆಯ ಸುರನಗರಕ್ಕೆ ||
ಆನೆಯ ಕೆಡಹಿ ಕೆನ್ನೀರಾಡುತ್ತೈದಾನೆ|ನೀನೋಡಬೇಕೆಲೆ ಜೀಯ ||೩||
ಕುಂಭಾಂಡಮಂತ್ರಿಶೇಖರ ಮುಖ್ಯ ದೈತ್ಯರ್ಗೆ|ಚೆಂಬೊಣ್ಣವನುಡಿಸಿದನು||
ಮುಂಬರಿವದಟರ್ಗೆ ಕೈವರ್ತಿಸಿ ಕೊಟ್ಟ ರಂಭಾದಿ ಸುರನಾರಿಯರ ||೪||
ಹೆಣ್ಣ ಭೋಗಿಸ ಬಂದವನಲ್ಲ ಕದನವ|ಹಣ್ಣಲೋಸುಗ[2] ಬಂದವನು ||
ಬೆಣ್ಣನ ದಾರಿಗಂಜುವನಲ್ಲ ಕಳನ ಮು ಕ್ಕಣ್ಣ ನೀ ಬಯಸಿರೆ ಜಯಿಸು|೫||
ಹಗೆಯ ಕೊಂಡಾಡುವ ಬಗೆಯಾವುದೆಂದು ನಾ|ಲಗೆಯ ಕಿೞ್ತಿಸಬೇಡನಮ್ಮ||
ಹೊಗೆ ಸುತ್ತಿದುರಿಯಂತೆ ಮಿಗೆ ಪೆರ್ಚಿತವನ ವೆ|ಗ್ಗಳದ ಪ್ರತಾಪಾಗ್ನಿ
[ಜೀಯ ||೬||

ಕ. ಪ. ಅ.—1. ದುರ್ಯೋಧನ ಸಭೆಯಲ್ಲಿ. 2. ಮಾಡುವುದಕ್ಕಾಗಿ.

ಕೊಂಡಾಡ ಬಪ್ಪುದು ಒಡವನೆ ಬಂದವ। ಪುಂಡರೀಕಾಕ್ಷನ ಪೊಮ್ಮ ||
ಕಂಡುದನಾಡಲು ನಿನಗಹುದಲ್ಲೆಂದು । ಚಂಡವಿಕ್ರಮವೀರ ನುಡಿದ ||೭||
ಕಾಳಗ ತನಗಿಲ್ಲವೆಂದು ಚಿಂತಿಸಲಾಗಿ । ಫಾಳಾಕ್ಷ ಕೃಪೆಮಾಡಿದಡೆ ||
ಕೋಲಾಹಲವೆತ್ತು ಕಾದದಿರ್ದಡೆ ತನ್ನ ತೋಳೆರಡ್ಯೆನೂಱದೇಕೆ ||೮||
ಪ್ರಕಟತಕೋಪದಿಂ ತರಿಸಿದನುಗ್ರಕಾ। ರ್ಮುಕ ಬಾಣಬತ್ತಳಿಕೆಗಳ ||
ಸಕಲಸನ್ನಹವೆತ್ತು ಖಳಶಿರೋಮಣಿ ಕುಮಾ। ರಕನೊಳು ಸಮರಕೆ ತೆರಳ್ದ
ಬಾಣಾಸುರ ಬರ್ಪಸಮಯಕ್ಕೆ ನವ ಪಂಚ। ಬಾಣಹರ್ಮ್ಯವನಡರ್ದೊಡನೆ
ಬಾಣನಂದನೆಯು ಕುಸ್ತರಿಸಿ ಬಂದನು ಬಿಲ್ಲ। ಬಾಣ ಜತ್ತಾಯತವಡೆದು||೧೦||
ನೀರಜದಳನೇತ್ರೆಯು ಮೇಲಣಭ್ರಾಂತಿ ವೀರವಧೂಟಿಯೊಳ್ ಪೇಱದು
ಆರ ಲೆಕ್ಕಿಸದೆ ಬಂದನು ಕುಮಾರಕ ಕಂ ರೀರವ । ಬಾಗಿಲ ಒಳಗೆ ||೧೧||
ಚೂಣಿಯೊಳ್ ಬಂದು ತಾಗಿತು ಬಿರುದಿನ ಭಟ ಶ್ರೇಣಿ ಕುಮಾರನಮೇಲೆ||
ಹೂಣಿಸಿ ಕೂರ್ಗಣೆಯಿಂದೆಚ್ಚು ಬಱಗಾಯ ಗಾಣಿಸಿದರು ತಿನ್ನೆನುತೆ||೧೨||
ಸೆಡೆಮುದೆ ಸಿಂಹನಾದವ ಮಾಡಿ ಕೋಲ್ಗಳ। ನೆಡೆಯಲ್ಲಿ ಕಡಿದವರುಗಳ||
ಪೊಡೆಯೊಳಗೊಂದಕೆಂಟೆಂಟು ನಾಟಿಸಿ ಬಂದ । ಪಡೆಯುಸಿಕ್ಕಿದ ರಣಬಲಿಯು ||
ತರಳನ ಕೂರ್ಗಣೆಯಿಂದೆ ದೈತ್ಯರ ನಿಡಿ। ಗರುಳೊಡೆ ಹಾಯ್ದು ಕುಪ್ಪಳಿಸಿ ||
ಕೊರಲರೆಗಡಿದು ಕತ್ತರಿಸಲು ತಲೆ ಬಿದ್ದು। ಹೊರಳಲು ಭೀಕರವಾಯ್ತು ||
ಮೆಟ್ಟಿದ ಕಾಲ್ದೊಡಕಿನ ಕರುಳ್ಗಳ ಕಿ। ಗ್ಗಟ್ಟಿನ ಸುರಗಿಯೊಳ್ ಕೊರೆದು
ಅಟ್ಟೆರಿಯಲ್ಕೆ ಬಪ್ಪುದ ಕಂಡು ತಲೆಗಳ। ಕುಟ್ಟಿ ಕಳುಹಿದನು ಕುಮರ||೧೪||
ಉಡಿದುದುರಿದ ಮಸ್ತಕವ ಕರಾಗ್ರದಿ ಪಿಡಿದು ಮಟ್ಟವ ಕಿತ್ತುಕೊಂಡು||
ಅಡಿಯಿಟ್ಟು ನಡೆವಡೆ ಕಂಡು ಕುಮಾರಕ । ಕಡಿದಿಳುಹಿದನು ಕೈದಲೆಯ ||
ರಣಮಾರ್ಗದಿ ನಿಖಿಳಾಯುಧವೇಱಿನ ಬಣಗುಗಳ್ ಬಂದು ತನ್ನೊಡನೆ||
ಸೆಣಸಲು ಕೂಗೋರ್ಲಗಾಱ ಸುಂಕಕೆ ತಲೆ। ವಣಗೊಂಡು ಬಿಟ್ಟರೆಲ್ಲರನು ||
ದೊಡ್ದಿಗರೇಕೆ ಹೊಕ್ಕರು ಕೊಲ್ಲುಕೊಲ್ಲೆಂದು । ಹೆದ್ದೊರೆ ದೈತ್ಯರೆ
[ಯ್ದಿದರು ||

---

ಕ ಪ ಅ 1 ಕುಮಾರ ಶ್ರೇಷ್ಠ, ಸಿಂಹ, ಶಾರ್ದೂಲ, ನಾಗ ಮುಂತಾದ ಪದಗಳನ್ನು ಉಪಯೋಗಿಸಿದರೆ ಶ್ರೇಷ್ಠವಾಚಕ, " ಸಿಂಹಶಾರ್ದೂಲನಾಗಾದ್ಯಾಃ ಪುಂಸಿ ಶ್ರೇಷ್ಠಾರ್ಥವಾಚಕಾಃ " ಅಮರ 2. ಗುಂಪುಗಾರರು

ಮದ್ದಾನೆಗೆ ಸಿಂಹ ಮಲೆತಂತೆ ಸುಭಟಾನಿ|ರುದ್ಧ ನಿಂದಿರ್ದ ಭೀತಿಸದೆ||೧೮||

ಕೂಗಿ ಬೊಬ್ಬಿರಿದರುಬ್ಬರ ಸಿಡಿಲ್ಕೋಟಿಜೊ | ತ್ತಾಗಿ ಗರ್ಜಿಸುವಂತೆ [ಖಲರು ||
ಬಾಗಿಲ ಬಿಲ್ಗೋಲ ಕಿವಿವರೆದೆಗೆದಿಕ್ಕ | ತಾಗಿದ ನವ ಪುಷ್ಪಶರನ ||೧೯||

ನಿಖಿಲರಾಕ್ಷಸರಾಯುರುಗಳೆಚ್ಚ ವರಶಿಳೀ|ಮುಖ ಬರೆ ಕಂಡುಖಾತಿಯಲಿ
ವಿಕಸಿತ ಕೆಂಡಸಂಪಗೆಯ ಸುವರ್ಣಸಾ|ಯಕದಿಂದ ಸಮತಳಿಸಿದನು||೨೦||

ಅಜವಿಂಡ ಹೊಕ್ಕ ಹೆಬ್ಬುಲಿಯಂತೆ ಸೊಕ್ಕಿದ|ಗಂಜವಿಂಡ ಸಿಂಹ ಹೊಕ್ಕಂತೆ
ಭುಜಗಸಮೂಹವ ಖಗರಾಜಹೊಕ್ಕಂತೆ ಕುಜನರ ಕುಟ್ಟಿಹಾಯ್ದಿದನು ||

ಕಂಧರಗಡಿ ಬಾಹುಗಡಿ ಹಸ್ತಗಡಿ ನೇ | ರಂದದ ನಡುತೊಡೆಗಡಿಯ ||
ವೃಂದಾರಕವಿರೋಧಿಗಳು ಬಿದ್ದರು ಕಾಮ|ನಂದನ ಬಾಣಗಳಿಂದೆ ||೨೨||

ಕರತಾವರೆ ಕರುಳ್ವಳ್ಳಿ ತೋಳ್ದರೆ ಪಯೋಧರ ಮೀನು ಗಜತುಂಡು [ಮೊಸಳೆ ||
ನೊರೆತ ರೋಹಿತ ಫೇನ ಕಡಿವಲೆ ಕಮಠ ಸಂ|ಗರವಿದ್ದುದಂಬುಧಿಯಂತೆ ||

ಖಾತಿಗೆಟ್ಟುದು ಬಲಾಢ್ಯರು ಕಾಮಸುತನಡ್ಡ ವಾತಿನ ಕೋಲ್ಗಳು [ಬ್ಬಟೆಗೆ ||
ಭೀತಿಸಿ ಹಿಮ್ಮೆಟ್ಟಿ ಸಾರ್ದರು ರಣರಂಗ|ನೀತಿ ಬಾಹಿರರಾದೆವೆನುತೆ ||೨೪||

ತಲ್ಲಣಿಸುವ ಸೇನೆಗಭಯವನಿರದೀಯು ತೆಲ್ಲರ ಪಿಂತಿಟ್ಟುಕೊಂಡು ||
ಫುಲ್ಲಶರಾತ್ಮಸಂಭೂಳೆನುತಾಹವ | ಮಲ್ಲ ಬಾಣಾಸುರ ನಡೆದ ||೨೫||

ತೊಡೆಗಿಕ್ಕಿ ಸಿಂಜಿನಿಗೊಳಿಸಿ ಕಾರ್ಮುಕವ ಜೇ ವೊಡೆಯಲಾನಿಪ್ಪುರ [ಧ್ವನಿಗೆ ||
ಹೊಡೆಗೆಡೆದುವು ಸಪ್ತಶರಧಿಗಳೆಣೆಜರಿ|ದೊಡಗುಡಿದುವು ಕುಲಶೈಲ ||೨೬||

ಅದ್ದಳವೆದ್ದುದಂಬುಧಿ ಗಗನದೊಳದ್ದು | ಬಿದ್ದುವು ನಕ್ಷತ್ರನಿಚಯ ||
ಎದ್ದುವು ಧೂಮಕೇತುಗಳು ಬಾಣಾಸುರ ನದ್ದರಿಸಲು ಕುಮಾರಕನ||೨೭||

ವಿನಯದಿ ಮಾತಾಡು ಖಳರಾಯ ನಿನ್ನಯ|ತನಯಳಿಗೋಸುಗ ಬಂದ||
ಮನೆಯುಳಿಯನ ಕೂಡೆ ಮಚ್ಚರವೇಕೆಂದು|ನನೆಗೋಲನಾತ್ಮಜ ನುಡಿದ ||
ಅಳಿಯ ನೀನೆಂತಾದೆ ಮಗಳನಾರಿತ್ತರು|[1] ಶಿಳೀಮುಖದಿಂದ ಗೆಲ್ದೆನಲು||

---

ಕ. ಪ. ಅ.—1, ಭಾಣ,

ಹಿಳುಕಿಂಗೆ¹ ಹಿರಿಯರ ಹಸ್ತ ಮುಂಚಿದ ಮೇಲೆ ಒಟೀಕನ್ನ ಕೆಯ್ಯ [ನೋಡೆಂದ ||೨೯||

ಎಂದಡೆ ಕಾಮುಕೊಳ್ಳುತ ಕರ್ಣಾಯುತ ದಿಂದೆ ಕೂರ್ಗಣೆಯೊಳಿಕ್ಕಿದನು||
ಬಂದುವು ಶರ ಕುಮಾರನ ದಿವ್ಯದೇಹಸು । ಗಂಧಕೆ ಭ್ರಮರಾಳಿಯಂತೆ ||
ಹೊದ್ದಲೀಯದೆ ಬಾಣಂಗಳ ತರಿದನಿ ರುದ್ಧ ಮಾತುಲನ² ಕೋಂಡಾಡಿ||
ಉದ್ದಂಡ ಬಾಣದಿಂದೆಚ್ಚನು ಸುಭಟಪ್ರ । ಸಿದ್ಧ ಬಾಣಾಸುರನದೆಯ । ೩೧||

ಪೇರುರದೊಳಗುರ್ಚಿ ಹಾಯ್ದುವೆಂದೆಂಬ ಕ ಠೋರಕೂರ್ಗಣೆಯ [ಕತ್ತರಿಸಿ ||
ವೀರರ ದೇವ ನೋಡೆನುತೆಚ್ಚ ಮಾರಕು । ಮಾರನ ಮೇಲೆ ಜೊಬ್ಬಿರಿದು||
ನೂತನ ಕಂದರ್ಪನೊಡಲು ನಿಶಾಚರ ಸಾಧನ ಕೂರ್ಗಣೆಯಿಂದೆ ||
ತಾತಾತೂತಾದುದೆನೆ ಸವರಿದ ಶರ । ವ್ರಾತವ ಕೈಚಳಕದಲಿ ||೩೩||

ವೀರನದೇನು ಸಮರ್ಥನೊ ತನ್ನ । ನೂರಂಬನೊಂದು ಬಾಣದಲಿ ।
ಹಾಇಲಿಕ್ಕಿದನು ಪೇರುರದಲ್ಲಿ ಮುಳುಮೊನೆ । ದೋರ್ಲೆಚ್ಚಾಡುವನಹುದೋ
ವಿಸ್ತರಿಸುವರೆ ಸಾಸಿರತೋಳು ನನಗುಂಟು ದುಸ್ತರ ಕರಯುಗ್ಮದಲಿ
ವಿಸ್ತರಿಸುವುದಚ್ಚರಿಯೆಂದು ಸಮರಪ್ರ ಹಸ್ತಮಲ್ಲನ ಕೀರ್ತಿಸಿದ ।೩೪||

ಬಾಲ ನೀನೋಡು ನೋಡೆಲೊ ರಣರಂಗ ಸ|ಲೀಲ ನೀ ನೋಡು [ನೋಡೆಲವೊ ||
ಕಾಲಭೈರವನ ಕೈಚಳಕವನೆಂದಲ ಗೋರ್ಗಲನ ಮಗನಸಿಕ್ಕಿದನು ||೩೬||

ರಕ್ಕಸನಂಬುಗಳ್ ಕಡೆವಟ್ಟುಕೆಡೆದುವು ಮಿಕ್ಕ ಕೆಂಗರಿಗೋಲ್ಗಳೊಡಲ
ಹೊಕ್ಕಮಾತ್ರದಪೊಱಟೆದೆಯಲ್ಲಿ ರಕುತವ ಮುಕ್ಕುಳಿಸಿತುಕೇಳುಕಾಂತೆ||
ಸಂಕನಧಟ ಸಾಸಿರಬಾಹು ಪಿತನೆನ್ನ । ಕಿಱುಕಾಂತನೊಳು ಕಾದುತಿ [ಹನು ||
ಇಱಿದುಕೊಂಡರೆ ಹೊಟ್ಟೆ ತಿವಿದುಕೊಂಡರೆ ಕಣ್ಣು । ಮುಱುಕ ಮನ್ಮನವ [ಭಂಗಿಸಿತು ||೩೮||

ಆಯತಾಕ್ಷಿಯರಿರ್ವರು ದುಃಖವಡಲಿತ್ತ ಕಾಯಜ³ವರ ಕುಮಾರಕನು

---

ಕ ಷ ಅ—1 ಭಾಣದ ಅಡಿಗೆ 2 ಮಾವನ 3 ಮನ್ಮಥ

ಗಾಯದೆ ಮನಮೂರ್ಛೆ ತಿಳಿದೆದ್ದು ರಕ್ಕಸ । ರಾಯನನೆಚ್ಚು ಬೊಬ್ಬಿಱಿದ ॥
ವಜ್ರದುಂಬಿಗಳು ಹೆಬ್ಬಿದಿರನು ಕೊರೆವೊಡೆ । ಯುಜ್ಜುಗವೆತ್ತ ರೀತಿಯಲಿ ॥
ನಿರ್ಜರವೈರಿಯ ನಿಡುದೋಳ ಶಿಳೀಮುಖ । ವೆಜ್ಜವ ಮಾಡಿ ತೋಱಿದುದು ॥
ಮುತ್ತುಗ ನಿಡುಗೊನೆ ನಿಕರ ಹೂವಾದಂತೆ ನೆತ್ತರ ಬಣ್ಣ ತೋಱಿಸಲು
ಚಿತ್ತಜನಾತ್ಮಸಂಭವನ ಕೀರ್ತಿಸಿದಖಿ । ಳೋತ್ತಮಾ ಕಡುಮೆಚ್ಚಿ ನಗುತ ॥
ಹುಡುಗರು ಮುಱಿದಿಕ್ಕಿ ತಿಂಬರು ನಿಮ್ಮಪ್ಪ । ಹಿಡಿವ ಕಬ್ಬಿನ ಕೋಲು [ಬಡವೆ ।
ತೊಡಿಗೆಯಿಂದೊಪ್ಪುವ ಸೂಳೆಯ ತುಱುಬಿಂಗೆ । ಮುಡಿವ ಪೂಗೋಲ್ಗಯ್ಯ [ಭಟರು ॥ ೪೦ ॥

ಸೂಳೆಯ ತಣ್ಗೋಲಿಗೆ ಭೀತಿಸದ ಕಟ್ಟಾಳಾರು ಬೀಯಗತನದೆ ॥
ಆಳವಾಡಿದಿರಿ ಮತ್ಪಿತನಲಗೋರ್ಗಲಿಂದೆ ಭಾಳಾಕ್ಷ ತಪಗೆಟ್ಟನಱಿಯಾ ॥
ಕಿಡಿಗಣ್ಣ ನಿತ್ತ ಮಂತ್ರಾಸ್ತ್ರವ ಕೂರ್ತರ್ಗೆ ಕೈ । ದುಡಿಕಿ ಮೂಡಿಗೆಯಿಂದ [ಲುಗಿದು ॥
ನುಡಿದು ಕಲ್ಪಾಸನಾಧೀಶದಿ ಶತಕೋಟಿ । ಸಿಡಿಲಿನ ಬೊಬ್ಬೆಯಬ್ಬರದೆ ॥
ಓಗರದೆಸಱಂತೆ ಕುದಿಗೊಂಡುವು ಸಪ್ತ । ಸಾಗರ ಮೇರು ತಲ್ಲಣಿಸೆ ॥
ಕೂಗಿದುವಿರದೆ ದಿಗ್ಗಜ ಕೂರ್ಮನ ಬೆನ್ನು । ನಾಗನ ಹೆಡೆಯುಡುಗಿದುವು ॥
ಚೇತನಗುಂದಿ ನಿರ್ಜರರು ಕಣ್ಗೆಟ್ಟರು । ತ್ಪಾತಮಾರ್ಗಣದಿಂದೆ ದೈತ್ಯ ॥
ಪೀತಾಂಬರನ ಮೊಮ್ಮನನೆಚ್ಚು ಕೆಡಹಿದ । ಭೂತಲ ತಿಱ್ರನ ತಿರುಗೆ ॥
ಜತನ ತಪ್ಪದೆ ಕಾರ್ಮುಕಬಾಣಕರ್ಣಾ । ಯತವೆತ್ತು ದೃಢಮುಷ್ಟಿಯಲಿ ॥
ಮಥನಕ್ಕೆ ಮಂಡಿಯ ಹೂಡಿದಂದದಿ ಮೂ । ರ್ಛಿತನಾದ ಕಾಮಕುಮಾರ ॥
ನುಡಿದುವು ದೇವದುಂದುಭಿ ದೈತ್ಯನ ಸಿರಿ । ಮುಡಿಯಲ್ಲಿ ಹೂಮಳೆ [ಗಱೆಯೆ ॥
ಕುಡಿವರಿದದಟಾಂತು ಸಾಸಿರ ತೋಳಿಂದ । ಹಿಡಿದನು ರಣಭೈರವನ ॥
ದಂಡೆಯ ಮುರಿದಂತೆ ಬಳೆದಿರ್ದ ಕಮರ್ಗಸೆ । ಖಂಡೇಂದು ಭಾಳ ಕಸು [ರಿಯ ॥
ಬೆಂಡೆದ್ದ ದ್ಯುಗ್ಯುಗಳದ ಮೂರ್ಛೆಯ ಸುಪ್ರ । ಚಂಡನ ಮೊಗವ ನೋಡಿದನು

---

ಕ. ಪ. ಅ— 1 ತೂತು.

ಕೊಂದಡೆ ಮಗಳಿಂಗೆ ವೈಧವ್ಯವಹುದೆಂದು|ಕಂದರ್ಪನಾತ್ಮಸಂಭವನ ||
ಸುಂದರಮಯದಿವ್ಯದೇಹ ಕೂರ್ಗೋಲಿಂದೆ ನೊಂದಿರೆ ಮೆಯ್ದಡವಿದನು
ಉಪ್ಪರಿಗೆಯೊಳಿರ್ದು ನೋಡಿದಳ್ ಕುವರಿ ತ|ಮ್ಮಪ್ಪನ ಕೆಯ್ಯೊಳಗಾಗಿ||
ದಪ್ಪಗನಣುಗನು ಸಿಕ್ಕಿದನಾಯೆಂದು | ತೊಪ್ಪನೆ ಬಿದ್ದಳುರ್ವಿಯಲಿ ||೫೧||

ಬಾಲೆಯರುಗಳು ಬೊಬ್ಬಿಡಲು ಗೋಪುರದಗ್ರ|ಶಾಲೆಯ ರೋದನಗೇಳಿ
ಲೀಲೆಗಾಱನ ಕೊಲ್ಲುವುದಿಲ್ಲೆಂದು ದುಃಖದ | ಶೀಲೆಗೆ ಮಾತನಟ್ಟಿದನು ||

ಇವನ ಪ್ರಾಣಗಳಿಗೆ ತಪ್ಪಿದೆನಾದರೆ | ಶಿವನ ಪಾದಗಳಾಣೆಯೆನುತೆ ||
ಧವಳಸರೋಜಾಕ್ಷಿಗೆ ನಂಬುಗೆಗೊಟ್ಟು | ಕುವರನನೊಡಗೊಂಡು ಬಂದ

ಸವನಾಂತರ ಸಿಂಹಪೀಠದೆ ಕುಳಿತ ನಾ | ರದನಿರೆ ತಂದು ತೋಱಿಸಿದ ||
ಮದನಕುಮಾರನಿಗೇನ ಮಾಡುವುದೆಂದು | ಹದನ ಕೇಳಿದ ಮುನಿವರನ ||

ಪೇಳಲಾನೊರ್ವ ಸಮರ್ಥನೆ ಬಾಗಿಲೊಳ್ | ಭಾಳಾಂಬಕನಿರಲಾಗಿ ||
ಕೇಳಬೇಕಾತ ನಿರೂಪಿಸಿದಡೆ ಗ | ಯ್ಯಾಳನ ಶಿಕ್ಷಿಪ್ಪುದೆಂದ ||೫೫||

ಹಾಗಾಗಲೆನುತೆ ರಕ್ಕಸರಾಯ ಕರೆಸಲು | ನಾಗಕಂಕಣನೈತಂದ ||
ಪೂಗೋಲನಾತ್ಮಸಂಭವಗೇನ ಮಾಱ್ಪುದೆಂ | ದಾಗ ಕೇಳಿದ ಪುರಹರನ ||

ಆಳೋಚನೆಗೆಯ್ಯಲೇಕೆ ಸಾಸಿರ | ತೋಳ ಬಲ್ಪೊಳಗೆನ್ನ ಭಜಿಸಿ ||
ಕಾಳೆಗ ಬೇಕೆನೆ ಬಂದುದು ಸಮರಸ | ಮ್ಮೇಳವೆಂದನು ಶಿವ ನಗುತೆ ||

ಇದಿರಿಲ್ಲವೆನಗೊರ್ವರೆನಲಾಗಿ ಕರುಣಾ|ನಿಧಿಯಿದ ತಂದು ತೋಱಿಸಿದೆ||
ಉದಿಸಿದ ತೋಳ ಬಲ್ಪಲಿ ಕಾದೆ ನಿಮ್ಮವ|ಹದಿನಾಱು ಮೆಚ್ಚ ಮೆಚ್ಚಿಸುವೆ

ಅಂಡಲೆದೆನ್ನ ಕೇಳುವುದೇನು ಪ್ರಸ್ತ ನೀ|ಕೊಂಡ ಕಾರಿಯವೆನ್ನ ಕೆಲಸ ||
ಚಂಡವಿಕ್ರಮ ನೀನೊಲಿದಂತೆ ಮಾಡೆಂದು | ಖಂಡೇಂದುಶೇಖರ ನುಡಿದ||

ಈತನ ಹಿಡಿದು ಬಂಧಿಸಲಾಗಿ ಯದುಕುಲ | ನಾಥ ನಾರಾಯಣಬಹನು||
ಆತನೊಳ್ ಕಾದಿ ಜೈಸುವೆನೆಂದು ಖಳರಾಯ|ಭೂತೇಶನೊಡನೆ ಪೇಱಿದನು

ಭಕ್ತಿಯೊಳೆನ್ನನಾರಾಧಿಸಿ ನಾಲ್ವಗೆ| ಮುಕ್ತಿಯ ಪಡೆದವನಲ್ಲ ||
ಶಕ್ತಿಯೊಳ್ ಕಾಳೆಗ ಬೇಕೆಂಬ ಸಮರಸ | ದುಕ್ತಿಯ ನೀಬಲ್ಲೆ ಮಗನೆ ||

ತ್ರಾಣಿ ನೀನಹುದು ರಕ್ಕಸರಾಯನಿಗೆ ಚಕ್ರ | ಪಾಣಿ ಸಾಧಾರಣನಲ್ಲ||
ಕ್ಷೋಣಿಯೊಳಾತನ ಗೆಲ್ಲುವರಿಲ್ಲೆಂದು | ಕಾಣಿಸಿ ಮಾತನಾಡಿದನು ||೬೨||

ಶಂಕರ ಸರ್ವೋತ್ತಮ ಘೋರದುರಿತಭ| ಯಂಕರ ನಿಮ್ಮ ಸಮ್ಮುಖದೆ
ಪಂಕರುಹಾಕ್ಷನ ಗೆಲ್ಲದಿದ್ದಡೆ ನಿಮ್ಮ | ಕಿಂಕರನಲ್ಲೆಂದು ನುಡಿದ ||೬೩||
ಸ್ವಾಮಿ ಸರ್ವಜ್ಞಶಿರೋಮಣಿ ಸಮರಕ್ಕೆ|ನೇಮಿಸಿ ನುಡಿದು ತಪ್ಪುವರೆ||
ಗೋಮಿನೀವರನೊಳು ಕಡಿದಾಡಿ ಕೈಲಾಸ|ಭೂಮಿಗೆ ತಾ ಬಪ್ಪೆನೆಂದ ||
ಬೇತ ಬೇಕೆಂದು ವಿಸ್ತರಿಸಿದೊಡಸುರರ | ಚೂಡಾಮಣಿ ಕೇಳ್ವನಲ್ಲ||
ಮಾಡಬೇಕಾದುದೆಲ್ಲವ ಮಾಳ್ಪುದೆಂದೀಶ | ಬೀಡಾರಕೆ ಸಾಗಿದನು ||೬೫||
ಅಂಗಜನಾತ್ಮಸಂಭವನ ಮೋರೆಯನೋಡಿ | ಕಂಗೆಡಬೇಡೆಂದು ದೈತ್ಯ||
ಮಂಗಳವಸ್ತ್ರಾಭರಣ ಮಾಲ್ಯಾನುಲೇ |ಪಂಗಳ ಕೊಟ್ಟು ಮನ್ನಿಸಿದ ||೬೬||
ಸೆಡೆಯದೆ ಸಮರಸ್ಥಳದಲ್ಲಿ ದೈತ್ಯರ | ಪಡೆಯನೆಲ್ಲವ ಗೆಲ್ದುದಕೆ ||
ಬಿಡಯವಿಲ್ಲದೆ ಮೆಚ್ಚಿ ವಜ್ರಶೃಂಖಲವೆಂಬ | ಕಡಗವ ಕಾಲ್ಗಿಡಿಸಿದನು ||
ಕಂಡ ನಾರದಮುನಿ ಕಮನೀಯಕುಸುಮಕೋ | ದಂಡನಾತ್ಮಜನ [ಪ್ರಾಪ್ತಿಯನು ||
ಮಿಂಡಗಾಡಿಕೆಯಲ್ಲಿ ಗಳಿಸಿದ ಸೌಖ್ಯವ|ನುಂಡಲ್ಲದೆ ತೀರದೆಂದ ||೬೮||
ಈಶಪಾದಾಂಬುಜಮಕರಂದಭೃಂಗ ಬಾ| ಣಾಸುರ ನಿನ್ನ ಪ್ರತಾಪ ||
ಲೇಸಾದುದೆಂದು ನಾರದಮುನಿ ಪರಮಸಂ ತೋಷದೆ ಕೊಂಡಾಡಿದನು||೬೯||
ವೃದ್ಧಶ್ರವ ಮುಖ್ಯಸಿಖಿಳನಿರ್ಜರೊಳು|ನಿರ್ದಾಕ್ಷಿಣ್ಯರು ನಾವು ||
ಇದ್ದುದ ನುಡಿದರೆ ಕೋಪಿಸಬೇಡೆಂದು|ಮುದ್ದಾಡಿ ಬೀಳ್ಕೊಂಡ ಮುನಿಪ||
ಬಾಗಿದ ಬಾಣಾನಿರುದ್ಧನ ನೆಗಳಿದ|ಯೋಗೀಶ ಹರಕೆಯನಿತ್ತು ||
ವಾಗಿನೊಳಚ್ಯುತ ಹರಿಯೆಂದು ಖಗವೇಗ | ಸಾಗಿದ ದ್ವಾರಾವತಿಗೆ ||೭೦||
ವರವೋಹನತರಂಗಿಣಿಯೆಂಬ ಕಾವ್ಯವ| ಬರೆದೋದಿ ಕೇಳಿದ ಜನರ ||
ತರಣಿಚಂದ್ರಮರುಳ್ಳನಕ ಸತ್ಕುಲವೆತ್ತು|ಪೊರೆವ ಲಕ್ಷ್ಮೀಕಾಂತ ಬಿಡದೆ||

ಅಂತು ಅಧ್ಯಾಯ ೩೧ ಕ್ಕಂ ಪದ ೨೩೨೧ ಕ್ಕಂ ಮಂಗಳಂ

# ಮೂವತ್ತಾರನೆಯ ಸಂಧಿ

ಗರುಡನ ಸಂಧಿ—

ಪಾಕಶಾಸನ ಮುಱಿಗಱಿಯಲು ಗಿರಿಯೆತ್ತಿ । ಗೋಕುಲವನು ನೆರೆ ಕಾದ ॥
ಕೋಕನದಾಕ್ಷನ ಬಲಗೊಂಡು ಕೃತಿವೇಳ್ವ । ಸಾಕೆನಿಸದು ಯೆನ್ನ ಕಿವಿಗೆ ॥

ವಿಜಾಣೆವೆಣ್ಣುಗಳರಸಿ ನೀ ಕೇಳು ಸ । ರೋಜಾಂಬಕನ ಸತ್ಕೃತಿಯ ॥
ರಾಜಾಮೃತವನೆ ರುಚಿಮಾಡಿ ತವಕರ್ಣ । ಭಾಜನ[1]ದೊಳಗೆ ತುಂಬಿಸುವೆ ॥

ಅಂತರಿಕ್ಷದಲಿ ನಾರದಮುನಿವರ ನಿ । ಶ್ಚಿಂತ ಹಂಸಾರೂಢನಾಗಿ ॥
ಸಂತೋಷದೆ ಬಂದು ದ್ವಾರಕಾಪುರದೆ ಶ್ರೀ । ಕಾಂತನ ಕಂಡ ಕೇಳ್ ಕೆಳದಿ

ವರರತ್ನಮಂಟಪಮಧ್ಯದ ಸಿಂಹವಿ । ಷ್ಟರದಲ್ಲಿ ಶ್ರೀಕೃಷ್ಣರಾಯ ॥
ಪರಮೈಶ್ವರ್ಯದಿಂದೊಪ್ಪಿದ ಸೋಳಸಾ । ಸಿರವೆಂಗಳೊಡ್ಡೋಲಗದೆ ॥

ಪಟ್ಟದ ರಾಣಿ ರುಕ್ಮಿಣಿದೇವಿ ಬಲದಲ್ಲಿ । ಕಟ್ಟಾಯ[2]ವೆತ್ತು ನಿಂದಿರಲು ॥
ಉಟ್ಟಾಡಿ[3] ಸತ್ರಾಜಿತುಕನ್ಯೆ ಸೊಬಗಳ । ವಟ್ಟರ್ದೆಳೆಡದ ಭಾಗದಲಿ ॥೫॥

ಯಾದವಕುಲಶಿರೋಮಣಿ ಹೆಂಗಳೊಡನೆ ವಿ । ನೋದದಿ ಕುಳಿತಿರೆ
[ಕಂಡು ॥
ಬೋಧಾರುಹ[4] ನಾರದ ದೇವರಾಯನ[5] । ಪಾದಪಂಕಜಕೆಱಗಿದನು ॥೬॥

ಮಣಿಭೂಷಣಹಸ್ತದಿಂದೆ ವೈಷ್ಣವ ಶಿರೋ । ಮಣಿ ನಾರದನನೆತ್ತಿದನು ॥
ಮಣಿಪಾತ್ರೆಯೊಳರ್ಘ್ಯಪಾದ್ಯವನಿತ್ತು ಸ । ನ್ಮಣಿಪೀಠವನೇಱಿಸಿದ ॥೭॥

---

ಕ ಪ.ಅ—1. ಕಿವಿಯೆಂಬ ಪಾತ್ರದೊಳಗೆ. 2. ಹೆಚ್ಚಾದ ರೀತಿಯಲ್ಲಿ.
3. ಕೃಷ್ಣನಿಗೆ ಊಟಪಾಟಗಳಲ್ಲಿ ಯಾವಾಗಲೂ ಜತೆಯಲ್ಲಿರುವಳು.
4. ಜ್ಞಾನದಲ್ಲಿ ಪೂಜ್ಯನು. 5. ಇಲ್ಲಿ ಕೃಷ್ಣ.

ವಿಪರೀತ ಶ್ರೀಕೃಷ್ಣರಾಯನು ಮಾಡಿಸಿ | ದುಪಚಾರವಡೆದು ಮುನೀಂದ್ರ ||
ಜಪಸಮಾಧಿಗೆ ನಿಲುಕದ ತತ್ವರೂಪನ | ಉಪನವ[1] ನೋಡಿ ಹಿಗ್ಗಿದನು || ೯ ||

ಕೇಶವ ಸಖ[2]ಜಗನ್ನಾಥ ಕೇಳ್ ನಿನ್ನಯ | ದಾಸರದಾಸ ನಾನೈಸೆ ||
ಲೇಸಾದುದಿನಿತು ಮನ್ನಣೆಯ ಮಾಡುವ ಸದ್ವಿ | ಲಾಸವಿದೇನೆಂದ ನಗುತೆ ||
ಪುರಹರಮೂವತ್ತು ಮುಕ್ಕೋಟಿದೇವೇ | ಶ್ವರಯೋಗಿ ಹೃದ್ಧ್ಯಾನಗಮ್ಯ ||
ಪರಮಪುರುಷ ಪುರುಷೋತ್ತಮ ನನಗುಪ | ಚರಿಸುವುದೇನಿಂಗಿತವೆ || ೧೦ ||

ಅಜಭವೇಂದ್ರಾದಿದೇವರು ನಿಮ್ಮ ಪಾದಪಂ | ಕಜದ ಕೀರ್ತನೆಯ [ಮಾಡುವರು ||
ಭುಜಚತುಷ್ಟಯ ನಿನಗಿಷ್ಟವ ಮಾಳ್ಪುದು | ನಿಜವೆನಬಹುದೆ ಬಲ್ಲವರು ||
ನೆಟ್ಟನೆ ಪೃಥಿವೀಪತಿಗಳು ತನಯಗೆ | ಪಟ್ಟವ ಕಟ್ಟಿ ಕಾಣಿಕೆಯ ||
ಇಟ್ಟೆರಗಿದರೇನು ಹೀನವೆ ಪರಿತೋಷ | ದಟ್ಟೈಸುವುದು ಕಣ್ಮನಕೆ || ೧೧ ||

ಶುದ್ಧಾತ್ಮಕ ಸುರೇಶ್ವರ ಕೇಳು ಭೃಗು ನಿಮ್ಮ | ನೊದ್ದಡೆ ಶ್ರೀಪಾದವಿಡಿದು ||
ಮುದ್ದಾಡಿ ಪರಮಶಾಂತಿಯ ತೋಱ[3] ಲೋಕಕ್ಕೆ | ಹೆದ್ದೈವವಾದೆಯೆನ್ನೊ [ಡೆಯ || ೧೨ ||

ಬಲ್ಲಿದ ವಾಚಾಳಿ ನಾರದಮುನಿ ನಿನ್ನ | ಬೊಲ್ಲೆಯ[3] ಮಾತದಂತಿರಲಿ ||
ಎಲ್ಲಿಂದ ಬಂದೆ ಸುದ್ದಿಯ ಪೇಳ್ವುದೆನಲಾಗಿ | ಸೊಲ್ಲಿಸಿದನು ಕೃಷ್ಣನೊಡನೆ
. . ಹರದರುಶನತಾತ್ಪರಿಯದೆ ಶೋಣಿತ | ಪುರದೆಡೆಗಾನೈದಲಿಕೆ ||
ಪುರಮರ್ದನ ನಿಮ್ಮ ಮೊಮ್ಮನ ಸುದ್ದಿ ವಿ | ಸ್ತರವಾದುದೇನ ಹೇಳುವೆನು ||
ಸ್ಮರತನಯನ ಪೌರುಷವತ್ಯಧಿಕಸೌ | ವಿರ ತೋಳದೈತ್ಯನಾತ್ಮಜೆಯ ||
ಸುರತಲಂಪಟನಾಗಿ ತಿರುಗದೆ ಸುಖವಟ್ಟು | ನಿರುತನಾಗಿರ್ದ ಗೋಪುರದಿ ||
ಗಬ್ಬಿತನ[4]ದೊಳಾತ ಹೊಕ್ಕಿರ್ದುದ ಕಂಡು | ತುಬ್ಬಿಸಿ[5] ಕೊಟ್ಟವರಾವು ||
ಕೊಬ್ಬಿದ ದಡಿಗದೈತ್ಯರು ಬಂದು ತುಡುಕಲು | ಜಬ್ಬಿದನವರೊಡಲುಗಳ ||
ಲೆಕ್ಕವಿಲ್ಲದೆ ಕೊಂದನದಟುಳ್ಳ ದೈತ್ಯರ | ವಿಕ್ರಮವೀರೋತ್ತಮನ ||
ರಕ್ಕಸರಾಯ ಬಾಣಾಸುರ ಹಿಡಿದನು | ಮುಕ್ಕಣ್ಣ ಕೊಟ್ಟ ಶಕ್ತಿಯಲಿ ||

---

ಕ.ಪ.ಅ—1 ಮುಖವನ್ನು. 2 ಸರ್ವ. 3. ಉಬ್ಬಿಸುವ ಮಾತು.
4. ಗರ್ವ. 5 ಕಳ್ಳತನವನ್ನು ಹಿಡಿದು ಕೊಟ್ಟವರು.

ಹಿಡಿಯಾಳಾಗಿ ಸಿಕ್ಕಿದ ಚಿಕ್ಕ ಹೈದನ । ಕಡಿದಡೆ ಕಲಹವಿಲ್ಲೆನುತ ॥
ಬಿಡಿಸಿಕೊಂಡಡೆ ನೋಡುವೆನೆಂದು ನಿಗಳವ । ಜಡಿಸಿದ ಪದಯುಗಳಕ್ಕೆ ॥

ನಾರದ ಕಲಹತಾತ್ಪರ್ಯದೆ ತರಳಕು । ಮಾರನ ಕೊಂದೆ ನೀನೆನುತೆ ॥
ಮಾರಮಾತ್ರಕೆ ರುಕ್ಮಿಣಿ ಸತ್ಯಭಾಮೆ ಕ । ಣ್ಣೀರಿಂದ ನನೆಸಿದರೊಡಲ ॥

ಮಗ ಹೋದ ಮುಂದಿನ ಬೆಳಗಾಗಿ ಹೇಳಿದೊ । ಡಘಹರ ಕಿವಿಗೊಟ್ಟು [ದಿಲ್ಲ ॥
ಜಗದೀಶನಾತ್ಮಸಂಭವನ ಕುಮಾರ ದೇ । ಸಿಗನಾದನೆಂದಳಲಿದರು ॥ ೨೧॥

ಕಂದಯ್ಯ ಕಾದುವ ಹರೆಯವೆ ಖಳರೊಳು । ಬಂಧನಕೊಳಗಾಗಬಹುದೆ ॥
ಬೆಂದ ಪಾಪಿಷ್ಠನ ಬಸಿಱೊಳು ನೀನೇಕೆ । ಬಂದಪೆಯೆಂದಳಲಿದರು ॥೨೨॥

ಜಡದೇಹಿಗಳಂತೆ ಮಾತಾಡುವ ಹೆಡ್ಡ । ಬಿಡದಿದೆ ನಿಮಗೇಂದೆನುತ ॥
ಅಡಹಾಯಿದುಗುವಶ್ರುಧಾರಾವರ್ತವ । ತೊಡೆದನು ಪೀತಾಂಬರದೆ ॥೨೩॥

ಅಸುರನ ತೋಳ್ಗಳ ತರಿದಿಕ್ಕಿ ಸಿಕ್ಕಿದ । ಹಸುಹುಡುಗನ ತಂದು ಕುಡುವೆ
ವಸುದೇವನಾಣೆ ತಪ್ಪಿದರೆಂದು ಶಪಥವ । ಕುಸುಮಗಂಧಿನಿಯರ್ಗೆ ನುಡಿದ ॥

ಸುದತಿಯರುಗಳ ದುಃಖವ ಪರಿಹರಿಸಿ ನಾ । ರದಮುನಿವರನ ಕೈಯ್ಪಿಡಿದು ॥
ಸದನಕಾತುರಿಯದಿ ಪೊಱಮಟ್ಟು ಬಂದು ಸಾ । ರಿದ ರಮ್ಯರತ್ನಚಾವಡಿಯ ॥

ತೋರಿಯ[2] ಮಣಿಪೀಠದಲಿ ಮಂಡಿಸಿ ರಾಯ । ಭಾರಿಗಳ್ಕೈಯಿಂದೆ ಕರೆಸಿ
ವಾರಿಜದಳನೇತ್ರ ಬಲಗೂಡಿ ಪ್ರಸ್ಥಾನ । ಭೇರಿಯ ದನಿಮಾಡಿಸಿದ ॥೨೬॥

ಹೊಡೆವ ಪ್ರಸ್ಥಾನಭೇರಿಯನಾದ ಬ್ರಹ್ಮಾಂಡ । ವೊಡೆದುದೆಂಬಂತೆ [ಗರ್ಜಿಸಲು ॥
ನಡನಡುಗಿದುವು ಪರ್ವತ ತಳಮಱಲೆದ್ದು । ಕಡಲೇೞು ಘೋರೆ [ದಪ್ಪಿದುವು ॥ ೨೭॥

ತರಿಸಿದ ಬಾಣತೂಣೀರ ಕಾರ್ಮುಕವನೇ । ವರಿಸಿದ ಕಂಚುಕ[3]ದಳೆದ ॥
ಧರಿಸಿದ ಶಂಖಚಕ್ರವನಾಕ್ಷಣದಲ್ಲಿ । ಸ್ಮರಿಸಿದ ವಿಹಗೇಶ್ವರನ ॥೨೮॥

---

ಕ. ಘ. ಅ—1. ಎಳೆಯ ಕೂಸು. 2. ವಿಸ್ತಾರವಾದ 3 ಕಬ್ಬಿಣದ ಕವಚ.

ಸಿಂಧುಸಾಗರಸಪ್ತ ಪಾತೋತ್ಪಾತಗ|ಳೊಂದುಗೂಡಿದುವೆಸಲ್ತುಚುಕೆ||
ಬಂದನು ಖಗರಾಜ ಕೃಷ್ಣನಂಘ್ರಿಗೆ ಬಿದ್ದು | ನಿಂದನು ಮುನಿದ ಹಸ್ತದಲಿ||
ಬಾಣ ಕಾರ್ಮುಕ ಶಂಖ ಚಕ್ರಜೋಡಣೆಯ ಪ್ರ | ಯಾಣವಾವೆ [ಡೆಗೆ ನಿಮ್ಮಂಘ್ರಿ ||
ಮಾಣದೆ ತನಗೆ ವಿಸ್ತರಿಸೆಂದು ಸುರಜಿತು | ತ್ರಾಣ ಬಿನ್ನಹವ ಮಾಡಿದನು ||೩೦||

ಖಗರಾಜ ಕೇಳು ಕಾಮನ ಸೂನು ಬಾಣನ ಮಗಳಿಗೆ ಹೊಗಲವರ್ [ಕಂಡು ||
ವಿಗಡನ ಹಿಡಿದು ಸಂಕಲೆಗೆ ಹಾಯ್ಕಿದರಾವು | ಜಗಳಕೆ ಹೋಗಬೇಕೆಂದ||
ಉರಗಾರಾತಿ ನೀ ಬಲವಂತ ಬಾಣಾ | ಸುರನ ಮಾರ್ಗವ ಕಿತ್ತು ತಹರೆ ||
ಹರ ತನ್ನ ಗುಹಗಣಮುಖ್ಯರು ಸಹಿತಾತ|ನರಮನೆ ಕಾದುಕೊಂಡಿಹನು ||
ಜಡದೇಹಿ ದೈತ್ಯನೊಳ್ ಸಮರವದೆಷ್ಟಃ|ಸಡಗರ ನೀವು ಪೋಪುದಕೆ||
ಅಡಹಾಯಿದವನ ದುರ್ಗವ ಕಿತ್ತು ತಂದಿಲ್ಲಿ | ಕೊಡದಿದ್ದರಾನಲ್ಲವೆಂದ ||
ಅಂಬುಜಭವ ಭವೇಂದ್ರಾದಿದೇವತೆಗಳ | ನಂಬುಗೆವಡೆದ ರಕ್ಕಸರ ||
ಕಂಬುಚಕ್ರಾಂಕಿತ ನಿಮ್ಮೊಳು ಮಥನಿಸಿ | ಮುಂಬರಿದರು ಯಮಪುರಿಗೆ ||
ಅಂಡಜವರ್ಗವಲ್ಲಭಗೆಲ್ಲ ಸೋಲವ | ಕಂಡವರಾರು ಕಾಣಿಕೆಯ ||
ದಂಡಯಾತ್ರೆಗೆ ನಮ್ಮ ಬಲಗೂಡಿ ಬೆನ್ನಾಂತು | ಕೊಂಡುಯ್ಯಬೇಕೆಂದ [ನಗುತೆ ||೩೫||
ನಿಜವಾಗಿ ತೆರಳಬೇಕಾಯಿತಾದಡೆ ಜೀಯ | ಬಿಜಮಾಡಿ ಬೆನ್ನಾಂತು [ಕೊಂಬೆ ||
ಗಜರಥ ಹಯಪಾದಚರಮುಖ್ಯ ಬಹು ಬಲ | ವ್ರಜವನೊಗ್ಗಯಿಸೊಳೆತ್ತು [ವೆನು ||೩೬||
ಮುತ್ತಿನ ಗದ್ದುಗೆ ಗರುಡನ ಹೆಗಲಿನೊ | ಳೆತ್ತಿಸಿ ಬಿಗಿದು ಹಲ್ಲಣಿಸೆ||
ಅತ್ಯಂತಸೌಖ್ಯವ ಮಾಡಿ ಸಂತಸದಿಂದೆ | ಹತ್ತಿದ ಶ್ರೀಕೃಷ್ಣರಾಯ ||೩೭||
ಸೂಠಿಯಿಂದಡರ್ದರು ಬಲರಾಮಸಾತ್ಯಕಿ | ಪಾರೀನಕೇತೂದ್ಭವನು[2] ||
ಊಟೆವರಿವ[3] ಯದುಕುಮಾರರು ಚಪ್ಪನ್ನ|ಕೋಟಿ ಯಾದವರು ಹತ್ತಿದರು||

ಕ ಪ. ಅ—1. ಒಂದು ಗರಿಯಲ್ಲಿ 2 ಮನ್ಮಥನ ಪುತ್ರ ಯಾರು ?
3. ಸಾಲಾಗಿ ಪ್ರವಾಹದಂತೆ ಬಳುವ,

ಹೊಂಗಳಸದ ಸತ್ತಿಗೆ ಡಾಳಿಪ ಚಮರ | ರಂಗಳ ಸಂಚಿ ಸಗ್ಗಳೆಯು[1] ||
ಮಂಗಳ ಕುಂಚ ಕಾಳಾಂಜಿ ಬೀಸಣಿಗೆಯು | ಪೆಂಗಳೆೞ್ದರಿಕ್ಕೆಲದಿ ||೩೯||
ಅಗಣಿತ ವರ್ಣ ಕೇತನದಲ್ಲಿ ಬರೆದಿರ್ದ | ಖಗರಾಜಶಂಖಚಕ್ರಗಳು ||
ಸೊಗಯಿಪ ಗಜಸಿಂಹಫಣಿಮೀನಮಕರಗಳ | ಗಗನವ ತುಡುಕಲೆತ್ತಿದರು ||
ಮಂಡಿಸಿದರು ಮಂತ್ರಿಗಳು ಸೇನಭೋಗರು[2] | ಪಂಡಿತ ಪಂಚಾಂಗಿಗಳು ||
ದಂಡಿಗೆ ಪಲ್ಲಕ್ಕಿ ಬೊಕ್ಕಸ ಭಂಡಾರ | ಖಂಡಿತವಾಗಿ ತುಂಬಿದರು ||೪೧||
ರಾಜರು ರಕ್ಕಸಮಾಂತರು[3] ಲಾಳ[4] ಬಿಲ್ಲೋಜರು[5] ಪೆಟಲಂಬಿನವರು[6] ||
ತೇಜೋಮಯ ಬಾಣಗಾಜರೆೞ್ತು ಖಗ | ರಾಜನೊಂಕೆಯಿಕ್ಕೆಲದಿ ||೪೨||
ಕೊಟ್ಟಿಗೆ[7] ಕಾಮಾಟ[8]ಕ್ರಮುಕ[9] ಬೆಳ್ಳಿಲೆಗರು | ಜಟ್ಟಿಗ[10] ಗೀತಪಾಠಕರು
ಸೆಟ್ಟಿಗ ಬಲು ಚಿನ್ನವರದರು[11] ಘಟ್ಟಿಪ | ಕಟ್ಟಿಗೆಕಾಱರೆೞ್ದರು ||೪೩||
ಹೊಳೆಯುವ ಕಡುಗದ ಹೊದರಿನ ಧಾರೆಯು | ತಳತಳಿಸುವ ಪರಿಘೆಗಳ ||
ಅಳವುಳ್ಳ[12] ಸುಭಟರೆೞ್ತು ಸೇನಾನಿ[13] | ಗಳೊಲವಿಂದೆ ಕೈವೀಸೆ ||೪೪||
ಚೋದ್ಯವಾಗಿದೆ ಕಣ್ಮನಸಿಂಗೆ ವಿಹಗ | ರಾಧ್ಯ[14]ನೊಂಕೆಯಿಕ್ಕೆಲದೆ ||
ಆದ್ಯಂತರಹಿತಾತಿ ಬಲವಡಗಿತು ಬಹು | ವಾದ್ಯಕೋಟಾನುಕೋಟಿಗಳು ||
ಆರೋಹಣವ್ಯಾಪ್ತಿ ಮುಗಿದುದು ಕರೆದನ | ಕ್ರೂರಾದ್ಯಖಿಳ [ಮಂತ್ರಿಗಳ ||
ದ್ವಾರಾವತಿಗೆ ರಕ್ಷಣೆಯಿಟ್ಟು ಗರುಡಂಗೆ | ನಾರಾಯಣ ಸನ್ನೆಗೆಯ್ದು ||
ಚಿಗಿದು ಹಾಱದ ವಿಹಗೇಶನುಬ್ಬಟೆಗೆ ವಾಸುಗಿ ಕೊರಳೊಲೆದು [ರೋಹಿತವ ||
ಉಗಿದುವು ದಿಗ್ದಂತಿಗಳು ಕೂರ್ಮನ ದೇಹ | ಹುಗಿದುದು ತನ್ನ ಸಱಿಯೊಳಗೆ ||

---

ಕ. ಪ. ಅ.—1. ನೀರು ತುಂಬುವ ಚರ್ಮದ ಚೀಲ 2 ಶಾನುಭೋಗರು; ಕಂದಾಯ ಮುಂತಾದ್ದನ್ನು ಸಿಕ್ಷಯಿಸಿ ತೆಗೆಯತಕ್ಕವರು 3 ನಿಪುಣರಾದ ಮಂತ್ರಿಗಳು. 4. (?) 5. ಧನುರ್ವಿದ್ಯಾಗುರುಗಳು. 6 (?) 7 ಅದ್ದಿಕದವಳು 8 ಮನೆ ಕೆಲಸಮಾಡುವವರು. 9 ಅಡಕೆಯವರು. 10. ಜಟ್ಟಿಗಳು. 11 ಚಿನ್ನದ ವ್ಯಾಪಾರದವರು. 12. ಶಕ್ತಿಯುಳ್ಳ. 13. ಸೇನೆಗೆ ಅಧಿಕಾರಿ. 14. ಗರುಡನ.

ಗಱಿಯ ಗಾಳಿಯ ನಿಷ್ಠುರದಿಂದೆ ಗಿರಿಗಳು | ಮುಱಿದುರುಳಿದುವು ಭೂಮಿ
[ಯಲಿ ||
ಉಱುಗಿತು[1] ಬ್ರಹ್ಮಾಂಡ ದಿಕ್ಕೂಟ ಹಮ್ಮುಗೆ | ಹಱಿದುದು ಹಲವು ತಾವಿನಲಿ ||
ಹಾಱಿದ ಹುಲುವೆಟ್ಟುಗಳೆಣ್ದೆಸೆಯ ಮು | ನ್ನೂಱಿದುವೊಂದೊಂದು
[ಬಱಿಯ ||
ಹೇರೊಡಲಂತೆ ಮರ್ತ್ಯರ ಕಣ್ಗೆ ಪಿರಿದಾಗಿ ತೋಱಿದುವಬುಜಾಯತಾಕ್ಷಿ ||
ಹೇರೊಡಲಿನ ಗರುಡನ ಪಕ್ಷ ಪ್ರಳಯಸ ಮೀರಣನುಬ್ಬಟೆಯಿಂದೆ ||
ವಾರಾಶಿ ಬಱಿದುವು ನೆಗಱಾನೆಗಳು ಕೂಡಿ | ನೀರ ಚೆಲ್ಲಿದರೆಂಬ ತೆಱದಿ || ೫೦ ||
ನಗರಾಜ ನಾಮುವ ಬೈತಿಟ್ಟು ಕನಕಾದ್ರಿ | ಖಗರಾಜನಾದುದೆಂಬಂತೆ ||
ಗಗನದೆ ಗರುಡನೈತಂದುದು ಪೆರ್ಮುಗಿ ಲಗಲದೆ ಗಱಿಯುನಾಟಿಸುತೆ || ೫೧ ||
ಇದು ಮೇರುಶಿಖರ ವೈಕುಂಠ ಕೈಲಾಸ ಮ | ತ್ತಿದು ಸುರಲೋಕವೆಣ್ದೆ
[ಸೆಯ ||
ಇದು ರಾಜಭವನಗಳ್ ಬಲರಾಮ ನೋಡೆಂದು ಮಧುರಿಪು ನೋಡುತ್ತೈ
[ತಂದ | ೫೨ ||
ಕೋವಿದೆ ಕೇಳು ಕಂಠನೆ ಕೃಷ್ಣ ಗಱಿಗಳೊಳ್ ತೀವಿದ ಯದುಬಲ
[ಸಹಿತ |
ಹಾವಿನ ಹಗೆ ವೇಗದಿ ಬಂದ ಹನ್ನೊಂದು | ಸಾವಿರಯೋಜನಾಂತರದಿ || ೫೩ ||
ನೋಡಲು ಕಣ್ಗೆಸೆದುದು ಶೋಣಿತಪುರ | ಬೀಡಿನೊಳ್ ಸೌಧಾಗ್ರದೆಡೆಯ
ಹೂಡಿದ ಹೊಂಗಳಸಗಳ ದೀಪ್ತಿಗಳೊಳು | ಮೂಡಿತು ಮನಕೆ ಸಂತೋಷ ||
ದರ್ಶಕನಾತ್ಮಸಂಭವಗೆ ಬಂಧನಗೆ | ಯ್ದಿರ್ಪ ದೈತ್ಯನ ದುರ್ಗವಹುದು ||
ತಪ್ಪದೆ ತಾವಿಗೆ ತಳರೆಂದು ಶ್ರೀಕೃಷ್ಣ | ಸರ್ಪಾರಾತಿಗೆ ನುಡಿದ || ೫೪ ||
ಸತ್ಯಲೋಕೋನ್ನತಿ ವಿಹಗೇಶ ರೂಪಾಂತು | ಮರ್ತ್ಯಲೋಕಕೆ ಬರ್ಪ
[ತೆಱದಿ ||
ಅತ್ಯಂತ ತೀವ್ರದಿಂದಿೞಿದೆಱಕೆಯ ಗಾಳಿ | ಸುತ್ತಿತು ಶೋಣಿತಪುರವ || ೫೫ ||
ಮುರಿದುದು ಬಾಣನ ಮೋರಟೆಕ್ಕೆಯ[3] ಮತ್ತೆ | ಮುರಿದುವು ಹಲವು
[ಹರ್ಮ್ಯಗಳು ||
ಮುರಿದುದು ಖಳನೈಶ್ವರ್ಯ ನಿರ್ಜರವೃಕ್ಷ | ಮುರಿದುವು ಶಿವನಿರ್ದ ವನದೆ ||

ಕ. ಪ. ಅ—1. ಸಂಕುಚಿತವಾಯಿತು. 2. ಗರುಡ. 3. ಮಯೂರಧ್ವಜ.

ಒಡಮುರಿದೊಳಪೊಕ್ಕು ಬಿಱುಗಾಳಿ ಬೀಸಲು । ಮೃಡನಾಸ್ಥಾನದಿಂ [ಸುರರು
ಹೊಡೆ ಮುಗ್ಗಿದರು ಗದ್ದುಗೆಯಿಂದೆ ನವರತ್ನ । ವಡೆದ ಕಿರೀಟಗಳ್ ಮುರಿಯೆ
ಶತಮುಖಮುಖ್ಯನಿರ್ಜರರೆದ್ದು ನಿಂದರು । ಜತನ ತಪ್ಪದೆ ಕೈಯ್ಯಮುಗಿದು ।
ಹುತವಹನೇತ್ರ ನಿರೂಪಿಸು ಪ್ರಲಯಮಾ । ರುತನೆಲ್ಲಿಯದೆಂದುನಮಗೆ ॥೫೯॥

ಕಾಳಿಂಗಮರ್ದನ ಖಳರಾಯನ ಮೇಲೆ । ದಾಳಿಯ ಬಂದ ನಿಷ್ಠುರದಿ ॥
ಕೇಳಿ ಮಾಡುವುದೇನು ಗರುಡನ ಗಱಿಯಪೆ । ರ್ಗಾಳಿಯೆಂದೀಶ್ವರ ನುಡಿದ ।
ಕೆಲರು ಸಂತೋಷವ ತಾಳ್ದರು ಮನದೆ ವ್ಯಾ । ಕುಲವಾದರುಭಯ [ಪಕ್ಷದಲಿ
ಬಲರಮ್ಯಗರ್ವಿತ ಗರುಡಕೃಷ್ಣನ ಚಿತ್ತ । ದೊಲವರಿದಿರ್ದನುರ್ವಿಯಲಿ ॥೬೧॥

ಉಱುಗಿತು ಬ್ರಹ್ಮಾಂಡವೆನೆ ಖಗರಾಜ ಕಿ । ಱ್ಕಱಿಯನೊಯ್ಯನೆ ಪೈಸರಿಸೆ
ತುಱುಗಿದೆ ಬಲಕೃಷ್ಣನಿರ್ದ ಶೇಷನ ಕೊರಲ್ । ಮುಱಿವಂತೆ ನದಿಯತೀರದಲಿ
ಜಲರುಹದಳನೇತ್ರ ಶ್ರೀಕೃಷ್ಣನೊಂದಾಗಿ । ಮಲೆವರ[2] ಗಂಡನೆಂದೆನಿಪ ॥
ಬಲರಾಮ ಕಾಮ ಸುಧಾಮ ಕುಮಾರಕ । ಕೆಲದೊಳೊಪ್ಪಿದರೊಡನಿರ್ದು ॥

ಸಾನುಜವರದ[3] ಸಂತಸವೆತ್ತು ನೋಡಲು । ಗೋಮತಿಯೆಂಬ [ಪೆರ್ದೊಱೆಯ ॥
ರಾಮಣೀಯಕ ಶೀತಜಲವೀಂಟಿ ಹೊಗರ್ದ । ನಾಮಹಾಸ್ವಾದೂದಕವ ॥
ಮಾಧವನಗ್ರಜಾನುಜ ಬಂಧುಸಂದೋಹ । ಭೇದವಿಲ್ಲದೆ ಪುತ್ರನಿಚಯ ॥
ಯಾದವರಖಿಳ ಮಾರ್ಬಲ ಜಲವೀಂಟಿ ಸ । ತ್ಪಾದಪ[4]ದೆಡೆಗೆ ಸಾರಿದರು ॥೬೫॥

ಬಿಡಯವಿಲ್ಲದೆ ಖಗರಾಜನ ಮನ್ನಿಸಿ । ಯೊಡನೆ ಬಂದವನೀಶ್ವರರು ॥
ಕಡೆಗಣ್ಣ ಸನ್ನೆಯಿಂದಲೆ ಸುತ್ತ ಪಾಳೆಯ । ಬಿಡಹೇಳ್ದು ಕೃಷ್ಣನೇಮಿಸಿದ ॥

---

ಕ ಪ.ಅ—1 ಕೆಳಗಣ ಗರಿ 2 ಶತ್ರುಗಳ 3. ಗಜೇಂದ್ರನಿಗೆ ವರವನ್ನು ಕೊಟ್ಟ ಶ್ರೀಕೃಷ್ಣ. 4. ಮರ

ವಟಪತ್ರತಲ್ಪ[1] ನಿರೂಪಿಸೆ ಬಹುವರ್ಣ|ಪಟಲಾಂಛನ ಭೂಭುಜರು ||
ನಟನೆಯಿಂದಲ್ಲಲ್ಲಿ ಬಿಟ್ಟುದು ಯಾದವ|ಕಟಕಕ್ಕೆ ತಾವಿಲ್ಲದಂತೆ |೬೭||

ದೇಶಾಧಿಪರ ಬೆಳ್ಗೊಡೆಗಳು ನಕ್ಷತ್ರ|ರಾಶಿಯಂತೆಸೆಯೆ ಮಧ್ಯದಲಿ ||
ಕೇಶವರಾಯನ ದೂಸ[2] ರೋಹಿಣಿಯ ಪ್ರಾ|ಣೇಶ[3]ನೆಂಬಂತೆ ರಂಜಿಸಿತು ||

ದೊರವೆತ್ತ ಮಗಳ ಗಂಡಗೆ ಕ್ಷೀರವಾರಿಧಿ|ನೆರೆ ಬಂದುದೆಂಬ ರೀತಿಯಲಿ||
ಹೊರೆಯಿಲ್ಲದವಳ ದೂಸದ ಸುತ್ತುವಳಸಿನ|ತೆರೆಸೀರೆ ಕಣ್ಗೆ ರಂಜಿಸಿತು ||

ಓರಂತೆ ಬಲರಾಮ ಸಾತ್ಯಕಿ ಕೃತವರ್ಮ|ಮಾರಕುಮಾರ ದೂಸಗಳು||
ನಾರಾಯಣನ ಬಿಡಾರದ ಮುಂದೆ ಹ|ಜಾರ ಹೊಂಗಳಸವೆತ್ತಿದುವು ||೭೦||

ಮಂಗಳ ಬೀದಿವಾಣದ ಮುಂದೆ ನಾಲ್ದೆಸೆ|ವಿಂಗಡ ವೀಧಿ ವೀಧಿಯೊಳು||
ಕಂಗೊಳಿಸುವ ಸೋಪಸ್ಕರ ವ್ಯವಹಾರ|ದಂಗಡಿ ಮೆಱೆದುವಿಕ್ಕೆಲದಿ ||೭೧||

ದಟ್ಟೈಸಿತು ಬನಬನದಲ್ಲಿ ಕೊಳ ಮಱ|ಲೊಟ್ಟು ಗೋಮತಿಯ ತೀರ [ದಲಿ ||
ಕಟ್ಟಳೆ ಕಡೆವೊದಲಿಲ್ಲ ಕೃಷ್ಣನ ದಂಡು|ಬಿಟ್ಟುದು ಕೇಳಾಯತಾಕ್ಷಿ ||೭೨||

ವರಮೋಹನ ತರಂಗಿಣಿಯೆಂಬ ಕಾವ್ಯವ|ಬರೆದೋದಿ ಕೇಳಿದ ಜನರ||
ತರಣಿ ಚಂದ್ರಮರುಳ್ಳನಕ ಸತ್ಕೃಪೆಯಿತ್ತು|ಪೊರೆವ ಲಕ್ಷ್ಮೀಕಾಂತ ಬಿಡದೆ||

ಅಧ್ಯಾಯ ೩೬ ಕ್ಕಂ ಪದ ೨೩೯೪ ಕ್ಕಂ ಮಂಗಳಂ

---

ಕ. ಪ ಅ—1. ಆಲದ ಎಲೆಯಮೇಲೆ ಪ್ರಳಯಕಾಲದಲ್ಲಿ ಜಗತ್ತನ್ನು ಉದರದೊಳಗಿಟ್ಟುಕೊಂಡು ಮಲಗಿದಸ್ವಾಮಿ. 2. ಡೇರೆ. 3 ಚಂದ್ರ.

# ಮೂವತ್ತೇಳನೆಯ ಸಂಧಿ

---

ಕುಂಭಾಂಡನ ಬುದ್ಧಿ —

ವಾಸವನೈಶ್ವರ್ಯಗೇಡಿ[1] ಶಾಪಿಸಲಂಬ।ರೀಷನ ಬಿಡದೆ ರಕ್ಷಿಸಿದ ||
ಶ್ರೀಶನ ಪಾದಪದ್ಮವ ಕೂರ್ತು ಕೃತಿವೇಳು।ನಾಸೊಗವಟ್ಟು ಲಾಲಿಸುವೆ ||
ಹೇಳುವೆ ಹೇಮಾಂಬುರುಹವೊಗ್ಗವೊಲೆಯುಳ್।ಕೇಳದು ಕೃಷ್ಣಚರಿತ್ರ ||
ಏಳೇಳುಜನ್ಮದ ಭವನಾಗಪಾಶವ । ಸೀಳುವ ಪರಮಗಾರುಡವ ||೧||

ಚೊಕ್ಕಟವಾಗಿ ರಂಜಿಸುವ ಬೀಡಾರವ । ಹೊಕ್ಕಂತೆ ಸಂವರಿಸುತ್ತೆ ||
ಧೊಕ್ಕನೆ ಪೊಱಮಟ್ಟ ಶ್ರೀಕೃಷ್ಣ ಸಲೆ ಪೌ।ಜಿಕ್ಕ ಪೇಳಿಸಿದ ಭೂಭುಜರ ||

ಮಾಧವ ನುಡಿದ ವಾಕ್ಯವ ಕೇಳ್ದು ಜೀಯ ಹ । ಸಾದವೆಂದವನೀಶ್ವರರು
ಆದಡೆ ತಮಗಿಂದು ಸೆಲವೆಂದು[2] ಬೀಳ್ಕೊಂಡು । ಹೋದರು ಮುಂದೆ [ಚೂಣಿಯಲಿ ||೪||

ನೀಲಾಂಬರನೊಳು ನಿಖಿಲಯಾದವರಿಂತು । ಕಾಲಮೃತ್ಯುವನದಟೆನಿಸಿ ||
ಚೇಲಸಮೇತ ಭೈರವನಂತೆ ಪೃಥ್ವೀ । ಪಾಲರು ನಡೆದರೊಗ್ಗಿನಲಿ ||೫||

ರಥ ವಾಜಿ ವಾರಣ ಕಾಲಾಳನಿನಿತೆಂದು । ಮಿತಿಮಾಡ ಬಲ್ಲವರಾರು ||
ಸಿತವರ್ಣಶೇಷನ[3] ಕೊರಲೊಡೆಮುಱಿದುದ । ಚ್ಯುತಸೈನ್ಯಪಾದಘಟ್ಟಣೆಗೆ ||

ದೊರೆದೊರೆಗಳು ಪೌಜಿಕ್ಕಿದರ್[4] ಮುಗಿಲ ಹೆ।ದ್ದೆರೆಯಂತೆ ಪಿಡಿದ [ಟೆಕ್ಕೆಯದೆ ||
ಧರೆ ಬೆಸಲಾದಂತೆ[5] ಮಂದಿಕುದುರೆಯ ನೋ । ಳ್ಪರ ಕಣ್ಣಿಗಾಧಾರವಲ್ಲ ||

ಗಜರಥಹಯಪಾಯದಳದೊಳು ಗರುಡ।ಧ್ವಜ ವರೂಥವನೇಱಿ ತನ್ನ ||
ಭುಜಬಲವೆರಸಿ ಬರ್ಪುದ ಕಂಡು ದೇವ।ವ್ರಜ ರಾಕ್ಷಸರು ಮೆಚ್ಚಿದರು ||

ಪಟಹದಿಂಡಿಮವಾದ್ಯ ಮುರಿತಾಪ ಭೇರಿತಂ।ಬಟದಮಾಮಿಗಳಾದಿಯಲಿ ||
ಲಟಕಟಿಸುವ ನಾನಾವಾದ್ಯ ಸಕಲದಿ । ಕ್ತಟ ಬಿರಿವಂತೆ ಗರ್ಜಿಸಿತು ||೬||

---

ಕ.ಪ.ಅ—1. ದುರ್ವಾಸಮುನಿ. 2 ಅಪ್ಪಣೆಯೆಂದು.

3. ಆದಿಶೇಷನು ಬೆಳ್ಳಗಿರುವನೆಂದು ಪ್ರಸಿದ್ಧಿ. 4. ಧ್ವಜ.

5. ಹೆತ್ತಂತೆ.

ಮಾಧವನೊಡನೆ ಮಚ್ಚರವೇಕೆ ದೈತ್ಯವಿ। ಚ್ಛೇದನೊಳ್ ಸಮರ ಸಿದ್ಧಿಪ್ಪುದೆ
ಕಾದಲ್ಕೆ ಬಹುದೆಂದು ಬಿರುದಿನ ಕಹಳೆಗ । ಳೂದಲ್ಕೆ ಬಿರುದರುಬ್ಬಿದರು ॥
ಎಡಬಲದೊಳು ಹಿಂದೆ ಮುಂದೆ ಪೃಥ್ವೀಶರ । ಗಡಣ ಮೋಹರಿಸಿ ನಿಂದಿರಲು
ಸಡಗರದಿಂ ನೋಡಿ ಶ್ರೀಕೃಷ್ಣ ನಾರದ । ನೊಡನೆ ಹೇಳಿದ ನಸುನಗುತ ॥
ಅತಿವೇಗದಿಂದೈದಿ ನಾರದ ಹೇಳು ಪಾ । ರ್ವತಿಯ ಪ್ರಾಣೇಶ್ವರನೊಡನೆ
ರತಿಕುಮಾರಂಗೆ ಬಾಣಜೆಯಿತ್ತು ಕಳುಹಲು । ಪತಿಕರಿಸುವೆನು ರಕ್ಕಸನ ॥
ತನ್ನ ಸಹಾಯದಿಂದಸುರಾಧೀಶ್ವರ। ನೆನ್ನ ಮೊಮ್ಮನನು ಬಂಧಿಸಿದ ॥
ಮುನ್ನ ಹಿರಣ್ಯಕಮೊದಲಾದ ದೈತ್ಯರು । ಬನ್ನಬಟ್ಟುದ ಬಲ್ಲರೆಲ್ಲ ॥೧೩॥
ಕ್ಷೀಣವಪ್ಪುದು ನಮ್ಮ ನಾವೆ ಕೀರ್ತಿಸಲೇಕೆ। ಕಾಣಬಪ್ಪುದು ಕಾದಲಲ್ಲಿ ॥
ಜಾಣತನದಿ ಬುದ್ಧಿವೇಳ್ದು ರಕ್ಷಿಸಹೇಳು। ಬಾಣಸುರ ತನ್ನ ಬಕುತ ॥೧೪॥
ಜೀಯ ಹಸಾದವೆಂದೆನುತೆ ನಾರದಮುನಿ । ರಾಯ ಹಂಸಾರೂಢನಾಗಿ ॥
ಕಾಯಜಹರನಾಸ್ಥಾನಕೆ ಬಂದು ತಾಂ । ಪ್ರಿಯದಿಂ ಪೊಡೆಮಟ್ಟ ಶಿವಗೆ ॥
ನಾರದಮುನಿಯನೆತ್ತಿದ ತಾತ್ಪರ್ಯದಿ । ಮಾರಾರಿ ಮನದೊಳು ನಗುತೆ ॥
ಆರಾರ ಕೊಂಡಾಡಿಸ ಬಂದೆ ತಂದೆಯೆಂ । ದೋರಂತೆ ಕೊಂಡಾಡಿದನು ॥
ದೇವ ತನ್ನಯ ಮೊಮ್ಮನ ಹರಿಬಕೆ ವಾಸು । ದೇವ ದಂಡೆತ್ತಿ ಬಂದಿಹನು ॥
ದೇವ ಬಾಣಾತ್ಮಸಂಭವೆಯ ಕೂಡಿಸಿ ಕಾಮ । ದೇವಪುತ್ರನ ಬಿಡಿಸುವುದು
ಕೇಳಲಱಿಯೆ ಕೇವಲಮೂರ್ಖ ನಾನೊಮ್ಮೆ । ಹೇಳಲಟ್ಟುವೆನೆಂದು [ಚರರ ॥
ಭಾಳಾಕ್ಷ ಕಳುಹೆ ಬಾಣಂಗೆ ಸೂಚಿಸಲಾಗಿ । ತಾಳಲಾಱದೆ ಕೋಪಿಸಿದ ॥
ಕುಂಭಾಂಡಮಂತ್ರಿಯ ಕರೆಸಿ ಹೇಳಿದ ನಿಟಿ । ಲಾಂಬಕನಭಿಮಾನೋ [ಕ್ತಿಯನು ॥
ಶಂಬರಾರಿಯ ಕುಮಾರಂಗೆ ಮತ್ಸುತೆ ಹೊನ್ನ । ಬೊಂಬೆಯ ಕೊಡವೇ [ಳ್ದಿನಂತೆ ॥೧೫॥
ಕೊಟ್ಟುದುಂಟಾದುದಾದೊಡೆ ನಿಮ್ಮ ವಿಭವದ । ಪಟ್ಟಕೆ ವೈಕಲ್ಯವಿಲ್ಲ ॥
ನೆಟ್ಟನೆ ಯದುಕುಲಾಧೀಶ್ವರನೊಂದಾಗಿ । ಪಟ್ಟವಾಸಿಯು ಜೋಡ ಜೀಯ ॥
ಸಲ್ಲದ ಮಾತನಾಡಿದನೆಂದು ಕೋಪಿಸಿ । ಕಲ್ಲಗಾಣದೊಳಕ್ಕಿಸೆನ್ನ ॥
ಫುಲ್ಲನಾಭನ ಮತ್ಸರದಿಂದೆ ನಿಮ್ಮವ । ರೆಲ್ಲರು ಲಯವನೆಯ್ದಿದರು ॥೧೬॥

ಪರಮವೇದಂಗಳ ತಸ್ಕರಿಸಿದ ತಮನ | ಸುರ ಗುಪ್ತದೊಳಡಗಿರಲು ||
ಶರನಿಧಿಯನು ಹೊಕ್ಕು ಮತ್ಸ್ಯರೂಪದೆ ನಿಶಾ|ಚರನ ಮರ್ದಿಸಿದಾತನೀತ||
ವೃಂದಾರಕರಾದಿಯಾವ ರಾಕ್ಷಸರಾಜ|ರೊಂದಾಗಿ ಸೋದೆಗಡ[1]ಲ್ಗಡೆಯೆ ||
ಮಂದರಗಿರಿ ಮುಳುಗಿದಡೆ ಕಚ್ಛಪರೂಪಿ | ನಿಂದ ಬೆಂಗೊಟ್ಟಾತನೀತ ||
ದಕ್ಷನದಾರು ಭೂಮಿಯ ಕದ್ದ ಭಟ ಹಿರ|ಣ್ಯಾಕ್ಷನ ಕ್ರೋಡರೂಪದಲಿ[2] ||
ಲಕ್ಷ್ಯವಮಾಡದೆ ಮಡುಹಿ ತಾ ಧರಣಿಯ | ರಕ್ಷಣೆಗೆಯ್ದಾತನೀತ ||೨೪||
ಜೀಯ ಲಾಲಿಸು ನಿನ್ನ ಮುತ್ತಯ್ಯ ತಪವಿರ್ದು|ಸಾಯದ ವರವಾಂತು [ಬಂದ ||
ರಾಯನ ನರಹರಿರೂಪಿಂದೆ ಸೀಳ್ದು ನಾ | ರಾಯಣದೇವೇಶನೀತ ||೨೫||
ಬಡ ಬ್ರಾಹ್ಮಣನಾಗಿ ಬೇಡಿ ತ್ರಿಪದಿತನಿಂದೆ| ಪೊಡವಿಯನೀರಡಿಮಾಡಿ ||
ಜಡಜಭವಾಂಡ ಮೇಲ್ಭಾಗವ ಲೀಲೆಯಿಂ | ದೊಡೆದ ತ್ರಿವಿಕ್ರಮನೀತ ||
ಸಡಗರದಿಂ ಬಾಳ್ದ ಮಾಹಿಷ್ಮತೀಪುರ|ದೊಡೆಯ ತಾಮಸದಿ ಕೊಬ್ಬಿ [ರಲು ||
ಕೊಡಲಿಯ ಮಸೆದುಕೊಂಡವನ ಸಾಸಿರತೋಳ್ಗ|ಳಡವಿಯ ಕಡಿದಾತನೀತ
ಹರಪಾದಸಂಕೇರುಹಭೃಂಗ ಸಕಲನಿ | ರ್ಜರಮನೋಭಂಗನೆಂದೆನಿಪ ||
ಧುರಧೀರಲಂಕಾಧೀಶನ ಪಙ್ತಿಕಂ | ಧರವನು ತರಿದಾತನೀತ ||೨೮||
ಪೂತನಿ ಶಕಟ ಕುಕ್ಕುಟ ಧೇನುಕಾಸುರ | ಕಾತಿರ್ದ[4] ಯಮಳಾ [ರ್ಜುನರ ||
ಮಾತುಲಮೊದಲಾದ ಮಹದಾದಿದೈತ್ಯ | ವ್ರಾತವ ಕೊಂದಾತನೀತ ||೨೯||
ನಾರಾಯಣ ನಾಲ್ಕುಯುಗದೊಳು ಬಹುಳಾವ|ತಾರವ ಕೈಕೊಂಡು [ಬಂದು ||
ಘೋರಾಕೃತಿವೆತ್ತ ಬಲವ ಖಂಡಿಸಿದಾತ|ನಾರು ಹೇಳಿಂದು ಪೇಳಿದನು ||
ನಳಿನೋದ್ಭವ ದೇವೇಶದೇವರು ಕೃಷ್ಣ | ಮುಳಿದರೆ ಕಾವವರಿಲ್ಲ ||
ಅಳಿದ ರಕ್ಕಸರಾಯರ ಪ್ರಾಣಲಿಂಗಗಳ್ | ತಳಿತಿವೆ ಜಗದಗಲದಲಿ ||೩೦||

---

ಕ.ಪ ಅ—1 ಕ್ಷೀರಸಮುದ್ರ. 2. ವರಹಾವತಾರಮಾಡಿ.

3. ಹತ್ತುಕೊರಲುಗಳು, ''ಪಙ್ತಿಶ್ಛಂದೇಪಿ ದಶಮೇ'' ಎಂದು ನಿಘಂಟು.

4. ಕಾಯಿಬಿಟ್ಟದ್ದ.

ಶತಧೃಷ್ಟ್ಯಾನುಮಾನದಿ ನೋಡು ನಿನ್ನಯ ಪಿತ ವಿಭೀಷಣಧ್ರುವಾದಿಗಳು ||
ಮೃತವಳಿವಬುಜಾಕ್ಷನ ಭೃತ್ಯರಾಗಿ ಶಾ | ಶ್ವತವಡೆದರು ಕೇಡನುಳಿದು |
ಹರನೊಳು ವಿಶ್ವಾಸವನು ಬಿಡದಿರು ಚಕ್ರ | ಧರನೊಳು ಬಕುತಿಯು [ರಚಿಸು ||
ಎರವಿಲ್ಲದಿರ್ವರ ಕರುಣಾಕಟಾಕ್ಷದಿ | ಸ್ಥಿರರಾಜ್ಯವನಾಳಬಹುದು || ೩೩ ||

ದರ್ಪಕನಾತ್ಮಸಂಭವಗೆ ತ್ವತ್ಸುತೆಯು ಸ ಮರ್ಪಣೆಗೆಯ್ದು ಬೀಳ್ಕೊಡೆ |
ಬಪ್ಪುಲೊಲ್ಲದೆ ಸಮರಕೆ ಹೊಕ್ಕೊಡಪಕೀರ್ತಿ | ಬಪ್ಪದು ಬಲ್ಲರೆ ಕೇಳು ||
ರಟ್ಟು[1] ಮಾಡುವ ದಾಯಕವಲ್ಲ ಹೆಣ್ಣೊಡಂ | ಬಟ್ಟುದೆ ಸ್ಮರಕುಮಾ [ರನಿಗೆ ||
ಕೊಟ್ಟು ಸಂಧಿಯ ಮಾಳ್ಪುದೊಳಿತೆಂದು ಭೀತಿಯ | ಬಿಟ್ಟು ಬಿನಹವ [ಮಾಡಿದನು || ೩೪ ||

ಪಿಂತೊರ್ವರು ಬಾಣನಾಸ್ಥಾನದೆ ಬುದ್ಧಿ | ವಂತರಿಲ್ಲೆಂದಾಡುವರು ||
ಮುಂತಣ ರಾಜಕಾರ್ಯವನುಸಿರುವೆ ಭೂ | ಕಾಂತ ಕೇಳೆಂದು ಕೈಮುಗಿದ ||
ಕಾದಲಟ್ಟುವೆನೆಂದು ಕರೆಸಿದೊಡೆಮಗೆ ಸೀ | ಬೋಧಾರುಹನಾಗಿ ಬಂದೆ ||
ಯಾದವರಾಯನ್ಯೈತರಲಾಗಿ ಧೈರ್ಯವಿ | ಚ್ಛೇದನವಾಯ್ತು ನಿನಗೆ || ೩೫ ||

ಜಾತಿವೀರರು ಬಾಣನಾಡುವ ರಚನೆಯ | ಮಾತಿಗ ಮರುಳ್ಗೊಂಬರಿಲ್ಲ ||
ನೀತಿಕೋವಿದನಾದಕಾರಣ ನಿನಗಿಷ್ಟು | ಭೀತಿಯಾದುದು ಬೀರವಳಿದು |
ಒಡೆಯ ಕೇಳ್ ನಿನಗೆ ಭೀತಿಸುವೆನಾಹವದೊಳು | ಕಡೆಗಾಲ ಭೈರವನಂತೆ ||
ಬಿಡೆಯವಿಲ್ಲದೆ ಬಂದ ಯಾದವರಾಯನ | ಪಡೆಯನೆಲ್ಲವ ಸವರುವೆನು ||

ನಿಂದ್ಯವನೀಡಾಡಿದನೆಂದು ಮನದೊಳು | ಸಂದೇಹವೆನಗಿನಿತಿಲ್ಲ ||
ಮುಂದಿವಾಳದ ಹುಯ್ಯಲೆಯ್ದಿದೆ ಸನಿಯಕೆ | ತಂದೆ ತಾರೆನಗೆ ವೀಳೆಯವ ||
ಕಟ್ಟಾಣಿಮಾತಾಡದ ಮಂತ್ರೀಶಗೆ | ಬಟ್ಟಲ ವೀಳೆಯವಿತ್ತು ||
ನೆಟ್ಟನೆ ಹರಗೆ ಬಿನ್ನಹಮಾಳ್ಪುದೆನುತೆ ಬೀಳ್ಕೊಟ್ಟನು ಶಿವದೂತನೊಡನೆ ||
ಶಶಿಮುಕುಟಾಂಕಿತನಂಘ್ರಿಪೂಜೆಗೆ ಮಂ | ಡಿಸಿದ ಬಾಣಾಸುರನೊಲಿದು ||
ಹಸಿದ ಹೆಬ್ಬುಲಿಯಂತೆ ಕುಂಭಾಡನು ಸಂವ | ರಿಸಿಕೊಂಡು ಹೊಱವಟ್ಟು [ಬಂದ || ೩೭ ||

---

ಕ,ಪ,ಅ—1, ಬಹಿರಂಗ,

ಬಂದನು ಶಿವನಂಘ್ರಿಯುಗಳಕ್ಕೆ ಪೊಡೆಮಟ್ಟು | ನಿಂದನು ಮುಗಿದ [ಹಸ್ತದಲಿ ||
ಕಂದರ್ಪಹರಗೆ ಬಿನ್ನಹವ ಮಾಡಿದ ಬಲಿ | ನಂದನ ನುಡಿದ ವಾಕ್ಯಗಳ ||
ಮುಕ್ಕಣ್ಣ ನಿಮ್ಮ ನಿರೂಪವ ಖಳರಾಯ | ಮಿಕ್ಕನೆಂದಾಜ್ಞಾಪಿಸದೆ ||
ಅಕ್ಕಱಿಂದಾರೈಕೆಯ ಮಾಡು ಕದನಕ್ಕೆ | ರಕ್ಕಸವಗೆಯ[1] ಬೇಡಿಹನು ||
ದೇವರ ಶಿಷ್ಯ ದೇವನಿಗೆ ಬಿನ್ನೈಸಿವ | ದೇವಪೂಜೆಯ ಮಾಡುವನಕ ||
ದೇವ ನಿಮ್ಮಯ ದೇವ ಬಲಗೂಡಿ ಶ್ರೀಕೃಷ್ಣ | ದೇವನೊಳ್[2] ಕಾದುತಿರೆಂದ ||
ಎನಲಾವಮಾತಿಂಗೆ ಕಿವಿಗೊಟ್ಟು ಲಾಲಿಸಿ | ಯನಲಾಂಬಕ ಹರಿಸದಲಿ ||
ಘನ ಲಾಗುವೇಗದಿ ಜೋಡಿಸಿ ನಂದಿವಾ | ಹನವೇರಿದನಾಹವಕೆ ||೪೯||
ಸೋಮಶೇಖರನ ದಕ್ಷಿಣಭಾಗದಲಿ ಗಣ ಸ್ತೋಮ ಕುಮಾರಸಂದೋಹ ||
ವಾಮಭಾಗದಲಿ ಸೌರಿಸಿಕೊಂಡು ಬಂತು ಸುತ್ರಾಮಾದಿನಿಖಿಲನಿರ್ಜರರು ||
ಗಜಮೇಷಮಹಿಷಮಾನಸನೆಗಱಿರಳೀಶ ನಿಜಧರ್ಮವಾರುವ ವೃಷಭ
ಭುಜಗಾರಿವಿಷಪುಚ್ಛ ವರ್ಷಕನೊದಲಾದ | ಧ್ವಜತತಿ ಮೆಱೆದುವೊಗ್ಗಿನಲಿ ||
ವಾರಿನುಸ್ತಕನ[3]ಮುಂದೆಸೆಯಲ್ಲಿ ಮೊಱೆಗುವ ಭೇರಿನಾನಾವಾದ್ಯನಿಚಯ
ಭೂರಿ ಸೆಗ್ಗಾಳೆಗಳೊವರುತಿರ್ದುವು ಮದನಾರಿಯ ತೊಡಕು ಜೇಡೆನುತೆ |
ಶೋಣಿತಪ್ರರವ ಪಶ್ಚಿಮದಿಕ್ಕಿನಲಿ ಶೂಲ ಪಾಣಿಯಾ ಪೌಜಸಿಕ್ಕಿದನು ||
ಜಾಣಿಮ ಭಟರೆಚ್ಚಾಡುತಿರ್ದುದು ಸುರಶ್ರೇಣಿಯು ಬೆಱಗಾವಱೆಯೆನಿಸೆ ||
ಆಸಮಯದೆ ಮುನಿವರನನಟ್ಟಿದ ಕೃತ್ತಿ ವಾಸ ದೈತ್ಯನ ಮನದಿರವ ||
ಕೇಶವಗುಸಿರೆನಲ್ ಬಂದು ನಾರದ ಲಕ್ಷ್ಮೀಶಂಗೆ ಬಿನ್ನಯಿಸಿದನು ||೫೧||
ಪೀತಾಂಬರ ಕೇಳು ಬಾಣ ಸಂಧಾನದ ಮಾತ ಮುರಿದು ಮಂತ್ರಿಯೆಯ್ದಿ
ಭೂತೇಶನೊಡನೆ ಸೂಚಿಸಲಾಗಿ ಕಾಳಗ | ಕಾತ ಬಂದಿಹನು ಚಿತ್ತೈಸು ||
ಓಡುಗೆಯ್ಯನ[4]ಶಕುತಿಯೊಳವರಿರುವನ್ನ | ಪಾಡೆಂಬುದೆನಗೆ ಕಾಣಿಸಿತು ||
ನೋಡು ನಾರದ ನಿನ್ನ ಕಣ್ಣ ಹಬ್ಬವನಿಂದು | ಮಾಡುವೆನಾಹವದೊಳಗೆ ||
ಮಱೆಯದೆ ಮದನಾಂತರದಲಿ ನುಡಿದುದು | ಮಱೆಯಬೇಕಸುರರ [ತಱಿದು ||

---

ಕ ಪ ಅ—1 ರಾಕ್ಷಸವೈರಿ, ವಿಷ್ಣು   2 ಯಾರು?   3. ಶಿವ
4. ಓಡನ್ನು ಕೈಯಲ್ಲಿ ಹಿಡಿದಿರುವನು, ಕಪಾಲಪಾಣಿ

ಹೇಱಿಪಲೆಗನ¹ಸಿಕ್ಕ ಬಿಡಿಸಿದೊಡೆನಗಾಡು ಗೊಱಯಿತ್ತುದೆನುತೆ ಕೈಮುಗಿದ॥
ನಾರದಗಭಯಹಸ್ತವನಿತ್ತು ಶ್ರೀಹರಿ । ತೇರನು ಮುಂದೆ ಕೋಡಿಸಲು ॥
ಘೋರಾಕೃತಿವೆತ್ತು ಕಾಲಾಗ್ನಿಮುಳಿದು ಹುಂ । ಕಾರದಿಂದಿದಿರ್ವಂದುದಾಗ
ಮಿಗೆ ಛಿಟಛಿಟ ಭುಗುಭುಗಿಲೆಂದು ಪಳ್ಳುರಿ । ಹೊಗೆ ಸುತ್ತಿ ಬ್ರಹ್ಮಾಂ [ಡದೊಳಗೆ ॥
ಒಗೆಗೊಳ್ಳದೆ ಕೃಷ್ಣರಾಯನ ಬಲವ ನಾಲಗೆಯಿಂದೆ ಸವರಿತಾಹವದಿ ॥೫೬॥
ಬಂದುದು ಯಾದವಬಲ ನೆಲಸೇಂದಂತೆ । ನಿಂದುದು ಕಾಲಾಗ್ನಿಯಲಿ ॥
ಬೆಂದುದು ಬಿಡಿಸಿಕೊಂಬವರಿಲ್ಲ ಕಟಕ । ಟೇಂದುದು ಸುರನಿಶಾಚರರು ॥
ಎಂಬರ ಮಾತು ಬಾಯೊಳಗಿರೆ ಶ್ರೀಕೃಷ್ಣ ಸಂಭೋಧಿ ಮಾರ್ಗಣದಿಂದೆ
ಮುಂಬರಿದೈದುವ ಕಾಲಾಗ್ನಿಯ ಮೆಟ್ಟಿ । ತಂಬಲಗರೆದನಾಬಲಕೆ ॥೫೭॥
ಈಪಾಪಿಯು ಸಮರ್ಥಿಕೆಯಲ್ಲಿ ಬಂದಸಂ । ತಾಪವ ಪರಿದನೆಂದೆನುತೆ ॥
ಶ್ರೀಪರಮೇಶ ರಮೇಶಂಗೆ ಮೆಚ್ಚಿ ಸ । ಲ್ಲಾಪದಿಂ ಕೈವಾರಿಸಿದ ॥೫೮॥
ವರಮೋಹನತರಂಗಿಣಿಯೆಂಬ ಕಾವ್ಯವ ಒರೆದೋದಿ ಕೇಳಿದ ಜನರ ॥
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು ಪೊರೆವ ಲಕ್ಷ್ಮೀಕಾಂತ ಬಿಡದೆ॥

ಅಂತು ಸಂಧಿ ೩೭ ಕ್ಕಂ ಪದ ೨೪೫೪ ಕ್ಕಂ ಮಂಗಳಂ

## ಮೂವತ್ತೆಂಟನೆಯ ಸಂಧಿ

ಹರಿಹರರ ಕಾಳೆಗ:—

ಮಧುಕೈಟಭರ ಚರ್ಮವ ಸೀಳ್ದಿಕ್ಕಿ ಭೂ । ವಧುಕೃತ್ಯವ ನಿಯಮಿಸಿದ॥
ಯದುಕುಲೋತ್ತುಂಗ ರಂಗನ ಕೂರ್ತು ಕೃತಿವೇಳು ಸದುಬಕುತಿಯಲಿ [ಕೇಳುವೆನು ॥೧॥
ಕಕ್ಕಸವೆತ್ತ ಕಾಮಿನಿಯರ ಕಂಡು ಕಣ್ಣಿಕ್ಕದಂತೆನ್ನ ಚಿತ್ತವನು ॥
ಅಕ್ಕೊತ್ತಗೊಂಡ ಭಾಮಿನಿರನ್ನೆ ಲಾಲಿಸು ಸಕ್ಕರೆಯಂತ ಮಾತುಗಳ ॥೨॥

ಕ ಪ.೩—1 ಚಂದ್ರಚೂಡ, ಶಿವ.

ಚಂದ್ರಶೇಖರಚಕ್ರಧರನಕೀರ್ತಿಸಲಾಗಿ ನೊಂದುಷಣ್ಮುಖಗಣಾಧಿಪರು॥
ಇಂದ್ರಾದ್ಯಖಿಳನಿರ್ಜರರು ಪಂತವನಾಡಿ। ಬಂದರು ಬಿಟ್ಟ ಸೂರಿಯಲಿ ॥೩॥
ಹಲಧರಕೃತವರ್ಮಸಾತ್ಯಕಿ ಪ್ರದ್ಯುಮ್ನ ಚಲದಂಕ ಉದ್ಧವಾದಿಗಳು ॥
ಬಲಯುತರಾಗಿ ಬಂದಹಿತರಿಗಿದಿರಾಂತು । ನಿಲಲೆಚ್ಚರಚ್ಚರಿಯೆನಿಸಿ ॥೪॥
ಹರಕುಮಾರಕನುಪಟಳದೇೞ್ಗೆಯ ಮುರ । ಹರಕುಮಾರಕನಂದು ಕಂಡು
ಉರುಕೂರ್ಗಣೆಗಳಿಂದೆಚ್ಚು ಬೊಬ್ಬಿಱಿದ ಸಾಸಿರ ಕಣ್ಣ ಶಿಖಿಧ್ವಜವ ॥
ಭೂತೇಶನಾತ್ಮಸಂಭವ ಸವರಿದ ಮೀನ । ಕೇತನಪಿಶುಕಸಂಕುಲವ ॥
ಆತನ ಮೇಲೆ ಪೊಂಬರಹಶೋಭಿತ ಶರವ್ರಾತವನೆಚ್ಚು ಬೊಬ್ಬಿಱಿದ ॥೬॥
ತಾಗಿ ಥಟ್ಟುಗಿದುವೆಂದೆಂಬ ಹೇರಂಬ ವಿ । ಭಾಗಿಸಿ ವೀರಪ್ರದ್ಯುಮ್ನ॥
ಕೂಗಿ ಬೊಬ್ಬಿಱಿದು ಕೂರ್ಗಣೆಯ ಗಾಯವ ತಿನ್ನು।ಹೋಗೆಂದು ಹೊಡೆ
[ದನಂಬುಗಳ ॥೭॥
ಕಡಿವನು ಕೂರ್ಗಣೆಗಳ ಕಾಮುಗಿದಿರಾಂತು ನುಡಿವನು ರಣರಂಗದಿರವ॥
ಕಿಡಿಗಣ್ಣನಿಂದಱಿದುಱಿದ ದೇಹವನಿನ್ನು । ಸುಡಿಸದೆ ತಳರೆಂದ ನಗುತೆ ॥೮॥
ಸುಟ್ಟಾತನೆನ್ನ ಜೈಸಿದುದಿಲ್ಲ ವರತಪೋ ಭ್ರಷ್ಟನೆನಿಸಿಯುಮೆಯೊಡನೆ॥
ನೆಟ್ಟನೆ ಸಂಭೋಗವ ಮಾಡಲಾಕ್ಷಣ । ಹುಟ್ಟಲುಜ್ಜುಗವೆತ್ತ ನಿನ್ನ ॥೯॥
ಚೆಣ್ಣ ನೀನಱಿಯದಾಡಿದೆ ಹೋಗೆಲವೊ ಮು । ಕ್ಕಣನೆನ್ನರಲಂಬಿಗಳುಕಿ॥
ಹೆಣ್ಣೊಡಲಾದ ಹಿಂಗಿದರೆ ಕೊಂಪಪೆನೆಂದು । ನನ್ನೊಳು ಸೆಣಸುವರಾರು ॥
ನಾಗಭೂಷಣನಂತಿರಲಿ ನಿರ್ಜರರೊಳು । ಭೋಗದೇವೇಂದ್ರನ ಮೇಲೆ ॥
ಡಾಗನೊತ್ತಿದೆ ನೋಡು ನನ್ನಿಂದೆ ಬಂಡಾಗಿ । ಹೋಗದ ವೀರರಾರೆಲವೋ॥
ಶ್ರೀನಾರೀಗರ್ಭದೊಳಗೆ ಹುಟ್ಟಿಬಂದರೆ । ನೀನಾಡೆ ನಿನ್ನಪೌರುಷವ ॥
ಮೀನಾತ್ಮಜನಾವ ಕಾರಣ ತತ್ಕುಲ । ಹೀನಜಿಹ್ವೆಯೊಳು ತೋಱಿಸಿತು ॥
ಪಿಂಡವ ಹೆತ್ತ ಮಾತೃಕೆ ರಕ್ಷಿಸಬೇಕು। ಮಂಡಲದೊಳಗುಳ್ಳ ರೀತಿ ॥
ಹೆಂಡತಿಯಿಂದಲರ್ಭಕನಾಗಿ ಬಳದವ ಭಂಡ ನೀಹೋಗೆಂದು ನುಡಿದ ॥೧೩॥
ಪಾರ್ವತಿಜಠರದೊಳೊಗೆದವನಲ್ಲ ಸ ಲಾಱುಯೋನಿಜಗಾದ ಪರುಕ ॥
ಗಾಱುಗೆಡೆಯು ಬೇಡವೆನುತೆ ಮನ್ಮಥ ಗುಟ್ಟ ಹಾಱುತಿಂತೆಚ್ಚು ಬೊಬ್ಬಿಱಿದ॥
ನೀಸಕ ಮುರಿದು ಸಾರಥಿ ನೊಂದು ಪಟವಿಹ।ಗೇಶಗೆ ಕೋಯೆಂದು ಕೂಗಿ
ಓಸರಿಸಿದ ರಥಸ್ತಂಭವ ಷಣ್ಮುಖ । ಕೇಶವನಣುಗನಂಬಿನಲಿ ॥೧೪॥

ಭೂಪುರೆ! ಪಟುಭಟನಂತಿದಿರೊಳು ನಿಲ | ಲಾಪರೆ ಕಾದುಕೊಳ್ಳೆನುತೆ||
ಶ್ರೀಪರಮೇಶ್ವರನಾತ್ಮಸಂಭವ ಪುಷ್ಪ|ಚಾಪವನೆಚ್ಚು ಬೊಬ್ಬಿರಿದ ||೧೬||
ಸರಲಿಂದೆ ರಥಸಾರಥಿ ನೊಂದು ಪಟ ಮೀನ|ಕೊರಲರೆಗಡಿದು ಕಂಪಿಸಲು||
ದುರುಳಮನ್ಮಥ ಮೂರ್ಛೆಯನಾಂತು ತಿಳಿದೆದ್ದು | ಬೆರಲೆತ್ತಿ ಕೊಂಡಾ[ಡಿದನು ||೧೭||

ಇದೆ ನೋಡು ಕಾದುಕೊಳ್ಳೆನುತೆ ಮನ್ಮಥ ಹೊನ್ನ | ಹೊದೆಯಿಂದ[ಲೊಂದಂಬ ತೆಗೆದು ||
ಎದೆಯ ಸಂಕುಲದಿ ಮೂಡಿಸಿ ತೋಱಿಸಿ ಬಿಲ್ಲ | ಹೆದೆಯ ಕತ್ತರಿಸಲಿ[ಕ್ಕಿದನು ||೧೮||

ಸೋಲವೆ ಸುಭಟರ್ಗೆ ಬಿಲ್ವಿದೆ ಪರಿವ ತ | ತ್ಕಾಲದೆ ಕೈದೆರವಿಂಗೆ ||
ಶೂಲವೊಂದಿದೆ ನೋಡು ಕಾದುಕೊಳ್ಳೆನುತಲ | ಗೋಲನನಿಕ್ಕಿ ಬೋಧಿಸಿದ||
ಕೆಂಗಿಡಿಗಱೆಯುತ್ತೆ ಪರಿತಂದು ಮದನನ | ನುಂಗಿ ನೀರ್ಗುಡಿದುದೆಂದೆನಲು||
ಇಂಗಿತವಱಿದು ಶ್ರೀಕೃಷ್ಣ ಚಕ್ರದೊಳಟ್ಟು | ಭಂಗಿಸಿದನು ಮಹಾ[ಯುಧವ ||೨೦||

ಆತಂಗೆ ನನಗೆ ಗಂಟಿಕ್ಕಿದ ಸಮರಪ್ರ | ಖ್ಯಾತರ ನೋಡಬೇಕೈಸೆ ||
ಏತಕ್ಕೆ ಸೀನಪಹಾಯಿದೆಯೆನುತೆ ಶ್ರೀ | ನಾಥಗೆ ಕೈದುಡುಕಿದನು ||೨೧||
ದಸದೊಳಾಂ ನಿನ್ನ ಜಯಿಸಿದೊಡಪಕೀರ್ತಿ | ಬರ್ಪುದು ಲೋಕಾ[ಪವಾದ ||
ತಪ್ಪದೆ ಕಾದಬೇಕಾದರೆ ಜೇಗ ನಿ | ಮ್ಮಪ್ಪನ ಕರೆತಂದು ನಿಲಿಸು ||೨೨||
ಎನ್ನೊಳು ಜಯಿಸಲಾಱದೆ ಮತ್ಪಿತನೊಳು ಸನ್ನಯಿಸುವರೆ ಕಾಳೆಗವ ||
ಎನ್ನಲಾವಮಾತನಾಲಿಸಿ ಕೃಷ್ಣ ಹಿಡಿದನು | ತನ್ನಯ ಚಕ್ರಾಯುಧವ ||೨೩||
ಕೇಳಿಯವರ ಸಂವಾದವ ತಿದ್ದಲು | ಕಾಳಿ ನಿರ್ವಾಣದಾಕೃತಿಯ ||
ತಾಳಿ ಬಂದಿದಿರಾಗಿ ನಿಲಲಚ್ಯುತ ನೋಡಿ|ಹೊಱಿದ[1] ದೃಗ್ಯುಗಳವನು ||೨೪||
ಸುಡು ಸುಡು ಕಾಳೆಗೆ ಬೆಂದುದೆಂದಸುರಾರಿ ಕಡುಲಜ್ಜೆಗೊಂಬನಿತಱೊಳು
ಷಡುಮುಖ ಶೌರಿಯೊಳ್[2] ಕಾಳೆಗ ಬೇಡೆಂದು | ಮಡುದಲೆಯನು ಕರೆ[ಸಿದನು ||೨೫||

---

ಕ ಪ ಅ.—1. ಮುಚ್ಚಿದನು. 2 ಈಶ್ವರ, ಹೀಗೆ.

ತ್ರಿಣಿಲೋಚನ ಕೇಳ್ದುದ ಕೇಳಿ ನಿಂದನು ಸೇನಾನಿ ವಾಹನಮುಱಿದು।
ತಾನಿದಿರ್ವಂದು ಮನ್ಮಥನ ಟೆಕ್ಕೆಯುದ ಪೆ । ಮ್ಮೀರನಿಂಗೆ ಹಾಯ್ದುದಾರ್ಭ
[ಟಿಸಿ ॥ ೨೮॥

ಮಗನ ಟೆಕ್ಕೆಯ ಮುರಿದರೆ ಮಾನಭಂಗವೆಂ। ದಗಧರ ವಿನತಾತ್ಮಜನ।
ಮೊಗ ನೋಡಲಾಕ್ಷಣ ಮೊರೆದೆದ್ದು ಕೋಪದಿ। ಖಗರಾಜ ತುಡುಕಿದ
[ನವಿಲ॥

ತಡೆದರೆ ತಡೆದೊದ್ದರೊದ್ದೆಱಕೆಯೊಳಟ್ಟ್ಯ। ಹೊಡೆದರೆ ಹೊಡೆದು ಡೊಕ್ಕರಿಸಿ[1]।
ಕೆಡೆದರೆ ಕೆಡದುಗುರ್ಗಳೊಳೊತ್ತಿ ಭೀಕರ ವಡೆದು ಹೊಯ್ದಾಡಿದುವೆರಡು॥
ಸಿಕ್ಕಲು ಸೆಳೆವರು ಸೆಳೆದೊಳಪುಗುವರು। ಕುಕ್ಕಲು ಕುಕ್ಕಿ ಕಡಿವರು।
ಹಕ್ಕಿಗಳರಸನು ಮೋರನ[2] ನೆಲಕಿಕ್ಕ್ಕಿ। ತಿಕ್ಕಿತು ಕೂಗಿ ಬೊಬ್ಬಿಡಲು ॥೨೯॥

ಗಾಳಿಗೂಱನ ಹಗೆ[3]ಗೊಳಗಾದ ಶಿಬಿರವ । ಕೇಳಿ ನಂದೀಶನೈತರಲು ।
ಗೂಱಿಯೊಳದಿರಾಗಿ ಕಾದ ಬೇಕೆಂದು ಹೀ। ಯಾಳಿಸಿ ಬಿಟ್ಟುದಾನವಿಲ॥೩೦॥
ನೀಲಕಂಧರನ[4] ನೆಗ್ಗಿಸಿದಂತೆ ನೀನೆನ್ನ । ಮೇಲುರವಣಿಸೆಂದು ಒಸವ ॥
ಶೂಲದಂತೆಸೆವ ಕೊಂಬುಗಳಿಂದೆ ತಿವಿದುದು । ಬಾಲಾಹಿಸೂದನನೆದೆಯ ॥
ನವಿಲ ಸೋಲವನೆತ್ತುವೆನೆಂದು ಬಂದೆನ್ನ । ತಿವಿದ ಸಾಹಸಿಯ ನೋ
[ಡೆನುತೆ ॥

ವಿವಿಧವಿಚಾರ[5]ದಿಂದೆಱಕೆಯೊಳಕ್ಕಲು । ಕವಿದು ಬಿದ್ದುದು ಭೂಮಿಯಲಿ ॥
ಬಿದ್ದಡೆ ಬಿದ್ದುದಿಲ್ಲೆನುತಲಾಕ್ಷಣದೊಳ । ಗೆದ್ದು ಖಗೇಶ್ವರನೆದೆಯ ॥
ಕದ್ದೈಸದೆ ಬಂದು ತಿವಿದ ಗಾಯವ ತಾ । ಳಿದ್ದು ಕುಕ್ಕುರಿಸಿತುರ್ವಿಯಲಿ ॥
ರೋಷವಿಮ್ಮಡಿಸಲು ಪರಿತಂದು ವಿಹಗಾ । ಧೀಶ ತದ್ಭುಜವ ಚಪ್ಪರಿಸಿ ॥
ಈಶಲಕ್ಷ್ಮೀಶರು ಕೊಂಡಾಡುವಂತೆ ನಂ । ದೀಶನ ತಿವಿದು ಬೊಬ್ಬಿಱಿದ ॥
ಉರಿ ಮಸಗಿತು ನಾಸಿಕದಲ್ಲಿ ಕೆಂಗಿಡಿ । ಸುರಿವಕ್ಷಿಯಿಂದೆ ನಂದೀಶ ॥
ಹರಿಹರಾದಿಗಳು ಕೀರ್ತಿಸೆ ಗರುಡನ ನೆತ್ತಿ । ಬಿರಿವಂತೆ ತಿವಿದು ಬೊಬ್ಬಿಱಿದ ॥

---

ಕ ಪ ೮—1 ತಿರುಪಾಯಿಸಿ. 2. ನವಿಲು. 3 ಗರುಡ 4. ನವಿಲು, ಮತ್ತೊಂದರ್ಥವೇನು ? 5. ವಿವಿಧವಿಚಾರ–ಇಲ್ಲಿ ಅರ್ಥವೇನು ; ವಿ = ಪಕ್ಷಿ.

*

ಹುಗುವರು ಹೊಕ್ಕು ಹೋರುವರು ಬಿನ್ನಾಣಿಸಿ । ಬಿಗಿವರು ಕೈಕಾಲ
[ಬೆರಲ ॥
ಸಿಗಿವರು ಸಿಕ್ಕಿದರಾಯೆನ್ನಲೊಲ್ಲದೆ । ಸಗುಣಾತ್ಮಕರು ಕಾದಿದರು ॥೩೬॥

ಕೆಡೆದನು ಖಗರಾಜ ನಂದೀಶ ನಗ್ಗದ ನೊಡೆ ಮುರಿದೆದ್ದರಾಕ್ಷಣದಿ ॥
ಅಡಹಾಯಿದಿರ್ವರು ಧುಪ್ಪುಧುಪ್ಪೆಂಬಂತೆ ಹೊಡೆದಾಡುತಿರ್ದರಾಹವದೆ ॥೩೭॥

ನುಡಿದುವು ದೇವದುಂದುಭಿಗಳಿರ್ವರ ಸಿರಿ । ಮುಡಿಯಲ್ಲಿ ಹೂಮಳೆ
[ಗರೆಯೆ ॥
ಕಿಡಿಗಣ್ಣ ಕರೆದು ನಂದೀಶನ ತಾನೊಡಂ । ಬಡಿಸಿದನೊಳಭೇದವನು ॥೩೮॥

ತೆತ್ತೀಸಕೋಟಿ ವೃಂದಾರಕರುಗಳ ನೆ । ಗ್ಗೊತ್ತಿದ ಸೊದೆಗೆಲಸದಲಿ ॥
ಅತ್ಯಂತಬಲವಂತ ಖಗರಾಜನೊಡನೆ ಕೈ । ಹೊತ್ತಿಗೆ ಸಮರ ಸಾಕೆಂದು ॥೩೯॥

ಭುಜಗಧ್ವಂಸಿ ನಂದೀಶ್ವರನೊಳು ಕಾದಿ । ನಿಜಪೌರುಷದೆ ನಿಂದಿರಲು ॥
ದ್ವಿಜರಾಜ ಬೆರೆಯದಿರೆನುತೆ ಪಚಾರಿಸಿ । ಗಜವಕ್ತ್ರನು ರವಣಿಸಿದನು ॥೪೦॥

ಜೋಡಿಸಿ ಪರಿತಂದು ಮೂಷಕ ಗರುಡನ । ನೋಡಿ ಕಣ್ಗೆಟ್ಟುತನ್ನೊಡಲ ।
ಜೋಡಿಸಿ ತಿಂದಪನೆಂದುಱೆ ಹೊತ್ತುಕೊಂ । ಡೋಡಿತು ವಿಘ್ನೇಶ್ವರನ ॥೪೧॥

ಲಂಡಿ ಸವೆದು ಹೋದರೆ ಬಿಚ್ಚುವುದ ತಾ । ಕಂಡುತಕ್ಕಡುಗುದುರೆಯಾನು ॥
ಕೊಂಡು ಬಂದೀ ಹುಯ್ಯಲೊಳಗೇಱುವೆನೆಂದು । ಒಂಡಾದ ಜೇನಕರಾವುತನು

ಬಕ್ಕಯ್ಯ ವಾಘೆಯುದೊಳು ನಿಲ್ಲಲೊಲ್ಲದ । ವೆಕ್ಕಸಗೆಯ್ವುದ ಕಂಡು ॥
ಬೆಕ್ಕಸ ಬೆಱಗಾಗಿ ಬಲರಾಮದೇವರು । ನಕ್ಕರು ರಣರಂಗದೊಳಗೆ ॥೪೩॥

ಮೂಷಕ ಬೆದಱೆ ತಲ್ಲಣಿಸಲು ರಣಪರಿ । ಹಾಸಕ ಬೇಡವೆಂದಿೞಿದು ॥
ದೂಷಕ ಬಲರಾಮ ಕೈದೋಱೆಸೆಂದು ವಿ । ಘ್ನೇಶನು ಕರೆದಾಱೆದನು ॥೪೪॥

ಬದವಿದ ಭಕ್ಷ್ಯಭೋಜ್ಯಕೆ ಬಪ್ಪರೆ ಭಾದ್ರ । ಪದ ಶುದ್ಧ ಚೌತಿಯಿದಲ್ಲ ॥
ಕದನಕಪೂಪವ ತೋಱೆಂದು ಸಾಮಜ । ವದನಂಗೆ ಪೆಟ್ಟನಿಕ್ಕಿದನು ॥೪೫॥

ಬಡಿಸಿದರುಂಡು ತೇಗುವ ಬಕತರಿಗೆ ನೂ । ರ್ಮಡಿ ಸತ್ಫಲವನೆಯ್ದಿಸುವೆ ।
ಹಿಡಿಯೆನ್ನ ವರ ವ್ಯರ್ಥವಾಗದೆಂದೆನುತೆ ಕೆಂ । ಗಿಡಿಗೋಲ್ಗಳಿಂದೆ ಹೇಱೆದನು ॥

ಹೇಱೆದ ಹೇರಂಬುಗಳನಿಕ್ಕಡಿ ಮಾಡಿ । ತೋಱೆದ ತೋರಹತ್ತದಲಿ ॥
ಬೀಱೆದ ಬಿಱುಗೋಲುಗಳೆಂಬ ನಟ್ಟೆಯ । ನೂಱೆದನೀಗೈಗಡೆಗೆ ॥೪೭॥

ತಾಳಾಂಕನೆ ಹಲಹಿಡಿದು ಭೂಮಿಯ ಮೇಲೆ | ಸೋಲ ಬಲ್ಲವ ಕೇಳ್ದು
[ನಿನಗೆ ||
ಕೇಳಾರಂಭ ಬೇಡೆಂದು ವಿಘ್ನೇಶ ಹೇ | ರಾಳಂಬ ಕರೆದು ಬೊಬ್ಬಿರಿದ ||
ಬಡವ ನಾನೊಂದು ನೇಗಿಲಲಿ ನಿನ್ನನು ಬೀಳ | ಹೊಡೆದು ಕಾರ್ಗಲಸಿ ಗದ್ದೆ
[ಯನು ||
ತಡೆಯದೆ ಸತ್ಕೀರ್ತಿಗಂಧಶಾಲಿಯ ಬಿತ್ತಿ | ಪಡೆವೆನು ಫಲವ ನೋಡೆಂದ || ೪೯ ||
ಕಡುತೇಜದೊಳ್ ಕಲುತೆತ್ತು ಹೊತ್ತವನಲ್ಲ ದುಡಿದಿಕ್ಕುವಡೆದಾಷ್ಟಿಕವ |
ನುಡಿದಂತೆ ಕೂಗೋರ್ಗಲ ಕೊರತೆಕ್ಕೊಯೆಂದನು | ತಿಡಿದನು ಡೊಳ್ಳುಹೊಟ್ಟೆ
[ಗನು || ೫೦ ||
ಬಲರಾಮ ಸನ್ನೊಳು ಸಮರಕ್ಕೆ ಸೆಣಸಿದ | ಬಲರಾಮನಾಗಿ ಹೋಗೆ
[ನುತೆ ||
ಬಲಭದ್ರ ಗಜಮುಖ ತರಿದ ಕೂರ್ಗಣೆಗಳ | ಬಲರಾಮನತುಳಗರ್ವಿಕೆಯ ||
ಕತ್ತರಿಸಿತು ಬಾಹು ಬಿರುಡೆಯ ಶಕ್ತಿಗ | ಳುತ್ತರಿಸಲು ಜೋಡು ಜರಿದು |
ಬಿತ್ತರಿಸಿದುವಂಬುಗಳು ಮೈಯ್ಯೊಳು ಬಿಸಿ | ನೆತ್ತರ ಬಸವಂತಗೊಳಿಸಿ ||
ಧುರದೊಳು ವಿಘ್ನೇಶ್ವರ ಮೆಚ್ಚಿ ನೀಲಾಂ | ಬರಗೆ ತನ್ನಾಮಪಲ್ಲಟವ ||
ಅರುಣಾಂಬರದೇಹವನುಚಿತ ಮಾಡಿದ | ನೆರೆದ ಭೂಭುಜರು ಕೀರ್ತಿಸಲು ||
ನೋಡಿದ ಬಲರಾಮ ತನ್ನವಯವದೊಳು | ತೋಡಿ ಕೂರ್ಗೊಂಡಿರ್ದ
[ಶರವ ||
ಮಾಡಿದ ಕೈಚಳಕವನೆಂದು ನಗುತೆ ಕೊಂ | ಡಾಡಿದ ವಿಘ್ನೇಶ್ವರನ || ೫೧ ||
ಸಕಲವಿದ್ಯಾಪ್ರಾರಂಭ ನಿರ್ವಿಘ್ನದಾ | ಯಕದೇವ ನೀವಾದ ಬಳಿಕ ||
ಅಕಳಂಕಮತ್ಪೂಜೆಕೊಳ್ಳೆಂದು ವರಶಿಲೀ ಮುಖವ ತನ್ಮುಖದೊಳಿಕ್ಕಿದನು ||
ನಿರ್ಜರಗಣಪತಿಯುಮಲಮಸ್ತಕ ಸರ ಳ್ವೆಜ್ಜದೊಳರುಣಾಂಬು ಸುರಿಯೆ
ಮಜ್ಜನಗೆಯ್ದ ಕುಂಕುಮರಸಧಾರೆಯಿಂ | ತೊಜ್ಜಲಾದುದು ನಿಂದೆಡೆಯ ||
ಹೊಳೆವ ಕೆಂಗಣಿಗೋಲು ಪುಷ್ಪರತ್ನಗಳು ಚೆಂ ದಳಿರ್ಗಂಧ ನಿಟಿಲಾಂ
[ತರದೆ ||
ಬಲರಾಮನಿಂದೆ ಪೂಜೆಯ ಕೊಂಡು ಸಮರ | ಸ್ಥಳದೆ ವಿಘ್ನೇಶನಾಡಿದನು ||
ಮೃಡನಾತ್ಮಸಂಭವ ಬಿಲ್ಲಬಿಸುಟು ಚೆಪ್ಪ | ಗೊಡಲಿಯ ಕೊಂಡಾರ್ಭಟಿಸಿ |

ಹೊಡೆದರೆ ಬಲರಾಮನ ಕೈಯ್ಯ ಕಾರ್ಮುಕ । ಕೆಡೆದುದು ತುಂಡಾಗಿ ನೆಲಕೆ ॥
ಇಕ್ಕಡಿವಡೆದ ಕಾರ್ಮುಕವ ನಿವಾರಿಸಿ । ತೆಕ್ಕೊಂಡು ಭಾರಿಯ ಹಲವ ॥
ಒಕ್ಕಯ್ಯೊಳಾಂತ ಪೋರೊನಕೆಯಿಂದಿಕ್ಕಿದ । ಸೊಕ್ಕಾನೆದಲೆಗಸ ಮೇಲೆ ॥
ಹೊಡೆವ ನಿಷ್ಠುರಹತಿಗುದ್ಭ್ರಮೆಗೊಂಡು ಪೇರೊಡಲ ಧೀರ್ರನೆ ತಿರುಗಿ [ಸುತೆ ॥
ಮೃಡ ಚಕ್ರಪಾಣಿಯ ಬಲ ಮುಗ್ಧಪಾಣಿಯ । ಕಡೆವ ಮಂದರಗಿರಿಯಂತೆ ॥
ಮತ್ತಗಜಾನನ ಹರವಸದಿಳಿದ । ಚ್ಛತ್ತು ಪೆರ್ಗದೆಯ ತೆಕ್ಕೊಂಡು ॥
ಹುತ್ತವ ಹೊಕ್ಕರೆ ಬಿಡೆನೆಂದು ತಲೆ ನೆ । ಗ್ಗೊತ್ತಲಪ್ಪಳಿಸುತಿಕ್ಕಿದನು ॥ ೬೧ ॥
ಈತನ ಮಸ್ತಕ ಬಿರಿಯಲಿಕ್ಕಿದರಹಿ । ನಾಥ ಮೂರ್ಛೆಯನಾಂತ ತಳಕೆ ॥
ಚೇತನಗುಂದಿ ದಿಗ್ದಂತಿ ಮಂಡಿಸಲಾಗ । ಭೂತಲವೆಲ್ಲ ಕಂಪಿಸಿತು ॥ ೬೨ ॥
ಚಂಡಪ್ರತಾಪಿ ವಿಘ್ನೇಶ್ವರ ಮಲೆತಿರೆ ಕಂಡು ಹಲಾಯುಧ ಮುಳಿದು ॥
ಸೊಂಡಿಲು ದಂತಗಳೊಡೆವಂತೆ ಮುಸಲದೆ । ಕೊಂಡನು ಕೂಗಿ ಬೊಬ್ಬಿರಿದು ॥
ನಿಟ್ಟಿಸಿ ಬಲರಾಮ ಗಜವದನರಿಗೆ ಪೂ । ವೃಷ್ಟಿಯ ಸುರರು ಚೆಲ್ಲಿದರು ॥
ಹುಟ್ಟಿತು ಪರಿತೋಷ ಯಾದವಬಲ ಗುಡಿ । ಗಟ್ಟಿತು ಮೆಯ್ಮವಿರ್ಗಳಲಿ ॥
ಅತ್ತಲೀಶ್ವರ ಗಣಪತಿಯ ಸಂತೈಸಿದ । ಚಿತ್ತಜತಾತನಗ್ರಜಗೆ ॥
ಉತ್ತಮವಸ್ತ್ರಭೂಷಣಮಾಲ್ಯಲೇಪವ । ನಿತ್ತನು ಪರಮಸಮ್ಮದದಿ ॥ ೬೩ ॥
ವರಮೋಹನತರಂಗಿಣಿಯೆಂಬ ಕಾವ್ಯವ । ಬರೆದೋದಿ ಕೇಳಿದ ಜನರ ॥
ತರಣಿ ಚಂದ್ರಮರುಳ್ಳನಕ ಸತ್ಕೃಪೆಯಿತ್ತು । ಪೊರೆವಲಕ್ಷ್ಮೀಕಾಂತ ಬಿಡದೆ ॥

ಅಂತು ಸಂಧಿ ೫೮ ಕ್ಕಂ ಪದ ೬೩೬೦ ಕ್ಕಂ ಮಂಗಳಂ

# ಮುವ್ವತ್ತೊಂಬತ್ತನೆಯ ಸಂಧಿ

ಪರಮೇಶ್ವರ ಕೃಷ್ಣದೇವರ ಕಾಳಗ —

ನರಕಾಸುರನ ಮರ್ದಿಸಿ ಹದಿನಾರು ಸಾ|ಸಿರ ಕಾಂತೆಯರ ತಂದವನ ||
ವರಕಾರುಣ್ಯಾದಿ ಕೃತಿಮೇಲು ರಸಿಕರ | ಶಿರಕಂಪನದ ಸುಗ್ಗಿಯನು ||೧||

ನಾರೀನರನಾಂತ ಪೆದೆವಾಸಕೆ ಸಿಕ್ಕಿ | ತೋರಿಯ ಬಿಲ್ಯಾಸದಂತೆ ||
ವಾರಿಜಗಂಧಿ ಕೇಳ್ ನಿನಗಾನೊಳಗಾಗಿ | ಸಾರಸತ್ಕೃತಿಯ ವಿಸ್ತರಿಪೆ ||೨||

ಶಿವಬಲದೊಳಗಿರ್ದು ಪರಿತಂದು ಕಾಲಭೈ | ರವ ಬಲರಾಮನ ಕಂಡು ||
ಜವಗಿಡದೆನ್ನೊಳು ಕಡಿದಾಡಬಪ್ಪುದೆಂ | ದವಗಡಿಸಿದನಾರ್ಭಟದಿ ||೩||

ರಣದೊಳು ಜಯವಧೂಟಿಯ ಮುಂದೆ ನಿನ್ನಯ | ಡೊಣಗನ ಬಿಟ್ಟುಕೊಂ [ಡಿರಲು ||
ಅಣಕವಾಡುವರಪ್ಸರಗಣಿಕೆಯರೆಲೆ | ರಣಭಂಡ ಹೋಗೆಂದು ನುಡಿದ ||೪||

ಜಾನಿಸಿ ನೋಡು ನೀವೆಲ್ಲ ಮಾತೃಕೆಯರ | ಯೋನಿಯೊಳ್ ಪೊಱಮ [ಟ್ಟು ಬರುತೆ ||
ಸೂನಿತವಸನದಿಂದೇಕೆ ಬಂದಪವಹ | ಮಾನಿಕೆಗಳ ನೋಡಿದಪಿರಿ ||೫||

ಜಾಣತನದೊಳಧ್ಯಾತ್ಮದ ನುಡಿ ಗೀ | ರ್ವಾಣದೀಕ್ಷೆಯ ಮೋಕ್ಷವನು ||
ಕಾಣಬೇಕಾಯಿತಾದರೆ ಬೆನ್ನ ದೇವರ | ತಾಣಕ್ಕೆ ತಳರೆಂದ ನಗುತೆ ||೬||

ನೋಡಿದ ಬೆನ್ನ ಶಾಸ್ತ್ರವನಿನ್ನೀಗ್ರಂಥವ | ಮಾಡಿ ತೋಱುವೆನೆಂದೆನುತೆ ||
ಮಾಡಿದ ಹೊಂಬರಹದ ಸರಲುಗಳಿಂದೆ | ತೋಡಿದ ಬಲರಾಮನೆದೆಯ ||೭||

ಎದೆಯೊಳು ತಾಗಿ ಥಟ್ಟುಗಿದುವೆಂದೆನಲಾ ಹೊದೆಗೋಲುಗಳ ಕತ್ತರಿಸಿ ||
ಇದೊ ನೋಡು ಕಾದುಕೊಳ್ಳೆನುತೆ ಭೈರವನ | ಭ್ಯುದಯವಮುರಿದಿಕ್ಕಿದನು ||

ಉಕ್ಕಿದ ಕಡುಗೋಪದಿ ಕೋಲ್ಗಳ ತಿಕ್ಕಿ | ಮುಕ್ಕಿದ ಮುರಹರಾಗ್ರಜನ ||
ಟಕ್ಕಿಸಿ ಹೋದಡೆ ಬಿಡೆನೆಂದು ತೆಗೆದುಕೊಂ | ಡಿಕ್ಕಿದನಾತ್ರಿಶೂಲದಲಿ ||೮||

ಶೂಲ ಬರ್ಪುದ ಕಂಡು ಪರಬಲಮಸ್ತಕ | ಶೂಲನ ಗೂಟವ ತರಿದು ||
ಶೂಲಬೀತುದು ಕೂರ್ಗಾಯವನೋಡೆಂದು | ಕೋಲಿಂದಲೆಚ್ಚು ಬೊಬ್ಬಿಱಿದ ||

ಕದನಚಾಪಟವುಲ್ಲ ಖಂಡೆಯದಲಿ ಸಮು | ರಿದ ಸರಲ್ಗಳ ಮೋಹರವ||
ಒದವಿದ ಧನುರ್ಬಾಣವ ಹಿಡಿ ಬಿಡು ಹಲ ಯುದ್ಧವನೆಂದವ ಪಚಾರಿಸಿದ
ನುಡಿದ ಗರ್ವವ ಬಿಡಿಸುವೆನೆಂದು ನೇಗಿಲ | ಹಿಡಿದನುತ್ತರ ಕರಾಗ್ರದಲಿ||
ಜಡಿದು ದಕ್ಷಿಣಹಸ್ತದೊನಕೆಯಿಂದಹಿತನ | ಒಡಿದನು ಬಲ ಬೆದರ್ವಂತೆ ||
ಒಡ್ಡಿದ ಭೈರವನ ಬಲರಾಮನ ಪೆಟ್ಟು | ದೊಡ್ಡಿತೆನುತ್ತೆ ನಿಷ್ಠುರದಿ ||
ಒಡ್ಡಿಯು ನುಡಿದು ಕೃಷ್ಣಾಗ್ರಜಾತನ ಮೇಲೆ | ಜಡ್ಡಿದ ಗದೆಯ ಗಾಯವನು||
ತಳೆದನು ಬಲಭದ್ರರಾಮನ ಗದೆಯೆರ | ತಳವ ಭೈರವನು ಪಟಳಕೆ ||
ಹೊಳೆದು ನೀಲಾಂಬರ ನೇಗಲ ಕೊರಲ್ಗಿಕ್ಕಿ ಸೆಳದವರ್ ಪ್ರೊಯ್ದಾಡಿದರು||
ಖಣಿಖಣಿತಟಸಿಟಿಸಿಳಿಲೆಂಬ ಶಬ್ದದಿಂ ಹಣಿಮಾಡುವದಟರ ಕಂಡು ||
ಫಣಿಭೂಷಣಾಚ್ಯುತರ್ ಮೆಚ್ಚೆ ಪೂಮಳೆ ತಿಂ | ತಿಣಿಯಾಗಿ ಸುರಿದುದಿರ್ವರಿಗೆ||
ಬರಹೇಳು ಭೈರವ ಬೀಳಿದನೆಂದೀಶ್ವರ ಕರೆದನು ರಣದೊಳಗೆ |
ಮೆರೆವ ನೀಲಾಂಬರ ಕಂಠೀರವನಂತೆ ಪರಬಲ ಗಜಬಜವಾಯ್ತು ||೧೬||
ಇಷ್ಟು ಪೌರುಷದ ಬೊಬ್ಬೆಯ ಕೇಳ್ದು ಸುರರು ತ | ಮ್ಮಿಷ್ಟೆಂದು ಗೂಡಿ [ಯಾದವರು ||
ಭ್ರಷ್ಟವಾತದೆ ಬಿಡೆನೆಂದು ಕೋಪದ ಬಹು | ನಿಷ್ಠುರ ಶಸ್ತ್ರಸನ್ನಹದಿ ||೧೭||
ಉರುಬಿದರಮರರುಗಳನೆಚ್ಚು ಯಾದವರ್ | ತರುಬಿದರ್ ತಲೆಯಾಂತು [ಕೊಂಡು ||
ಬಲದೊಳು ಹೊಕ್ಕು ಬಲ್ಲಿದರ ನೆಗ್ಗೊತ್ತಿ ಹಿ | ನ್ನೆಲಕಡರ್ಚಿದರುಸೂರಿಯಲಿ ||
ನೆಱೆನೊಂದು ನಿರ್ಜರ ಬಲ ಪರಮೇಶನ | ಮಱೆಯೊಕ್ಕುತವರಿರ್ವರಿಗೆ||
ಹೆಱೆನೊಸಲಮರಾಂಗನೆಯರು ಹೂಮಳೆ | ಗಱೆದರು ರಣರಂಗದೊಳಗೆ||
ಹುಗಲಮ್ಮದಿರುಳು ನಿಟ್ಟಿಸಿದ ಹೆಬ್ಬಾವಿಗೆ | ಹಗಲೆ ಬಿದ್ದಂತಾದುದೆಮಗೆ|
ಖಗರಾಜನೊಳು ಹಿಂದೆ ಕಾದಿ ನುಗ್ಗದ್ದವರ್ | ಜಗಳವ ತೊಡಚಲು ಬಹುದೆ
ಭೀತಸ್ಧರಾದ ನಿರ್ಜರರಿಗೆ ಹಿತಗೊಂಡು | ಭೂತೇಶ ತಾನಡ್ಡಬಂದು ||
ಶ್ವೇತೋರಸ್ಧಲ ಬಲರಾಮ ತೊಲಗೆಂದು | ಪೀತಾಂಬರಗೆ ಹೂಣಿಸಿದ ||
ಭೀಕರಮೂರ್ತಿ ಶಿಂಜಿನಿಗೊಳಿಸಿದ ಪಿ | ನಾಕವ ಜೇವೊಡೆಗೆಯ್ಯೆ ||
ಆಕಾಶದೆಡೆಯಲ್ಲಿ ಪ್ರತಿಸೂರ್ಯರು ಮೂಡಿ ಭೂಕಂಪವಾದುದೇನೆಂಬೆ ||

---

ಕ.ಪ ೪—1. ದೊಡ್ಡಬಾವಿ 2 ಗರುಡ

ಕಿಡಿಗಣ್ಣನಭಿಮತವಹುದೆಂದು ಶಾರ್ಙ್ಗವ | ಪಿಡಿದೆತ್ತಿ ಶಿಂಜನಿಗೊಳಿಸಿ ||
ನುಡಿಸಿದ ಶ್ರೀಕೃಷ್ಣ ಬ್ರಹ್ಮಾಂಡಭಾಂಡಗ | ಳಡಿಕಿಲು ಹೊಡೆಮಗಿವಂತೆ ||
ಕರಚರಣಂಗಳು ಮೂಡಿರ್ದ ಕೈಲಾಸ | ವರ ನೀಲಗಿರಿಯ ಕಿತ್ತುಡಿಸಿ ||
ದೊರೆ ಸಮರ್ಧಿಕೆಯೊಳಿರ್ದರು ಬಂದು ತಲೆಪಟ್ಟು ಹರಮುರಧ್ವಂಸಿ ಕಾದಿ [ವರು || ೨೮ ||

ಈಬಾಣವ ನಿರ್ಣೈಸಿಕೊಂಬಾತನ | ಕಾಣೆನೆಂದೀಶ್ವರ ನುಡಿದು ||
ಲಾಭಹತಿಯ ಮುಂಚೆ ತೆಗೆದುಕೊಳ್ಳುತಬ್ಜ | ನಾಭನನೆಚ್ಚು ಬೊಬ್ಬಿರಿದ ||
ಶಿವ ನೀನಾದಕಾರಣದಿಂದೆ ಬಂದಾ | ಹವದೊಳು ಬೊಬ್ಬಿಕ್ಕಬಹುದು ||
ತವ ರಹಸ್ಯವ ಬಲ್ಲೆನೆಂದಚ್ಯುತ | ಕವಲಂಬೊಳೆಚ್ಚು ಬೊಬ್ಬಿರಿದ || ೨೯ ||
ಹರಿ ನೀನಾದ ಕಾರಣದಲ್ಲಿ ಸಮರತಾ ತ್ಪರಿಯದ ನಗೆದಾಡ ಬಹುದು ||
ತುರಿಯದೆ ಕೈದ ಕೊಳ್ಳುತಲೀಶ್ವರ ಮುಂದು | ವರಿದೆಚ್ಚ ನಾಗ ಬಾಣದಲಿ ||
ಅಸಮಾಕ್ಷನೆಸುಗೆಯ ಘೋರಾಹಿಬಾಣವ | ವಿಪದ ಕರ್ಬೊಗೆ ಸುತ್ತಿ [ಬರಲು ||
ಜನವೆತ್ತ ಗರುಡಬಾಣದಿ ಕೃಷ್ಣರಾಯ ಖಂ | ಡಿಸಲದು ಬಯಲಾದುದಾಗ ||
ಗತವಾದ ಫಣಿಬಾಣವ ನೋಡುತೀಶ ಪ | ರ್ವತ ಬಾಣದಿಂದಾಗಳೆಸೆಯೆ ||
ಶತಕೋಟಿ[1] ಬಾಣದಿಂ ತರಿದಿಕ್ಕಿ ಚೂರ್ಣೀ | ಕೃತವ ಮಾಡಿದ ಕೃಷ್ಣ ನಗುತೆ ||
ಮಾಡದ ಮಾಟವ ಮಾಡಿ ನೀ ಮುನ್ನೊಂದು | ಕೋಡಗವನು ಬೀಳಲೆಚ್ಚ
ಪಾಡನೆನ್ನೊಳು ತೋರಿಸೆಂದು ಕಪರ್ದಿ ನಿ | ವಾಡ ಕಾರ್ಗಣೆಯೊಳಿಕ್ಕಿದನು
ಇಳೆಯೊಳು ಬಲುಬಲ್ಲಿದನೀ ಮುನ್ನೊಂದು | ಹಳಿಯಾನೆಯಮೆಟ್ಟಿ [ಸೀಳಿ ||
ತೊಳಯದೆ ತೊವಲ ವಸ್ತ್ರವನುಟ್ಟ ಧೈರ್ಯವ | ವೊಳೆದೋರಿಸೆಂದೆಚ್ಚ [ನಗುತೆ || ೩೧ ||

ಸಂಚಲಿಸದ ಧೀರ ನೀಮುಚುಕುಂದನ | ಮುಂಚವ ಮಡುಹಿಯೊಕ್ಕುದಿಲ್ಲ
ಹಿಂಚಾದುದಾಹವದೊಳು ನಿನ್ನ ಮಾತೆಂದು | ಪಂಚಾಸ್ಯನಗುತೆಕೋಲ್ಗರೆದ ||

---

ಕ ಪ ಅ—1. ಗರುಡ. 2 ವಜ್ರಾಯುಧ—" ಶತಕೋಟಿಸ್ಸ್ವರುಶ್ಶಂಬೋದಂಭೋಳಿ ರಶನಿರ್ದ್ವಯೋಃ" ಎಂದು ಅಮರ.

ಪರಮೇಶ್ವರ ನೀ ಪರುಕನೆ ಭಸ್ಮ | ಸುರನಟ್ಟಿತರಲೋಡಿತಿಲ್ಲ ||
ಧುರದೊಳಗೆನ್ನ ಪಚಾರಿಸಬಹುದೆಂದು | ಸರಲಿಂದಲೆಚ್ಚ ಶಂಕರನ ||೩೩||
ಧರೆಯೊಳು ನಿನ್ನ ಹೋಲುವರುಂಟೆ ಕಣ್ಣಗೆ | ಹೆರೆ ಕವಿದುರಗನ ತುಱಿದ
ದೊರೆತನದೇೞಿಗ್ಗಯ ತೋಱಿಂದು ಧೂರ್ಜಟಿ | ಶರತತಿಯಿಂದಲಿಕ್ಕಿದನು ||
ಮಾಣದೆ ಮುಗುಳೊಮ್ಮೆ ರಣರಂಗದೊಳಗೆಕ | ಸ್ಗಾಣದ ಖಲನಮರ್ದಿಸಿದ ||
ತ್ರಾಣವನೆನ್ನೊಳು ತೋಱಿಂದು ತೋರಿಯ | ಬಾಣದೊಳೆಚ್ಚನೀಶ್ವರನ ||
ನೆರೆದ ನಿರ್ಜರದೈತ್ಯರ ಮುಂದೆ ಕೃಷ್ಣ ನಿ | ಷ್ಠುರವಾಕ್ಯ ನಿನಗೇಕೆನುತೆ ||
ಪರಮಕೋಪಾಟೋಪದಿಂದೆ ಮಹೇಶ್ವರ | ಜ್ವರಬಾಣದಿಂದಲಿಕ್ಕಿದನು ||
ಹರನೆಚ್ಚ ಬಾಣ ಬರ್ಪುದ ಕಂಡು ಶೀತ | ಜ್ವರಬಾಣವ ಕೃಷ್ಣ ಬಿಡಲು ||
ವರವೈಷ್ಣವಶೈವಾಸ್ತ್ರ ತದ್ಗಗನಾಂ | ತರದಲ್ಲಿ ಕಡಿದಾಡಿದುವು ||೩೭||
ಹುಡಿಯಾಗಲುರ್ವಿಪರ್ವತಸಪ್ತಶರಧಿಗ | ಳಡಿಮೇಲಾಗೆ ನಕ್ಷತ್ರ ||
ಮುಡಿಯಲರುಗಳಂತೆ ತಡೆಯೆ ಮಹೇಶ್ವರ | ಹಿಡಿದನು ವರತ್ರಿಶೂಲವನು ||
ಶೂಲಪಾಣಿಯ ನಿಟ್ಟಿಸಿ ಕೃಷ್ಣ ರಿಪು ಪ್ರತಿ | ಕೂಲಪಾೞುಂಬಳೆವಿಡಿಯೆ ||
ಮೂಲೋಕ ಧಿಱ್ರನೆ ತಿರುಗುತಿರ್ದುದು ಕು | ಲಾಲಚಕ್ರಾಕೃತಿಯಂತೆ ||
ಶಿವ ತ್ರಿಶೂಲದೊಳಿಡಲುೞಿದವರಿಲ್ಲ ಕೇ | ಶವಚಕ್ರವಾರ ಲೆಕ್ಕಿಸದು ||
ಹವಣಿಲ್ಲ ನಿಲ್ಲು ನಿಲ್ಲೆನುತಿರ್ದರಿಗೆ ಸ | ತ್ಯವ ಪೇೞ್ದುದಾಕಾಶವಾಣಿ ||೪೦||
ಮೊೞಗುವ ದೇವದುಂದುಭಿನಭಸ್ತಳದಲ್ಲಿ | ಬೆಳಗುವಮಂಗಳಾರ್ತಿಗಳ ||
ತೊಳಗುವ ಮಂದಾರಮಾಲೆಯ ಮಹದಾದಿ | ಮೞೆಗಳ ಕಱೆದರಿರ್ವರಿಗೆ ||
ವರಮೋಹನತರಂಗಿಣಿಯೆಂಬ ಕಾವ್ಯವ | ಬರೆದೋದಿ ಕೇಳಿದ ಜನರ ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು | ಪೊರೆವ ಲಕ್ಷ್ಮೀಕಾಂತ ಬಿಡದೆ

ಅಂತು ಸಂಧಿ ೩೯ ಕ್ಕಂ ಪದ ೬೫೭೦ ಕ್ಕಂ ಮಂಗಳಂ

# ನಾಲ್ವತ್ತನೆಯ ಸಂಧಿ

ಕೃಷ್ಣದೇವರ ಬಾಣಾಸುರರ ಕಾಳಗ —

ಚಂದನವಿತ್ತ ಮೂಹೊರಡೆಯು[1] ತನುವ ನೇರಂದವ ಮಾಡಿ ತೋಱಿಸಿದ
ವೃಂದಾವನತಾತ್ಪರ್ಯನ ಕಾರುಣ್ಯದಿಂದೆ ಮೇಲ್ಗತೆಯ ವಿಸ್ತರಿಸು ॥೧॥
ಅಪಾರಗುಣಪೂರಿತೆ ಸತ್ಯಮುನೀಯರೂಪಸ್ಧೆ ಲಾಲಿಸು ನಿನ್ನ ॥
ತಾಪತ್ರಯವ ನಿವಾರಿಪ ರಮೆಯು ಪ್ರಾಣೋಪನ ಕೃತಿಯ ವಿಸ್ತರಿಪೆ॥೨॥
ಅತುಳಬಲಾಢ್ಯಕೃಷ್ಣನ ಕೂಡೆ ಕಂದರ್ಪಜಿತು ದೇವ ಬಲಗೂಡಿ ಕಾದಿ॥
ಸತುಗೆಟ್ಟ ತೆಱದಿ ಕೌಳಿಕವಾಂತು ತನ್ನಯ ಋತುಪೂರ್ಣವನವ ಸಾರಿದನು ॥
ಪುಲಿಸಮ್ಮದುಡುಗೆಯು[2] ತೆಗೆದನೆಂಬುದ ಕೇಳಿ । ಒಲಿಸುತ ಶಿವಪೂಜೆ [ಗೆಯ್ದು॥
ವಿಲಸಿತರತ್ನಭೂಷಿತನಾಗಿ ಹೊಱವಟ್ಟು ಕಲಿಗಳ ದೇವ ಕಾಳಗಕೆ ॥೪॥
ತರಣಿಯ ತೇರ ತೇಜಿಯ ಹಿಂದುಗಳೆವ ಸಾಸಿರಘೋಟಕಾನ್ವಿತರಥವ॥
ಭರವಸದಿಂದೇಱಿ ತೆರಳಿದ ಶೋಣಿತ ಪುರಪತಿ ವಾದ್ಯಘೋಷದಲಿ ॥೫॥
ತುಳಿವರೆ ಭೂಮಿ ನೆಗ್ಗುವ ದಂತಿ ಹೊಸವಜ್ರ । ಹಳವೆತ್ತ ರಥವಾಜಿ [ನಿಚಯ ॥
ತಱಿತ ಕೋರಿತದ ಪೊಂಬೆಳಗಿನ ಭಟರು ಸಂದಳಿಸಿತು ಖಳರಾಯನೊಡನೆ॥
ವಾರಿಧಿ ಸಪ್ತಕುಲಾಚಲಕುಡಿಮವು । ಸಾರಿತು ಶೋಣಿತವರ್ಷ ॥
ತಾರಕಿ ಹಗಲುರುಳಿತು ದೈತ್ಯನ ರಣಭೇರಿಯ ನಿಷ್ಠುರರವಕೆ ॥೬॥
ಮೂಡಿತು ಪ್ರತಿಸೂರ್ಯ ಧೂಮಕೇತುಗಳೋಡಿ । ಯಾಡಿತು ಗಗನಾಂ [ತರದೆ ॥
ಬಾಡಿತು ಜಯವಧೂಟಿಯ ಮುಖ ದೈತ್ಯನ ಕೇಡಿಂಗೆ ತೋಱಿತುತ್ಪಾತ॥೭॥
ಅವಶಕುನಂಗಳ ನೋಡಿ ಹಿಮ್ಮೆಟ್ಟದೆ । ಶಿವಬಕುತಿಯ ಹೆಮ್ಮೆಯಲಿ ॥

---

ಕ ಪ.ಅ—1 ಮೂರು ಗಂಟುಗಳುಳ್ಳ ತ್ರಿವಕ್ರೆಯೆಂದು ಪ್ರಸಿದ್ಧಳಾದ ಕುಬ್ಜೆಯು.
೨. ವ್ಯಾಘ್ರಚರ್ಮಾಂಬರ, ಈಶ್ವರ.

ಜವದಿಂದೆ ಪರಿತಹ ದೈತ್ಯನ ಸೇನಾ। ನಿವಹವನೇನ ಬಣ್ಣಿಪೆನು ॥೯॥

ಹೊದರೆದ್ದ ಸಿತಸೀಗುರಿಗಂಚುಬಿನಿವಾಡ। ದೊದರುವ ಗಂಟೆಯು ರವದಿ ॥
ಮದಗಜ ನೀಲಾದ್ರಿನಿಚಯದೆ ಪರಿತಪ್ಪ। ಪದಘಾತ ನೆಲನ ನೆಗ್ಗಿಸಿತು॥೧೦॥

ಮಸೆದ ಸೂನಿಗೆಯಾಂತ ಕರಿಯ ಕಪೋಲದೆ। ಬಿಸಿಯ ಮದೋದಕ [ಸುರಿದು ॥
ಕೆಸಱಾದುದುರ್ವಿಯ ತಲ ದಂತಿಘಟೆಯ ಲೆ। ಕ್ಕಿಸಲೊರ್ವ ಗಣಿತಜ್ಞಗಳವೆ॥

ಖುರಪುಟತಾಳತಾಡನದಿಂದಲಿ ಮಿಗೆ। ಯುರವಣಿಸುವ ತೀವ್ರಗತಿಯ ॥
ತುರಗಾರೋಹವಾಹಕ ಸೈನ್ಯಪ್ರಲಯಸಾ। ಗರವೆನಲೊಳಕೊಂಡುದಿಳೆಯ॥

ಗಜರಥಗಳ ಮೇಲೆ ಗಗನವ ತುಡುಕುವ। ಧ್ವಜಪರ ಛತ್ರಚಾಮರದಿ ॥
ನಿಜವೈಭವದ ನಿಶಾಚರನಿಖಿಳ ಭೂ। ಭುಜರಡರಿತು ಬಾಣನೊಡನೆ ॥೧೩॥

ಕಡೆಯ ಪೆಂಡೆಯ ಗೆಜ್ಜೆ ಕಣಕಾಲ ಬಾಸಿಂಗ। ಮಡೆಯ ಬದ್ದುಗೆಯ [ಕಿಗ್ಗಟ್ಟು ॥
ಬಿಡೆಯವಿಲ್ಲದೆ ಪೋಲಗಟ್ಟಿನ ಬಿಲ್ಲಾಳ। ಪಡೆ ನಡೆಯಿತು ಬಾಣನೊಡನೆ ॥

ಕಕ್ಕಡಕಡಿಕಲೆ[1] ಪಟ್ಟೆ ವಂಕುಡಿವಿಡಿ। ದೊಕ್ಕಯ್ಯ ಪಲಗೆ ಪೆರ್ಬಡಿಗೆ
ಎಕ್ಕಟಿಗರ ಮೇಲೆ ಜೆಮ್ಮುವ ಜವಮುಖವ। ಲೆಕ್ಕವ ಮಾಡುವರಾರು ॥೧೫॥

ಕವಿದರು ಮುಂದೆ ಚೂಣಿಯ ಭಟರ್ಕಳು ಹೊಕ್ಕು। ತಿವಿದರು ಪರ [ಬಲದೊಳಗೆ ॥
ಅವಿದರು ಮುರಿದಿಕ್ಕಿ ನೂಂಕಿದ ಸೂರಿಯ। ವಿವಿಧರು ನೆರೆ ತಱುಬಿದರು ॥

ಮನ್ನೆಯ ಮಕುಟವರ್ಧನರೆಡಬಲದಲ್ಲಿ। ಸನ್ನೆಯ ರಣಭೇರಿ ಮೊಱಗೆ ॥
ಪನ್ನಗಧರ ಭೃತ್ಯಗಿದಿರಾಗಿ ಕ್ಷೀರಾಬ್ಧಿ। ಕನ್ನೆಯ ವರನೊಳಿಂತೆಂದ ॥೧೭॥

ಗದ್ದೆಯ ಗೊರವನೊಳ್ ಕಡಿದಾಡಿ ಪೊಗರುವೆ। ತ್ತಿದ್ದೆ ನೀ ರಣರಂಗದೊ [ಳಗೆ ॥
ಬಿದ್ದೆಯ ನನ್ನ ಬಾಧೆಗೆ ಕೃಷ್ಣ ಕರೆ ನಿನ್ನ ದೊದ್ದೆಯ[2] ನಿಲಲೊಬ್ಬಗರಿದು॥

ಬೀರವ ಬಿಸುಟು ಕಾಳಗಕಂಜಿ ಕಂಗೆಟ್ಟು। ನೀರೊಳು ಪೊಕ್ಕ ರಕ್ಕಸನ॥
ಘೋರಾಕೃತಿವೆತ್ತು ಮೀನಾಗಿಮುಡುಹಿದ। ತೋರಹತ್ತುವ ತೋಱಿನ್ನೊಡನೆ

---

ಕ. ಪ ಅ —1 ಕತ್ತಿ 2 ಸಹಾಯಕರಾಗಿ

ಜಗದೊಳಗೆ ಸುರಾಸುರರೊಂದುಗೂಡಿ ಪ|ನ್ನಗರಶ್ಮಿಯಿಂದ ಪಾಲ್ಗಡಲ ||
ನಗವಿಟ್ಟು ಕಡೆದೊಡೆ ಮುೞುಗಿದೊಡದ ಹೊತ್ತು |ನೆಗಹಿದ ಬಲುಹ ತೋ [ಱನಗೆ || ೨೦ ||

ನಿಂದಿಸಲೇಕೆ ಭೂತಸ್ಕರನೊಳು ಕಾಡ|ಹಂದಿಯ ರೂಪಾಂತು ನೀನು ||
ಅಂದಿನ ದಿನದೊಳಾತನ ಕೊಂದ ಧೈರ್ಯವ|ನಿಂದಿಗೆ ತೋಱು ತನ್ನೊಡನೆ ||

ಮಿಗವಲ್ಲ ಮಾನಸರೂಪಲ್ಲ ಕೇಸರಿ|ಮೊಗ ತೆಱೆವಾಯ ಪಲ್ಗಿಱಿದು ||
ನಖದಿಂದಲಹಿತನ ಗೇಡಿಕೊಂಡಱುಹಿದ ಪ್ರಕಟಿತಬಲುಹ ತೋಱೆನಗೆ ||

ನೋಡಿದೊಡೆಂಟುಗೇಣೊಡಲ ಚೋಟುದ್ದವ | ಮಾಡಿ ಮುತ್ಪಿತನಲ್ಲಿ [ತ್ರಿಱಿದು ||
ಪೀಡಿಸಿ ನೆಲನ ತೆಕ್ಕೊಂಡ ಲೆಕ್ಕವ ಕೊಡ | ದೋಡೆ ಬೆನ್ನನು ಬಿಡೆ ಕೃಷ್ಣ ||

ಕೇಳಬಾರದ ಬೊಮ್ಮೇತಿಯ ನೆಗೞ್ದ ಹೇ | ರಾಳಪಾತಕಭೂಭುಜನ ||
ತೋಳಡವಿಯ ತರಿದೊಟ್ಟದೆಲಾ ಮುಂದಿ | ವಾಳವ ತೋಱು ತನ್ನೊಡನೆ ||

ಖಳರಾಯನನುಜ ವಿಭೀಷಣ ಬಂದಿನ್ನು|ವ್ರೊಳಮೋಸಗೊಟ್ಟ ಕಾರಣದಿ ||
ಕಳಿದುೞಿದವನ ಮರ್ದಿಸಿಯಲ್ಲದೆ ನಿನ್ನ | ದಳವಾಡವೇನು ನೀನೇನು || ೨೫ ||

ಸಲೆ ಬಾಹುಬಲ್ಲಿದ ನಿನ್ನ ವಿಕ್ರಮದೇಱ್ಗ | ಬೆಲೆಗಟ್ಟಬಲ್ಲವರಾರು ||
ಮೊಲೆವಾಲನುಣಿಸಿದಾಯಕನ ಪ್ರಾಣವ ಕೊಂದ | ಕೊಲೆಗೇಡಿ ಬಲುಹ [ತೋಱೆನಗೆ || ೨೬ ||

ಕೊಂದವರುಂಟೆ ಮಾತುಳನ ಮಾವಗೆ ಬಿಟ್ಟು | ಬಂದವರುಂಟೆ ದುರ್ಗ [ವನು ||
ಬೆಂದವರುಂಟೆ ಗೋಮಂತಶೈಲದ ಜರಾ | ಸಂಧನ ಜನ ಸುಡುಗೆಯಲಿ || ೨೭ ||

ಯದುಕುಲೋತ್ತಮ ಕೇಳು ಸಮರಕೆ ಹಿಮ್ಮೆಟ್ಟಿ | ಬದುಕುವ ರಣ [ಭಂಡರನು ||
ಕುದುಕುಳಿ ಜಯಲಕ್ಷ್ಮಿ ಕೂಡಿಕೊಂಬವಳಲ್ಲ ವದು ಕಾರಣ ಪೇೞ್ದಿನಿನಗೆ ||

ತಗಱು ಹಿಮ್ಮೆಟ್ಟಿ ಧಾರಿಣಿಯೊಳು ಬಱಸಿಡಿ|ಲೆಱಗೆವಂತೆ ಬಂದೆಱಗುವುದು
ತೆಗೆದೆಸೆಯಲು ಸರಲ್ಗಳು ಪೋಗಿ ಗರ್ಭವ | ಬಗೆಯದೆ ಮಾಱ್ಪುದೆ ಮರುಳೆ ||

ರೂಢಿಯೊಳಮೃತಜಂಬೀರರಸವನೊಂದು | ಗೂಡಲು ರೋಗಾಂತ್ಯವ [ಹುದೆ ||

---

ಕ ಪ ಅ—1. ಚಂಚಲಳಾದ.

ಒಡೆದ ಪರಮ ಹಂದೆಯ ಬಾಹುಮೂಲದಿ ಮಾಡಿ ಸತ್ಕೀರ್ತಿ ನಿಲ್ಲುವುದೆ ||
ಅಡಗುವ ಶಾರ್ದೂಲ ಹಾಯುವ ಹರಿಣನ ಕೆಡಹಿ ರೋಹಿತವನೀಂಟುವುದು |
ಪೊಡವಿಯೊಳಾರದು ಗೆಲುಸೋಲವೆಂಬುದ ಜಡಮತಿ ತಿಳಿದು ಪೇಳೆನಗೆ ||

ಬಲ್ಲವಿಕೆಯ ಮಾತು ಬೇಡವೆಂದೈನೂಱು ಬಿಲ್ಲನಾರಿಯ ಭೋರ್ಗರಿಸೆ
ತಲ್ಲಣಿಸಿದುವು ಶತ್ರುಗಳೆದೆ ಕೈದೆರ ಹಿಲ್ಲದೆ ಕಱಿದ ಕೂರ್ಗಣೆಯ ||೩೭||

ಎಸೆಯಲೈನೂಱು ಬಾಣಂಗಳನುಡಿದು ಖಂ ಡಿಸಲಂಬುಜಾಕ್ಷಗೆ ಮೆಚ್ಚಿ
ಮಸೆದ ಕೂರ್ಗಣೆಯಿಂದೆ ಮಗುಳಿಸೆ ಸರಲು ಸಂ ಧಿಲಸಲವ ಕಡಿದೆಚ್ಚ
[ಖಲನ ||೩೮||

ಎಚ್ಚೊಡಚ್ಯುತನ ಬಾಣಂಗಳ ತಡೆಗಡಿ ದೆಚ್ಚ ಮಾರ್ಗಣದಿಂದೆ ದೈತ್ಯ ||
ಎಚ್ಚ ಕೂರ್ಗಣೆಯನಿಕ್ಕಡಿ ಮಾಡಿ ಮುರಹರ ನೆಚ್ಚ ರಕ್ಕಸನುರಸ್ಥಳವ ||

ಕೋದಂಡಶಿಲೀಮುಖ¹ವಿಡಿದು ತಸ್ಕಿದಿರಾಗಿ ಕಾದ ಸಮರ್ಥ ನೀನಹುದು
ಆದೊಡೀಮಂತ್ರಾಸ್ತ್ರವ ಕಾದುಕೊಳ್ಳೆಂದು | ಮಾಧವಗೆದೆಯೊಳಿಕ್ಕಿದನು ||

ನೆಲನಾವುದಾಗಸವಾವುದೆಣ್ದೆಸೆಗಳ ಹೊಲಬಾವುದೆಂದು ತೋಱಿಸದೆ ||
ಜಲನಿಧಿ ಜಲವ ನುಂಗಿದವೊಲು ಬಾಣಾಬ್ಧಿ ಬಲಗೂಡಿ ಹರಿಯ ನುಂಗಿಮವು

ಬಾಣನ ಬಾಣಾಂಬುನಿಧಿಯ ಮೇಲಗ್ನಿಯ ಬಾಣವ ಶ್ರೀಕೃಷ್ಣ ಬಿಡಲು||
ಬಾಣ ಬಂದದನೆಲ್ಲವ ನುಂಗಿ ದಹಿಸಿತು ಬಾಣನ ಬಲದೊಳು ಹೊಕ್ಕು ||

ಪಟ ಪಲ್ಲವ ಛತ್ರ ಚಮರ ಝಲ್ಲರಿಗಳ್ದ ವ್ವಟ್ಟ ಜಗಜಗಿಪ ಜೋಡು
[ಗಳು ||
ಛಟಛಟಧ್ವನಿಯಿಂದೆ ಬಿಸಿಯ ಕೆಂಗಿಡಿಗಳು ಪುಟನೆಗೆದುವು ನಭಸ್ಥಳಕೆ ||

ಸ್ಯಂದನ ಗಜ ಘೋಟಕ ಪಾಯದಳ ಗೋ ವಿಂದನ ಸರಲ ಕೆಂಗಿಡಿಯ||
ಬಂದನ ಕೊಳಗಾಗೆ ವರುಣಾಸ್ತ್ರದಿಂ ಬಲಿ ನಂದನನೆಚ್ಚು ನಂದಿಸಿದ ||೩೯||

ಮೇಷಾರೂಢಮಾರ್ಗಣ² ಬೀತುದು ಹೃಷೀ ಕೇಶನೆ ತಿಮಿರಾಸ್ತ್ರವನು ||
ನೀ ಸಂಭಾಳಿಸಿ ಕೊಳ್ಳೆಂದು ದೈತ್ಯಾ ಧೀಶ ಬೊಬ್ಬಿಱಿದೆಚ್ಚ ಬಿಡದೆ ||೪೦||

ಎತ್ತ ನೋಡಿದೊಡೆ ಭೇದಿಸಲಳವಲ್ಲ ಕಾ ಗತ್ತಲೆ ಕವಿದುದಾಹವದೆ ||

---

ಕ.ಪ.ಅ—1. ಬಾಣಗಳು. 2. ಆಗ್ನೇಯಾಸ್ತ್ರ—ಹೇಗೆ ?

ಕಿತ್ತು ಕಠಾರಿಯು ಭಟರೊಪ್ಪಿದರು ಪುರು|ಷೋತ್ತಮನಂಗರಕ್ಷೆಯಲಿ ॥೪೧॥
ಬಾಣನ ಭಟರು ಯಾದವರೆಂಬ ಬಗೆಯು ಕ|ಗ್ಗಾಣದೆ ತಮ್ಮೊಳು ತಾವು॥
ಹಾಣಾಹಣಿಯೊಳು ತಿವಿದಾಡುವುದ ಜಗ|ತ್ಪ್ರಾಣ ನಿರೀಕ್ಷಣೆಗೆಯ್ದ ॥೪೨॥
ಧುರದೊಳು ತುಱುಗಿರ್ದ ಕೃತಕಾಂಧಕಾರವಿ | ಸ್ತರವ ನಿರ್ಮೂಲಗೆ[ಯ್ವುದಕೆ ॥
ವರಮೂಡಿಗೆಯಿಂದೆ ತೆಗೆದೆಚ್ಚ ಕೃಷ್ಣ ಭಾ|ಸ್ಕರ ಬಾಣದಿಂದೆ ರಕ್ಕಸನ॥೪೩॥
ಬೀತುದು ತಿಮಿರಾಸ್ತ್ರವೆನ ಬೇಡ ಬೇಡ ಮು|ಯ್ಯಾತುಕೋ ಹಿಡಿ ಹಿಡಿ[ಯೆನುತೆ ॥
ಮಾತುಗಾಱಿಕೆಯಿಂದೆ ಶಿವಳರಾಯಪಂಕೇಜ ಜಾತಮಾರ್ಗಣದೊಳಕ್ಕಿದನು॥
ಮುಕ್ಕುಳಿಸುವ ಕೆಂಗಿಡಿ ರಾಶಿ ರಾಶಿಯ|ದಿಕ್ಕಂಟಱೊಳಗೆ ಹೊಮ್ಮಿಸುತೆ॥
ಹೊಕ್ಕುದು ವಿಧಿಬಾಣ ಕೃಷ್ಣನ ನಾಭಿಯ|ಕುಕ್ಕುರಿಸುತೆ ಶಿಶುವೆನಲು॥೪೫॥
ಬೊಮ್ಮಗಿಮ್ಮಾಸ್ತ್ರ ಭವೇಂದ್ರಗಿಂದ್ರಾಸ್ತ್ರಗ|ಳೆಮ್ಮೊಳು ಪ್ರತಿಕೂಲ[ವಲ್ಲ ॥
ನಿಮ್ಮ ರಕ್ಕಸಗಜ್ಜವ ತೋಱಿಸೆಂದೆಚ್ಚು|ದಮ್ಮನೆ ದಣಿಸಿದ ಶಿವನ ॥೪೬॥
ಉಚಿತವಿದಹುದೆಂದು ಪರಮಸಂತೋಷದೆ ಶುಚಿವೆತ್ತು ರಣರಂಗದೊಳಗೆ
ವಚಿಸಿದ ಶುಕ್ರದೇವರು ಕೊಟ್ಟ ಮಂತ್ರವ|ರಚಿಸಿದ ದೈತ್ಯ ಮಾಯಕವ ॥
ಬಾಣಕಾರ್ಮುಕವೆತ್ತು ಕಪಟವ ಸನ್ನಣ|ಬಾಣವ ಸಮರಕ್ಕೆ ಚಾಚಿ॥
ಬಾಣಾಸುರ ನಭಸ್ಥಳಕೆದ್ದು ಕಱಿದನು|ಬಾಣದ ಶರವೃಷ್ಟಿಯನು ॥೪೮॥
ಸುತ್ತಿದ ವೀರ ಚಿಮ್ಮುರಿಯು ವಜ್ರಾಂಗಿಯ|ನೆತ್ತಿದ ಬ್ರಹ್ಮರಂಧ್ರದಲಿ ॥
ಕೆತ್ತಿದುವಸುರೇಶನ ಮಾರ್ಗಣ ನೆ | ಗ್ಗೊತ್ತಿದುವಧಟ ಯಾದವರ ॥೪೯॥
ಹರಿ ಶಕ್ರಮಳೆಗಱೆಯಲು ಗೋವರ್ಧನ | ಗಿರಿಯೆತ್ತಿ ತುಱುವ [ಕಾದಂತೆ ॥
ಸುರಿವ ಕೂರ್ಗಣೆಯಿಂದೆ ಕೂರ್ಗಣೆಯೆಚ್ಚು ನಿ|ತ್ತರಿಸಿ ಮಾರ್ಬಲವ ರಕ್ಷಿ[ಸಿದ ॥೫೦॥
ಅಂಬರದಲಿ ಬಾಣ ನೆಲದಲಿ ನಿಂದು ಪೀ|ತಾಂಬರನೆಚ್ಚಾಡಲಿತ್ತ ॥
ಕುಂಭಾಂಡ ಸೈನ್ಯಸನ್ನಾಹದೊಳೞಗಿದ ನೀ|ಲಾಂಬರನೊಡ್ಡೊಡೆವಂತೆ॥೫೧॥
ತಾಗಿದ ಭರದಿಂದೆ ಪ್ರದ್ಯುಮ್ನ ಹಿಂದಕೆ|ಬೀಗಿದ ಸಾತ್ಯಕಿ ಮುಱಿದು ॥

ಸಾಗಿದನುದ್ಧವ ಬಲರಾಮಗಿದಿರಾಗಿ | ಕೂಗಿ ಬೊಬ್ಬಿರಿದೆಚ್ಚ ಖಳನ ||೫೦||
ಕುಟಿಕುಟಿಯಾಗಿ ಕುಂಭಾಂಡ ತನ್ನೊಡಲೊಳು ತುಳುಕಿದ ಕನ್ನೀರ [ನೋಡಿ ||
ಬಳಿಕ ರಕ್ಕಸರಾಯ ಬಲರಾಮನೆದೆಯೊಳು ಮುಳುಕಿಸಿದನು ಕೂರ್ಗ [ಣೆಯ ||೫೧||

ಸದ್ದಿಮಾಡದೆ ರಕ್ಕಸನ ಕೂರ್ಗಣೆಗಳ | ವಿಡ್ಡೂರವನು ಹಾರಿಹೊಯ್ದು ||
ಅಡ್ಡವಾತಿಯಲಿ ಸ್ಯಂದನಸೂತವಾಜಿಯ | ಒಡ್ಡವಣೆಯ ಖಂಡಿಸಿದ ||೫೨||
ಸೂತವರೂಥವಾಜಿಗಳ ಕಂಧರಗಡಿ ಭೂತಲದೊಳು ಬಿದ್ದು ಹೊರಳೆ ||
ಚೇತನಗಿಡದೆ ರಕ್ಕಸರಾಯ ಬಳಿಕೊಂದು ಸೂತನ ರಥವೇರಿ ಬಂದ ||
ಸಲುವುದು ಬಲರಾಮ ಕೈಚಳಕದಲಿ ನೀ | ಬಿಲುಗಾರರೊಳಗೆ ತಪ್ಪಲ್ಲ ||
ನಿಲುವೊಡಚ್ಚರಿ ನಮ್ಮೊಡನೆಂದು ಕುಂಭಾಂಡ | ಕಲುದಲೆಗೋಲೊಳಕ್ಕಿ [ದನು ||೫೩||

ತುರಿಯದಿಂ ಫಣಿಬಾಣಗಳ ಕರೋರದಿಂ | ದರಿಸೈನ್ಯವ ಮೂರ್ಛೆಗೊಳಿಸಿ
ಪರಿತಂದು ಶೇಷಾಪರಾವತಾರನ ದಿವ್ಯ | ಚರಣಂಗಳೊಳೈಕ್ಯವಾಯ್ತು ||೫೪||
ಹೊದೆಗೋಲು ತೀರಲೆಚ್ಚಾಡುವೆನೆಂದರೆ | ಮೆದೆಗೆಡಹುವೆ ನಿನ್ನ ಬಲವ ||
ಗದೆವಿಡಿದಾಯತನಾಗೆಂದು ಹಲಧರ | ಸದೆಬಡಿದನು ಖಲೋತ್ತಮನ ||೫೫||
ಗುಟ್ಟಳಿದುದು ವಜ್ರಮಯರಥ ನೇಗಿಲ | ಪೆಟ್ಟು ಸಂಧಿಸಲು ನುಗ್ಗಾಯ್ತು
ಬಿಟ್ಟುದು ಬಾಯ ರಕ್ಕಸರಾಯ ಸೈನ್ಯ ಕಂ | ಗೆಟ್ಟುದು ದೊರೆ ನೊಂದ [ನೆನುತೆ ||೫೬||

ಪಡಿರಥವೇರಿ ಕುಂಭಾಂಡಮಂತ್ರೀಶ್ವರ | ಜಡಿದನು ವಜ್ರದ ಗದೆಯ ||
ನಿಡಿದೋಳಿನಿಂದೆ ಕೃಷ್ಣಾಗ್ರಜಾತನ ಸಿರಿ | ಮುಡಿಯಲ್ಲಿ ಪೆಟ್ಟನಿಕ್ಕಿದನು ||
ತಾಗಿದ ಗದೆಯ ಗಾಯವನೊತ್ತಿ ತೋರಿಯ | ನೇಗಿಲ ಕೊರಲ್ಗಿಕ್ಕಿ [ಸೆಳೆದು ||

ಬಾಗಿಸಿಕೊಂಡು ದೈತ್ಯಗೆ ಪೆಟ್ಟನಿಕ್ಕಿದ | ಮೂಗಿನೊಳ್ ನೆತ್ತರು ಸುರಿಯೆ ||
ಸೊಕ್ಕಿದ ಕುಂಭಾಂಡ ರಣದೊಳು ರಕುತವ | ಕಕ್ಕಿದ ಕೈಯಿಚ್ಚೆಗೆಟ್ಟು ||
ಸಿಕ್ಕಿದ ಸಿಕ್ಕಿದನೆನ್ನಲಾಗಿ ಜುಣುಗಿ ಮೆ | ಯ್ಯಿಕ್ಕಿದ ಗಗನಸ್ಥಳಕೆ ||೫೭||
ಮಂತ್ರೀಶ್ವರನ ಮೆಯ್ಯಗ್ಗವಳ ರಥರಾಜಿ | ದಂತಿಗಳಾಹವದೊಳಗೆ ||

ತಿಂತಿಣಿ ಭರವಸದಿಂದಾಗ ಪರಿತಂದು|ತೊಂತಿತು ನೀಲಾಂಬರನ ||೬೩||
ಭುಜಬಲ ಭೀಮ ಸಾರುವಭೌಮ ಕೃಷ್ಣಾಗ್ರಜ ಹಲಮುಸಲದಿಂದೊ
[ಗೆಯೆ ||
ಧ್ವಜಪಟ ರಥ ಘೋಟಕ ಮದಸೊರ್ಕಿದ|ಗಜಘಟೆಯುಜೆಗಿಜಿಯಾಯ್ತು ||
ರಣಧೀರನುದ್ಧವ ಕೃತವರ್ಮ ಸಾತ್ಯಕಿ|ಗುಣಯುತ ಕಾಮಕಂದರ್ಪ ||
ಹೊಣದನಿ ದಡಿಗದ್ಭೈತ್ಯರ ಕೂಡೆ ಕಾದಿ ಮಾ|ರ್ಗಣದಿಂದೆ ಕಡಿದೊಟ್ಟಿದರು ||
ಭಟರ ಕೂರ್ಗಣೆಯಿಂದೆ ಜಿಗಿದ ಪೆರ್ದಲೆಗಳಾ|ರ್ಭಟದಿಂದೆ ನಭಕಡ
[ರ್ದಿಟಿಾದು ||
ದಿಟ ರುಧಿರಾಬ್ಧಿಯು ನಿಖಿಳಗುಯ್ಯಲ ಮಾಲೆ|ಘಟದಂತೆ ಕಣ್ಗೊಳಿಸಿದುವು||
ತಲೆಗಳ ತುಂಡು ತೋಳ್ಗಳ ತುಂಡು ನಡು ತುಂಡು | ಸಲೆ ಜಾನುಜಂ
[ಘೆಯ ತುಂಡು ||
ಬೆಳೆಯಿಂದೆ ಕಟುಕರಂಗಡಿಯಂತೆ ರಣರಂಗ | ಸಲೆ ಜಿಗುಪ್ಸೆಯ ತೋಱ
[ಸಿತು ||೬೭||
ಎಲ್ಲಿ ನೋಡಿದೊಡಶ್ವಗಜರಥದೊಳಗಿರ್ದು|ಚೆಲ್ಲಿದ ಕರುಳುಕಾಲ್ವೆಲೆಗೆ||
ಬಲ್ಲಿದ ಜಮರಿಯು ಮಿಗ ಸಿಕ್ಕಿಕೊಂಡಂತೆ|ಝಲ್ಲಿಯ ಕುದುರೆ ಬಿದ್ದಿಹುವು||
ತೋರಿಯ ಹಯಹಸ್ತಿ ಕುಱಿಕೋಣಗಳ ಸೊಕ್ಕು|ವಾರಿ ರೋಹಿತ
[ಮಿದುಳುಗಳು ||
ಭೂರಿ ಭೇತಾಳಾದಿಗಳುಂಡು ರಣಮಹಾ|ಮಾರಿಯು ಮುಂದೆ ನರ್ತಿಸಿತು ||
ಕೇಣವಿಲ್ಲದ ರೋಹಿತವಾರ್ಧಿಯೊಳು ಕಟ್ಟು|ಗಾಣಕ್ಕೆ ಪಾಯ್ವ ಮಿಾ
[ನೆನಲು ||
ಗೋಣರೆಗಡಿದು ಪೆರ್ನರವಾಂತು ಮಿಡುಕುವ | ಪ್ರಾಣದ ಶವಗಳೊಪ್ಪಿ
[ದುವು ||೭೦||
ತುಂಡ ಮುಂಡಗಳು ಮಿದುಳು ರೋಹಿತ ಕೊಬ್ಬು|ಖಂಡವ ಮನದಣಿ
[ವನಕ ||
ಉಂಡಱವೆಯನಾಂತು ಕಮರುದೇಗಿತು ಮರುಳ್ತಂಡ ಶಾಕಿನಿಡಾಕಿನಿ
[ಯರು ||೭೧||
ಕಡೆ ಮೊದಲಿಲ್ಲದೆ ಖಳರಾಯ ರಾವುತ|ಪಡೆ ಬಿದ್ದುದಿತ್ತ ಮೋಣತ್ತ ||

ತಡೆಯದೆ ಬಾಣ ಕುಂಭಾಂಡರ್ ಖೇಚರದಿಂದೆ ಕೆಡಹಿದರಚಲಸಂಕುಲವ ||
ನಿಡಿಗಲ್ಲ ನಿಶಿತ ಹಾಸಱೆಗಲ್ಲ ಚೌಕದ|ಬಡಿಗಲ್ಲ ಬಟುಗಲ್ಲ ಬೀಱಿ||
ತುಡುಕಿದ ವಜ್ರಮಾರ್ಗಣದಿಂದೆ ಶ್ರೀಕೃಷ್ಣ | ಹುಡಿಯೋಱಿಲೆಚ್ಚು ಹಾಱಿಸಿದ ||೭೩||

ಖಗರಾಜ ಕಡುವೇಗದೆ ಪೋಗಿ ದೈತ್ಯರ ನೆಗೆದಾಟವ ಬಿಡಿಸೆನಲು ||
ಗಗನದೊಳಡರಿ ಗಟ್ಟಿವೆಱಕೆಯಲಿ ಬೀಱಿ|ಲೊಗೆದನು ಧರಣಿಯ ತಲಕೆ||೭೪||
ಬಿದ್ದುದು ಬಾಣಕುಂಭಾಂಡವರೂಥ ಸು|ಗ್ಗದ್ದುದು ಪ್ರತಿರಥವಡರಿ ||
ಕದ್ದೊಯ್ಸದೆ ಖಳರಾಯ ತ್ರಿಶೂಲದಿ|ಹದ್ದೈವವ ಹೇಱಿದನು ||೭೫||
ಹೊಳೆವ ತ್ರಿಶೂಲ ಮುಮ್ಮೊನೆಯಿಂದೆ ಕೆಂಗಿಡಿ | ಗಳನುಗುಱ್ದರಿಯ ನಿಷ್ಠುರದಿ ||
ದಳವಾಡ ದಹನವ ಮಾಡುತ್ತ ಹರಿಯುರ|ಸ್ಥಳದಲ್ಲಿ ಬಂದು ಮೋಹಿಸಿತು||
ನೆಱೆ ತಾಗಿ ತಟ್ಟುರ್ಚಿತೆಂಬ ಶಕ್ತಿಯ ಕೈ|ಮಱೆಯದೆ ಕೃಷ್ಣ ಖಂಡಿಸಿದ ||

ಬಱಿಯೊಳಗಿರ್ದ ಚಕ್ರವ ತೆಗೆದನು ಹಗ ಲೆಱೆಯನ ಪ್ರಭೆಯ ಕೀಳ್ಪಡಿಸೆ||
ಕೇಶವನಂಗುಲಿಯೊಳು ಚಕ್ರ ಕೋಟಿದಿ|ನೇಶರೊಲ್ ಧಿರ್ರನೆ ತಿರುಗೆ||
ವಾಸವ ವಿಧಿದೈತ್ಯರ ಛಲ ಬೀತು ಬಾ | ಣಾಸುರ ಸಿಂದ ಕಣ್ಗೆಡದೆ ||೭೮||
ದಿಟ್ಟ ನೀನಹುದೊ ಬಲೀಂದ್ರನಂದನ ನಿನ್ನ|ಧಟ್ಟಿಸಿದಾತೋಳ ಮೊದಲ||
ಕೊಟ್ಟಾತಗೆ ಪೇಱಿ ಕಾದು ಕೊಳ್ಳೆನುತಾ|ದಿಟ್ಟ ಕೃಷ್ಣನು ಚಕ್ರದಲಿ ||
ನಡುಗಿದ ಕಮಲಸಂಭವಭವಾದಿಗಳ ಸೊಲ್ಲಡುಗಿತು ದೈತ್ಯೇಶ್ವರನ||
ಇಡಿಕಿಱಿದೊಂಬೈನೂಱ ತೊಂಬತ್ತೆಂಟು|ನಿಡುದೋಳ ಕತ್ತರಿಸಿದುವು||೮೦||
ಧೀರ ಬಾಣನ ಬಾಹುಸಾಸಿರ ಶೋಣಿತ|ವಾರಾಶಿಯೊಳಗೆ ತೇಂಕಿದುವು||
ಘೋರಾಕೃತಿವೆತ್ತು ಚಕ್ರ ಬಂದುದು ಸಿರಿ|ನಾರಾಯಣನ ಕೈಯೆಡೆಗೆ||೮೧||
ರಕ್ಕಸನೆರಡು ತೋಳ್ಗಳ ಕಡಿದಪೆನೆಂದು ಚಕ್ರವ ಪುನರಪಿ ತುಡುಕೆ ||
ಮುಕ್ಕಣ್ಣನೈತರುತುಭಯವೀರರಿಗಡ್ಡ|ಹೊಕ್ಕನು ಮಧ್ಯಸ್ಥನಾಗಿ ||೮೨||
ಮಾನವರೂಪಿನೊಳುದಿಸಿದ ಪರಬೊಮ್ಮ ನೀನೆಂದು ನೋಡಿ ಭಾಷಿಸದೆ
ತಾನತಿಮಥನವ ಮಾಡಲುಜ್ಜುಗವೆತ್ತ|ದಾನವೇಶನ ಬಿಡು ನನಗೆ ||೮೩||
ನಿನಗಿದು ಪುರುಷಾರ್ಥವೆಂದರೆ ಬಲಿಕುಮಾ|ರನ ಕೊಲ್ವನಲ್ಲೆಂದು ಕೃಷ್ಣ||

ಅನಲಾಕ್ಷಗೆ ಪೇಳಲೀಶ ಸದ್ಭಕ್ತನ । ಘನಪೌರುಷವ ನೋಡಿದನು ||೮೪||
ಕತ್ತರಿಸಿದ ಬಾಹುಮೂಲದೆ ಚೆಲ್ಲುವ । ನೆತ್ತರ ಸಿಲಿಸಿ ಮೆಯ್ದುಡಹಿ ||
ಚಿತ್ತಜಹರ ಲಜ್ಜಿತನಾದ ಭಕ್ತನ । ಕುಸ್ತರಿಸಿದ ಕೃಪೆಯಿಂದೆ ||೮೫||
ಕೇಶವನೆಡೆಗೆನ್ನೆಡೆಗಾವನೋರ್ವನು । ದ್ವೇಷಬುದ್ಧಿಯ ಮಾಡಿದಡೆ ||
ದೋಷಸಂಭವಿಸುವುದೆಂದು ಧೂರ್ಜಟಿ ದೈ । ತ್ಯೇಶಗೆ ವಿಸ್ತರಿಸಿದನು ||೮೬||
ಯದುಕುಲೋತ್ತಮನ ಮೊಮ್ಮನಿಗುಷಾದೇವಿಯ । ಮದುವೆಯ [ಮಾಡುವುದೆನುತೆ||
ವಿಧುಮಕುಟಾಂಕಿತ ಬಾಣಾಸುರೇಶನ । ಸದುಮಂತ್ರಿಯೊಡನೆ ಪೇಳಿದನು||
ಸಂಭ್ರಮವಡೆದ ಶೋಣಿತಪುರನಿಖಿಳ ಕು । ಟುಂಬವ ನೋಯಿಸದಂತೆ ||
ಕುಂಭಾಂಡನಿಂದೆ ಕಾಣಿಸಿಕೊಂಬುದೆನುತೆ ಪೀ । ತಾಂಬರನೊಳು ರುದ್ರ [ನುಡಿದ ||೮೮||
ನಿಟಿಲಾಕ್ಷ ನೀನಾಡಿದ ಮಾತು ಹೃದಯಸಂ । ಘಟಿತವೆ ಬಾಣನಿಗೆನಲು||
ಕುಟಿಲಬುದ್ಧಿಯ ಬಿಟ್ಟು ಬಲಿಸೂನು ಸತ್ಯವ । ನಟಿಸಿ ಬಿನ್ನಹವ ಮಾಡಿ [ದನು ||೮೯||
ಫುಲ್ಲದಳಾಕ್ಷ ನೀನತಿದೈವವೆಂಬುದ । ಬಲ್ಲ ಮತ್ಪಿತನು ನಾನರಿಯೆ||
ಹೊಲ್ಲೆಹವನು ತೀರ್ಕಣಿಸೆಂದುಭಯಪಾಣಿ ಪಲ್ಲವದಿಂದೆ ವಂದಿಸಿದ ||
ತಪ್ಪನಿತಿಲ್ಲದುರ್ವಿಯ ನಿಮ್ಮಡಿಗೆ ಸ । ಮರ್ಪಿಸಿದನು ನಮ್ಮ ತಂದೆ ||
ಒಪ್ಪಿಡಿನಡುವಿನ ಮಗಳನು ಮೊಮ್ಮಗೆ । ಸುಪ್ರೀತಿಯಿಂದೀವುದರಿದೆ||೯೦||
ಬೋಧಾರುಹನಾದ ಪರಮೇಶ ನಿಮ್ಮೊಳು । ಭೇದವಿಲ್ಲೆಂದು ಸೂಚಿ [ಸಲು ||
ರೋದನ ತೀರ್ಕಣಿಸಿತು ನಿಮ್ಮ ಮೊಮ್ಮಗೆ । ಮಾಧವ ಕೊಟ್ಟೆ ಮತ್ತು [ತೆಯು ||೯೧||
ಇಂತೀಬಿನ್ನಹಂಗಳ ನೀನೆನ್ನಯ । ಮಂತ್ರಿಯಿಂದೊಪ್ಪುಗೊಳ್ಳೆನುತೆ ||
ದಂತಿಚರ್ಮಾಂಬರಧರ ಸಮಕ್ಷದಲಿ ನಿ । ಭ್ರಾಂತಿಯಿಂ ಬೀಳ್ಕೊಂಡ [ಹರಿಯು ||೯೩||
ಅರಳಿದ ಬೆಳ್ದಾವರೆಗಣ್ಣನಕೂಡೆ । ಮರಳಿ ಧೂರ್ಜಟಿ ಮಾತನಾಡಿ ||
ಇರಲುರಿಗಣ್ಣವ ರಹಿತಬಾಹನ ಕೊಂಡು । ತೆರಳಿದ ಕೈಲಾಸಪುರಿಗೆ ||೯೪||

ವರಮೋಹನತರಂಗಿಣಿಯೆಂಬ ಕಾವ್ಯವ|ಬರೆದೋದಿ ಕೇಳಿದ ಜನರ ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು । ಪೊರೆವ ಲಕ್ಷ್ಮೀಕಾಂತ [ಬಿಡದೆ ||೯೫||

ಅಂತು ಸಂಧಿ ೪೦ ಕ್ಕಂ ಪದ ೨೬೫೭ ಕ್ಕಂ ಮಂಗಳಂ

## ನಾಲ್ವತ್ತೊಂದನೆಯ ಸಂಧಿ

ಕೃಷ್ಣನು ಉಷಾನಿರುದ್ಧರಂ ಕಂಡುದು —

ಉತ್ತಮಮುನಿಪತ್ನಿಯ ಗರ್ಭದಿ ರೂಪು । ವೆತ್ತ ಮಹಾತ್ಮಕನೆನಿಪ ||
ದತ್ತಾತ್ರೆಯನ ಪಾದವ ಕೂರ್ತು ಕಪಿತೆಯ । ಬಿತ್ತರಿಸುವುದೆನ್ನ ಕಿವಿಗೆ ||
ಮಾರನ ಮಂತ್ರದೇವತೆ ಮಂಗಳಾಂಗಿ ಮಂ|ದಾರ ಗಂಧಾನ್ವಿತೆ [ಯಸೆವ ||
ತೋರನುಗ್ರ್ಮಲೆಯ ಮಾಸಿಸಿರನ್ನೆ ಕತೆಯವಿ | ಸ್ತಾರವ ಕಾಳ ಪೇಟು [ವೆನು ||೧||

ಹರ ತನ್ನ ಕೈಲಾಸವ ಸಾರ್ದ ಬಾಣಾ|ಸುರಮುಖ್ಯಪ್ರಮಥರೊಂದಾಗಿ ||
ಪರಮಸಂತೋಷದಿ ನಾರದ ಬಂದು ಶ್ರೀ|ವರಸಂಘ್ರಿಯುಗವ ಕೀರ್ತಿಸಿದ||
ಬಾಣನ ಪಿತಗರ್ವಪರ್ವತಜಿತುವಜ್ರ | ಬಾಣಾಸುರನಾಥಜಾತ ||
ಬಾಣನ ಬಾಹುವಿಚ್ಛೇದ ಹಲ್ಲಾದ ಪೂ|ಬಾಣನ ಪಿತ ಕೃಷ್ಣ ಶರಣು ||೨||

ಅಸುರ ಹಿರಣ್ಯಾಂಬಕ ಹಿರಣ್ಯಕಶಿಪು । ದಶಕಂಠ ಕುಂಭಕರ್ಣಾದಿ ।
ಶಿಶುಪಾಲದಂತವಕ್ರಾಂಬಕ ಬ್ರಹ್ಮಾಂಡ । ಬಸುಜಾಂತ ಶ್ರೀಕೃಷ್ಣ ಶರಣು||
ದೈತ್ಯಾರ್ಣವ ಕುಂಭಸಂಭವ ಮಹದಾವ । ದೈತ್ಯಾರಣ್ಯದವಾಗ್ನಿ ||
ದೈತ್ಯಾಂಧಕಾರಸಂಹಾರ ಭಾಸ್ಕರತೇಜ | ದೈತ್ಯಾರಿ ಶ್ರೀಕೃಷ್ಣ ಜಯತು ||
ಖೇಚರಜನರಕ್ಷಪಾಲ ಸರ್ವೇಶ ನಿ । ಶಾಚರ ತಲೆಗುಂಡುಗಂಡ ||
ವಾಚಾವಿದೂರ ಸಾಕಾರಿ ಚಂದ್ರಾದಿತ್ಯ । ಲೋಚನ ಶ್ರೀಕೃಷ್ಣ ಶರಣು ||
ತಡೆಯದೆ ಸುರಪಿಶಾಚರಪಾನಸನಾಗ|ವಡೆಯ ಮೋಹಿಸುವ ಮಾನಿನಿಯ||

ಕಡೆಗಣ್ಣಿನಿಂದೆ ನಿರ್ಮಿತ ಮಾಡಿದ ಜಗ ದೊಡೆಯಾಚ್ಯುತ ಕೃಷ್ಣ ಶರಣು ||
ರೂಪಾಂತ ನಿಖಿಳ ಬ್ರಹ್ಮಾಂಡವ ತನುರೋಮ ಕೂಪಂಗಳೊಂದೊಂದ
[ರೊಳಗೆ
ಜೋಪಾನಗೆಯ್ದಡಗಿಸಿಕೊಂಡಿರುತಿಹ । ಗೋಪಾಲ ಶ್ರೀಕೃಷ್ಣ ಶರಣು ||
ಕೊಂಡಾಡುವೊಡೆ ವೇದಶ್ರುತಿಪುರಾಣಂಗಳು । ಕಂಡುದಿಲ್ಲೊಡೆಯು
[ನಿಮ್ಮಡಿಯ ||
ತೊಂಡನೆಂದಿವನ ರಕ್ಷಿಸಿಕೊಂಬುದೆನುತೆ ಕುಂ ಭಾಂಡನ ತಂದು ಕರಣಿ
[ಸಿದ । ೧೦ ||
ನೋಡಿದ ದೈತ್ಯ ದೈತ್ಯಾರಿಯನೊಲಿದು ಕೊಂ ಡಾಡಿದ ತನ್ನ ದುಃಖವನು
ಓಡಿಸಿ ತೊರೆದಚ್ಚುಂಡೆ ಬಿನ್ನಹವನು । ಮಾಡಿದ ಮಧುಸೂದನಗೆ ||೧೧||
ಯೋಚಿಸಿ ಬುದ್ಧಿವೇಳ್ದಡೆ ಕೇಳದ ಮೂರ್ಖ | ಭೂಚಕ್ರಪತಿಯು
[ತೋಳ್ಗಡಿದು ||
ನಾಚಿಸಬೇಡ ನಮ್ಮವನೆಂದು ಪ್ರಾಳಿಯು ಚಾಚಿದ ಕೃಷ್ಣನಂಘ್ರಿಯೊಳು ||
ಜಗದೊಳು ಬುದ್ಧಿವಂತರ ಮಾತು ಮನಸಿಂಗೆ । ಯೊಗಡಿಸುವುದು
[ದುರಾತ್ಮರಿಗೆ ||
ಮಗನೆ ನೀನೇನ ಮಾಡುವೆ ಸುಮ್ಮನೇಳೆಂದು । ನಗುತಿದ ಹರ ನಿಶಾಚರನ ||
ಎದ್ದನು ಮುಕುಳಿತಾಂಜಲಿಕರಪುಟದೆ ನಿಂ ದಿರ್ದ ನಿಶಾಚರ ಭಯದ ||
ಕದ್ದೊಯ್ದುದೆ ಕಮಲಾಯತಾಕ್ಷನ ನೋಡಿ । ಬಿದ್ದನು ಹರ್ಷವಾರ್ಧಿ
[ಯೊಳು ||೧೪||
ದೃಢಭಕ್ತಿಯಲಿ ನಿಂದಿರ್ದ ತಾವಿಗೆ ಕೂರ್ತು । ನಡೆದಂಘ್ರಿಯುಗವೆ
[ಪವಿತ್ರ ||
ಪೊಡೆಮಟ್ಟ ಹಸ್ತ ಮಸ್ತಕ ಬಹುಪುಣ್ಯವ । ಪಡೆವುವು ಪರಮಾತ್ಮಕನೆ ||
ನೋಡಲು ದೃಕ್ಪುಣ್ಯ ಪಿರಿದು ಸಂತಸದಿ ಕೊಂ । ಡಾಡಲು ಜಿಹ್ವೆ
[ಪವಿತ್ರ ||
ಹಾಡ ಕೇಳಲು ಕರ್ಣದೊಳಿರ್ದ ಪಾತಕ । ಪೋಡುವುದಿಳೆಯ ಜೀವರಿಗೆ ||
ಮರಣಕಾಲದೆ ಕೃಷ್ಣ ಕೃಷ್ಣ ಕೃಷ್ಣಾಯೆಂಬ । ಸ್ಮರಣೆಯೊಂದಕೆ ಮೋಕ್ಷ
[ವಹುದು ||

ಶರಣರ ದ್ವಿತಯಾಕ್ಷರದ ಲಗ್ಗವನಾಂತ | ಚರಣಾನ್ವಿತ ಕೃಷ್ಣ ಜಯತು ||
ಕಾಶಿಯಸ್ಥಲದಲ್ಲಿ ಶಿವಸಮಸ್ತರಿಗುಪದೇಶಿಸುವುದು ನಿನ್ನ ನಾಮ ||
ದೋಷಿಗಳಿದನರಿಯದೆ ಕೆಟ್ಟರು ಪುಣ್ಯ | ರಾಶಿ ನಾರಾಯಣ ಜಯತು ||
ದೂಷಕರಿಂದಾದುದಾದರೆ ಘನಪರಿ | ಹಾಸಕದಿಂದಿರದಾಯ್ತು ||
ಬೇಸತ್ತು ಬಯ್ದರೆ ಪಾಪಾಬ್ಧಿಯ ಕಡೆ | ಹಾಸುವ ಶ್ರೀಕೃಷ್ಣ ಜಯತು ||
ಆರಂಭ ಕೃಷಿಯನುಮಾಳ್ಪರು ಗದ್ದೆಗೆ ನೀರ ಹರಿಯೆ ತಿದ್ದೆನಲು ||
ನಾರ ಹಂಗಡನ ಮಾಡೆನಲಾಗಿ ಪಾಪದ | ಬೇರ ಕೀಳುವ ಕೃಷ್ಣ ಜಯತು ||
ದೇಶದೊಳನ್ಯರ ವರಜಲಲಿಪಿಯಂತೆ | ನಾಶವಹುದು ಕೊಡಲೊಡನೆ ||
ದಾಸೋತ್ತಮರಿಂಗೆ ನೀಕೊಟ್ಟ ವರ ತಾಮ್ರ | ಶಾಸನವಹುದು ನನ್ನೊಡೆಯ ||
ನಾಮಸ್ಮರಣೆ ನಾಲಗೆಗಳವಡದೆ ಮ | ತ್ತಾಮರಾಮರವೆಂದರವಗೆ ||
ಪ್ರೇಮದೊಳೊಲಿದು ಸದ್ಗತಿಯ ಪಾಲಿಸಿದ ಶ್ರೀ | ರಾಮ ವಿಭೀಷಣವರದ ||
ಇರಿನಾಸಿಸರಸಿಕ್ಕ ಬೇಕಲ್ಲದೆ ನುತ್ತ ಮರುಕವೆ ಸುರಧೇನುವಿಗೆ ||
ಮರುಕದಿಂದಾನತಜನರನು ಪಾಲಿಸ ಸರುವೋತ್ತಮ ದೇವ ಶರಣು |
ನೀರೂಡಿ ನೆರೆ ಸಲಹಿದರೆ ಶಾಲ್ಮಲಿವೃಕ್ಷ | ಬೀರುವುದುಂಟೆ ಸತ್ಫಲವ ||
ಹಾರುವರಿಂಗೆ ನಿರ್ಜರರೊಳು ನೀ ಕಲ್ಪ ಭೂರುಹ ಶ್ರೀಕೃಷ್ಣ ಜಯತು ||
ಅಜಪುತ್ರಪೌತ್ರ ಭವೇಂದ್ರಾದಿಗಳು ನಾ | ಕಜರೆಲ್ಲ ಪರಿವಾರ ನಿಮ್ಮ ||
ಭಜನೆಯ ಮಾಳ್ಪುದಾನರ್ಹನೆ ಶ್ರೀಕೃಷ್ಣ | ಬಿಜಮಾಡು ಪುರವ [ನಿಟ್ಟಿಪರೆ ||೨೫||

ಊರೊಳಗಾನು ಬಂದೇನ ಮಾಳ್ಪೆನು ಮಂತ್ರಿ | ನಾರದನೊಡನೆ ನೀ [ಪೋಗಿ ||
ಮಾರಕುಮಾರನ ಸತಿ ಗೂಡಿ ತಹುದೆಂದು | ನೀರಜದಳನೇತ್ರನುಡಿದ ||೨೬||
ದೇವ ನಾರದಮುನಿವರನೊಳು ಬಲರಾಮ | ದೇವ ಕಂದರ್ಪಾದಿಗಳ ||
ದೇವ ನೀ ಕಳುಹೆ ಚಿತ್ತೈಸೆಂದೆನೆ ವಾಸು ದೇವ ಬೀಳ್ಕೊಟ್ಟ ತನ್ನವರ ||
ಕುಂಭಾಂಡ ನಾರದಮುನಿವರ ಬಲರಾಮ | ಶಂಬರಾಂತಕಮುಖ್ಯರುಗಳು
ಮುಂಬರಿದರು ಶೋಣಿತ ಪುರದೊಳು ತಮ್ಮ | ಗಂಭೀರಮಗನಿರ್ದ ಬೀಡಿಗೆ ||
ಭೋಂಕನೆ ಹೊಕ್ಕರು ಸೆಱೆಮನೆಯೊಳು ಹೊನ್ನ | ಸಂಕಲೆವಡೆದ ಬಾಲ [ಕನ ||

ಸಂಕಟವನು ಕಂಡು ಬಲರಾಮದೇವ ಮೀ । ನಾಂಕ ದುಃಖದೊಳಪ್ಪಿದರು॥
ನುಡಿಸಿದರಖಿಲೋಪಚಾರದಿಂ ಸಂಕಲೆ । ಗಿಡಿಸಿದರ್ ಮಜ್ಜನಗೆಯ್ಸಿ ॥
ಉಡಿಸಿದು ನವ್ಯವಸ್ತ್ರವನಾಯಾತಾಕ್ಷಕೆ । ತೊಡಿಸಿದರ್ ಮಣಿಭೂಷಣವ ॥
ಕುಂಭಾಂಡಮಂತ್ರಿ ಸಿಂಗರಿಸಿದು ಕಮ್ಮಲ । ರಂಬನ ಮಗನ ಮೂರ್ತಿ [ಯನು॥
ಹಂಬಲಿಸುವ ಕುಮಾರತಿ ತನ್ನ ಗೆಡೆಗೂಡಿ । ಸಂಭ್ರಮದಲಿ ಕರೆಸಿದನು ॥
ಬಂಪಳಾಕ್ಷಣ ಸಖಿಯೊಡಗೂಡಿ ವಿಲಸಿತ । ದಂದಣವಿಳಿದು ನಾರದಗೆ॥
ವಂದನೆಗೆಯ್ದಳು ಬಲರಾಮ ಕಾಮಂಗೆ । ಚಂದನಗಂಧಿ ಲಜ್ಜೆಯಲಿ ॥೩೦॥
ತಲೆಗುತ್ತಿರ್ದ ಭಾವವ ನೆರೆ ನಿಟ್ಟಿಸಿ । ಬಲರಾಮ ಕಾಮನಂದನಗೆ ।
ಮಲಯಜಗಂಧಿನಿ ಸಹಿತ ಪಲ್ಲಕ್ಕಿಯ । ನೊಲಿದಡರೆಂದು ಪೇಳಿದನು ॥೩೩॥
ಫುಲ್ಲಶರಾತ್ಮಸಂಭವ ಕೇಳ್ದು ಗುರುಗಳ । ಸೊಲ್ಲನುಲ್ಲಂಘಿಸದೊಡನೆ ॥
ಸಲ್ಲಲಿತಾಂಗಿಯ ವರಪಾಣಿವಿಡಿದು ಪೊಂ । ಬಲ್ಲಕ್ಕಿಯೊಳಗೆ ಮಂಡಿಸಿದ ॥
ಸೌಂದರಮಯವೆತ್ತ ಸೊಬಗುರನ್ನೆಯ ತನ್ನ । ನುಣ್ದೊಡೆಯೊಳಗಿಟ್ಟು [ಕೊಂಡು ॥
ಕಂದರ್ಪಸುತ ತೆರಳಿದ ಕೆಳದಿಯರು ಹೊ । ನ್ನಂದಣ ಬೆನ್ನ ಭಾಗದಲಿ ॥
ರಾಜಮರಾಳಮತ್ತೇಭಸಂಕುಲಕೆ ಸ । ರೋಜಾಂಘ್ರಿಯುಗದ ಸದ್ಗತಿಯ
ಮಾಜದೆ ಮನಗೊಳಿಸುವವೊಲು ನಡೆಗೊಂಡು । ದಾಜಾಣೆಯ ಸಖೀನಿವಹ॥
ಅಪಾರ ರತ್ನಾಂಚಿತ ಚಿನ್ನಬೆಳ್ಳಿಯ । ರೂಪದ ವಸ್ತ್ರಾಭರಣ ॥
ಲೇಪನ ಹೊನ್ನಪೇಟಿಕೆ ಹೊತ್ತಿಯೆಡೆಗೊಂಡು ದೇಪೇಚ್ಛೆಕೇಳಾಯತಾಕ್ಷಿ॥
ನುಡಿವ ನಾನಾವಾದ್ಯಘೋಷಣೆ ಕಲಕಲ । ನ್ನಡಿಯ ಪಣ್ಗಳ ರಾಗರಚನೆ॥
ಇಡಿಕಿರಿದುದು ಸೆಟ್ಟಿ ಸಮಯರುಗಳ. ಕೈಯ್ಯ । ಗುಡಿನಡೆ ತೋರಣ ನಿಚಯ॥
ಕುಂಭಿಣಿ ಬೆಸಲಾದುದೆಂಬಂತೆ ಜನರು ತು । ಱುಂಬಿತು ಹೊನ್ನಗಸೆಯೊಳು ।
ಮುಂಬಿನೊಳನಿರುದ್ಧ ಪೊಱಮಟ್ಟ ನಿಖಿಳನಿ । ತಂಬಿನಿಯರ ಸಮುದಯದಿ॥
ದಾನವೇಶ್ವರನ ಶೋಣಿತಪುರ ದುಗ್ಧಾಬ್ಧಿ । ಮಾನದೇವಿಯು ಕೋಳು [ಗೊಂಡು ॥
ಮೀನಾಂಕಸುತ ಬಹುವಾದ್ಯಘೋಷದಿಂ ಬ । ರ್ಪಾನಂದ ಸೋಜಿಗವಾಯ್ತು

ವಾಣಿಯ ವರಮಾನಸಪುತ್ರ ಹಲಧರ ಪಾಣಿ ಮನ್ಮಥಕುಮಾರಕನ ||
ಮಾಣಿಕ್ಯರಚಿತಪಲ್ಲಕ್ಕಿಯನಿಳಿಸಿ ಕ | ಣ್ಗಾಣಿಸಿದರು ಮುರಹರನ ||೪೧||
ಪುಟದೊಳದೊಪ್ಪವಸಿಕ್ಕಿದ ಹೊನ್ನ ಪ್ರ ತ್ತಳಿಯಂತೆ ಮದವಕ್ಕಳಿ [ಲಿದು ||
ಗಳಿಲನೆ ಬಂದು ಶ್ರೀಕೃಷ್ಣರಾಯನ ಪಾದ | ನಳಿನಕ್ಕೆ ಶಿರವ ಚಾಚಿದರು ||
ಅಡಿವಿಡಿದೆರಡು ದಂಪತಿಗಳನುಳಿ ಸಿರಿ | ಮುಡಿವಿಡಿದೆತ್ತಿದ ಬಳಿಕ ||
ಸಿಡುಗಣ್ಣಿಂದೆ ನಿಟ್ಟಿಸಿ ತಾತ್ಪರ್ಯದಿ | ನುಡಿಸಿದ ಪಾತ್ರಪಾತ್ರಿಕೆಯ ||೪೩||
ಈಪಾಟಿಯ ಸೌಂದರವೆಣ್ಣು ಕಮನೀಯ | ರೂಪಸ್ಥ ನಿನಗಲ್ಲದುಳಿದ||
ಕಾಪುರುಷರ್ಗೆ ಕೈಸಾರಿದುದಿಲ್ಲೆಂದು | ಶ್ರೀಪತಿ ಪರಿತೋಷವಡೆದ ||೪೪||
ಬಪ್ಪುದು ಬಹುದಲ್ಲದೆ ಮಾಣ್ಬುದೆ ಗಟ್ಟಿ ದುಪ್ಪು ಬೆಟ್ಟದ ನೆಲ್ಲಿ ಕಾಯ್ಗೆ||
ಸುಪ್ರಯೋಗಿಸಿದಂತೆ ಸುಗುಣಾನಿರುದ್ಧಗೆ | ಕಪ್ಪುರಗಂಧಿ ಸೇರಿದಳು ||೪೫||
ದ್ವಾರಾವತಿಯೆಲ್ಲಿ ಶೋಣಿತಪುರವೆಲ್ಲಿ | ದೂರ ಸಮೀಪವೆಂದೆನಗೆ ||
ನೀರಜಭವ ಕಟ್ಟಿದ ಕಂಕಣ ತಪ್ಪ | ಬಾರದೆ ಕೈಗೂಡಿತೆಂದ ||೪೬||
ಆಕಮಲಜಮುಖ್ಯ ಸುರಮಾನಸನಾಗಾ | ನೀಕಕ್ಕೆ ವೈವಾಹಸುಖವ ||
ನೀಕೊಡಬೇಕೆಂದು ಪೊಡೆಮಟ್ಟು ವರಚಿತ್ರ | ಲೇಖೆ ಬಿನ್ನಹವ ಮಾಡಿದಳು||
ಓರಂತೆ ಜಗದ ಜೀವರ ಕುಣಿಸುವ ಸೂತ್ರ | ಧಾರಿ ನಿನ್ನಾಜ್ಞೆಯಿಲ್ಲದಲಿ||
ಬೇಱೊಂದು ಕಪಟನಾಟಕದಂತೆ ನೀನಾಡ | ಬಾರದು ಕೇಳಂಬುಜಾಕ್ಷ ||
ಹವಣಿಸಿ ಹಲವು ಕಬ್ಬುನವ ತಾಡಿಪ ತನ್ನ ತವರವ ತಡಕೊಂಬುದರಿದೆ||
ಭುವನಜಂತುಗಳ ದಂಪತಿಗೆಯ್ವ ಕರ್ತೃ ನಿ | ನ್ನವರ ವಿವಾಹಕ್ಕೆ ಹೊಱತೆ ||
ಚಿತ್ರಲೇಖೆಯ ವಚನವ ಕೇಳ್ದು ಪಂಕಜ ಪತ್ರಾಕ್ಷ ಪರಿತೋಷವಡೆದು||
ಮಿತ್ರೇಂದುಶಿಖಿಲೋಚನ ತಪಧ್ವಂಸಿಯ[1] | ಪುತ್ರಾನುಕೂಲೆಯ ಪೊಗಳ್ದು||
ನೀಮಾಡಿದ ಕೂಟವೆಸಿತಾಡಿದೊಡುಂಟು | ಕಾಮಾತ್ಮಜಗೆ ಮೇದಿನಿಯು ||
ಕೋಮಲೆಯರ ಶಿರೋಮಣಿಯ ಕೂಡಿಸಿದೆಯೆಂ | ದಾಮಾನಿನಿಯ ಮನ್ನಿಸಿದ
ಮುರಹರ ನೋಡ ಚಿತ್ತೈಸು ಕುಂಭಾಂಡ ತ | ತ್ಪುರಜನಸಹಿತ [ಕಾಣಿಕೆಯ ||
ವರವಸ್ತುಗಳ ತಂದಿಹನೆಂದು ನಾರದ ಸ್ಮರಬಲಾದಿಗಳ ತೋಱಿದನು||೪೭||

---

ಕ ಪ ಅ—1. ಈಶ್ವರನ ತಪಸ್ಸನ್ನು ಕೆಡಿಸಿದ ಮನ್ಮಥ

ರಂಭಾಸ್ತ್ರೀಯ ಕೇಳ್ಪಡಿಸುವ ವಧುನಿಕು । ರುಂಬದೆ ಮುತ್ತಿನಾರತಿಯ ||
ಹೊಂಬರಿವಾಣದಿಂ ಬೆಳಗಿಸಿ ಮಂತ್ರಿ ಪೀ । ತಾಂಬರಧರನ ಕೀರ್ತಿಸಿದ ||
ಕ್ಷೋಣೀವಿಬುಧ ಭೂಭುಜವೈಶ್ಯಶೂದ್ರಸ ದ್ವಾಣಿಜರುಗಳ [ಕೈಯಿಂದೆ||
ಮಾಣಿಕಮೌಕ್ತಿಕ ಮುಖ್ಯವಸ್ತುವನಿಕ್ಕಿ । ಕಾಣಿಸಿದನು ಕಂತುಪಿತಗೆ ||
ತೋಳುಡಿದಸುರಾಧಿಪನ ಗೇಹವ ಮುಟ್ಟಿ ಗೋಳ ತನ್ನಯ ದ್ರವ್ಯ [ಸಹಿತ ||
ಬಾಳುವೆಗಿರಬೇಕೆಂದು ವಂಚಿಸದೆ ಕೃ । ಪಾಳುವಿಗಿತ್ತು ವಂದಿಸಿದ ||೫೫||
ವಿತ್ತವಂಚನಯ ಮಾಡದೆ ತಂದು ನಮ್ಮಯ । ಚಿತ್ತವ ಪಡೆದೆ ನೀನೆನುತೆ ||
ಸತ್ರಾಜಿತುಕುವರಿಯು ಕಾಂತ ರಜನೀಚ । ರೋತ್ತಮಗಿತ್ತು ಮನ್ನಿಸಿದ ||
ಕಡಗ ಭಾಪುರಿದ್ವಯ ಭುಜಪತ್ರ ಕಟ್ಟಾಣಿ । ವಡೆದ ಕಂಧರದ [ಮಾಲಿಕೆಯ ||
ಜಡಚರ ಕರ್ಣಕುಂಡಲ ಮಕುಟಾಂಗುಲ್ಯ । ದೊಡನುಡುಗೊರೆಯ [ಪಾಲಿಸಿದ ||೫೭||
ಬದ್ಧವುಳ್ಳವ ನಿನ್ನ ಬಗೆ ಕಾಣಬಂತನಿ । ರುದ್ಧಗೆ ಕೊಟ್ಟೆ ನೀ ನೆಲನ ||
ಕದ್ದೈಸದೆ ಕಂದನಿಚ್ಛೆಯೊಳಿಪುದೆಂದು । ಶುದ್ಧಾತ್ಮನಿತ್ತ ವೀಳೆಯವ ||೫೮||
ಮಾಱಯನೆ ಮಂತ್ರೀಶ ಪೇಳ್ದ ಪೇಳ್ದರಿಗುಡು । ಗೊಱಯಿತ್ತು [ಮನ್ನಿಸಲೊಡನೆ ||
ನೆಱ ಬಲ್ಲವರು ಕೀರ್ತಿಸಿದರು ಮೂಲೋಕ । ದೆಱಯನ ಪರಮ [ಪೌರುಷವ ||೫೯||
ಅಪರಿತಾಗಮಶ್ರುತಿಶಾಸ್ತ್ರಪೌರಾಣ । ವುಪನಿಷದ್ವಾಕ್ಯಗಳಿಂದೆ ||
ಲಪನಚತುಷ್ಟಯ ನುತಿಮಾಡಲಱಯ ಮ । ಜ್ಜಪ ಕೀರ್ತನೆ ನಿಲಕುವುದೆ ||
ಒಂದು ಪಕ್ಷದಲಿ ಬಾಣನ ದೆಸೆಯಿಂದೆ ಬಾ । ಲೇಂದುಶೇಖರನ [ನೋಡಿದೆವು ||
ಇಂದು ನಿಮ್ಮಂಘ್ರಿಯ ಕಂಡು ಮಧ್ಭವಬೀಜ । ಬೆಂದುದೆಂದರು [ದ್ವಿಜೋತ್ತಮರು ||೬೧||

ನೀನಲ್ಲದನ್ಯದೈವವ ಪೂಜೆಗೆಯ್ದು ಮ । ತ್ತೇನ ಕಂಡರು ಖಳಾಧಮರು ||
ಮಾನವನಾಗಿ ಭೂಭಾರವನಿಳುಹುವ । ಶ್ರೀನಾಥ ಶರಣೆಂದರವರು ॥ ೬೨ ॥
ವಿಜಯಲಕ್ಷ್ಮೀಶ ವಿದ್ವಜ್ಜನ ಮೊದಲಾದ । ಪ್ರಜೆ ಪ್ರಮಥರು ಕೀರ್ತಿ [ಸುವ ||
ಭಜನೆಗೆ ಮೆಚ್ಚಿ ಭಾಗ್ಯವ ಕೊಟ್ಟು ಬೀಳ್ಕೊಂಡು । ಬಿಜಮಾಡಲುದ್ಯೋ [ಗಿಸಿದ ॥ ೬೩ ॥
ವರಮೋಹನ ತರಂಗಿಣಿಯೆಂಬ ಕಾವ್ಯವ ಬರೆದೋದಿ ಕೇಳಿದ ಜನರ ||
ಶರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು । ಪೊರೆವ ಲಕ್ಷ್ಮೀಕಾಂತಬಿಡದೆ ||

ಅಂತು ಸಂಧಿ ೪೧ ಕ್ಕಂ ಪದ ೨೭೨೧ ಕ್ಕಂ ಮಂಗಳಂ

## ನಾಲ್ವತ್ತೆರಡನೆಯ ಸಂಧಿ

ಶ್ರೀಕೃಷ್ಣನು ದ್ವಾರಕೆಗೆ ಬಂದುದು —

ಕಮಲಜಪಿತ ಕಾಮಾಂಕಿತರಿಪುಜಿತು । ಕಮಲಾರೂಢಸತ್ಕ್ರೀಡ ||
ಕಮಲಜಕಮಲೋದರ ಜಲಧರನಂಘ್ರಿ । ಕಮಲ ಮೇಲ್ಗತೆಯ ವಿಸ್ತರಿಸು ||
ಭಾಗ್ಯವಡೆದ ಭಾಮಿನಿ ಮನೋರಥವಾಜಿ ವಾಗ್ವ್ಯಾಜ್ಯ ಮತ್ಕೃತಿಗಳನು
ಯೋಗ್ಯವೆಂದಾಲಿಸಿವರೆ ನಿನಗಾಯುರಾ । ರೋಗ್ಯಸಂಪದವ ಪೆರ್ಚಿಪುದು ||
ದೇಶವ ಬಳಲಿಸಬೇಡೆಂದು ಲಕ್ಷ್ಮೀನಿ । ವಾಸ ಕುಂಭಾಂಡಗೆ ಬೆಸಸಿ ||
ತಾ ಸಂವರಿಸಿಕೊಂಡು ಹತ್ತಿದ ವಿಹಗಾ । ಧೀಶನ ವಿಮಲಕಂಧರವ ೩ ||
ಅನಿರುದ್ಧ ಬಾಣನಂದನೆ ಚಿತ್ರಲೇಖಾ । ವನಿತೆ ಮುಂತಾದ ಪೆಣ್ಜನರ ||
ಎನಿತುಂಟಾದ ವಸ್ತುವ ಪ್ರತಿಷ್ಠಿಸಿದರು । ವಿನತೆಯ ಸುತನ ಬೆನ್ನಿನಲಿ ॥ ೪ ||
ಕಲಹಕಾತುರಿಯುದ ರಥಹಸ್ತಿಘೋಟಕ । ವಿಲಸಿತಪದಚಾರಿಗಳು ||
ಹಲಧರ ಕಂದರ್ಪ ಪಿಂದೆ ಯಾದವಬಲ । ನೆಲಸಿತು ಗರುಡನ ಮೇಲೆ ॥ ೫ ||
ರಕ್ಕಸವಗೆ ಖಗರಾಜಂಗೆ ಪೇಳ್ದಪೆ । ಣ್ಮಕ್ಕಳು ಭೀತಿಸದಂತೆ ||
ಚೊಕ್ಕಟವಾಗಿ ನೀ ತಳರೆಂದು ಬಳಿಕವೆ ಪಕ್ಕಿಯ ಪರುಠವಿಸಿದನು ॥ ೬ ||
ಜೋಡಿಸಿ ನಭಕುಪ್ಪರಿಸಲ್ಕೆ ನಿಲ್ಲದ । ಲ್ಲಾಡಿತು ಪದಿನಾಲ್ಕು ಲೋಕ ||
ಕೋಡಿಬಿದ್ದುವು ಸಪ್ತಶರಧಿ ದುವ್ವಾಳಿಯ ಮಾಡಿದ ಗರುಡ ವೇಗದಲಿ ॥ ೮ ||

ಅಸುರರಧೀಶನ ಮುರಿದಿಕ್ಕಿ ಗಗನದೆ । ಬಿಸರುಹಲೋಚನ ತೆರಳ್ದ ॥
ವಿಸರವ ನೋಡಿಂದು ಒಲ್ಲಿದರಿಗೆ ಬಟ್ಟೆ । ಸುಸರವೆಂದುದು ಪುರಜನರು ॥
ಭೂಭಾರಕರಾಗಿ ಸೊಕ್ಕಿದ ದೈತ್ಯವು । ತ್ರೀಭಕಂಠೀರವ ಗಗನ ॥
ಶೋಭಾಯುಮಾನದಿ ನಡೆಗೊಂಡುದ ಕಂಡು । ಕಾಬನ್ನ[1] ಪೋಗಲ್ದಿರೂರು [ಗರು ॥೯॥

ಅಳವಾಂತು ಗರುಡ ಕೃಷ್ಣನ ಕೊಂಡು ತೆರಳಲ್ಕೆ । ವಳಯುದೆ ಪುಣ್ಯ [ಮೂರುತಿಯು ॥
ನೆಲಲಾದ ಸ್ವಸ್ಥಾನದೆ ಬಿದ್ದ ಮಾರ್ಗದ । ಪೋಲವರ್ ಪುಣ್ಯವೆಯ್ದಿದರು॥
ಕಾಳೋರಗಭೇದಿರಥ[2] ಮುಂದೆ ಹಿಂದೆ ಮ।ರಾಳವಾಹನ[3] ಕೀರ್ತಿಸಲು
ಸೂಳಯಿಸಿದುವು ನಾನಾವಾದ್ಯ ಗಗನಾಂತ ರಾಳದೆ ದಿಕ್ತಟ ಬಿರಿಯೆ ॥೧೧॥
ಇಂದ್ರಾದಿನಿಖಿಳನಿರ್ಜರರು ವಿಮಾನದ । ಸಂದಣಿಯೊಳಗಿದಿರ್ವಂದು ॥
ಧಂಧಳಧಳರೆಂದು ಬಾರಿಸಿದರು ದೇವ । ದುಂದುಭಿಗಳನುಘೋಷಿಸುತೆ ॥
ನಾಕನಿವಾಸಿಗಳ್ ಕೈವಾರಿಸುತಿರ । ಲಾಕಾಶಪಥವ ತೀರ್ಕಣಿಸಿ ॥
ಗೋಕರ್ಣರಿಪು[4] ವೈನತೇಯ ಬಂದನು ಶೋ । ಭಾಕಾರದ್ವಾರಕಾಪುರಿಗೆ॥
ಕಂಗೊಳಿಸುವ ಗೋಮತಿಯ ತೀರದೆ ನವ್ಯ ಶೃಂಗಾರವನದ ಮಧ್ಯದಲಿ
ಮಂಗಳವಿಭವದಿ ಶ್ರೀಕೃಷ್ಣನಿಳಿದ ವಿ । ಹಂಗೇಶ್ವರನ ಕುಸ್ತರಿಸಿ ॥೧೪॥
ಸದಮಲ ಸರ್ವಜ್ಞ ನಿಂದು ನಿಟ್ಟಿಸೆ ವಿಶಾ । ರದ ಗಣಿಯನು ಪೈಸರಿಸೆ॥
ಮುದವಕ್ಕಳಿಸಿದರು ಮಂತ್ರೀಶನಂದನೆ । ಮೊದಲಾದ ಪೆಣ್ಣುಗಳೊಡನೆ ॥
ಮುಸಲಾಂಕ ಮೀನಧ್ವಜ ಮುಖ್ಯ ಯಾದವ । ಪ್ರಸರವಮಾರ್ಬಲ ವಿಟ [ದೊಡನೆ ॥
ಜಸವೆತ್ತ ಬಾಣನ ಬಹಳ ಭಂಡಾರ ಬೊ । ಕ್ಕಸ ಹೊಱಿಗಳನಿೞುಹಿದರು॥
ಒನಬನದೆಡೆಯ ಭಾಸಿತಮಪ್ಪ ವನರಾಜಿ । ವನಗೊಳದೆಡೆಯ ಪೆರ್ದೊ [ಱೆಯ ॥
ಮನಗೊಂಬ ನೀರಾಟದಿ ಹಸ್ತಿಹಯನರ । ಜನವಿದ್ದುದಿಳ್ ಪಡೆದಂತೆ ॥೧೭॥

---

ಕ.ಪ ಅ—1 ಕಾಣುವವರೆಗೂ 2 ಶ್ರೀಕೃಷ್ಣ–ಹೇಗೆ?
3 ಬ್ರಹ್ಮ 4 ಕಣ್ಣೇ ಕಿವಿಯಾಗಿರುವ ಹಾವುಗಳಿಗೆ ಹಗೆ
ಯಾದವನು ಗರುಡ: ‘‘ ಚಕ್ಷುಶ್ರವಾಃಕಾಕೋದರಃ ಫಣೀ ’’ ಎಂದು ಅಮರ.

ಪಲಸು ಮುಂತಾದ ಪಣ್ಗಳ ಮೆದ್ದು ತೇಂಗಾಯ | ಜಲವೀಂಟ ಪೂಗಳ [ಮುಡಿದು ||
ಬಲ ಪರಿತೋಷವ ಪಡೆದುದು ಯಾದವ | ಕಾಲಶಿರೋಮಣಿಯ ಸನ್ನಿಯಲಿ
ನೀಲಾಂಬರ ಕಂತು ಮೊದಲಾದ ಯಾದವ | ಜಾಲ ನಿರ್ಜರರು ಸಂದಣಿಸೆ||
ಕೋಲಾಹಲದೊಸಗೆಯು ವಾದ್ಯವೊಱಗಿತು | ಮೂಲೋಕ ಕಿವಿಸದ್ದುಗಿಡಲು
ಊರೊಳಗತಿಹರ್ಷವನಾಂತು ಪರಮಶ್ರಿಂ | ಗಾರವಮಾಡಿದರ್ ಹರಿಯ||
ಆರತಿ ಕಳಸ ಕನ್ನಡಿವೆಂಗಳೊಡನ | ಕರ್ಪೂರ ಬಂದಿದಿರ್ಗೊಂಡ ಹರಿಯ ||
ಕನಕಪುಷ್ಪಾಂಜಲಿ ವಸ್ತ್ರನಿವಾಳಿ ಶೋ | ಭನವೆಂಗಳ ರಾಗರಚನೆ ||
ಘನಪರಿತೋಷದೆ ಪೊಡೆಮಟ್ಟರಾಪುರ | ಜನ ಜಯಜಯರಭಸದಲಿ ||೨೧||
ಭವರೋಗಹರ ಬಾಣಕುಂಭಾಂಡಸುತೆ ಕಂತು | ಕುವರನನೊಡಗೊಂಡು [ಲಲಿತ ||
ಚವಲ ಬೊಂಬಾಳವನೇಱ ಮೆಲ್ಲಡಿಯಿಟ್ಟ | ವಿವರವನೇನ ಬಣ್ಣಿಪೆನು ||
ಭಾಗವತರ ಸಂಕೀರ್ತನೆ ಸನಕಾದಿ | ಮಾಗಧಜನದ ಕೈವಾರ ||
ಆಗಮನುತಿಪಾಠ ಧವಳಶೋಭನ ವಿನಿ | ಯೋಗದೆ ಹೊಕ್ಕ ದ್ವಾರಕೆಯ ||
ಹೊನ್ನಗಸೆಯ ಬಾಗಿಲಲಿ ಗರ್ಜಿಸಿದ ರನ್ನ | ಗನ್ನಡಿ ಮಕರತೋರಣದಿ ||
ಸನ್ನಯಿಸಿರ್ದ ಸೀಗುರಿಯ ನಿಟ್ಟಿಸಲು ಭಾಂ | ಡಾನ್ನವ ಸುರಿದರುಗ್ಗಡದೆ||
ಪೊಗೞಲದಾರ ಜಿಹ್ವೆಗೆ ಸೌಧ್ಯ ಮಣಿಹರ್ಮ್ಯ | ಯುಗಳಪಕ್ಷದ [ಮುಂಬಿನಲಿ ||
ನೆಗೞ ಸುಂಡಿಲ ತೋರಣಗುಡಿ ಬಲುಕುರು ಜುಗಳ ಹೊಂಗೆಲಸದುನ್ನತಿಯು
ಅಂಗಡಿಬೀದಿಯ ಸಾಲ ಸೌಧವನೇಱ | ಮಂಗಳಾಚ್ಯುತನ ಮೂರ್ತಿ [ಯನು ||
ಕಂಗಳಿಂದಲೆ ನೋಡಿ ಬೆಮೆಗೊಂಡು ನವ್ಯಪು | ಷ್ಪಂಗಳಿಂದಿಟ್ಟರಚ್ಯುತನ||
ಹಸುಗರ್ಗಳ ಹರಿವಾಣಗಳೊಳು ತುಂಬಿ ರಂ | ಜಿಸುವ ರತ್ನಾರತಿವೆಳಗಿ||
ದಸರಿ ಪಟ್ಟಾವಳಿ ಚಿತ್ರವಸ್ತ್ರವ ನಿವ | ಳಿಸಿದರಚ್ಯುತನಂಘ್ರಿಗಳಲಿ ||೨೨||

ಪುಡಿಯ ಕತ್ತುರಿ ಕುಂಕುಮ ಕಪ್ಪುರವುಡಿ । ಬಿಡುಮುತ್ತು ಮಾಣಿಕ
[ದೊಡನೆ ॥
ಹಿಡಿಹೊನ್ನ ಸೂಱೆಯ ಬಿಟ್ಟರಿಕ್ಕೆಲದಂ ಗಡಿಗರತೀವ ಮೋದದಲಿ ॥೨೯॥

ಆತನಚ್ಯುತನಾತನನಿರುದ್ಧಲೋಕವಿ । ಖ್ಯಾತಬಾಣನ ಕುಮರಿಯನು ॥
ಆತಾಯಿ ಚಿತ್ರಲೇಖಾನಾರಿ ನೋಡೆಂದು । ಮಾತಾಡುತಿದ್ದರೂರುಗರು ॥
ನಾಗೇಂದ್ರತಲ್ಪನನಿದಿರ್ಗೊಳಲೆಯ್ತಂದ । ರಾಗಿಂದುವದನೆಯರ್ ಕೆಯ್ಯ॥
ಶ್ರೀಗಂಧಧೂಪಾರ್ತಿ ಪಾಪಾರಣ್ಯದ । ಬೇಗೆವೊಲ್ ಪೊಗೆ ಮುಸುಕಿದುದು॥
ಹುರಿದುದು ಭವಬೀಜ ಮುಷ್ಕರ್ಮದಂಕುರ ಹರಿದುದು ಕಪಟದ ಬೇರು ॥
ಸುರಿದುದಾನಂದಾಶ್ರು ಕೃಷ್ಣನಂಘ್ರಿಯ ಕಂಡು । ಪುರದವರ್ ಪುಣ್ಯವೊಂದಿ
[ದರು ॥೩೧॥

ಲೋಕೇಶನ ಕಾಪಿಲಿರ್ದಾತನ ಬಾಹು । ಶಾಖೆಯ ಸವರಿ ಪೌತ್ರಂಗೆ ॥
ಈಕೆಯನೊಡಗೂಡಿ ಬಂದ ನೋಡೆಂದೆನು ತಾಕೆವಾಳರು ಹೊಗೞಿದರು ॥
ಪಾಡಲು ಪರಮಸಂಪದವಕ್ಕು ನುತಿಯನು ಮಾಡಲು ಮಂಗಳವಹುದು
ನೋಡಲು ನಸಿದು ಪೋಪುದು ಪಾಪವೆಂದು ಕೊಂಡಾಡಿದರ್ ಕುಶಲಜ್ಞ
[ರೊಲಿದು ॥೩೩॥

ಸುರನರ್ತಕಿಯರೊಳು ಮತ್ಸರವಾಂತರೀ । ಸರನರ್ತನಗಾತ್ರಿಯರ ॥
ಪರಮೋತ್ಸವದೆ ನೋಡುತೆ ಬಂದ ಲಕ್ಷ್ಮೀ । ವರ ತನ್ನ ರಾಜಮಂದಿರಕೆ॥
ಢಣರೆಂಬ ಗಜಘಂಟೆಯನಾದ ವಾದ್ಯಸ । ನ್ನಣ ಪಾಠಕರ ಕೈವಾರ ॥
ಪ್ರಣವೋಚ್ಚಾರಣ ರಭಸವ ನಿಲಿಸಿದ । ಗುಣಯುತ ಕರದ ಸನ್ನೆಯಲಿ ॥
ಇನನ ರಶ್ಮಿಯ ಕೀೞ್ಪಡಿಸುವ ಮಕುಟವ । ಘನರ ಮಾರ್ಬಲವ ಕುಸ್ತ
[ರಿಸಿ ॥
ಘನರಮ್ಯವಸ್ತ್ರಭೂಷಣವಿತ್ತು ತಕ್ಪುರ । ಜನರ ಬೀೞ್ಕೊಟ್ಟನರ್ಥಿಯಲಿ ॥
ತಾಳಮದ್ದಳೆ ಗೀತ ನರ್ತನಗಾತಿಯ । ಮೇಳ ವಿದ್ವತ್ಸಭೆ ಸುರರ ॥
ಜಾಲಕ್ಕೆ ಹಸೆಯಿತ್ತು ಬೀೞ್ಕೊಟ್ಟು ಚವಲ ಬೊಂ । ಬಾಳವನಿೞಿದ ಮಾ
[ಧವನು ॥೩೫॥

ಉಘೇಯೆಂಬ ಶಬ್ದಸಂಭ್ರಮದಿಂದೆ ಬಹಳ ನಂ | ಬುಗೆಯ ಸೇವಕರು [ಕಂಚುಕಿಯು ||
ಉಘೇಯೆನಲುಜ್ಜುಗದೊಳು ರತ್ನಮಯದಹಾ | ವುಗೆಯಮೆಟ್ಟಿಸಿದರಚ್ಯುತಗೆ
ಮಲೆವ ದೈತ್ಯರ ಗಂಡ ದಾಸೋತ್ತಮರನಂ | ಡಲೆವ ದುಷ್ಕೃತಗಳ [ಗಂಡ ||
ಕೊಲಲೊಡರ್ಚುವ ಮಿತ್ತುವಿನ ಗಂಡನ ಪಾದ | ಜಲರುಹಯುಗವ ನೋಡಿ [ದರು ||೩೯||

ಕಂಡರೆ ಪುಣ್ಯಕ್ಷೇತ್ರವ ಪುಣ್ಯತೀರ್ಥವ | ಕಂಡರೆ ಪುಣ್ಯಮಾರ್ಗವನು ||
ಕಂಡರೆ ಪುಣ್ಯಲೋಕಾದಿಲೋಕವ ಸೂಹೆ | ಗೊಂಡರು ಕೇಳಾಯತಾಕ್ಷಿ ||
ಬತ್ತಿತು ಭವಸಾಗರ ಯಮಪುರಮಾರ್ಗ | ಕೆತ್ತಿತು ಕೃಷ್ಣಭಕ್ತರಿಗೆ ||
ಎತ್ತಿತು ಗುಡಿ ತೋರಣ ವೈಕುಂಠಕೆ | ಹತ್ತಿತು ಹರಿಯ ಸೂರಿಯಲಿ ||
ನಾಲಗೆಯೆನಗೊಂದು ಹರಿಭಕ್ತಿ ಹೊಗಳ್ವರೆ | ಶೀಲಶ್ರೀವೈಷ್ಣವೋತ್ತ [ಮರು ||
ಸಾಲೋಕ್ಯಸಾಯುಜ್ಯ ಸಾಮೀಪ್ಯಪದವನಾ | ಕಾಲದೆ ಪಡೆದರಾಕ್ಷಣದೆ ||
ಉದ್ಧವದೇವನ ಕೈಲಾಗಿನಲಿ ದೈತ್ಯ | ಮರ್ದನ ಮೆಲ್ಲಡಿಯಿಡಲು ||
ಹೊದ್ದಿರೆ ಕಟ್ಟಿಗೆಕಾಱರುಗ್ಗಡದೆ ಹೊ | ಗಳ್ದರು ಹರಿಯ ರಭಸದೆ ||
ಭೂನಾಥಪಾದವೆಚ್ಚರಿಕೆ ಸುವರ್ಣಸೋ | ಪಾನದಾರೋಹಣ ಜತನ ||
ಶ್ರೀನಾಥ ಸೆಱಗು ಸಂಭಾಳಿಕೆಯಷ್ಟಾವ | ಧಾನವೆಂದೆನಲಡರಿದನು ||೪೪||
ವಿಲಸಿತಮಾಣಿಕ್ಯರಚಿತಮಂಟಪದ ಬಾ | ಗಿಲ ಗುಡಿ ತೋರಣೈಶ್ವರ್ಯ
ನಲವಿಂದೆ ನೋಡಲಾಕ್ಷಣದಲ್ಲಿ ಗೋವಳ | ಬಲ ಬಂದು ನಮಿಸಿದುದಾಗ ||೪೫
ಇಟ್ಟದಿರಾಗಿ ತಂದರು ಹೊನ್ನ ಹರಿವಾಣ ದಿಟ್ಟ ನೈವೇದ್ಯಸಂಕುಲವ ||
ನಿಟ್ಟಿಸಲಮಲವಸ್ತ್ರವ ನಿವಾಳಿಸಿ ತೆಗೆ | ದೊಟ್ಟಿದರುಭಯ ಪಕ್ಷದಲಿ ||೪೬||
ಮುಂದೆಸೆಯಲಿಬಾಣಸುತೆಚಿತ್ರಲೇಖೆ ಪೆ | ಣ್ವೃಂದದೊಳನಿರುದ್ಧಬರಲು ||
ಕಂದರ್ಪತನಯನ ಕಡಿದಾಡಿ ತೆಗೆತಂದ | ಮಂದರಧರನ ಪಾಡಿದರು ||೪೭||
ಅಕಳಂಕನಾರದ ಬಲರಾಮ ಸ್ಮರ ವಿನಾ | ಯಕರೆಡಬಲದೊಳುಗ್ಗಡಿಸೆ ||
ಸಕಲಸನ್ನಾಹದಿಂದೊಳಪೊಕ್ಕು ಮುರಾಸುರಾಂ | ತಕನ ಕಂಡರು ವಧೂಟಿ [ಯರು ||೪೮||

ಅಂದವಡೆದ ಮೆಯ್ನವಿರ್ಗುಡಿ ತೋರಣ | ಚೆಂದಳಿರ್ದುಟಿ ಕುಂಭಕಲಶ||
ಮಂದಸ್ಮಿತಮುಖ ಕನ್ನಡಿಯುವರ್ಯೆ | ತಂದರು ಕೃಷ್ಣನಿದ್ದೆಡೆಗೆ ||೪೯||
ಅಧಿನಾಯಿಕೆ ರುಕ್ಮಿಣಿ ಸತ್ಯಭಾಮೆಯರ್ | ಹದಿನಾಱು ಸಾವಿರ ಹೆಣ್ಣು
ಇದಿರ್ಗೊಂಡರು ಮುತ್ತಿನಾರತಿವೆಳಗಿ ಶ್ರೀ | ಸಿಧಿ ನಿರ್ಜರಾಧೀಶ್ವರನ ||
ಮಣಿಪಾತ್ರೆಯ ಸಾರ್ಚಿಪೊಂದಂಬಿಗೆಯ | ಗ್ಗಣಿಯಿಂದೆ ಪಾದವ ತೊಳೆದು
ದಣಿದುವು ನೋಡಿ ಕಣ್ಮನ ಸತ್ಯಭಾಮೆರು | ಕ್ಮಿಣಿದೇವಿಯರು ಹೊಗಳಿದರು||
ಅನಿರುದ್ಧ ಹೋದನೆಂದೆಂಬ ದುಃಖದಲಿ ಕಂ | ಬನಿಗಱಿದನು ಶೋಕಿಸಲು||
ಮುನಿಯ ಸಾಕ್ಷಿಯಲಿ ಸತ್ಕುಮರನ ತಹೆನೆನು | ತಿನಿವಾತುಗಳನಾಡಿದಿರಿ ||
ಏಕವಚನಪ್ರತಿಷ್ಠಾಚಾರ್ಯನೆಂದೆಂಬ | ಲೋಕೈಕಬಿರುದಾಂಕ
[ಪ್ರಭುವೆ ||
ಶ್ರೀಕಂಠಭಜಕನ ತೋಳ್ಗಳ ತಱಿದು ವಿ | ವೇಕದಿಂ ತಂದೆ ಮತ್ಸುತನ||೫೩||
ಆನೆಯ ಕೆಯ್ಯ ಕಬ್ಬಿನ ಕೋಲ ಸೇಱಿತಂದು | ಮಾನವಸಿಂಹಸ್ವರೂಪ||
ನೀನಲ್ಲದಿನ್ನಾರೆನುತೆ ಕೊಂಡಾಡಿದಳ್ | ಶ್ರೀನಾರಿ ಪರಿತೋಷವಡೆದು ||೫೪||
ತ್ರಾಣಿಗಳರಸ ದೈತ್ಯನ ಮಹಾಗರ್ವವ | ಹೂಣಿಸಿ ತಮವಱಿಯದರ||
ನಾಣಿಸಿಯೆನ್ನ ಮೊಮ್ಮಗೆ ತಕ್ಕ ಸತಿ ಕ | ಟ್ಟಾಣಿರತ್ನವ ತಂದೆ ಜೇಯು ||
ವಿಧವಱಿಯದೆ ಕೆಟ್ಟರು ನಿನ್ನ ಮಹಿಮಾ | ಸ್ಪದ ಗೋಪ್ಯವನು ತಾವು
[ಸರು ||
ಅದನೇನ ಬಣ್ಣಿಪೆನೆನಲು ರುಕ್ಮಿಣಿಯು ನಾ | ರದಮುನಿರಾಯ ಕೀರ್ತಿಸಿದ||
ನೀ ಬಲ್ಲೆ ತಾಯೆ ನಾಲ್ಮೊಗ ಬಲ್ಲ ಪಾವನ | ನಾ ಬಲಿವರ ವೈನತೇಯು||
ಶ್ರೀಭಾಗೀರಥೀಧರ ವಜ್ರಿ ಬಲ್ಲಅಬ್ಜ | ನಾಭನ ಗುಣಗಣಗಳನು ||೫೭||
ಬಿಸರುಹಸಖ ಮುಖ್ಯ ನವಗ್ರಹಂಗಳನು ನಿ | ರ್ಮಿಸಿ ಚತುರ್ದಶಮುನಿ
[ವರರು ||
ಹಸನಾಗಿ ಜಾನಿಸಿ ಬಲವರ್ತರು ಕಷ್ಟ | ಕುಶಲವ ಪಿತ ಕೃಷ್ಣನಿರವ ||೫೮||
ಶುಕ ಪರಾಶರ ವ್ಯಾಸ ಕಪಿಲ ಕುಂಭಜ ಭೃಗು | ಬಕ ದಾಲ್ಭ್ಯ ವಾಸಿಷ್ಠ
[ಮುನಿಪ ||
ನಿಕರದೆ ಬಲ್ಲವರಱಿವರು ಸರದೇ | ಹಿಕರೇನ ಬಲ್ಲರಚ್ಯುತನ ||೫೯||
ಜ್ಯೋತಿರ್ಮಯ ಪಾವನರೂಪ ನಿತ್ಯಪ | ಭೂತೀಶ್ವರನಂತಿರಲಿ ||

ಜಾತಿಪದ್ಮಿನಿ ನಿನ್ನ ಮೊಮ್ಮನ ವಧು ಗಾಡಿ | ಕಾತಿಯು ನೋಡವ್ವ ತಾಯೆ||
ಸಿರಿಕೃಷ್ಣನ ಮೇಲಣ ದಿಟ್ಟಿಯನಿತ್ತ | ತಿರುಹಿ ರತ್ನಾಂಚಿತ ಹೇಮ ||
ಹರಿವಾಣದಾರತಿಗಳನೆತ್ತಿ ನಿಖಿಲೋಪ | ಚರಿಯುವ ಮಾಡಿದರ್ ಬಿಡದೆ|| ೬೧||
ನೋಡಿದರಾಗವೋಕ್ತಿಯಲಿ ಬಾಸಿಂಗವ | ಸೂಡಿದರ್ ತೊಂಡಿಲ ತಂದು||
ಪಾಡಿದರ್ ಪರಮಶೋಭನದಿಂದೆ ಮದುವೆಯ|ಮಾಡಿದರ್ ಮಣಿಯು ಮಂಟ [ಪದೆ ||೬೨||
ಸಡಗರದಲಿ ಕಂತುಸುತನು ಷಾವಧು ಬಲ ಗುಡುತೆ ಕುಂಭಾಂಡಜೆ [ಸಹಿತ|
ಪೊಡೆಮಟ್ಟರು ರುಕ್ಮಿಣಿ ಸತ್ಯಭಾಮೆ ಪ್ರಮುಖ | ಡಣಕ್ಕೆ ರತಿದೇವಿಯರಿಗೆ|| ೬೩||
ಗಾವಿಲ[1]ದೈತ್ಯನ ಒಲೆಗೆ ಬಿದ್ದೊಡಲಾಂತು | ಜೀವಿಸಿ ಬಂದುದೆ ಎನಗೆ ||
ಸಾವಿರ ಲಕ್ಷೋಪಲಕ್ಷವೆಂದಾರತಿ | ದೇವಿ ಮುಂಡಾಡಿದಳ್ ಮಗನ ||೬೪||
ಸೊಸೆಯು ಲಾವಣ್ಯವ ನೋಡಿ ಸಂತಸವೆತ್ತು | ಸೊಸೆಗೂಡಿ ಕಂಸ [ಮರ್ದನನ ||
ಸೊಸೆ ಮದವಕ್ಕಳು ಸಹಿತ ಕೃಷ್ಣಾಂಘ್ರಿಗೆ | ಯೊಸಗೆಯೊಳ್ ಪೊಡೆಮ [ಟ್ಟರೊಲಿದು ||೬೫||
ನಾರದ ಮೊದಲಾದ ಪಿರಿಯರ್ಗೆ ತಾ ನಮ | ಸ್ಕಾರವ ಮಾಡಿ ಸಂತಸದಿ||
ಆರೋಗಣೆಗೆ ಚಿತ್ತೈಸೆಂದು ಕೃಷ್ಣಮನೋ | ಹಾರಿಗೆ ಬಿನ್ನಯಿಸಿದಳು ||
ಎನಲಾಕ್ಷಣ ನಿಬ್ಬಣ ಬಂಧುವರ್ಗ ಪೆ | ಣ್ಜನ ಮದವಕ್ಕಳು ಸಹಿತ ||
ಘನಪರಿತೋಷದೆ ಪರಮಾಮೃತಭೋ|ಜನವ ಮಾಡಿದ ಕೃಷ್ಣರಾಯ ||೬೬||
ಗಂಧೋದಕದಿಂದೆ ಕೆಯ್ದೊಳೆದಮಲ ಶ್ರೀ|ಗಂಧವ ಮೆಯ್ಯೂಡಿಕೊಂಡು
ಗಂಧಸಂಯುಕ್ತ ತಾಂಬೂಲವನೊಲಿದು ಗೋ | ವಿಂದ ಪಾಲಿಸಿದನೆಲ್ಲರಿಗೆ ||
ಅಣಿಮುತ್ತಿನ ಚಾವಡಿಯಲ್ಲಿ ಕಮನೀಯ | ಮಾಣಿಕ್ಯಸಿಂಹಪೀಠದಲಿ ||
ರಾಣಿಯರೊಡ್ಡೋಲಗದೊಳು ಗದಾಚಕ್ರ | ಪಾಣಿ ಮಂಡಿಸಿದ ಕೇಳ್ ಕೆಳದಿ
ಬಾಣನ ಮನೆಯ ಭಂಡಾರ ಬೊಕ್ಕಸವ ಪೂ|ಬಾಣನಂದನೆಗೆ ತಾರ್ಕಣಿಸೆ ||
ಬಾಣಜೆ ಸಹಿತ ಮಂದಿರವ ತುಂಬಿಸಿ ಕೊಟ್ಟ | ಬಾಣಾರಿ ದುರಿತಸಂಹಾರಿ ||
ಹರಿಕಾಳೆ ಮೊದಲಾದ ಜನಕುಡುಗೊರೆಯಿತ್ತು|ವರಬಂಧು ಬಲಸ್ಮರಾದಿಗಳ||

---

ಕ. ಪ. ೮—1. ಇಲ್ಲಿ ಒರಟನಾದ ; ಗಾವಿಲ=ದ್ಧ. ಗ್ರಾಮಿಣ.

ಪರಿತೋಷದಿಂದೆ ಬೀಳ್ಕೊಟ್ಟನು ಗೋಕುಲ | ದೊಳಿಯು ನಾರದ ಗರುತ್ಮರನು
ಮನ್ನಣೆವಡೆನು ಬೀಳ್ಕೊಂಡೆಯ್ದಿದರು ಸೌ | ಪರ್ಣನಾರದರತ್ತಲಿತ್ತ ||
ತನ್ನ ವಧೂಟಿಯರೊಳಗೆ ನಿರ್ಜರಶಿರೋ | ರನ್ನ ಶ್ರೀಕೃಷ್ಣನೊಪ್ಪಿದನು ||
ಗಂಧಶಾಲಿಯ ಬತ್ತದೊಳಗಿರ್ದ ಕಳೆಯ ಕೀ | ಳ್ವಂದದೆ ಖಳರ ತಿರ್ಕಣಿಸಿ ||
ವೃಂದಾರಕ ಭೂಸುರ ರಕ್ಷಪಾಲ ಗೋ | ವಿಂದನಾಪುರದೊಳೊಪ್ಪಿದನು ||
ದುಷ್ಟರ ಮುಱಿದು ಸಜ್ಜನರ ಪಾಲಿಗೆ ಸಂ | ತುಷ್ಟಿಯ ಮಾಡಿ ಭಕ್ತರಿಗೆ ||
ಇಷ್ಟಾರ್ಥವನೀವ ಕೃಷ್ಣ ದ್ವಾರಕೆಯೊಳ | ಗಷ್ಟೈಶ್ವರ್ಯದೊಪ್ಪಿದನು ||೨೪||
ಭೋಜ್ಯವಸ್ತುಗಳೊಳುಮುಖ್ಯವಾದುದು ಲಲಿ ತಾಜ್ಯ ನಿರ್ಜರಜನರೊಳಗೆ ||
ಸೋಜ್ಯ ಸುಖಾಢ್ಯಪಾಲಕ ಕೃಷ್ಣ ಸುಖಸಾ | ಮ್ರಾಜ್ಯವನಾಳಿದ ಮುದದೆ ||
ನಿರ್ಮತ್ಸರದೊಳೀಕೃತಿಯ ಕೇಳ್ದವರಿಗೆ | ಧರ್ಮಾರ್ಥಕಾಮಮೋಕ್ಷ [ಗಳ ||
ಭರ್ಮಾಂಬರನೀವ ಭಾಮೆ ಕೇಳ್ ನಮ್ಮ ದು | ಷ್ಕರ್ಮ ವಿಚ್ಛೇದನವಾಯ್ತು
ಯೋಗಿಹೃತ್ಕಮಲಾಸನ ದೈತ್ಯಕಾಮಾರಿ | ರಾಗಿಪ ಭೋಗದೇವೇಂದ್ರ ||
ಕಾಗಿನೆಲೆಯ ನರಸಿಂಹಾದಿಕೇಶವ | ಸಾಗಿಪ ಜನಮನೋರಥವ ||೨೨||
ವರಮೋಹನತರಂಗಿಣಿಯೆಂಬ ಕಾವ್ಯವ | ಬರೆದೋದಿ ಕೇಳಿದ ಜನರ ||
ತರಣಿಚಂದ್ರಮರುಳ್ಳನಕ ಸತ್ಕೃಪೆಯಿತ್ತು ಪೊರೆವ ಲಕ್ಷ್ಮೀಕಾಂತ ಬಿಡದೆ ||

ಅಂತು ಸಂಧಿ ೪೨ಕ್ಕಂ ಮಂಗಳಂ

ಮಹತ್ ಶ್ರೀಃ ಶ್ರೀಃ ಶ್ರೀಃ

ಮೋಹನತರಂಗಿಣಿ

ಸಂಪೂರ್ಣಂ.